f prajavani.net prajavani
ಮಂಗಳವಾರ, ಮೇ 26, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 145 | ಪುಟ 16
www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಜಯದ ಸಂಭ್ರಮ

ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಅವರು ಫ್ರೆಂಚ್ ಓಪನ್‌ನಲ್ಲಿ ಶುಭಾರಂಭ ಮಾಡಿದರು. 39 ವರ್ಷದ ಆಟಗಾರನಿಗೆ ಇದು ದಾಖಲೆಯ 82ನೇ ಗ್ರ್ಯಾನ್‌ಸ್ಲಾಮ್ ಟೂರ್ನಿಯಾಗಿದೆ

ಸೆನ್ಸೆಕ್ಸ್ 76,488 | ನಿಫ್ಟಿ 24,031 | $/₹ 95.26 | ಚಿನ್ನ (Std. 10g) ₹1,64,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,87,400 (ಬೆಂಗಳೂರು)

ಸರ್ಕಾರದ ಸುಪರ್ದಿಗೆ 108 ಆಂಬುಲೆನ್ಸ್ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ಸೇವೆ ಒದಗಿಸುವ ಸರ್ಕಾರಿ ಸ್ವಾಮ್ಯದ ದೇಶದ ಮೊದಲ '108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ (ಸಿಸಿಸಿ)' ಕಾರ್ಯಾರಂಭ ಮಾಡಿದೆ. 2008ರಿಂದ ಖಾಸಗಿ ಸಹಭಾಗಿತ್ವದಲ್ಲಿದ್ದ ಈ ಸೇವೆ ಇನ್ನು ಮುಂದೆ ಸರ್ಕಾರದ ಸುಪರ್ದಿಯಲ್ಲಿ ನಡೆಯಲಿದೆ.

ಆರೋಗ್ಯ ಇಲಾಖೆ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಈ ಕೇಂದ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

'ಒಂದು ಕರೆ ನಮಗೆ, ತುರ್ತು ಸೇವೆ ನಿಮಗೆ' ಎಂಬ ಘೋಷವಾಕ್ಯದೊಂದಿಗೆ ಆರಂಭಿಸಿರುವ ಸಿಸಿಸಿ ತಂತ್ರಜ್ಞಾನ ಆಧರಿತವಾಗಿದೆ. 24X7 ಮೂರು ಪಾಳಿಗಳಲ್ಲಿ 50 ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ. 108 ಆರೋಗ್ಯ ಕವಚ, 104 ಆರೋಗ್ಯ ಸಹಾಯವಾಣಿ, 112 ಸಹಾಯವಾಣಿ, ಟೆಲಿ ಮನಸ್, ಇ ಸಂಜೀವಿನಿ, ಮಹಿಳಾ ಸಹಾಯವಾಣಿ 181, ಮಕ್ಕಳ ಸಹಾಯವಾಣಿ 1098 ಸೇವೆಗಳನ್ನು ಇದಕ್ಕೆ ಸಂಯೋಜನೆ ಮಾಡಲಾಗಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಸಿಸಿಸಿಗೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸುವ ಸಲುವಾಗಿ ಸಿಂಗಪುರದ ಆಂಬುಲೆನ್ಸ್ ವ್ಯವಸ್ಥೆ ಸೇರಿ ಹಲವು ಮಾದರಿಗಳನ್ನು ಅಧ್ಯಯನ ಮಾಡಲಾಯಿತು. ಈ ವ್ಯವಸ್ಥೆಯನ್ನು ಚಾಮರಾಜನಗರದಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಿದ್ದು, ಯಶಸ್ವಿಯಾಯಿತು. ಈಗ ರಾಜ್ಯವ್ಯಾಪಿ ವಿಸ್ತರಿಸಲಾಗಿದೆ' ಎಂದರು.

'ಸರ್ಕಾರಿ ಸ್ವಾಮ್ಯದ ಸಿ-ಡಾಕ್ ಸಂಸ್ಥೆಯು ಸಾಫ್ಟ್‌ವೇರ್ ಸಿದ್ಧಪಡಿಸಿದೆ. ಈಗಿನ ಸುಧಾರಿತ ವ್ಯವಸ್ಥೆಯಲ್ಲಿ ತುರ್ತು ಸಂದರ್ಭದಲ್ಲಿ ಕಮಾಂಡ್ ಸೆಂಟರ್‌ಗೆ ರಾಜ್ಯದ ಯಾವುದೇ ಭಾಗದಿಂದ ಕರೆ ಮಾಡಿದ ವ್ಯಕ್ತಿಯ ಲೋಕೇಷನ್ ಗೊತ್ತಾಗಲಿದೆ. ರೋಗಿಯ ಸ್ಥಿತಿ ಆಧರಿಸಿ ಸೂಕ್ತ ಆಸ್ಪತ್ರೆಗೆ ಕಳುಹಿಸಲಾಗುತ್ತದೆ. ತುರ್ತು ಸಂದರ್ಭದಲ್ಲಿ ಆಂಬುಲೆನ್ಸ್‌ನಿಂದಲೇ ಎಂಡಿಟಿ ಟ್ಯಾಬ್ ಸಾಧನದ ಮೂಲಕ ವೈದ್ಯರನ್ನು ಸಂಪರ್ಕಿಸಿ, ಮಾರ್ಗದರ್ಶನ ಪಡೆಯಬಹುದು ಹಾಗೂ ಆಸ್ಪತ್ರೆಗೂ ಸಂದೇಶ ನೀಡಿ, ಸಕಲ ಸಿದ್ಧತೆ ಮಾಡಿಕೊಳ್ಳಲು ಹೇಳಬಹುದು' ಎಂದು ತಿಳಿಸಿದರು.

'ಅಲ್ಲದೇ, 108 ಆರೋಗ್ಯ ಕವಚದ 715 ಆಂಬುಲೆನ್ಸ್‌ಗಳಿಗೂ ಜಿಪಿಎಸ್ ಅಳವಡಿಸಿರುವುದರಿಂದ ಚಲನವಲನ ತಿಳಿದುಕೊಳ್ಳಬಹುದು. ಕರೆ ಮಾಡಿದ ವ್ಯಕ್ತಿಗೂ ಆಂಬುಲೆನ್ಸ್ ಮಾಹಿತಿ, ತಲುಪುವ ಸಮಯ, ಆಸ್ಪತ್ರೆ ಬಗ್ಗೆ ಮೊಬೈಲ್‌ಗೆ ಸಂದೇಶ ಕಳುಹಿಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಶಾಸಕ ಎಸ್. ಸುರೇಶ್ ಕುಮಾರ್ ಅವರು ಸಿಸಿಸಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕ ಪ್ರಿಯಕೃಷ್ಣ, ಆರೋಗ್ಯ ಇಲಾಖೆ ಕಾರ್ಯದರ್ಶಿ ರಿತ್ವಿಕ್ ರಂಜನ್ ಪಾಂಡೆ, ಡಿಜಿಟಲ್ ಹೆಲ್ತ್ ಸೊಸೈಟಿ ನಿರ್ದೇಶಕ ವಿಪಿನ್ ಸಿಂಗ್, ಆರೋಗ್ಯ ಇಲಾಖೆ ನಿರ್ದೇಶಕಿ ಡಾ.ರಜನಿ, ಸಿಸಿಸಿ ಕಾರ್ಯನಿರ್ವಾಹಕ ನಿರ್ದೇಶಕ ಡಾ.ವೈ.ಕೆ.ದಿನೇಶ್ ಕುಮಾರ್ ಹಾಜರಿದ್ದರು.

'ಜೀವ ರಕ್ಷಕ ಗೋಲ್ಡನ್ ಅವರ್ ಚಿಕಿತ್ಸೆ'

'ರಸ್ತೆ ಅಪಘಾತಗಳು, ಹೆರಿಗೆ, ಹೃದಯಾಘಾತ ಸೇರಿದಂತೆ ಹಲವು ಕ್ಲಿಷ್ಟ ಸಂದರ್ಭಗಳಲ್ಲಿ ತುರ್ತು ಚಿಕಿತ್ಸೆ ಅಗತ್ಯವಾಗಿದ್ದು, ಗೋಲ್ಡನ್ ಅವರ್‌ನಲ್ಲಿ (ಘಟನೆ ಸಂಭವಿಸಿದ ಒಂದು ಗಂಟೆಯೊಳಗೆ) ಚಿಕಿತ್ಸೆ ದೊರೆತರೆ, ರೋಗಿಗಳು ಬದುಕುವ ಸಾಧ್ಯತೆ ಹೆಚ್ಚಿರುತ್ತದೆ. ಗೋಲ್ಡನ್ ಅವರ್‌ನಲ್ಲಿ ದೊರೆತ ಚಿಕಿತ್ಸೆಯಲ್ಲಿ ಸುಮಾರು ಶೇಕಡ 80 ರಷ್ಟು ಜನರು ಬದುಕುಳಿದಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಎಲ್ಲಾ ಜಿಲ್ಲೆಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಆಂಬುಲೆನ್ಸ್ ಸೇವೆ ಲಭ್ಯವಾಗಲಿದೆ. ಬೆಂಗಳೂರು ನಗರದಲ್ಲಿ 65ರಿಂದ 70 ಆಂಬುಲೆನ್ಸ್‌ಗಳು ತುರ್ತು ಚಿಕಿತ್ಸೆಗೆ ನೆರವಾಗುತ್ತಿವೆ. 108 ಆಂಬುಲೆನ್ಸ್ ವ್ಯವಸ್ಥೆ ಖಾಸಗಿಯವರ ಕೈಯಲ್ಲಿದ್ದಾಗ, ಅವರ ಹೊಣೆಗಾರಿಕೆ ಪ್ರಶ್ನಿಸುವಂತಿರಲಿಲ್ಲ. ಆದರೆ, ಈಗ ಸರ್ಕಾರದ ಅಧೀನದಲ್ಲಿರುವುದರಿಂದ ಈ ಸೇವೆಯ ಹೊಣೆಗಾರಿಕೆ ಹೆಚ್ಚಿದೆ' ಎಂದರು.

'ಜನರು ಖಾಸಗಿ ಆಸ್ಪತ್ರೆಗೆ ಹೋಗಿ, ಸರ್ಕಾರದಿಂದ ಧನಸಹಾಯ ಕೇಳುವ ಬದಲು, ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗೆ ಹೋಗಬೇಕು. ಸರ್ಕಾರಿ ಆರೋಗ್ಯ ಸೇವೆ ಕಳಪೆಯಾಗಿರದಂತೆ ಆರೋಗ್ಯ ಇಲಾಖೆ ಸಿಬ್ಬಂದಿ ನೋಡಿಕೊಳ್ಳಬೇಕು' ಎಂದು ಕಿವಿ ಮಾತು ಹೇಳಿದರು.

ಪೆಟ್ರೋಲ್, ಡೀಸೆಲ್ ಮತ್ತೆ ತುಟ್ಟಿ

ಮೇ 15ರ ಬಳಿಕ 4 ಬಾರಿ ಏರಿಕೆ • 11 ದಿನಗಳಲ್ಲಿ ಲೀಟರಿಗೆ ಸುಮಾರು ₹7.50 ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್ ದರವನ್ನು ಲೀಟರಿಗೆ ₹2.61 ಹಾಗೂ ಡೀಸೆಲ್ ದರವನ್ನು ₹2.71ರಷ್ಟು ಹೆಚ್ಚು ಮಾಡಲಾಗಿದ್ದು, ಪರಿಷ್ಕೃತ ದರ ಸೋಮವಾರದಿಂದ ಜಾರಿಗೆ ಬಂದಿದೆ.

ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಮೇ 15ರ ಬಳಿಕ ಇಂಧನ ದರವನ್ನು ನಾಲ್ಕನೇ ಬಾರಿ ಏರಿಕೆ ಮಾಡಿವೆ. ಈ ಹೆಚ್ಚಳದೊಂದಿಗೆ 11 ದಿನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವು ಸರಿಸುಮಾರು ₹7.50ರಷ್ಟು ತುಟ್ಟಿ ಆದಂತಾಗಿದೆ.

ಇದೀಗ ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರ ₹110.89 ಹಾಗೂ ಡೀಸೆಲ್ ದರ ₹98.80 ಆಗಿದೆ. ನವದೆಹಲಿಯಲ್ಲಿ ಪೆಟ್ರೋಲ್ ಬೆಲೆ ಶತಕದ ಗಡಿ ದಾಟಿದ್ದು, ಲೀಟರಿಗೆ ₹102.12 ಆಗಿದೆ. ಡೀಸೆಲ್ ದರ ₹92.49ರಿಂದ ₹95.20ಕ್ಕೆ ಏರಿಕೆಯಾಗಿದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.

ಮುಂಬೈನಲ್ಲಿ ಲೀಟರ್ ಪೆಟ್ರೋಲ್ ದರ ₹111.21 ಹಾಗೂ ಡೀಸೆಲ್ ದರ ₹97.83 ಆಗಿದೆ. ಕೋಲ್ಕತ್ತದಲ್ಲಿ ಪೆಟ್ರೋಲ್‌ಗೆ ₹113.51, ಡೀಸೆಲ್‌ಗೆ ₹99.92, ಚೆನ್ನೈನಲ್ಲಿ ಪೆಟ್ರೋಲ್‌ಗೆ ₹107.77 ಹಾಗೂ ಡೀಸೆಲ್‌ಗೆ ₹99.55 ಬೆಲೆ ಇದೆ. ಮೌಲ್ಯವರ್ಧಿತ ತೆರಿಗೆಯಲ್ಲಿನ ವ್ಯತ್ಯಾಸಗಳಿಂದಾಗಿ ಪೆಟ್ರೋಲ್, ಡೀಸೆಲ್ ದರದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಇರುತ್ತದೆ.

ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿರಲಿಲ್ಲ. ಕಳೆದ ಲೋಕಸಭಾ ಚುನಾವಣೆಗೆ ಅಲ್ಪ ಮುನ್ನ, 2024ರ ಮಾರ್ಚ್‌ನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ₹2 ಇಳಿಕೆ ಮಾಡಲಾಗಿತ್ತು. ಇದೀಗ ಬೆನ್ನು ಬೆನ್ನಿಗೆ ನಾಲ್ಕು ಸಲ ಬೆಲೆ ಏರಿಕೆ ಆಗಿರುವುದರಿಂದ ಇಂಧನ ಬೆಲೆ 2022 ಮೇ ಬಳಿಕ ಗರಿಷ್ಠ ಮಟ್ಟ ತಲುಪಿದಂತಾಗಿದೆ.

▸12



ಯಾವಾಗ, ಎಷ್ಟು ಹೆಚ್ಚಳ?

ದಿನಾಂಕ	ಪೆಟ್ರೋಲ್	ಡೀಸೆಲ್
ಮೇ 15	₹3	₹3
ಮೇ 19	90 ಪೈಸೆ	90 ಪೈಸೆ
ಮೇ 23	87 ಪೈಸೆ	91 ಪೈಸೆ
ಮೇ 25	₹2.61	₹2.71
ಒಟ್ಟು	₹7.38	₹7.52

'ಅಬಕಾರಿ ಸುಂಕ ಕಡಿತ: ₹1 ಲಕ್ಷ ಕೋಟಿ ನಷ್ಟ'

ಮುಂಬೈ: 'ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕ (ಎಕ್ಸೈಸ್) ಕಡಿತದಿಂದ ಸರ್ಕಾರಕ್ಕೆ ₹1 ಲಕ್ಷ ಕೋಟಿ ನಷ್ಟ ಉಂಟಾಗಲಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ದೇಶದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ನ (ಸಿಡ್ಬಿ) 37ನೇ ವಾರ್ಷಿಕ ಕಾರ್ಯಕ್ರಮದಲ್ಲಿ ಸೋಮವಾರ ಅವರು ಮಾತನಾಡಿದರು.

ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ 'ಮೂರು 'ಎಫ್'ಗಳು ಅಂದರೆ ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯ'ದ ಮೇಲೆ ಗಮನ ಹರಿಸಬೇಕಾಗಿದೆ. ಕಚ್ಚಾ ತೈಲದ ದರ ಏರಿಕೆಯಾಗುತ್ತಿದೆ. ರಸಗೊಬ್ಬರ ದರವು ಊಹಿಸಲಾಗದ ಮಟ್ಟಕ್ಕೆ ತಲುಪಿದೆ. ಚಿನ್ನದ ಬೆಲೆ ಹೆಚ್ಚಳವು ಹಲವಾರು ಸವಾಲುಗಳನ್ನು ಸೃಷ್ಟಿಸುತ್ತಿದೆ ಎಂದು ತಿಳಿಸಿದ್ದಾರೆ.

ದೇಶದ ಆರ್ಥಿಕ ಸ್ಥಿತಿ ಇಂದಿಗೂ ಸಕಾರಾತ್ಮಕವಾಗಿದೆ. ದೇಶದ ಜನರಲ್ಲಿ ಅನಗತ್ಯವಾಗಿ ಭಯ ಹುಟ್ಟಿಸುವ ಪ್ರಚಾರವನ್ನು ಸಹಿಸಲಾಗುವುದಿಲ್ಲ. ನಮ್ಮ ಮಾತುಗಳು ಮತ್ತು ಕಾರ್ಯಗಳಿಂದ ಜನರಲ್ಲಿ ಆತ್ಮವಿಶ್ವಾಸ ತುಂಬಬೇಕಾಗಿದೆ ಎಂದಿದ್ದಾರೆ.

ಅಚ್ಛೇ ದಿನ್ ಬದಲು ಜನರಿಗೆ ಟೋಪಿ: ಸಿದ್ದರಾಮಯ್ಯ

ಬಿಜೆಪಿ ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಸರ್ಕಾರ ಬರುತ್ತದೆ. ಅಚ್ಛೇ ದಿನ್ ಬರುತ್ತದೆ ಎಂದು ಹೇಳಿ ಜನರಿಗೆ ಟೋಪಿ ಹಾಕಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಇತಿಹಾಸದಲ್ಲೇ ಈ ರೀತಿ ತೈಲ ಬೆಲೆ ಏರಿಕೆ ಆಗಿರಲಿಲ್ಲ. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ 2014ರ ಬೆಲೆಗಿಂತ ಈಗ ದುಪ್ಪಟ್ಟು ಹೆಚ್ಚಾಗಿದೆ. ಕಚ್ಚಾ ತೈಲ ಬೆಲೆಯ ಇಳಿಕೆಯ ಲಾಭ ಗ್ರಾಹಕರಿಗೆ ಸಿಕ್ಕಿಲ್ಲ. ಬದಲಿಗೆ ಬೆಲೆ ಏರಿಕೆಯ ಬರೆ ಹಾಕಿದ್ದಾರೆ. ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಸತತವಾಗಿ ಹೆಚ್ಚಳ ಮಾಡುತ್ತಾ ದೇಶ ಹಾಗೂ ಜನಸಾಮಾನ್ಯರನ್ನು ದೋಚುತ್ತಿದ್ದಾರೆ ಎಂದು ದೂರಿದರು.

ದರ ಏರಿಕೆ ಲಾಭ ರಾಜ್ಯ ಸರ್ಕಾರಕ್ಕೆ: ಅಶೋಕ

ಪೆಟ್ರೋಲ್ ದರ ಏರಿಕೆಯಿಂದ ರಾಜ್ಯ ಸರ್ಕಾರ ವರ್ಷಕ್ಕೆ ಹೆಚ್ಚುವರಿಯಾಗಿ ₹6,000 ಕೋಟಿ ಲಾಭ ಮಾಡಿಕೊಳ್ಳುತ್ತಿದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪೆಟ್ರೋಲ್ ಮೇಲೆ ವ್ಯಾಟ್ ಹೆಚ್ಚು ಮಾಡಿದ ಕಾರಣಕ್ಕೆ ಇತರ ರಾಜ್ಯಗಳಿಂತ ಹೆಚ್ಚು ದರವನ್ನು ರಾಜ್ಯದ ಗ್ರಾಹಕರು ತೆರಬೇಕಾಗಿದೆ. ಸರ್ಕಾರ ವ್ಯಾಟ್ ಕಡಿಮೆ ಮಾಡಿದರೆ ಪೆಟ್ರೋಲ್ ದರ ಇಳಿಕೆಯಾಗುತ್ತದೆ' ಎಂದು ಹೇಳಿದ್ದಾರೆ.

> ಮೆಹಂಗಾಯಿ ಮಾನವ್ (ದುಬಾರಿ ಮನುಷ್ಯ) ಮೋದಿ ಅವರು ಜನಸಾಮಾನ್ಯರ ಮೇಲೆ ಮತ್ತೊಮ್ಮೆ ಗದಾಪ್ರಹಾರ ಮಾಡಿದ್ದಾರೆ. ಪೆಟ್ರೋಲ್, ಡೀಸೆಲ್ ಬೆಲೆಯನ್ನು ಕಂತುಗಳಲ್ಲಿ ಹೆಚ್ಚಿಸಿ ಜನರ ಜೇಬು ಖಾಲಿಯಾಗುವುದನ್ನು ಖಾತರಿಪಡಿಸಿಕೊಳ್ಳುತ್ತಿದ್ದಾರೆ. ಚುನಾವಣೆಯ ಸಮಯದಲ್ಲಿ ಭರವಸೆಗಳನ್ನು ನೀಡಿ, ಇನ್ನುಳಿದ ಸಮಯದಲ್ಲಿ ಜನರ ಜೇಬಿಗೆ ಕತ್ತರಿ ಹಾಕುತ್ತಾರೆ. ಆರ್ಥಿಕ ಬಿಕ್ಕಟ್ಟಿನ ಬಗ್ಗೆ ನಾನು ತಿಂಗಳುಗಳ ಹಿಂದೆಯೇ ಎಚ್ಚರಿಸಿದ್ದೆ. ಆ ಸಮಯದಲ್ಲಿ ಮೋದಿಜಿ ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದರು
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಆರ್‌ಸಿಬಿ vs ಜಿ.ಟಿ ಯಾರಿಗೆ ಫೈನಲ್ ಟಿಕೆಟ್?



ಧರ್ಮಶಾಲಾ: ಪ್ರಶಸ್ತಿಯನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಂಗಳವಾರ ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯ ಮೊದಲ ಕ್ವಾಲಿಫೈಯರ್‌ನಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ. ಈ ಪಂದ್ಯ ಗೆಲ್ಲುವ ತಂಡವು ಇದೇ 31ರಂದು ನಡೆಯುವ ಫೈನಲ್‌ಗೆ ನೇರ ಅರ್ಹತೆ ಪಡೆಯಲಿದೆ. ಈ ಎರಡು ತಂಡಗಳು ಲೀಗ್ ಹಂತದ ಅಂಕಪಟ್ಟಿಯಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದಿವೆ.

ಲೀಗ್‌ನಲ್ಲಿ ಸಾಧನೆ

ಜಿ.ಟಿ		ಆರ್‌ಸಿಬಿ
14	ಪಂದ್ಯ	14
9	ಗೆಲುವು	9
5	ಸೋಲು	5
18	ಅಂಕ	18
0.695	ನೆಟ್‌ರನ್‌ರೇಟ್	0.783

ಬಲಾಬಲ ಒಟ್ಟು ಪಂದ್ಯ 8 | ಬೆಂಗಳೂರು ಗೆಲುವು 4 | ಗುಜರಾತ್ ಗೆಲುವು 4

ಪಂದ್ಯ ಆರಂಭ: ರಾತ್ರಿ 7.30 ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

'ಪಾಠ ಕಲಿಯದ ಎನ್‌ಟಿಎ'

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಹಿಂದಿನ ತಪ್ಪುಗಳಿಂದ ಪಾಠ ಕಲಿಯದಿರುವುದು ದುಃಖಕರ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ವೈದ್ಯಕೀಯ ಪ್ರವೇಶ ಪರೀಕ್ಷೆ (ನೀಟ್) ನಡೆಸುವ ಎನ್‌ಟಿಎ ಅನ್ನು ಪುನರ್ ರಚಿಸಬೇಕು ಮತ್ತು ಸ್ವಾಯತ್ತೆ ನೀಡಬೇಕು. ಇಲ್ಲವೇ ಸದೃಢವಾದ ಹೊಸ ಸಂಸ್ಥೆ ರಚಿಸಬೇಕು ಎಂದು ಅಖಿಲ ಭಾರತೀಯ ವೈದ್ಯಕೀಯ ಒಕ್ಕೂಟ (ಎಫ್‌ಎಐಎಂಎ) ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಾಲಯವು ಕೇಂದ್ರ ಸರ್ಕಾರ, ಎನ್‌ಟಿಎ ಮತ್ತು ಸಿಬಿಐಗೆ ಮೂರು ದಿನದೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದೆ.

ನೀಟ್ ಪರೀಕ್ಷೆ ನಡೆಸುವ ಜವಾಬ್ದಾರಿ ಹೊತ್ತಿರುವ ಎನ್‌ಟಿಎ, 2024ರಲ್ಲಿ ನ್ಯಾಯಾಲಯ ಹೊರಡಿಸಿದ ನಿರ್ದೇಶನಗಳ ಅನುಪಾಲನಾ ವರದಿ ಕುರಿತು ಗುರುವಾರ ಪ್ರಮಾಣಪತ್ರ ಸಲ್ಲಿಸುವಂತೆ ಸೂಚಿಸಿದ್ದು, ಶುಕ್ರವಾರ ವಿಚಾರಣೆಗೆ ಪಟ್ಟಿ ಮಾಡಿದೆ.

'ಹಿಂದಿನ ವರ್ಷವೂ ಪ್ರಶ್ನೆಪತ್ರಿಕೆ ಸೋರಿಕೆ ಆಗಿತ್ತು. ನ್ಯಾಯಾಲಯ ವಿಚಾರಣೆ ನಡೆಸಿತ್ತು. ಮೇಲ್ವಿಚಾರಣಾ ಸಮಿತಿಯು ಕೆಲವು ಶಿಫಾರಸು ಮಾಡಿತ್ತು. ಅವುಗಳನ್ನು ಸ್ವೀಕರಿಸಲಾಗಿತ್ತು. ಸಮಿತಿ ಸೂಚಿಸಿದ ಶಿಫಾರಸು ಜಾರಿಗೊಳಿಸಲು ತೆಗೆದುಕೊಂಡ ಕ್ರಮಗಳ ಕುರಿತಂತೆ ಎನ್‌ಟಿಎ ಪ್ರಮಾಣಪತ್ರ ಸಲ್ಲಿಸಬೇಕು ಎಂಬುದನ್ನು ನಾವು ಬಯಸುತ್ತೇವೆ' ಎಂದು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಆರಾಧೆ ಅವರಿದ್ದ ಪೀಠವು ಹೇಳಿದೆ.

▸5

ಚಿನಕುರುಳಿ ಪ್ರಕಾಶ್ ಶೆಟ್ಟಿ

ಇರಾನ್: ಮುಗಿಯದ ಗೊಂದಲ

ಟೆಹರಾನ್, ನವದೆಹಲಿ (ಎಎಫ್‌ಪಿ/ಪಿಟಿಐ): ಯುದ್ಧ ಅಂತ್ಯಗೊಳಿಸಲು ಎರಡೂ ದೇಶಗಳು ನಡೆಸುತ್ತಿರುವ ಮಾತುಕತೆಯ ಕುರಿತು ಗೊಂದಲ ಮುಂದುವರಿದಿದೆ. ಇರಾನ್ ಹಾಗೂ ಅಮೆರಿಕದ ನಾಯಕರ ಹೇಳಿಕೆಗಳು ವಿರೋಧಾಭಾಸದಿಂದ ಕೂಡಿವೆ. ಆದರೆ, ಯುದ್ಧವನ್ನು ತಕ್ಷಣದಲ್ಲಿಯೇ ಅಂತ್ಯಗೊಳಿಸುವ ಆಸಕ್ತಿಯನ್ನು ಎರಡೂ ದೇಶಗಳು ಹೊಂದಿಲ್ಲ.

'ಒಪ್ಪಂದಕ್ಕೆ ಬರಲು ಹಲವು ವಿಚಾರಗಳ ಕುರಿತು ನಾವು ಮಾತುಕತೆ ನಡೆಸುತ್ತಿದ್ದೇವೆ. ಆದರೆ, ಇದು ಯುದ್ಧ ಅಂತ್ಯಗೊಳಿಸಲು ನಡೆಯುತ್ತಿರುವ ಮಾತುಕತೆಯು ಮುಕ್ತಾಯದ ಹಂತಕ್ಕೆ ತಲುಪಿದೆ ಎಂದು ಅರ್ಥೈಸಬೇಕಾಗಿಲ್ಲ. ಹಲವು ವಿಚಾರಗಳ ಕುರಿತು ಇನ್ನೂ ಚರ್ಚೆ ನಡೆಯುತ್ತಿದೆ' ಎಂದು ಇರಾನ್ ಸೋಮವಾರ ಹೇಳಿದೆ.

'ನಮ್ಮ ಮಧ್ಯೆ ಒಪ್ಪಂದದ ಮಾತುಕತೆಗಳು ಅಂತ್ಯಗೊಂಡು ಸಹಿ ಹಾಕುವ ಹಂತಕ್ಕೆ ಬಂದಿದೆ ಎಂದು ಯಾರೂ ಹೇಳುವಂತಿಲ್ಲ. ಅಮೆರಿಕವು ಪದೇ ಪದೇ ತನ್ನ ನಿಲುವುಗಳನ್ನು ಬದಲಾಯಿಸುತ್ತಿದೆ ಮತ್ತು ವಿರೋಧಾಭಾಸದ ನಿಲುವುಗಳನ್ನು ತಳೆಯುತ್ತಿದೆ' ಎಂದು ಇರಾನ್ ಹೇಳಿದೆ.

ಭಾರತದ ಭೇಟಿಯಲ್ಲಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಇಲ್ಲಿನ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿ, 'ಸೋಮವಾರದ ಹೊತ್ತಿಗೆ ಇರಾನ್ ನೊಂದಿಗಿನ ಮಾತುಕತೆಯು ಅಂತಿಮ ಹಂತಕ್ಕೆ ಬರಲಿದೆ' ಎಂದಿದ್ದರು.

> ಇರಾನ್‌ನೊಂದಿಗೆ ಒಂದೋ ಉತ್ತಮವಾದ ಮತ್ತು ಅರ್ಥಪೂರ್ಣವಾದ ಒಪ್ಪಂದ ಮಾಡಿಕೊಳ್ಳುತ್ತೇವೆ ಇಲ್ಲವೇ ಒಪ್ಪಂದದ ಮಾತೇ ಇರುವುದಿಲ್ಲ
>
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

ಇನ್ನಷ್ಟು ಸುದ್ದಿಗಳು ▸12

ದರ್ಶನ್ ಪ್ರಕರಣ: ಕೋರ್ಟ್ ಬದಲು

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಅವರ ಗೆಳತಿ ಪವಿತ್ರಾಗೌಡ ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆಯು ಜೂನ್ 1ರಿಂದ ಬೇರೊಂದು ಕೋರ್ಟ್‌ನಲ್ಲಿ ನಡೆಯಲಿದೆ.

2024ರಲ್ಲಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯು ಇದುವರೆಗೂ 57ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯುತ್ತಿತ್ತು.

▸5

ಆಪ್ತ ಸಚಿವರ ದಂಡಿನೊಂದಿಗೆ ಸಿ.ಎಂ. ದೆಹಲಿಗೆ ದೌಡು • ಪ್ರತ್ಯೇಕ ವಿಮಾನದಲ್ಲಿ ರಾಜಧಾನಿಗೆ ಡಿಕೆಶಿ

ಕುತೂಹಲ ಮೂಡಿಸಿದ 'ಕೈ' ಕಮಾಂಡ್ ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆಯ ಕುರಿತು ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಕಾವೇರಿದ ಚರ್ಚೆ ನಡೆಯುತ್ತಿದೆ. ಈ ನಡುವೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಆ ಪಕ್ಷದ ವರಿಷ್ಠರು ದೆಹಲಿಗೆ ಕರೆಯಿಸಿಕೊಂಡಿರುವುದು ರಾಜಕೀಯ ವಲಯದಲ್ಲಿ ಕುತೂಹಲದ ಅಲೆ ಎಬ್ಬಿಸಿದೆ.

ಸಚಿವರು, ಶಾಸಕರಲ್ಲಿ ಭಾರಿ ಆಸಕ್ತಿ ಕೆರಳಿಸಿರುವ ಸಭೆ ಮಂಗಳವಾರ ದೆಹಲಿಯಲ್ಲಿ ನಡೆಯಲಿದೆ. ಸಭೆಯಲ್ಲಿ ಚರ್ಚೆಯಾಗಬಹುದಾದ ಸಂಗತಿಗಳ ಬಗ್ಗೆ ವದಂತಿಗಳ ಕಂತೆಗಳೇ ಹೊರಬರುತ್ತಿವೆ. 'ಉದ್ದೇಶಿತ ಸಭೆಯ ಕಾರ್ಯಸೂಚಿಯ ನಿಖರ ಮಾಹಿತಿ ಇಲ್ಲ' ಎಂದು ಕಾಂಗ್ರೆಸ್‌ನ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಅವರಿಗೆ ಕರೆ ಮಾಡಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ದೆಹಲಿಗೆ ಬರುವಂತೆ ಸಂದೇಶ ರವಾನಿಸಿದ್ದರು. ಯಾವ ಉದ್ದೇಶಕ್ಕೆ ಸಭೆ ನಡೆಯಲಿದೆ, ಯಾರು ಇರಲಿದ್ದಾರೆ ಎಂಬ ಮಾಹಿತಿ ನೀಡಿರಲಿಲ್ಲ. ವರಿಷ್ಠರು ಕರೆ ಕಳುಹಿಸಿರುವುದನ್ನು ಸಿದ್ದರಾಮಯ್ಯ ಖಚಿತ ಪಡಿಸಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿದ್ದ ಡಿ.ಕೆ. ಶಿವಕುಮಾರ್, 'ನನಗೆ ಕರೆ ಬಂದಿಲ್ಲ, ಬಂದರೆ ಹೋಗುತ್ತೇನೆ' ಎಂದಿದ್ದರು.

ಬೆಂಗಳೂರಿನಲ್ಲಿಯೇ ಇದ್ದ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, ದೆಹಲಿಯ ನಾಯಕರನ್ನು ಸಂಪರ್ಕಿಸಿ, ಶಿವಕುಮಾರ್ ಹೇಳಿಕೆಯ ಬಗ್ಗೆ ವಿವರಣೆ ನೀಡಿದ್ದರು. ಅದಾದ ಬಳಿಕ, ಶಿವಕುಮಾರ್ ಅವರಿಗೂ ಕರೆ ಬಂದಿತು.

ಕೇರಳಂ ಮುಖ್ಯಮಂತ್ರಿಯಾಗಿ ವಿ.ಡಿ. ಸತೀಶನ್ ಪ್ರಮಾಣ ವಚನ ಸಮಾರಂಭಕ್ಕೆ ಹೋಗಿದ್ದ ಸಿದ್ದರಾಮಯ್ಯ ಅವರು, 'ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದ ಮಹತ್ವದ ವಿಚಾರ ಚರ್ಚೆ ಮಾಡಲಿಕ್ಕಿದೆ, ಸಮಯ ಕೊಡಿ ಎಂದು ರಾಹುಲ್ ಗಾಂಧಿ ಅವರನ್ನು ಕೇಳಿದ್ದರು. ಆ ಹಿನ್ನೆಲೆಯೊಳಗೆ ಕರೆ ಬಂದಿದೆ' ಎಂದು ಪಕ್ಷದ ಮೂಲಗಳು ಹೇಳಿವೆ.

▸3

2028ಕ್ಕೆ ನನಗೇ, 'ಕೈ'ಗೆ ಅಧಿಕಾರ: ಡಿಕೆಶಿ

'ರಾಜ್ಯದಲ್ಲಿ 2028ರಲ್ಲಿ ಇದೇ ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಸಿಗಲಿದೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂದು ಕನಸು ಕಾಣಬೇಡಿ. ಕೆಲಸ ಮಾಡಿ ಎಂದು ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರು ಆ ಪಕ್ಷದವರಿಗೆ ಸಲಹೆ ನೀಡಿದ್ದಾರೆ. ಗೃಹ ಸಚಿವ ಅಮಿತ್ ಶಾ ಅವರು 2023ರ ಚುನಾವಣೆಯಲ್ಲಿ ಬಿಜೆಪಿಗೆ 122 ಸೀಟು ಬರುತ್ತದೆ ಎಂದಿದ್ದರು. ನಾನು ಕಾಂಗ್ರೆಸ್ 136 ಸೀಟು ಪಡೆದು ಅಧಿಕಾರಕ್ಕೆ ಬರಲಿದೆ ಎಂದು ಹೇಳಿದ್ದೆ, ಈಗಲೂ ಹೇಳುತ್ತಿದ್ದೇನೆ. 2028ರಲ್ಲೂ ಕಾಂಗ್ರೆಸ್ ಮತ್ತು ಶಿವಕುಮಾರ್‌ಗೇ ಅಧಿಕಾರ' ಎಂದರು.

'ಮುಖ್ಯಮಂತ್ರಿ ಸ್ಥಾನದ ವಿಚಾರದ ಮಾಹಿತಿ ಇಲ್ಲ. ವರಿಷ್ಠರು ಕರೆದರೆ ಹೋಗುತ್ತೇವೆ. ಇಲಾಖೆ ಕೆಲಸಗಳ ಕುರಿತು ಚರ್ಚಿಸಲು ಮೇ 26ರಂದು ಕೇಂದ್ರ ಸಚಿವರನ್ನು ಭೇಟಿ ಮಾಡಬೇಕಿದೆ. ಅದಕ್ಕಾಗಿ ದೆಹಲಿಗೆ ತೆರಳುತ್ತಿದ್ದೇನೆ' ಎಂದು ತಿಳಿಸಿದರು.

> ಪಕ್ಷದ ವರಿಷ್ಠರು ದೆಹಲಿಗೆ ಕರೆದಿದ್ದು, ತೆರಳುತ್ತಿದ್ದೇನೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಕರೆ ಮಾಡಿದ್ದರು. ಯಾವ ವಿಚಾರಕ್ಕೆ ಕರೆದಿದ್ದಾರೆ ಎಂಬ ಖಚಿತತೆ ಇಲ್ಲ. ಸಂಪುಟ ವಿಸ್ತರಣೆ ಬಗ್ಗೆ ಪ್ರತಿಕ್ರಿಯಿಸಲ್ಲ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಹೈಕಮಾಂಡ್ ಪ್ರಶ್ನೆ ಪತ್ರಿಕೆ ಕೊಡುತ್ತದೆ. ಉತ್ತರ ಕೊಟ್ಟ ಬಳಿಕ ಟಿಕ್ ಮಾಡುತ್ತಾರೆ. ಆರು ತಿಂಗಳ ಗೊಂದಲವೇ ಚರ್ಚೆಯ ವಸ್ತು ಇರಬಹುದು. ಕೀ ಉತ್ತರ ಓಪನ್ ಆದಾಗ ವಿಷಯ ಗೊತ್ತಾಗುತ್ತದೆ
>
> **ಸತೀಶ ಜಾರಕಿಹೊಳಿ,** ಸಚಿವ, ಲೋಕೋಪಯೋಗಿ ಇಲಾಖೆ

TATA
TATA POWER
THE TATA POWER COMPANY LIMITED,
Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಹೆಸ್ಕಾಂನ HESCOMನ ಮೂರು (3) ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಿಗೆ ವಿದ್ಯುತ್ ಕಾಯ್ದೆ, 2003ರ ಕಲಂ 14 ಮತ್ತು 15ರ ಅಡಿಯಲ್ಲಿ ವಿತರಣಾ ಪರವಾನಗಿಯನ್ನು ಮಂಜೂರು ಮಾಡುವ ಕುರಿತು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸಾರ್ವಜನಿಕ ಸೂಚನೆ
(ಪ್ರಕರಣ ಸಂಖ್ಯೆ: MP/06/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯ್ದೆ, 2003 ("ಕಾಯ್ದೆ")ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಜೊತೆಗೆ ಓದಿಕೊಂಡು, **ಹೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ** ಸಂಪರ್ಕಿತ ಪ್ರದೇಶಗಳಿಗೆ ಟಿಪಿಸಿಎಲ್‌ಗೆ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ)ದ ಮುಂದೆ ಅರ್ಜಿಯನ್ನು **(ಪ್ರಕರಣ ಸಂಖ್ಯೆ: MP/06/2026)** ಸಲ್ಲಿಸಿದೆ. ಕಾಯ್ದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಆಯೋಗವು ಟಾಟಾ ಪವರ್‌ಗೆ ನಿರ್ದೇಶಿಸಿದೆ.
2. **ಅರ್ಜಿಯ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ:**

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯಿದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	**ಹೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು**

3. **ಅರ್ಜಿಯ ಇತರ ಪ್ರಮುಖ ಲಕ್ಷಣಗಳು:**
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ – ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯುಒಡಿಎಲ್) ಮತ್ತು ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್)ನಲ್ಲಿ ಟಾಟಾ ಪವರ್‌ನ ಕಾರ್ಯಸಾಧನೆ ಗಮನಾರ್ಹವಾಗಿದೆ.
- ಟಾಟಾ ಪವರ್ ಶತಮಾನಕ್ಕೂ ಮೀರಿ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಆದ್ದರಿಂದ ಹೆಚ್ಚುತ್ತಿರುವ ಸಂಕೀರ್ಣ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸುವ ಅಪ್ರತಿಮ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಹೊಂದಿದೆ. ಅರ್ಜಿದಾರರು ವಿವಿಧ ಸಮನ್ವಯ (synergies) ಲಾಭಗಳನ್ನು ಪಡೆದು ಪ್ರಸ್ತಾವಿತ ಪೂರೈಕೆ ಪ್ರದೇಶದಲ್ಲಿ – ಅಂದರೆ **ಹೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ ಪ್ರದೇಶದಲ್ಲಿ** – ಗ್ರಾಹಕರ ನಿರಂತರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾರೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರಿ ಅರ್ಜಿ ಸಲ್ಲಿಸಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಹೆಸ್ಕಾಂ) ವಿತರಣಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ.

4. **ಅರ್ಜಿದಾರರ ಕಾನೂನು ಸ್ಥಿತಿ ಮತ್ತು ನೋಂದಣಿ ಸಂಖ್ಯೆ:** ಪಬ್ಲಿಕ್ ಲಿಮಿಟೆಡ್ ಕಂಪನಿ – ಸಿಐಎನ್ [L28920MH1919PLC000567]
5. **ಷೇರು ಹೊಂದಿರುವ ಮಾದರಿ:**

ಕ್ರ. ಸಂ.	ಷೇರುದಾರರ ಹೆಸರು	ಹೊಂದಿರುವ ಷೇರುಗಳ ಸಂಖ್ಯೆ (31 ಜೂನ್ 2024)
(i)	ಪ್ರವರ್ತಕ ಮತ್ತು ಪ್ರವರ್ತಕ ಗುಂಪು	1,49,72,57,565
(ii)	ಸಾರ್ವಜನಿಕ	1,69,80,81,982
(iii)	ಪ್ರವರ್ತಕರಲ್ಲದ – ಸಾರ್ವಜನಿಕವಲ್ಲದ	0
(iv)	ಡಿಆರ್ ಅಡಿಯಲ್ಲಿನ ಷೇರುಗಳು	0
(v)	ಉದ್ಯೋಗಿ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	ಒಟ್ಟು	3,19,53,39,547

6. **ವ್ಯವಸ್ಥಾಪನಾ ವಿವರ (ನಿರ್ದೇಶಕರ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ. ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ, ಅಧ್ಯಕ್ಷರು	• ಮಾಸ್ಟರ್ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್, ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಟಾಟಾ ಸನ್ಸ್‌ನ ಅಧ್ಯಕ್ಷರು	36 ವರ್ಷಗಳಿಗಿಂತ ಹೆಚ್ಚು
		• ಗೌರವ 'ಡಾಕ್ಟರ್ ಆಫ್ ಲೆಟರ್ಸ್', ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ	
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ	• ಪಿಎಚ್‌ಡಿ., ಭಾರತೀಯ ತಂತ್ರಜ್ಞಾನ ಸಂಸ್ಥೆ, ದೆಹಲಿ	• ವಿದ್ಯುತ್ ಕ್ಷೇತ್ರದ ಪರಿಣತ	36 ವರ್ಷಗಳಿಗಿಂತ ಹೆಚ್ಚು
		• ಮಾಸ್ಟರ್ ಇನ್ ಬಿಸಿನೆಸ್ ಲಾ, ನ್ಯಾಷನಲ್ ಲಾ ಸ್ಕೂಲ್, ಬೆಂಗಳೂರು	• ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ	
		• ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ, ದೆಹಲಿ ಕಾಲೇಜ್ ಆಫ್ ಇಂಜಿನಿಯರಿಂಗ್		
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್	• ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ	20 ವರ್ಷಗಳಿಗಿಂತ ಹೆಚ್ಚು
		• ಮಾಸ್ಟರ್ ಇನ್ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	• ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ	• ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ	38 ವರ್ಷಗಳಿಗಿಂತ ಹೆಚ್ಚು
		• ಎಂಬಿಎ, ಐಐಎಂ ಬೆಂಗಳೂರು	• ಬಿಪಿಸಿಎಲ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಮಾಸ್ಟರ್ಸ್ ಇನ್ ಹಿಸ್ಟರಿ	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
		• ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	• ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ	30 ವರ್ಷಗಳಿಗಿಂತ ಹೆಚ್ಚು
			• ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ	• ಟಾಟಾ ಸನ್ಸ್‌ನ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ	25 ವರ್ಷಗಳಿಗಿಂತ ಹೆಚ್ಚು
		• ಪಿಜಿಡಿಎಂ, ಐಐಎಂ ಕಲ್ಕತ್ತಾ	• ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರಾಥ್‌ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ	30 ವರ್ಷಗಳಿಗಿಂತ ಹೆಚ್ಚು
			• ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ	• ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
		• ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್	• ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	
		• ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್		
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ	• ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು
		• ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	• ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	

7. ಸಮಾನ ಚಟುವಟಿಕೆಗಳಲ್ಲಿನ ಕಾರ್ಯಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.
i) **ಮುಂಬೈನಲ್ಲಿ ವಿತರಣಾ ಪರವಾನಗಿ:** ಮಾನ್ಯ ಎಂಇಆರ್‌ಸಿ ಮುಂಬೈ ನಗರ ಹಾಗೂ ಮುಂಬೈ ಉಪನಗರ ಪ್ರದೇಶದ ಭಾಗಗಳಿಗೆ (ಚೆನೆ ಮತ್ತು ವರ್ಸಾವೆ ಪ್ರದೇಶಗಳನ್ನು ಒಳಗೊಂಡ ಮೀರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ವ್ಯಾಪ್ತಿ) 25 ವರ್ಷಗಳ ಅವಧಿಗೆ ಟಾಟಾ ಪವರ್‌ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂಖ್ಯೆ 1/2014) ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು, 4,850 CKM ಜಾಲ ಉದ್ದ ಹಾಗೂ 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.
ii) **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (PPP) ಮಾದರಿಯ ಜಂಟಿ ಉದ್ಯಮವಾಗಿ ಸ್ಥಾಪಿಸಲಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12500 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. AT&C ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಕ್ಕೆ ಇಳಿದಿವೆ.
iii) **ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲು ಹೊಂದಿದೆ. TPCODL 29,354 ಚದರ ಕಿ.ಮೀ. ವ್ಯಾಪ್ತಿಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನದ ಸಮಯದಲ್ಲಿ 30.49% ಇದ್ದ AT&C ನಷ್ಟಗಳು ಈಗ 19.6%ಕ್ಕೆ ಇಳಿದಿವೆ. TPCODL 1,14,119 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.
iV) **ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯ ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪಿಸಲಾಯಿತು. TPNODL 27,920 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಹರಡಿರುವ 2.2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. FY25ರ ಅಂತ್ಯದಲ್ಲಿ ವಾರ್ಷಿಕ AT&C ನಷ್ಟಗಳು 12.6%ರಷ್ಟಿದ್ದು, ಇದು ಮಾನ್ಯ OERC ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. TPNODL 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ 1,64,629 CKM ಜಾಲವನ್ನು ನಿರ್ವಹಿಸುತ್ತಿದೆ.
V) **ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, TPSODL ಒಡಿಶಾದ ದಕ್ಷಿಣ ಭಾಗದ ಸುಮಾರು 48,751 ಚದರ ಕಿ.ಮಿ. ವಿಸ್ತೀರ್ಣವನ್ನು ಹೊಂದಿದೆ. TPSODL 112955 ಸಿಕೆಎಂ ನೆಟ್‌ವರ್ಕ್ ಅನ್ನು ನಿರ್ವಹಿಸುತ್ತದೆ ಮತ್ತು ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.
Vi) **ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯೂಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯೂಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಅಂಡ್‌ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.
Vii) **ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ:**
ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಅಜ್ಮೇರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆ ವಿತರಣಾ ಫ್ರಾಂಚೈಸಿ ಒಪ್ಪಂದ (DFA)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. TPADL ಅಜ್ಮೇರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವುದು ಮತ್ತು ಸಂರಕ್ಷಿಸುವುದರ ಜೊತೆಗೆ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದೆ. TPADL AT&C ನಷ್ಟಗಳನ್ನು 17.2%ರಿಂದ 7.8%ಕ್ಕೆ ಇಳಿಸುವಲ್ಲಿ ಗಮನಾರ್ಹ ಕೊಡುಗೆ ನೀಡಿದೆ.

8. ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರ ಹಾಗೂ ಸೇವೆ ಸಲ್ಲಿಸಲು ಉದ್ದೇಶಿಸಿರುವ ಗ್ರಾಹಕರ ಸಂಖ್ಯೆ: ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಹೆಸ್ಕಾಂನ ಮೂರು (3) ಆದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಪರಸ್ಪರ ಸಂಪರ್ಕ ಹೊಂದಿರುವ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಉದ್ದೇಶಿಸಿದೆ. ಮೇಲ್ಕಂಡ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಕೆಳಕಂಡ ಪ್ರದೇಶಗಳನ್ನು ಒಳಗೊಂಡಿವೆ: **1) ಬೆಳಗಾವಿ ಮಹಾನಗರ ಪಾಲಿಕೆ 2) ಗೋಕಾಕ ಸಿಎಂಸಿ 3) ನಿಪ್ಪಾಣಿ ಸಿಎಂಸಿ 4) ದಾಂಡೇಲಿ ಸಿಎಂಸಿ 5) ಕಾರವಾರ ಸಿಎಂಸಿ 6) ಶಿರಸಿ ಸಿಎಂಸಿ 7) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ .**
TPC ಪರವಾನಗಿ ಮಂಜೂರಾದ ದಿನಾಂಕದಿಂದ ಐದು (5) ವರ್ಷಗಳ ಅವಧಿಯ ಅಂತ್ಯದೊಳಗೆ 38,500 (ಮೂವತ್ತೆಂಟು ಸಾವಿರದ ಐದುನೂರು)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.

9. ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. **ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ: ವೆಬ್‌ಸೈಟ್: www.tatapower.com**
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಸಾಮರ್ಥ್ಯ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲ್ಕಂಡಂತೆ TPC ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.
12. ಪ್ರಕಟಿತ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆಗಳು/ಆಕ್ಷೇಪಣೆಗಳನ್ನು ಸಲ್ಲಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಇ-ಮೇಲ್ ವಿಳಾಸ: asst.secykerc@gmail.com ಗೆ ಸಲ್ಲಿಸಬಹುದು. ಈ ಸೌಲಭ್ಯವನ್ನು ಬಳಸುವಲ್ಲಿ ಯಾವುದೇ ತೊಂದರೆ ಎದುರಾದಲ್ಲಿ, ಸಂಬಂಧಿತ ಹಿತಾಸಕ್ತ ವ್ಯಕ್ತಿಗಳು ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 05:00 ಗಂಟೆಯವರೆಗೆ ಮೊಬೈಲ್ ಸಂಖ್ಯೆ: 8147 144 627 ಅಥವಾ ಇ-ಮೇಲ್ ವಿಳಾಸ: asst.secykerc@gmail.com ಮೂಲಕ KERC ಕಚೇರಿಯನ್ನು ಸಂಪರ್ಕಿಸಬಹುದು.
13. 'ಇ-ಪಬ್ಲಿಕ್ ಕನ್ಸಲ್ಟೇಶನ್' ಟ್ಯಾಬ್‌ನಲ್ಲಿ ಸಲಹೆ ಮತ್ತು ಆಕ್ಷೇಪಣೆಯನ್ನು ಅಪ್‌ಲೋಡ್ ಮಾಡಿರುವ ವ್ಯಕ್ತಿಯು ತಮ್ಮ ಸಲ್ಲಿಕೆಯ ಯಾವುದೇ ಪ್ರತಿಯನ್ನು (ಹಾರ್ಡ್ ಕಾಪಿ) ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರವೇಶವಿಲ್ಲದ ವ್ಯಕ್ತಿಗಳು ತಮ್ಮ ಸಲಹೆ ಮತ್ತು ಆಕ್ಷೇಪಣೆಯನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ, ಶ್ರೀ. ವಿ. ಎಚ್. ವಾಗ್ಲೆ, ಟಾಟಾ ಪವರ್ ಕಂಪನಿ ಲಿಮಿಟೆಡ್ [ದೂರವಾಣಿ: (91-22)-67172953, ಇಮೇಲ್: vidyadhar.wagle@tatapower.com] ಅವರಿಗೆ ಸೇವೆಯ ಪುರಾವೆಯೊಂದಿಗೆ, ದಿ ಸೆಕ್ರೆಟರಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿಳಾಸ: ನಂ. 16ಸಿ-1, ಮಿಲ್ಲರ್ಸ್ ರೋಡ್, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ 560052 ಇವರಿಗೆ ಉದ್ದೇಶಿಸಿ ಲಿಖಿತ ರೂಪದಲ್ಲಿ (ಹಾರ್ಡ್ ಕಾಪಿ) ಸಲ್ಲಿಸಬಹುದು; ಮತ್ತು ಅದರಲ್ಲಿ ಕಳುಹಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಇಮೇಲ್ ವಿಳಾಸ (ಇದ್ದರೆ) ನಮೂದಿಸಿರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ** ನಂತರ ಸ್ವೀಕರಿಸಿದ ಸಲಹೆಗಳು ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ / ಟಿಪ್ಪಣಿಗೆ, ಸ್ವೀಕೃತಿಯಾದ ದಿನದಿಂದ ಮೂರು ದಿನಗಳೊಳಗೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ / ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು.

ಸಹಿ/-
ವಿದ್ಯಾಧರ ಹರಿ ವಾಗ್ಲೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಸ್ಥಳ: ಮುಂಬೈ
ದಿನಾಂಕ: 25 ಮೇ 2026

TATA
TATA POWER
THE TATA POWER COMPANY LIMITED,
Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಸಿಇಎಸ್‌ಸಿಯ ಮೂರು (3) ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನಗಳಿಗೆ ವಿದ್ಯುತ್ ಕಾಯಿದೆ, 2003ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಸಲ್ಲಿಸಿರುವ ಅರ್ಜಿಯ (ಪ್ರಕರಣ ಸಂಖ್ಯೆ MP/02/2026) ಮೇಲೆ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸೂಚನೆ.

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯಿದೆ, 2003 ("ಕಾಯಿದೆ")ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, KERC (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಜೊತೆಗೆ ಓದಿಕೊಂಡು, **ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನವನ್ನು** ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳಿಗೆ ಟಿಪಿಸಿಎಲ್‌ಗೆ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ)ದ ಮುಂದೆ ಅರ್ಜಿಯನ್ನು (ಪ್ರಕರಣ ಸಂಖ್ಯೆ MP/02/2026) ಸಲ್ಲಿಸಿದೆ. ಕಾಯಿದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಆಯೋಗವು ಟಾಟಾ ಪವರ್‌ಗೆ ನಿರ್ದೇಶಿಸಿದೆ.
2. ಅರ್ಜಿಯ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ:

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯಿದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	**ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು**

3. **ಅರ್ಜಿಯ ಇತರ ಪ್ರಮುಖ ಲಕ್ಷಣಗಳು:**
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ – ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಮತ್ತು ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್)ನಲ್ಲಿ ಟಾಟಾ ಪವರ್‌ನ ಕಾರ್ಯಸಾಧನೆ ಗಮನಾರ್ಹವಾಗಿದೆ.
- ಟಾಟಾ ಪವರ್ ಶತಮಾನಕ್ಕೂ ಮೀರಿ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಆದ್ದರಿಂದ ಹೆಚ್ಚುತ್ತಿರುವ ಸಂಕೀರ್ಣ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸುವ ಅಪ್ರತಿಮ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಹೊಂದಿದೆ. ಅರ್ಜಿದಾರರು ವಿವಿಧ ಸಮನ್ವಯ (synergies) ಲಾಭಗಳನ್ನು ಪಡೆದು ಪ್ರಸ್ತಾವಿತ ಪೂರೈಕೆ ಪ್ರದೇಶದಲ್ಲಿ – ಅಂದರೆ **ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನ** ಪ್ರದೇಶದಲ್ಲಿ – ಗ್ರಾಹಕರ ನಿರಂತರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾರೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರುತ್ತಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ **ಚಾಮುಂಡೇಶ್ವರಿ ಎಲೆಕ್ಟ್ರಿಸಿಟಿ ಸಪ್ಲೈ ಕಾರ್ಪೊರೇಶನ್ ಲಿಮಿಟೆಡ್ (ಸಿಇಎಸ್‌ಸಿ)ನ** ವಿತರಣಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ.

4. **ಅರ್ಜಿದಾರರ ಕಾನೂನು ಸ್ಥಿತಿ ಮತ್ತು ನೋಂದಣಿ ಸಂಖ್ಯೆ:**
ಪಬ್ಲಿಕ್ ಲಿಮಿಟೆಡ್ ಕಂಪನಿ – ಸಿಐಎನ್ [L28920MH1919PLC000567]
5. **ಷೇರು ಹೊಂದಿರುವ ಮಾದರಿ:**

ಕ್ರ. ಸಂ.	ಷೇರುದಾರರ ಹೆಸರು	ಹೊಂದಿರುವ ಷೇರುಗಳ ಸಂಖ್ಯೆ (31 ಮಾರ್ಚ್ 2025)
(i)	ಪ್ರವರ್ತಕ ಮತ್ತು ಪ್ರವರ್ತಕ ಗುಂಪು	1,49,72,57,565
(ii)	ಸಾರ್ವಜನಿಕ	1,69,80,81,982
(iii)	ಪ್ರವರ್ತಕರಲ್ಲದ – ಸಾರ್ವಜನಿಕವಲ್ಲದ	0
(iv)	ಡಿಆರ್ ಅಡಿಯಲ್ಲಿನ ಷೇರುಗಳು	0
(v)	ಉದ್ಯೋಗಿ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	ಒಟ್ಟು	3,19,53,39,547

6. **ವ್ಯವಸ್ಥಾಪನಾ ವಿವರ (ನಿರ್ದೇಶಕರ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ. ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ, ಅಧ್ಯಕ್ಷರು	• ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್, ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಟಾಟಾ ಸನ್ಸ್‌ನ ಅಧ್ಯಕ್ಷರು	36 ವರ್ಷಗಳಿಗಿಂತ ಹೆಚ್ಚು
		• ಗೌರವ 'ಡಾಕ್ಟರ್ ಆಫ್ ಲೆಟರ್ಸ್', ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ	
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ	• ಪಿಎಚ್‌ಡಿ., ಭಾರತೀಯ ತಂತ್ರಜ್ಞಾನ ಸಂಸ್ಥೆ, ದೆಹಲಿ	• ವಿದ್ಯುತ್ ಕ್ಷೇತ್ರದ ಪರಿಣತ	36 ವರ್ಷಗಳಿಗಿಂತ ಹೆಚ್ಚು
		• ಮಾಸ್ಟರ್ಸ್ ಇನ್ ಬಿಸಿನೆಸ್ ಲಾ, ನ್ಯಾಷನಲ್ ಲಾ ಸ್ಕೂಲ್, ಬೆಂಗಳೂರು	• ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ	
		• ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ, ದೆಹಲಿ ಕಾಲೇಜ್ ಆಫ್ ಇಂಜಿನಿಯರಿಂಗ್		
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ, ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್	• ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ	20 ವರ್ಷಗಳಿಗಿಂತ ಹೆಚ್ಚು
		• ಮಾಸ್ಟರ್ಸ್ ಇನ್ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	• ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ	• ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ	38 ವರ್ಷಗಳಿಗಿಂತ ಹೆಚ್ಚು
		• ಎಂಬಿಎ, ಐಐಎಂ ಬೆಂಗಳೂರು	• ಬಿಪಿಸಿಎಲ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಮಾಸ್ಟರ್ಸ್ ಇನ್ ಹಿಸ್ಟರಿ	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
		• ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	• ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ	30 ವರ್ಷಗಳಿಗಿಂತ ಹೆಚ್ಚು
			• ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ	• ಟಾಟಾ ಸನ್ಸ್‌ನ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ	25 ವರ್ಷಗಳಿಗಿಂತ ಹೆಚ್ಚು
		• ಪಿಜಿಡಿಎಂ, ಐಐಎಂ ಕಲ್ಕತ್ತಾ	• ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರಾಥ್‌ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ	30 ವರ್ಷಗಳಿಗಿಂತ ಹೆಚ್ಚು
			• ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ	• ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
		• ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್	• ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	
		• ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್		
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ	• ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು
		• ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	• ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	

7. **ತತ್ಸಮಾನ ಚಟುವಟಿಕೆಗಳಲ್ಲಿನ ಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:**
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.
i. **ಮುಂಬೈನಲ್ಲಿ ವಿತರಣಾ ಪರವಾನಗಿ:** ಮಾನ್ಯ ಎಂಇಆರ್‌ಸಿ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಭಾಗಕ್ಕೆ (ಚೆನೆ ಮತ್ತು ವರ್ಸಾವೆ ಪ್ರದೇಶವನ್ನು ಒಳಗೊಂಡ ಮೀರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ಪ್ರದೇಶಗಳು) 25 ವರ್ಷಗಳ ಅವಧಿಗೆ ಟಾಟಾ ಪವರ್‌ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂ. 1, 2014)ಯನ್ನು ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್-ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.
ii. **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (ಪಿಪಿಪಿ) ಮಾದರಿಯಲ್ಲಿ ಜಂಟಿ ಉದ್ಯಮವಾಗಿ ಸ್ಥಾಪನೆಯಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12,500 ಸಿಕೆಎಂ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. ಎಟಿಅಂಡ್‌ಸಿ ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಗೆ ಇಳಿಕೆಯಾಗಿದೆ.
iii. **ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲನ್ನು ಹೊಂದಿದೆ. ಟಿಪಿಸಿಒಡಿಎಲ್ 29,354 ಚದರ ಕಿ.ಮೀ.ಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನ ಸಮಯದಲ್ಲಿ 30.49% ಇದ್ದ ಎಟಿಅಂಡ್‌ಸಿ ನಷ್ಟಗಳು ಈಗ 19.6%ರಷ್ಟಿವೆ. ಟಿಪಿಸಿಒಡಿಎಲ್ 1,14,119 ಸಿಕೆಟಿ. ಕಿ.ಮೀ. ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.
iv. **ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯವನ್ನು ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪನೆಯಾಯಿತು. ಟಿಪಿಎನ್‌ಒಡಿಎಲ್ 27,920 ಚದರ ಕಿ.ಮೀ. ಪ್ರದೇಶದಾದ್ಯಂತ ಹರಡಿರುವ 2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಎಫ್‌ವೈ 25ರ ಅಂತ್ಯದಲ್ಲಿ ವಾರ್ಷಿಕ ಎಟಿಅಂಡ್‌ಸಿ ನಷ್ಟಗಳು 12.6%ರಷ್ಟಿದ್ದು – ಇದು ಮಾನ್ಯ ಒಇಆರ್‌ಸಿ ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. ಟಿಪಿಎನ್‌ಒಡಿಎಲ್ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,64,629 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ.
v. **ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, ಟಿಪಿಎಸ್‌ಒಡಿಎಲ್ ಒಡಿಶಾದ ದಕ್ಷಿಣ ಭಾಗದಲ್ಲಿ ಸುಮಾರು 48,751 ಚದರ ಕಿ.ಮೀ. ವ್ಯಾಪಿಸಿಕೊಂಡಿದೆ. ಟಿಪಿಎಸ್‌ಒಡಿಎಲ್ 1,12,955 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.
vi. **ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯೂಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯೂಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಅಂಡ್‌ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.
vii. **ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ:** ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್) ಅಜ್ಮೇರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆಗೆ ವಿತರಣಾ ಫ್ರಾಂಚೈಸಿ ಒಪ್ಪಂದ (ಡಿಎಫ್‌ಎ)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. ಟಿಪಿಎಡಿಎಲ್ ಅಜ್ಮೇರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವ ಮತ್ತು ಸಂರಕ್ಷಿಸುವ ಹಾಗೂ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿದೆ. ಟಿಪಿಎಡಿಎಲ್ ಎಟಿಅಂಡ್‌ಸಿ ನಷ್ಟಗಳನ್ನು 17.2%ರಿಂದ 7.8%ಗೆ ಇಳಿಕೆ ಮಾಡುವಲ್ಲಿ ಕೊಡುಗೆ ನೀಡಿದೆ.
8. **ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರಣೆ ಮತ್ತು ಸೇವೆ ಸಲ್ಲಿಸಲು ಪ್ರಸ್ತಾವಿತ ಗ್ರಾಹಕರ ಸಂಖ್ಯೆ:** ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು **ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನವನ್ನು** ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಬಯಸಿದೆ. ಮೇಲೆ ಉಲ್ಲೇಖಿಸಿದ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಈ ಕೆಳಗಿನ ಪ್ರದೇಶಗಳನ್ನು ಒಳಗೊಂಡಿವೆ: **1. ಮೈಸೂರು ನಗರ ಪಾಲಿಕೆ 2. ಚಾಮರಾಜನಗರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 3. ಕೊಳ್ಳೇಗಾಲ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 4. ಅರಸೀಕೆರೆ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 5. ಹಾಸನ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.**
ಟಿಪಿಸಿ ಪರವಾನಗಿ ಮಂಜೂರಾದ ದಿನಾಂಕದಿಂದ 3 ವರ್ಷಗಳ ಅಂತ್ಯದೊಳಗೆ 48,000 (ನಲವತ್ತೆಂಟು ಸಾವಿರ)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.
9. **ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:**

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ: ವೆಬ್‌ಸೈಟ್: www.tatapower.com
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಯೋಗ್ಯತೆ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲೆ ತಿಳಿಸಿದಂತೆ ಟಿಪಿಸಿ ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.
12. ಪ್ರಕಟವಾದ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆಗಳು/ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಅವುಗಳನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಇಮೇಲ್ ಐಡಿ: asst.secykerc@gmail.com ಗೆ ಸಲ್ಲಿಸಬಹುದು. ಈ ವೈಶಿಷ್ಟ್ಯವನ್ನು ಬಳಸುವಲ್ಲಿ ಯಾವುದೇ ತೊಂದರೆ ಎದುರಾದರೆ, ಸಂಬಂಧಪಟ್ಟ ಭಾಗಿದಾರರು ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10:00 ರಿಂದ ಸಂಜೆ 5:00ರವರೆಗೆ ಮೊಬೈಲ್ ಸಂಖ್ಯೆ: 8147 144 627 ಗೆ ಅಥವಾ ಇಮೇಲ್ ಐಡಿ: asst.secykerc@gmail.com ಗೆ ಕೆಇಆರ್‌ಸಿ ಕಚೇರಿಯನ್ನು ಸಂಪರ್ಕಿಸಬಹುದು.
13. ಮೇಲೆ ನಮೂದಿಸಿದ ಇಮೇಲ್ ಐಡಿ ಮೂಲಕ ತಮ್ಮ ಸಲಹೆ/ಆಕ್ಷೇಪಣೆ ಸಲ್ಲಿಸಿರುವ ವ್ಯಕ್ತಿಯು ತಮ್ಮ ಸಲ್ಲಿಕೆಯ ಯಾವುದೇ ಪ್ರತಿಯನ್ನು (ಹಾರ್ಡ್ ಕಾಪಿ) ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರವೇಶವಿಲ್ಲದ ವ್ಯಕ್ತಿಗಳು ತಮ್ಮ ಸಲಹೆ/ಆಕ್ಷೇಪಣೆಯನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ, ಶ್ರೀ. ವಿ. ಎಚ್. ವಾಗ್ಲೆ, ಟಾಟಾ ಪವರ್ ಕಂಪನಿ ಲಿಮಿಟೆಡ್ [ದೂರವಾಣಿ: (91-22)-67172953, ಇಮೇಲ್: vidyadhar.wagle@tatapower.com] ಅವರಿಗೆ ಸೇವೆಯ ಪುರಾವೆಯೊಂದಿಗೆ, ದಿ ಸೆಕ್ರೆಟರಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿಳಾಸ: ನಂ. 16ಸಿ-1, ಮಿಲ್ಲರ್ಸ್ ರೋಡ್, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ 560052 ಇವರಿಗೆ ಉದ್ದೇಶಿಸಿ ಲಿಖಿತ ರೂಪದಲ್ಲಿ (ಹಾರ್ಡ್ ಕಾಪಿ) ಸಲ್ಲಿಸಬಹುದು; ಮತ್ತು ಅದರಲ್ಲಿ ಕಳುಹಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಇಮೇಲ್ ವಿಳಾಸ (ಇದ್ದರೆ) ನಮೂದಿಸಿರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ** ನಂತರ ಸ್ವೀಕರಿಸಿದ ಸಲಹೆಗಳು ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ / ಟಿಪ್ಪಣಿಗೆ, ಸ್ವೀಕೃತಿಯಾದ ದಿನದಿಂದ ಮೂರು ದಿನಗಳೊಳಗೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ / ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು.

ಸಹಿ/-
ವಿದ್ಯಾಧರ ಹರಿ ವಾಗ್ಲೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಸ್ಥಳ: ಮುಂಬೈ
ದಿನಾಂಕ: 25 ಮೇ, 2026

ಶಾಲಾ ಆರಂಭ: 28ಕ್ಕೆ ಸ್ವಚ್ಛತಾ ಕಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಪ್ರಾರಂಭೋತ್ಸವಕ್ಕೆ (ಜೂನ್ 1) ರಾಜ್ಯದ ಎಲ್ಲ ಶಾಲೆಗಳೂ ಸಜ್ಜಾಗುತ್ತಿದ್ದು, ಮೇ 28ರ ಒಳಗೆ ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯ ಪೂರ್ಣಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.

9.34 ಕೋಟಿ ಪಠ್ಯಪುಸ್ತಕಗಳ ಬೇಡಿಕೆಯಲ್ಲಿ ಈಗಾಗಲೇ 7.59 ಕೋಟಿ ಪುಸ್ತಕಗಳು (ಶೇ 81.5), ಶೇ 50ರಷ್ಟು ಸಮವಸ್ತ್ರಗಳು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ (ಬಿಇಒ) ಕಚೇರಿಗಳಿಗೆ ತಲುಪಿದ್ದು, ಜೂನ್ 30ರ ಒಳಗೆ ಶೇ 100ರ ಗುರಿ ಮುಟ್ಟಬೇಕು. ಜುಲೈ 15ರ ಒಳಗೆ ಶೂ ಮತ್ತು ಸಾಕ್ಸ್ ಶಾಲೆಗಳಿಗೆ ತಲುಪಲಿವೆ. ಜೂನ್ 1ರಂದು ಮೊದಲ ದಿನವೇ ಮಕ್ಕಳಿಗೆ ಸಿಹಿಯೂಟ ಸಿದ್ಧಪಡಿಸಬೇಕು. ಈಗಾಗಲೇ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಸಿಗುವಂತೆ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳು ಸುಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ರಾಜ್ಯದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಶಾಲಾ ಕಟ್ಟಡಗಳು, ಶೌಚಾಲಯಗಳು ಅಥವಾ ಅಡುಗೆ ಕೋಣೆಗಳು ಶಿಥಿಲಗೊಂಡಿದ್ದರೆ, ತಕ್ಷಣವೇ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ದುರಸ್ತಿ ಅಥವಾ ತೆರವುಗೊಳಿಸಬೇಕು. ಅಪಾಯಕಾರಿ ಮರಗಳು ಮತ್ತು ವಿದ್ಯುತ್ ತಂತಿಗಳ ಕುರಿತು ಮುನ್ನೆಚ್ಚರಿಕೆ ವಹಿಸಬೇಕು. ಅಪಾಯಕಾರಿ ಸನ್ನಿವೇಶ ಸೃಷ್ಟಿಯಾಗಿದ್ದರೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ತಕ್ಷಣವೇ ಅದನ್ನು ತೆರವುಗೊಳಿಸಬೇಕು ಎಂದು ಸೂಚಿಸಲಾಗಿದೆ.

ವಿದ್ಯಾರ್ಥಿ, ಶಿಕ್ಷಕರಿಗೆ ಡಿಜಿಟಲ್ ಹಾಜರಾತಿ: ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳ ಹಾಜರಾತಿಯನ್ನು ಮುಖಚರ್ಯೆ ತಂತ್ರಜ್ಞಾನದ ಮೊಬೈಲ್ ಅಪ್ಲಿಕೇಶನ್ ಮೂಲಕ ಮತ್ತು ಕಾಯಂ ಶಿಕ್ಷಕರು ಮತ್ತು ಅಧಿಕಾರಿಗಳು ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆ (ಕಾಮ್ಸ್ ಆ್ಯಪ್) ಮೂಲಕ ಹಾಜರಾತಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

ದಿನಾಂಕ	ಕಾರ್ಯಕ್ರಮ
ಮೇ 28	ಶಾಲೆಗಳ ಸ್ವಚ್ಛತೆ
ಮೇ 29	ಮುಖ್ಯ ಶಿಕ್ಷಕರು, ಶಿಕ್ಷಕರ ಹಾಜರಾತಿ
ಜೂನ್ 1	ಶಾಲಾ ಪ್ರಾರಂಭೋತ್ಸವ, ದಾಖಲಾತಿ ಆರಂಭ
ಜೂನ್ 30	ದಾಖಲಾತಿ ಆಂದೋಲನ ಮುಕ್ತಾಯ

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 2026-27ನೇ ಶೈಕ್ಷಣಿಕ ವರ್ಷದ ತರಗತಿಗಳಿಗೆ ಜೂನ್ 1ರಂದು ಶಿವಮೊಗ್ಗದಲ್ಲಿ ಚಾಲನೆ ನೀಡಲಿದ್ದಾರೆ
ಮಧು ಬಂಗಾರಪ್ಪ
ಶಾಲಾ ಶಿಕ್ಷಣ ಸಚಿವ

ಕ್ವಿನ್ ಸಿಟಿಯಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಕಂಪನಿಯು 'ಬಿಝ್‌ಇಂಟೆಲ್' ಹಬ್ ಸ್ಥಾಪಿಸುವ ಸಂಬಂಧ ಸರ್ಕಾರದ ಜತೆ ಒಪ್ಪಂದ ನಡೆಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಟೊಯೊಟಾ ಕಂಪನಿಯ ಸಿಓಓ ಮತ್ತು ವಿಶೇಷ ಯೋಜನೆಯ ನಿರ್ದೇಶಕ ಸುದೀಪ್ ದಳವಿ, ಟೊಯೊಟಾ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಯೋಶಿನೋರಿ ನೋರಿಟಾಕೆ ಇದ್ದರು

ಟೊಯೋಟಾ ಕಿರ್ಲೋಸ್ಕರ್‌ನಿಂದ 'ಬಿಝ್‌ಇಂಟೆಲ್' ಹಬ್ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ₹1,200 ಕೋಟಿ ಹೂಡಿಕೆ
- ಒಪ್ಪಂದಕ್ಕೆ ಸಹಿ
- ಹೂಡಿಕೆಗೆ ಸಂಪೂರ್ಣ ಸಹಕಾರ: ಸಿದ್ದರಾಮಯ್ಯ

ಬೆಂಗಳೂರು: ದಾಬಸ್‌ಪೇಟೆ–ದೊಡ್ಡಬಳ್ಳಾಪುರ ನಡುವೆ ರಾಜ್ಯ ಸರ್ಕಾರ ಅಭಿವೃದ್ಧಿಪಡಿಸುತ್ತಿರುವ ಕ್ವಿನ್ ಸಿಟಿಯಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಕಂಪನಿಯು ₹1,200 ಕೋಟಿ ಹೂಡಿಕೆಯ ಮೂಲಕ ಜಾಗತಿಕ ಮಟ್ಟದ 'ಬಿಝ್‌ಇಂಟೆಲ್' ಹಬ್ ಸ್ಥಾಪಿಸಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಸಮ್ಮುಖದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಮತ್ತು ಟೊಯೋಟಾ ಕಂಪನಿಯ ಸಿಓಓ ಮತ್ತು ವಿಶೇಷ ಯೋಜನೆಯ ನಿರ್ದೇಶಕ ಸುದೀಪ್ ದಳವಿ ಅವರು ಈ ಕುರಿತ ಒಪ್ಪಂದಕ್ಕೆ ಸೋಮವಾರ ಸಹಿ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಹೂಡಿಕೆಗೆ ಸಹಕಾರ ನೀಡುತ್ತೇವೆ. ಈ ರೀತಿಯ ಘಟಕ ಸ್ಥಾಪನೆ ಆಗುತ್ತಿರುವುದು ವಿಶ್ವದಲ್ಲೇ ಇದೇ ಮೊದಲು ಎನ್ನುವ ವಿಷಯ ಕೇಳಿ ಸಂತಸವಾಯಿತು' ಎಂದು ಹೇಳಿದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, 'ಇದು ಕ್ವಿನ್ ಸಿಟಿಯಲ್ಲಿ ನಡೆಯುತ್ತಿರುವ ಪ್ರಥಮ ಹೂಡಿಕೆ. ಕಂಪನಿಯು ಐದು ವರ್ಷಗಳಲ್ಲಿ ₹1,200 ಕೋಟಿ ಆರಂಭಿಕವಾಗಿ ಬಂಡವಾಳ ಹೂಡಲಿದೆ. ಇದರಿಂದ 200 ಉದ್ಯೋಗ ಸೃಷ್ಟಿ ಆಗಲಿವೆ. ಇದಕ್ಕಾಗಿ ಅಲ್ಲಿ ಟೊಯೋಟಾ ಕಂಪನಿಗೆ 300 ಎಕರೆ ಭೂಮಿ ಒದಗಿಸಲಾಗುವುದು. ಇಲ್ಲಿ ವಾಹನಗಳ ತಯಾರಿಕೆ, ಪರೀಕ್ಷೆ, ಆಧುನಿಕ ವಾಹನ ತಯಾರಿಕಾ ಸ್ಥಾವರ ಆರಂಭ ಎಲ್ಲವೂ ನಡೆಯಲಿವೆ. ಇದು ರಾಜ್ಯದ ಯುವ ಜನರಿಗೆ ವರದಾನವಾಗಲಿದೆ' ಎಂದರು.

'ಕ್ವಿನ್ ಸಿಟಿಯಲ್ಲಿ ನಾವೀನ್ಯ, ಆರೋಗ್ಯ ಸೇವೆಗಳು ಮತ್ತು ಐಟಿ ತಂತ್ರಜ್ಞಾನಕ್ಕೆ ಆದ್ಯತೆ ಕೊಡಲಾಗುವುದು. ಇಲ್ಲಿ ಹೂಡಿಕೆ ಮಾಡಲು ಜಾಗತಿಕ ಮಟ್ಟದ ಏಳೆಂಟು ವಿಶ್ವವಿದ್ಯಾಲಯಗಳು, ಆರೋಗ್ಯ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಅವುಗಳೊಂದಿಗೂ ಆದಷ್ಟು ತ್ವರಿತವಾಗಿ ಒಡಂಬಡಿಕೆಗೆ ಅಂತಿಮರೂಪ ನೀಡಲಾಗುವುದು' ಎಂದು ಅವರು ಮಾಹಿತಿ ನೀಡಿದ್ದಾರೆ ಎಂದರು.

ಈ ಅತ್ಯಾಧುನಿಕ ನಗರವು ಒಟ್ಟು 5,800 ಎಕರೆಯಲ್ಲಿ ಹಂತಹಂತವಾಗಿ ಅಸ್ತಿತ್ವಕ್ಕೆ ಬರಲಿದೆ. ಈಗಾಗಲೇ ಮೊದಲ ಹಂತದ ಅಭಿವೃದ್ಧಿ ಪ್ರಗತಿಯಲ್ಲಿದೆ. ಈ ಯೋಜನೆಗೆ ಒಟ್ಟು ₹48 ಸಾವಿರ ಕೋಟಿ ಹೂಡಿಕೆ ಆಗಲಿದೆ. ಒಟ್ಟಾರೆ 1 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಪಾಟೀಲ ತಿಳಿಸಿದರು.

ಕಾರ್ಯಕ್ರಮದಲ್ಲಿ ಇಲಾಖೆ ಆಯುಕ್ತೆ ಖುಷ್ಬೂ ಗೋಯಲ್, ಕೆಐಎಡಿಬಿ ಸಿಇಒ ಗೋವಿಂದ ರೆಡ್ಡಿ, ಟೊಯೋಟಾ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಯೋಶಿನೋರಿ ನೋರಿಟಾಕೆ, ಉನ್ನತ ಮಟ್ಟದ ಪ್ರತಿನಿಧಿಗಳಾದ ಜಿ.ಶಂಕರ್, ವಿಕ್ರಮ್ ಗುಲಾಟಿ, ಉಪಾಧ್ಯಕ್ಷ ರಮೇಶ್ ರಾವ್, ಜನರಲ್ ಮ್ಯಾನೇಜರ್ ಎಚ್. ಜೆ.ಕಿರಣ್ ಇದ್ದರು.

ಸಾರಿಗೆ: ರಾಜಿ ಸಂಧಾನ ಜೂನ್ 10ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಸಂಘಟನೆಗಳು ಹಾಗೂ ಆಡಳಿತ ಮಂಡಳಿಯ ಪ್ರತಿನಿಧಿಗಳ ನಡುವೆ ಸೋಮವಾರ ನಡೆದ ರಾಜಿ ಸಂಧಾನ ಸಭೆಯಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ. ಹೀಗಾಗಿ ಜೂನ್ 10ಕ್ಕೆ ಮತ್ತೆ ಸಭೆ ನಡೆಯಲಿದೆ.

ಕಾರ್ಮಿಕ ಆಯುಕ್ತರು ಮೇ 18ಕ್ಕೆ ರಾಜೀ ಸಂಧಾನ ಸಭೆ ಕರೆದಿದ್ದರು. ಆ ಸಭೆಯಲ್ಲಿ ಯಾವುದೇ ತೀರ್ಮಾನವಾಗದ ಕಾರಣ ಮೇ 25ಕ್ಕೆ ಮುಂದೂಡಲಾಗಿತ್ತು. ಇದೀಗ ಎರಡನೇ ಬಾರಿಯೂ ತೀರ್ಮಾನಕ್ಕೆ ಬರಲು ಆಗಿಲ್ಲ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿಯ ವ್ಯವಸ್ಥಾಪಕ ನಿರ್ದೇಶಕರು ಆಡಳಿತ ವರ್ಗದ ಪರವಾಗಿ ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿಯ ಮುಖಂಡರು ನೌಕರರ ಪರವಾಗಿ ಪಾಲ್ಗೊಂಡಿದ್ದರು.

'2024ರ ಜನವರಿ 1ರಿಂದಲೇ ವೇತನ ಹೆಚ್ಚಳ ಅನ್ವಯವಾಗಬೇಕು ಎಂಬ ಬೇಡಿಕೆಯಲ್ಲಿ ಬದಲಾವಣೆ ಇಲ್ಲ. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಆಗಬೇಕಾದ ವೇತನ ಪರಿಷ್ಕರಣೆಯ ಪ್ರಕ್ರಿಯೆಯನ್ನು ಬದಲಾಯಿಸಬಾರದು. ಉಳಿದಂತೆ ಶೇ 25ರಷ್ಟು ವೇತನ ಹೆಚ್ಚಳ ಮಾಡಬೇಕು ಎಂಬ ಬೇಡಿಕೆಯ ಬಗ್ಗೆ ಚರ್ಚೆ ಮಾಡಲು ಸಿದ್ಧ. ಶೇ 12.5ರಷ್ಟು ವೇತನ ಹೆಚ್ಚಳ ಮಾಡಿರುವುದನ್ನು ಇನ್ನಷ್ಟು ಹೆಚ್ಚಿಸಬೇಕು. ಹಿಂಬಾಕಿ ಬಗ್ಗೆ ಮಾತುಕತೆಗೆ ತಯಾರಿದ್ದೇವೆ' ಎಂದು ಕಾರ್ಮಿಕ ಸಂಘಟನೆಗಳ ಮುಖಂಡರು ತಿಳಿಸಿದರು.

'ನಿಮ್ಮ ಬೇಡಿಕೆಗಳ ಬಗ್ಗೆ ನಿಗಮಗಳ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚೆ ನಡೆಸಿ ಸರ್ಕಾರಕ್ಕೆ ಕಳುಹಿಸಲಾಗುವುದು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.ಎರಡೂ ಕಡೆಯ ವಾದಗಳನ್ನು ಆಲಿಸಿದ ಆಯುಕ್ತರು ರಾಜಿ ಸಂಧಾನ ಸಭೆಯನ್ನು ಮುಂದೂಡಿದರು.

‘ಗ್ಯಾರಂಟಿ’ ಮರುಪರಿಶೀಲನೆ, ದಾಖಲೆ ಸಂಗ್ರಹ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಜಾರಿಗೆ ತಂದಿರುವ ‘ಗ್ಯಾರಂಟಿ’ ಯೋಜನೆಗಳ ಮರುಪರಿಶೀಲನೆ ನಡೆಸಲಾಗುವುದು. ಪ್ರತಿ ತಾಲ್ಲೂಕಿನಲ್ಲೂ ಫಲಾನುಭವಿಗಳ ದಾಖಲೆ ಸಂಗ್ರಹಿಸುವ ಕುರಿತು ಚರ್ಚಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳು ತಲುಪಬೇಕು ಎನ್ನುವುದು ಸರ್ಕಾರದ ಧ್ಯೇಯ. ಕೆಲ ಫಲಾನುಭವಿಗಳು ಮೃತಪಟ್ಟಿದ್ದು, ಸುಮಾರು ₹100 ಕೋಟಿಯಷ್ಟು ಬೇರೆಯವರ ಖಾತೆಗಳಿಗೆ ಹೋಗಿ ದುರ್ಬಳಕೆಯಾಗಿದೆ. ಕೆಲವರು ಬೇರೆಯವರ ಮೊಬೈಲ್ ಸಂಖ್ಯೆ ನೀಡಿದ್ದಾರೆ. ಅಂಥವರ ಖಾತೆಗೆ ಹಣ ಜಮೆಯಾಗಿಲ್ಲ ಎನ್ನುವ ದೂರುಗಳಿವೆ. ಸರಿಯಾದ ಫಲಾನುಭವಿಗಳಿಗೆ ಯೋಜನೆ ತಲುಪುತ್ತಿದೆಯೇ, ಇಲ್ಲವೇ ಎಂದು ತಿಳಿಯಬೇಕಿದೆ. ಇಂತಹ ಎಲ್ಲ ಸಮಸ್ಯೆಗಳನ್ನು ಸರಿಪಡಿಸಲು ಫಲಾನುಭವಿಗಳ ನಿಖರ ದಾಖಲೆ ಸಂಗ್ರಹಿಸಲಾಗುವುದು’ ಎಂದರು.

‘ಕೇಂದ್ರ ಸರ್ಕಾರ ಅಕ್ಕಿ ಬಿಡುಗಡೆ ಮಾಡುತ್ತಿಲ್ಲ. ಇದರಿಂದ ತಿಂಗಳಿನಿಂದ ಅನ್ನಭಾಗ್ಯದ ಅಕ್ಕಿ ಸರಿಯಾಗಿ ವಿತರಣೆ ಆಗುತ್ತಿಲ್ಲ. ಕೇವಲ ಕರ್ನಾಟಕ ಮಾತ್ರವಲ್ಲ, ಎನ್‌ಡಿಎ ಹೊರತಾದ ಪಕ್ಷಗಳ ಆಡಳಿತ ಇರುವ ಎಲ್ಲ ರಾಜ್ಯಗಳಲ್ಲೂ ಈ ರೀತಿ ಮಾಡುತ್ತಿದ್ದಾರೆ’ ಎಂದು ದೂರಿದರು.

‘ಹಣದುಬ್ಬರದ ನಡುವೆಯೂ ಗ್ಯಾರಂಟಿ ಯೋಜನೆಗಳು ಜನರಿಗೆ ಆಸರೆಯಾಗಿವೆ. ಬಿಜೆಪಿ ಜಾತಿ, ಧರ್ಮದ ವಿಚಾರವಾಗಿ ಭಾವನೆ ಮೇಲೆ ರಾಜಕಾರಣ ಮಾಡಿದರೆ, ಕಾಂಗ್ರೆಸ್ ಜನರ ಬದುಕಿನ ಮೇಲೆ ರಾಜಕೀಯ ಮಾಡುತ್ತಿದೆ. ಜನರ ಬೆವರು, ಪರಿಶ್ರಮಕ್ಕೆ ಬೆಲೆ ನೀಡಿ, ಗ್ಯಾರಂಟಿ ಯೋಜನೆಗಳ ಮೂಲಕ ಅವರ ಹೊಟ್ಟೆ ತುಂಬಿಸುವ ಕೆಲಸ ಮಾಡುತ್ತಿದ್ದೇವೆ’ ಎಂದರು.

‘ಹಣ ಉಳಿಸಲು ಪಡಿತರ ರದ್ದು’

‘ಪಡಿತರ ಚೀಟಿಯ ಪರಿಷ್ಕರಣೆಗೆ ಅಭಿಯಾನ ಮಾಡುವ ಅಗತ್ಯವಿಲ್ಲ. ಮರಣ ಪ್ರಮಾಣ ಪತ್ರ ಮಂಜೂರಾದ ಕೂಡಲೇ ಸ್ವಯಂಚಾಲಿತವಾಗಿ ಪಡಿತರ ಚೀಟಿ ರದ್ದಾಗಬೇಕು. ‘ಗ್ಯಾರಂಟಿ’ಯಲ್ಲಿ ಹಣ ಉಳಿಸಲು ಪಡಿತರ ಚೀಟಿ ರದ್ದು ಮಾಡಲಾಗುತ್ತಿದೆ’ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಿಂದ ಬಾಂಗ್ಲಾ ಅಕ್ರಮ ನಿವಾಸಿಗಳು ಪತ್ತೆಯಾಗಲಿದ್ದಾರೆ. ನೈಜ ಮತದಾರರು ಮಾತ್ರ ಪಟ್ಟಿಯಲ್ಲಿ ಉಳಿದುಕೊಳ್ಳುತ್ತಾರೆ ಎಂದು ತಿಳಿಸಿದರು.

‘ಕೇಂದ್ರದಿಂದ ಅಕ್ಕಿ ಸಿಗುತ್ತಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ, ಕೇಂದ್ರ ಸರ್ಕಾರದಿಂದ ಜೂನ್‌ವರೆಗೆ ಅಕ್ಕಿ ಲಭ್ಯವಿದೆ. 4 ಲಕ್ಷ ಟನ್ ಅಕ್ಕಿ ಇದ್ದರೂ, ಆರ್ಥಿಕ ಇಲಾಖೆಯಿಂದ ಕೆ.ಜಿ.ಗೆ ₹23 ರಂತೆ ಹಣ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ಹಣ ನೀಡಿದ ಕೂಡಲೇ ಕೇಂದ್ರ ಅಕ್ಕಿ ನೀಡುತ್ತದೆ. ಅಂದರೆ ಸರ್ಕಾರದ ಖಜಾನೆ ಖಾಲಿಯಾಗಿದೆ ಎಂದು ಮತ್ತೆ ಸಾಬೀತಾಗಿದೆ’ ಎಂದು ಅಶೋಕ ಹೇಳಿದರು.

ಬೆಳಗಾವಿಯ ₹15 ಕೋಟಿ ವಂಚನೆ ಪ್ರಕರಣದಲ್ಲೂ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 74 ವರ್ಷದ ಮಹಿಳೆಯನ್ನು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿ ₹24 ಕೋಟಿ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ಸೈಬರ್ ವಂಚಕರಿಂದ ಮತ್ತೆ ₹1.40 ಕೋಟಿಯನ್ನು ಸೈಬರ್ ಕಮಾಂಡ್ ಸೆಂಟರ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಶಿವಾಜಿನಗರ ನಿವಾಸಿ ಲಕ್ಷ್ಮೀ ರಾಮಮೂರ್ತಿ ನೀಡಿದ ದೂರು ಆಧರಿಸಿ ‘ರಾಜ್ಯ ಸೈಬರ್ ಕಮಾಂಡ್ ಘಟಕ’ದ (ಸಿಸಿಯು) ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಈರೋಡ್‌ನ ಎನ್.ಶಿವಗ್ನಾನಂ, ಮುಂಬೈನ ಅಕ್ಕಚ್ ಮಲ್ಲಿಕ್, ಅಹಮದಾಬಾದ್‌ನ ಪಲಕ್ ಭಾಯಿ ಪಟೇಲ್, ಅಮಿತ್ ನರೇಂದ್ರ ಪಟೇಲ್, ನವದೆಹಲಿಯ ಓಂ ಪ್ರಕಾಶ್ ರಜಪೂತ್, ಬಿಹಾರದ ಗೌರವ್ ಕುಮಾರ್ ಎಂಬವರನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಆರು ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ. ಅಲ್ಲದೇ ಆರಂಭದ ತನಿಖೆಯ ವೇಳೆ ₹1.46 ಕೋಟಿ ಜಪ್ತಿ ಮಾಡಿದ್ದರು. ಮತ್ತೆ ₹1.40 ಕೋಟಿ ಜಪ್ತಿ ಮಾಡಲಾಗಿದ್ದು, ಒಟ್ಟು ₹2.86 ಕೋಟಿ ಜಪ್ತಿ ಮಾಡಿದಂತಾಗಿದೆ ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ಹೇಳಿದರು.

‘ಬೆಳಗಾವಿ ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾಗಿದ್ದ ₹15 ಕೋಟಿ ಮೊತ್ತದ ‘ಡಿಜಿಟಲ್ ಅರೆಸ್ಟ್’ ವಂಚನೆ ಪ್ರಕರಣದಲ್ಲೂ ಅಮಿತ್ ನರೇಂದ್ರ ಪಟೇಲ್ ಹಾಗೂ ಪಲಕ್ ಭಾಯಿ ಪಟೇಲ್ ಭಾಗಿ ಆಗಿರುವುದು ತನಿಖೆಯಿಂದ ಪತ್ತೆ ಆಗಿದೆ. ಬೆಳಗಾವಿಯ ಸೈಬರ್ ಅಪರಾಧ ಠಾಣೆಯ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಬಾಡಿ ವಾರಂಟ್ ಮೇಲೆ ಇಬ್ಬರನ್ನು ವಶಕ್ಕೆ ಪಡೆದು ಬೆಳಗಾವಿ ಪ್ರಕರಣದಲ್ಲಿ ಅಲ್ಲಿನ ಪೊಲೀಸರು ವಿಚಾರಣೆ ನಡೆಸಲಿದ್ದಾರೆ’ ಎಂದು ಪೊಲೀಸರು ಹೇಳಿದರು.

ದೇಶದ ಬೇರೆ ಬೇರೆ ಕಡೆ ನಡೆದ ನಾಲ್ಕು ಸೈಬರ್ ಅಪರಾಧ ಪ್ರಕರಣದಲ್ಲಿ ಎನ್.ಶಿವಗ್ನಾನಂ ಹಾಗೂ ಮೂರು ಪ್ರಕರಣದಲ್ಲಿ ಮಲ್ಲಿಕ್ ಭಾಗಿ ಆಗಿರುವುದು ತನಿಖೆಯಿಂದ ಪತ್ತೆಯಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮತಾಂತರ ನಿಷೇಧ ಕಾಯ್ದೆ ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜಾರಿಗೊಳಿಸಿರುವ ಮತಾಂತರ ನಿಷೇಧ ಕಾಯ್ದೆ ಹಿಂಪಡೆಯಬೇಕು ಎಂದು ಅಖಿಲ ಭಾರತ ಕ್ರೈಸ್ತ ಮಹಾಸಭಾ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಪ್ರಜ್ವಲ್‌ಸ್ವಾಮಿ ಎಸ್., ‘ಮತಾಂತರ ನಿಷೇಧ ಕಾಯ್ದೆಯಿಂದ ಸಮಾಜದಲ್ಲಿನ ಶಾಂತಿ, ಸುವ್ಯವಸ್ಥೆ ಹಾಗೂ ಸೌಹಾರ್ದಕ್ಕೆ ಧಕ್ಕೆ ಉಂಟಾಗುತ್ತಿದೆ. ಈ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡು ಕ್ರೈಸ್ತರ ಪ್ರಾರ್ಥನಾ ಸಭೆಗಳು, ಪಾದ್ರಿಗಳ ಮೇಲೆ ದಾಳಿ ಮಾಡಿ, ಕಿರುಕುಳ ನೀಡಲಾಗುತ್ತಿದೆ’ ಎಂದು ಆರೋಪಿಸಿದರು.

‘ಮಹಿಳೆಯರು, ದಲಿತರು ಮತ್ತು ಆದಿವಾಸಿ ಕ್ರೈಸ್ತರನ್ನು ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷವಾದರೂ ಮತಾಂತರ ನಿಷೇಧ ಕಾಯ್ದೆ ಹಿಂಪಡೆಯದೇ ಮೌನ ವಹಿಸಿರುವುದು ಖಂಡನೀಯ. ರಾಜ್ಯದಲ್ಲಿ ಧಾರ್ಮಿಕ ಸ್ವಾತಂತ್ರ್ಯ ರಕ್ಷಿಸಿ, ಎಲ್ಲ ಸಮುದಾಯಗಳಿಗೆ ಸಮಾನ ನ್ಯಾಯ ಒದಗಿಸಬೇಕು’ ಎಂದು ಒತ್ತಾಯಿಸಿದರು.

ಕುತೂಹಲ ಮೂಡಿಸಿದ ಕಾಂಗ್ರೆಸ್ ಹೈಕಮಾಂಡ್ ನಡೆ

ಒಂದನೇ ಪುಟದಿಂದ...

‘ರಾಜ್ಯ ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಗೊಂದಲ ನಿವಾರಣೆಯತ್ತ ಹೈಕಮಾಂಡ್ ಚಿತ್ತ ನೆಟ್ಟಿದ್ದು, ಅದರ ಪ್ರಾಥಮಿಕ ಚರ್ಚೆಗಳು ಸಭೆಯಲ್ಲಿ ನಡೆಯಬಹುದು. ಈ ಸಭೆಯಲ್ಲಿಯೇ ಎಲ್ಲವೂ ಇತ್ಯರ್ಥವಾಗುತ್ತದೆ ಎಂದು ಹೇಳಲಿಕ್ಕಾಗದು. ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆಯ ವಿಷಯದಲ್ಲಿ ಕಾಂಗ್ರೆಸ್‌ನಲ್ಲಿ ಉಂಟಾಗಿರುವ ತಳಮಳಗಳಿಗೆ ತೆರೆ ಎಳೆಯುವ ಮೊದಲ ಅಧ್ಯಾಯ ಇದಷ್ಟೇ’ ಎಂದು ಮೂಲಗಳು ತಿಳಿಸಿವೆ.

ದೆಹಲಿಗೆ ದೌಡು: ಸಿದ್ದರಾಮಯ್ಯ ಅವರು ತಮ್ಮ ಆಪ್ತ ಬಣದೊಂದಿಗೆ ವಿಶೇಷ ವಿಮಾನದಲ್ಲಿ ದೆಹಲಿಗೆ ಹೋಗಿದ್ದಾರೆ. ಸಚಿವರಾದ ಕೆ.ಜೆ. ಜಾರ್ಜ್, ಎಚ್.ಸಿ. ಮಹದೇವಪ್ಪ, ಎಂ.ಬಿ. ಪಾಟೀಲ, ಭೈರತಿ ಸುರೇಶ್, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರು ಜತೆಗೂಡಿದ್ದಾರೆ. ಯಾವಾಗಲೂ ದೆಹಲಿಯ ಭೇಟಿಯಿಂದ ದೂರ ಉಳಿಯುತ್ತಿದ್ದ ಗೃಹ ಸಚಿವ ಜಿ. ಪರಮೇಶ್ವರ ಅವರು, ಸಿದ್ದರಾಮಯ್ಯ ಅವರೊಂದಿಗೆ ಹೋಗಿರುವುದು ಈ ಬಾರಿಯ ವಿಶೇಷ.

ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಪ್ರತ್ಯೇಕ ವಿಮಾನದಲ್ಲಿ ದೆಹಲಿಗೆ ತೆರಳಿದರೆ, ಅದಾದ ಬಳಿಕ ಡಿ.ಕೆ. ಶಿವಕುಮಾರ್ ಅವರು ದೇಶದ ರಾಜಧಾನಿಯತ್ತ ಪ್ರಯಾಣ ಬೆಳೆಸಿದರು. ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಕೆ.ವೆಂಕಟೇಶ್ ಅವರು ಮತ್ತೊಂದು ವಿಮಾನದಲ್ಲಿ ಹೋಗಿದ್ದು, 12ಕ್ಕೂ ಹೆಚ್ಚು ಶಾಸಕರು ದೆಹಲಿಗೆ ದೌಡಾಯಿಸಿದ್ದಾರೆ.

ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಹಾಗೂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮೂರು ವರ್ಷ ಪೂರೈಸಿರುವ ಬೆನ್ನಲ್ಲೇ ನಾಯಕತ್ವ ಬದಲಾವಣೆ ಪ್ರಶ್ನೆ ಮುನ್ನೆಲೆಗೆ ಬಂದಿತ್ತು. ಅದರ ಜತೆ ಜತೆಗೆ ಸಂಪುಟ ಪುನಾರಚನೆ ಮಾಡಿ, ಹೊಸಬರಿಗೆ ಅವಕಾಶ ಕೊಡಬೇಕು ಎಂಬ ಬೇಡಿಕೆಯನ್ನು ಹಿರಿಯ–ಕಿರಿಯ ಶಾಸಕರು ಮಂಡಿಸಿದ್ದರು.

TATA
TATA POWER
THE TATA POWER COMPANY LIMITED,
Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಬೆಸ್ಕಾಂನ ಆರು (6) ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಮತ್ತು ಚಿತ್ರದುರ್ಗಗಳಿಗೆ ವಿದ್ಯುತ್ ಕಾಯಿದೆ, 2003ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಸಲ್ಲಿಸಿರುವ ಅರ್ಜಿಯ ಮೇಲೆ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸೂಚನೆ.

(ಪ್ರಕರಣ ಸಂಖ್ಯೆ MP/03/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯಿದೆ, 2003 ("ಕಾಯಿದೆ")ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, KERC (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಜೊತೆಗೆ ಓದಿಕೊಂಡು, **ಬೆಸ್ಕಾಂನ ಆರು (6) ಕಂದಾಯ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಮತ್ತು ಚಿತ್ರದುರ್ಗವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳಿಗೆ** ಟಿಪಿಸಿಎಲ್‌ಗೆ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ)ದ ಮುಂದೆ ಅರ್ಜಿಯನ್ನು (ಪ್ರಕರಣ ಸಂಖ್ಯೆ MP/03/2026) ಸಲ್ಲಿಸಿದೆ. ಕಾಯಿದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಆಯೋಗವು ಟಾಟಾ ಪವರ್‌ಗೆ ನಿರ್ದೇಶಿಸಿದೆ.
2. **ಅರ್ಜಿಯ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ:**

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯಿದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	ಬೆಸ್ಕಾಂನ ಆರು (6) ಕಂದಾಯ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಮತ್ತು ಚಿತ್ರದುರ್ಗವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು

3. **ಅರ್ಜಿಯ ಇತರ ಪ್ರಮುಖ ಲಕ್ಷಣಗಳು:**
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ, ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಮತ್ತು ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್)ನಲ್ಲಿ ಟಾಟಾ ಪವರ್‌ನ ಕಾರ್ಯಸಾಧನೆ ಗಮನಾರ್ಹವಾಗಿದೆ.
- ಟಾಟಾ ಪವರ್ ಶತಮಾನಕ್ಕೂ ಮೀರಿ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಆದ್ದರಿಂದ ಹೆಚ್ಚುತ್ತಿರುವ ಸಂಕೀರ್ಣ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸುವ ಅಪ್ರತಿಮ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಹೊಂದಿದೆ. ಅರ್ಜಿದಾರರು ವಿವಿಧ ಸಮನ್ವಯಗಳ (synergies) ಲಾಭವನ್ನು ಪಡೆದು ಪ್ರಸ್ತಾವಿತ ಪೂರೈಕೆ ಪ್ರದೇಶದಲ್ಲಿ, ಅಂದರೆ ಬೆಸ್ಕಾಂನ **ಆರು (6) ಕಂದಾಯ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಮತ್ತು ಚಿತ್ರದುರ್ಗ** ಪ್ರದೇಶದಲ್ಲಿ ಗ್ರಾಹಕರ ನಿರಂತರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾರೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರುತ್ತಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ ಬೆಂಗಳೂರು ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ ಲಿಮಿಟೆಡ್ (ಬೆಸ್ಕಾಂ)ನ ವಿತರಣಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ.

4. **ಅರ್ಜಿದಾರರ ಕಾನೂನು ಸ್ಥಿತಿ ಮತ್ತು ನೋಂದಣಿ ಸಂಖ್ಯೆ:**
ಪಬ್ಲಿಕ್ ಲಿಮಿಟೆಡ್ ಕಂಪನಿ – ಸಿಐಎನ್ [L28920MH1919PLC000567]
5. **ಷೇರು ಹೊಂದಿರುವ ಮಾದರಿ:**

ಕ್ರ. ಸಂ.	ಷೇರುದಾರರ ಹೆಸರು	ಹೊಂದಿರುವ ಷೇರುಗಳ ಸಂಖ್ಯೆ (31 ಮಾರ್ಚ್ 2025)
(i)	ಪ್ರವರ್ತಕ ಮತ್ತು ಪ್ರವರ್ತಕ ಗುಂಪು	1,49,72,57,565
(ii)	ಸಾರ್ವಜನಿಕ	1,69,80,81,982
(iii)	ಪ್ರವರ್ತಕರಲ್ಲದ – ಸಾರ್ವಜನಿಕವಲ್ಲದ	0
(iv)	ಡಿಆರ್ ಅಡಿಯಲ್ಲಿನ ಷೇರುಗಳು	0
(v)	ಉದ್ಯೋಗಿ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	ಒಟ್ಟು	3,19,53,39,547

6. **ವ್ಯವಸ್ಥಾಪನಾ ವಿವರ (ನಿರ್ದೇಶಕರ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ. ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ, ಅಧ್ಯಕ್ಷರು	• ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್, ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ • ಗೌರವ 'ಡಾಕ್ಟರ್ ಆಫ್ ಲೆಟರ್ಸ್', ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಟಾಟಾ ಸನ್ಸ್‌ನ ಅಧ್ಯಕ್ಷರು •ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ	• ಪಿಎಚ್‌.ಡಿ., ಭಾರತೀಯ ತಂತ್ರಜ್ಞಾನ ಸಂಸ್ಥೆ ದೆಹಲಿ • ಮಾಸ್ಟರ್ಸ್ ಇನ್ ಬಿಸಿನೆಸ್ ಲಾ, ನ್ಯಾಷನಲ್ ಲಾ ಸ್ಕೂಲ್, ಬೆಂಗಳೂರು • ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ, ದೆಹಲಿ ಕಾಲೇಜ್ ಆಫ್ ಇಂಜಿನಿಯರಿಂಗ್	• ವಿದ್ಯುತ್ ಕ್ಷೇತ್ರದ ಪರಿಣತ • ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್ • ಮಾಸ್ಟರ್ಸ್ ಇನ್ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	• ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ • ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	20 ವರ್ಷಗಳಿಗಿಂತ ಹೆಚ್ಚು
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ • ಎಂಬಿಎ, ಐಐಎಂ ಬೆಂಗಳೂರು	• ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ • ಬಿಪಿಸಿಎಲ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	38 ವರ್ಷಗಳಿಗಿಂತ ಹೆಚ್ಚು
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಮಾಸ್ಟರ್ಸ್ ಇನ್ ಹಿಸ್ಟರಿ • ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ • ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ • ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	30 ವರ್ಷಗಳಿಗಿಂತ ಹೆಚ್ಚು
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ • ಪಿಜಿಡಿಎಂ, ಐಐಎಂ ಕಲ್ಕತ್ತಾ	• ಟಾಟಾ ಸನ್ಸ್‌ನ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ • ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರಾಥ್ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ • ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ • ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್ • ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್	• ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ • ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ • ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	• ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ • ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು

7. **ತತ್ಸಮಾನ ಚಟುವಟಿಕೆಗಳಲ್ಲಿನ ಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:**
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.

I. **ಮುಂಬೈನಲ್ಲಿ ವಿತರಣಾ ಪರವಾನಗಿ:** ಮಾನ್ಯ ಎಂಇಆರ್‌ಸಿ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಭಾಗಕ್ಕೆ (ಚೆನೆ ಮತ್ತು ವರ್ಸಾವೆ ಪ್ರದೇಶವನ್ನು ಒಳಗೊಂಡ ಮಿರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ಪ್ರದೇಶಗಳು) 25 ವರ್ಷಗಳ ಅವಧಿಗೆ ಟಾಟಾ ಪವರ್‌ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂ. 1, 2014) ಯನ್ನು ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್-ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

II. **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್‌ನರ್‌ಶಿಪ್ (ಪಿಪಿಪಿ) ಮಾದರಿಯಲ್ಲಿ ಜಂಟಿ ಉದ್ಯಮವಾಗಿ ಸ್ಥಾಪನೆಯಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12,500 ಸಿಕೆಎಂ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. ಎಟಿಆಂಡ್‌ಸಿ ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಗೆ ಇಳಿಕೆಯಾಗಿದೆ.

III. **ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲನ್ನು ಹೊಂದಿದೆ. ಟಿಪಿಸಿಒಡಿಎಲ್ 29,354 ಚದರ ಕಿ.ಮೀ.ಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನ ಸಮಯದಲ್ಲಿ 30.49% ಇದ್ದ ಎಟಿಆಂಡ್‌ಸಿ ನಷ್ಟಗಳು ಈಗ 19.6%ರಷ್ಟಿವೆ. ಟಿಪಿಸಿಒಡಿಎಲ್ 1,14,119 ಸಿಕೆಟಿ. ಕಿ.ಮೀ. ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

IV. **ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯವನ್ನು ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪನೆಯಾಯಿತು. ಟಿಪಿಎನ್‌ಒಡಿಎಲ್ 27,920 ಚದರ ಕಿ.ಮೀ. ಪ್ರದೇಶದಾದ್ಯಂತ ಹರಡಿರುವ 2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಎಫ್‌ವೈ 25ರ ಅಂತ್ಯದಲ್ಲಿ ವಾರ್ಷಿಕ ಎಟಿಆಂಡ್‌ಸಿ ನಷ್ಟಗಳು 12.6%ರಷ್ಟಿದ್ದು – ಇದು ಮಾನ್ಯ ಒಇಆರ್‌ಸಿ ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. ಟಿಪಿಎನ್‌ಒಡಿಎಲ್ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,64,629 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ.

V. **ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, ಟಿಪಿಎಸ್‌ಒಡಿಎಲ್ ಒಡಿಶಾದ ದಕ್ಷಿಣ ಭಾಗದಲ್ಲಿ ಸುಮಾರು 48,751 ಚದರ ಕಿ.ಮೀ. ವ್ಯಾಪಿಸಿಕೊಂಡಿದೆ. ಟಿಪಿಎಸ್‌ಒಡಿಎಲ್ 1,12,955 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ. ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.

VI. **ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯೂಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯೂಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಆಂಡ್‌ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.

VII. **ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ:** ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್) ಅಜ್ಮೇರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆಗೆ ವಿತರಣಾ ಫ್ರಾಂಚೈಸಿ ಒಪ್ಪಂದ (ಡಿಎಫ್‌ಎ)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. ಟಿಪಿಎಡಿಎಲ್ ಅಜ್ಮೇರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವ ಮತ್ತು ಸಂರಕ್ಷಿಸುವ ಹಾಗೂ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿದೆ. ಟಿಪಿಎಡಿಎಲ್ ಎಟಿಆಂಡ್‌ಸಿ ನಷ್ಟಗಳನ್ನು 17.2%ರಿಂದ 7.8%ಗೆ ಇಳಿಕೆ ಮಾಡುವಲ್ಲಿ ಕೊಡುಗೆ ನೀಡಿದೆ.

8. **ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರಣೆ ಮತ್ತು ಸೇವೆ ಸಲ್ಲಿಸಲು ಪ್ರಸ್ತಾವಿತ ಗ್ರಾಹಕರ ಸಂಖ್ಯೆ:** ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಬೆಸ್ಕಾಂನ ಆರು (6) ಕಂದಾಯ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಮತ್ತು ಚಿತ್ರದುರ್ಗವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಬಯಸಿದೆ. ಮೇಲೆ ಉಲ್ಲೇಖಿಸಿದ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಈ ಕೆಳಗಿನ ಪ್ರದೇಶಗಳನ್ನು ಒಳಗೊಂಡಿವೆ: **1. ತುಮಕೂರು ನಗರ ಪಾಲಿಕೆ 2. ಚಿಕ್ಕಬಳ್ಳಾಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 3. ಚಿಂತಾಮಣಿ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 4. ಗೌರಿಬಿದನೂರು ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 5. ಶಿಡ್ಲಘಟ್ಟ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 6. ಕೋಲಾರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 7. ಮುಳಬಾಗಲು ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 8. ರಾಬರ್ಟ್‌ಸನ್‌ಪೇಟೆ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 9. ದೊಡ್ಡಬಳ್ಳಾಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 10. ಹೊಸಕೋಟೆ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 11. ನೆಲಮಂಗಲ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 12. ಚನ್ನಪಟ್ಟಣ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 13. ಕನಕಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 14. ರಾಮನಗರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 15. ಸಿರಾ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 16. ಚಿತ್ರದುರ್ಗ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 17. ಚಳ್ಳಕೆರೆ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 18. ಹಿರಿಯೂರು ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.**
ಟಿಪಿಸಿಎಲ್ ಪರವಾನಗಿ ಮಂಜೂರಾದ ದಿನಾಂಕದಿಂದ 3 ವರ್ಷಗಳ ಅಂತ್ಯದೊಳಗೆ 1,86,500 (ಒಂದು ಲಕ್ಷದ ಎಂಭತ್ತಾರು ಸಾವಿರದ ಐನೂರು)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.
9. ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ:
ವೆಬ್‌ಸೈಟ್: www.tatapower.com
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಯೋಗ್ಯತೆ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲೆ ತಿಳಿಸಿದಂತೆ ಟಿಪಿಸಿ ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.
12. ಪ್ರಕಟವಾದ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆಗಳು/ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಅವುಗಳನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಇಮೇಲ್ ಐಡಿ: asst.secykerc@gmail.com ಗೆ ಸಲ್ಲಿಸಬಹುದು. ಈ ವೈಶಿಷ್ಟ್ಯವನ್ನು ಬಳಸುವಲ್ಲಿ ಯಾವುದೇ ತೊಂದರೆ ಎದುರಾದರೆ, ಸಂಬಂಧಪಟ್ಟ ಭಾಗಿದಾರರು ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10:00 ರಿಂದ ಸಂಜೆ 5:00ರವರೆಗೆ ಮೊಬೈಲ್ ಸಂಖ್ಯೆ: 8147 144 627 ಗೆ ಅಥವಾ ಇಮೇಲ್ ಐಡಿ: asst.secykerc@gmail.com ಗೆ ಕೆಇಆರ್‌ಸಿ ಕಚೇರಿಯನ್ನು ಸಂಪರ್ಕಿಸಬಹುದು.
13. ಮೇಲೆ ನಮೂದಿಸಿದ ಇಮೇಲ್ ಐಡಿ ಮೂಲಕ ತಮ್ಮ ಸಲಹೆ/ಆಕ್ಷೇಪಣೆ ಸಲ್ಲಿಸಿರುವ ವ್ಯಕ್ತಿಯು ತಮ್ಮ ಸಲ್ಲಿಕೆಯ ಯಾವುದೇ ಪ್ರತಿಯನ್ನು (ಹಾರ್ಡ್ ಕಾಪಿ) ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರವೇಶವಿಲ್ಲದ ವ್ಯಕ್ತಿಗಳು ತಮ್ಮ ಸಲಹೆ/ಆಕ್ಷೇಪಣೆಯನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ, ಶ್ರೀ. ವಿ. ಎಚ್. ವಾಗ್ಲೆ, ಟಾಟಾ ಪವರ್ ಕಂಪನಿ ಲಿಮಿಟೆಡ್ [ದೂರವಾಣಿ: (91-22)-67172953, ಇಮೇಲ್: vidyadhar.wagle@tatapower.com] ಅವರಿಗೆ ಸೇವೆಯ ಪುರಾವೆಯೊಂದಿಗೆ, ದಿ ಸೆಕ್ರೆಟರಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿಳಾಸ: ನಂ. 16ಸಿ-1, ಮಿಲ್ಲರ್ಸ್ ರೋಡ್, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ 560052 ಇವರಿಗೆ ಉದ್ದೇಶಿಸಿ ಲಿಖಿತ ರೂಪದಲ್ಲಿ (ಹಾರ್ಡ್ ಕಾಪಿ) ಸಲ್ಲಿಸಬಹುದು; ಮತ್ತು ಅದರಲ್ಲಿ ಕಳುಹಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಇಮೇಲ್ ವಿಳಾಸ (ಇದ್ದರೆ) ನಮೂದಿಸಿರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ ನಂತರ** ಸ್ವೀಕರಿಸಿದ ಸಲಹೆಗಳು ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ / ಟಿಪ್ಪಣಿಗೆ, ಸ್ವೀಕೃತಿಯಾದ ದಿನದಿಂದ ಮೂರು ದಿನಗಳೊಳಗೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ / ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು.

ಸ್ಥಳ: ಮುಂಬೈ
ದಿನಾಂಕ: 25 ಮೇ, 2026

ಸಹಿ/-
ವಿದ್ಯಾಧರ ಹರಿ ವಾಗ್ಲೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

TATA
TATA POWER
THE TATA POWER COMPANY LIMITED,
Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮೆಸ್ಕಾಂನ ಮೂರು (3) ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿಗಳಿಗೆ ವಿದ್ಯುತ್ ಕಾಯಿದೆ, 2003ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಸಲ್ಲಿಸಿರುವ ಅರ್ಜಿಯ ಮೇಲೆ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸೂಚನೆ.
(ಪ್ರಕರಣ ಸಂಖ್ಯೆ MP/04/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯಿದೆ, 2003 ("ಕಾಯಿದೆ")ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, KERC (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಜೊತೆಗೆ ಓದಿಕೊಂಡು, **ಮೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿಯನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳಿಗೆ** ಟಿಪಿಸಿಎಲ್‌ಗೆ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ)ದ ಮುಂದೆ ಅರ್ಜಿಯನ್ನು (ಪ್ರಕರಣ ಸಂಖ್ಯೆ MP/04/2026) ಸಲ್ಲಿಸಿದೆ. ಕಾಯಿದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಆಯೋಗವು ಟಾಟಾ ಪವರ್‌ಗೆ ನಿರ್ದೇಶಿಸಿದೆ.
2. **ಅರ್ಜಿಯ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ:**

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯಿದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	**ಮೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿಯನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು**

3. **ಅರ್ಜಿಯ ಇತರ ಪ್ರಮುಖ ಲಕ್ಷಣಗಳು:**
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ, ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಮತ್ತು ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್)ನಲ್ಲಿ ಟಾಟಾ ಪವರ್‌ನ ಕಾರ್ಯಸಾಧನೆ ಗಮನಾರ್ಹವಾಗಿದೆ.
- ಟಾಟಾ ಪವರ್ ಶತಮಾನಕ್ಕೂ ಮೀರಿ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಆದ್ದರಿಂದ ಹೆಚ್ಚುತ್ತಿರುವ ಸಂಕೀರ್ಣ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸುವ ಅಪ್ರತಿಮ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಹೊಂದಿದೆ. ಅರ್ಜಿದಾರರು ವಿವಿಧ ಸಮನ್ವಯಗಳ (synergies) ಲಾಭವನ್ನು ಪಡೆದು ಪ್ರಸ್ತಾವಿತ ಪೂರೈಕೆ ಪ್ರದೇಶದಲ್ಲಿ, ಅಂದರೆ **ಮೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ** ಪ್ರದೇಶದಲ್ಲಿ ಗ್ರಾಹಕರ ನಿರಂತರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾರೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರುತ್ತಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ **ಮಂಗಳೂರು ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ ಲಿಮಿಟೆಡ್ (ಮೆಸ್ಕಾಂ)**ನ ವಿತರಣಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ.

4. **ಅರ್ಜಿದಾರರ ಕಾನೂನು ಸ್ಥಿತಿ ಮತ್ತು ನೋಂದಣಿ ಸಂಖ್ಯೆ:**
ಪಬ್ಲಿಕ್ ಲಿಮಿಟೆಡ್ ಕಂಪನಿ – ಸಿಐಎನ್ [L28920MH1919PLC000567]
5. **ಷೇರು ಹೊಂದಿರುವ ಮಾದರಿ:**

ಕ್ರ. ಸಂ.	ಷೇರುದಾರರ ಹೆಸರು	ಹೊಂದಿರುವ ಷೇರುಗಳ ಸಂಖ್ಯೆ (31 ಮಾರ್ಚ್ 2025)
(i)	ಪ್ರವರ್ತಕ ಮತ್ತು ಪ್ರವರ್ತಕ ಗುಂಪು	1,49,72,57,565
(ii)	ಸಾರ್ವಜನಿಕ	1,69,80,81,982
(iii)	ಪ್ರವರ್ತಕರಲ್ಲದ – ಸಾರ್ವಜನಿಕವಲ್ಲದ	0
(iv)	ಡಿಆರ್ ಅಡಿಯಲ್ಲಿನ ಷೇರುಗಳು	0
(v)	ಉದ್ಯೋಗಿ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	ಒಟ್ಟು	3,19,53,39,547

6. **ವ್ಯವಸ್ಥಾಪನಾ ವಿವರ (ನಿರ್ದೇಶಕರ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ. ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ, ಅಧ್ಯಕ್ಷರು	• ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್, ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ • ಗೌರವ 'ಡಾಕ್ಟರ್ ಆಫ್ ಲೆಟರ್ಸ್', ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಟಾಟಾ ಸನ್ಸ್ ಅಧ್ಯಕ್ಷರು • ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ	• ಪಿಎಚ್‌.ಡಿ., ಭಾರತೀಯ ತಂತ್ರಜ್ಞಾನ ಸಂಸ್ಥೆ ದೆಹಲಿ • ಮಾಸ್ಟರ್ಸ್ ಇನ್ ಬಿಸಿನೆಸ್ ಲಾ, ನ್ಯಾಷನಲ್ ಲಾ ಸ್ಕೂಲ್, ಬೆಂಗಳೂರು • ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ, ದೆಹಲಿ ಕಾಲೇಜ್ ಆಫ್ ಇಂಜಿನಿಯರಿಂಗ್	• ವಿದ್ಯುತ್ ಕ್ಷೇತ್ರದ ಪರಿಣತ • ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್ • ಮಾಸ್ಟರ್ಸ್ ಇನ್ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	• ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ • ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	20 ವರ್ಷಗಳಿಗಿಂತ ಹೆಚ್ಚು
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ • ಎಂಬಿಎ, ಐಐಎಂ ಬೆಂಗಳೂರು	• ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ • ಬಿಪಿಸಿಎಲ್ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	38 ವರ್ಷಗಳಿಗಿಂತ ಹೆಚ್ಚು
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಮಾಸ್ಟರ್ಸ್ ಇನ್ ಹಿಸ್ಟರಿ • ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ • ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ • ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	30 ವರ್ಷಗಳಿಗಿಂತ ಹೆಚ್ಚು
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ • ಪಿಜಿಡಿಎಂ, ಐಐಎಂ ಕಲ್ಕತ್ತಾ	• ಟಾಟಾ ಸನ್ಸ್ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ • ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರಾಥ್ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ • ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ • ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್ • ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್	• ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ • ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ • ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	• ಕೋಲ್ ಇಂಡಿಯಾ ಲಿಮಿಟೆಡ್ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ • ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು

7 ತತ್ಸಮಾನ ಚಟುವಟಿಕೆಗಳಲ್ಲಿನ ಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.

i. ಮುಂಬೈನಲ್ಲಿ ವಿತರಣಾ ಪರವಾನಗಿ: ಮಾನ್ಯ ಎಂಇಆರ್‌ಸಿ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಭಾಗಕ್ಕೆ (ಚೆನೆ ಮತ್ತು ವರ್ಸಾವೆ ಪ್ರದೇಶವನ್ನು ಒಳಗೊಂಡ ಮಿರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ಪ್ರದೇಶಗಳು) 25 ವರ್ಷಗಳ ಅವಧಿಗೆ ಟಾಟಾ ಪವರ್‌ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂ. 1, 2014)ಯನ್ನು ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್-ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

ii. ದೆಹಲಿಯಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (ಪಿಪಿಪಿ) ಮಾದರಿಯಲ್ಲಿ ಜಂಟಿ ಉದ್ಯಮವಾಗಿ ಸ್ಥಾಪನೆಯಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12,500 ಸಿಕೆಎಂ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. ಎಟಿಆಂಡ್ಸಿ ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಗೆ ಇಳಿಕೆಯಾಗಿದೆ.

iii. ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲನ್ನು ಹೊಂದಿದೆ. ಟಿಪಿಸಿಒಡಿಎಲ್ 29,354 ಚದರ ಕಿ.ಮೀ.ಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನ ಸಮಯದಲ್ಲಿ 30.49% ಇದ್ದ ಎಟಿಆಂಡ್ಸಿ ನಷ್ಟಗಳು ಈಗ 19.6%ರಷ್ಟಿವೆ. ಟಿಪಿಸಿಒಡಿಎಲ್ 1,14,119 ಸಿಕೆಟಿ. ಕಿ.ಮೀ. ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

iv. ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯವನ್ನು ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪನೆಯಾಯಿತು. ಟಿಪಿಎನ್‌ಒಡಿಎಲ್ 27,920 ಚದರ ಕಿ.ಮೀ. ಪ್ರದೇಶದಾದ್ಯಂತ ಹರಡಿರುವ 2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಎಫ್‌ವೈ 25ರ ಅಂತ್ಯದಲ್ಲಿ ವಾರ್ಷಿಕ ಎಟಿಆಂಡ್ಸಿ ನಷ್ಟಗಳು 12.6%ರಷ್ಟಿದ್ದು – ಇದು ಮಾನ್ಯ ಒಇಆರ್‌ಸಿ ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. ಟಿಪಿಎನ್‌ಒಡಿಎಲ್ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,64,629 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ.

v. ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, ಟಿಪಿಎಸ್‌ಒಡಿಎಲ್ ಒಡಿಶಾದ ದಕ್ಷಿಣ ಭಾಗದಲ್ಲಿ ಸುಮಾರು 48,751 ಚದರ ಕಿ.ಮೀ. ವ್ಯಾಪಿಸಿಕೊಂಡಿದೆ. ಟಿಪಿಎಸ್‌ಒಡಿಎಲ್ 1,12,955 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ. ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.

vi. ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯೂಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯೂಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಆಂಡ್ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.

vii. ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ: ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್) ಅಜ್ಮೇರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆಗೆ ವಿತರಣಾ ಫ್ರಾಂಚೈಸಿ ಒಪ್ಪಂದ (ಡಿಎಫ್ಎ)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. ಟಿಪಿಎಡಿಎಲ್ ಅಜ್ಮೇರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವ ಮತ್ತು ಸಂರಕ್ಷಿಸುವ ಹಾಗೂ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿದೆ. ಟಿಪಿಎಡಿಎಲ್ ಎಟಿಆಂಡ್ಸಿ ನಷ್ಟಗಳನ್ನು 17.2%ರಿಂದ 7.8%ಗೆ ಇಳಿಕೆ ಮಾಡುವಲ್ಲಿ ಕೊಡುಗೆ ನೀಡಿದೆ.

8. ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರಣೆ ಮತ್ತು ಸೇವೆ ಸಲ್ಲಿಸಲು ಪ್ರಸ್ತಾವಿತ ಗ್ರಾಹಕರ ಸಂಖ್ಯೆ: ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು **ಮೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ**ಯನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಬಯಸಿದೆ. ಮೇಲೆ ಉಲ್ಲೇಖಿಸಿದ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಈ ಕೆಳಗಿನ ಪ್ರದೇಶಗಳನ್ನು ಒಳಗೊಂಡಿವೆ: **1. ಶಿವಮೊಗ್ಗ ನಗರ ಪಾಲಿಕೆ 2. ಮಂಗಳೂರು ನಗರ ಪಾಲಿಕೆ 3. ಉಡುಪಿ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 4. ಶಿವಮೊಗ್ಗ ಮಹಾನಗರ ಪಾಲಿಕೆ 5. ಉಳ್ಳಾಲ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.**
ಟಿಪಿಸಿಎಲ್ ಪರವಾನಗಿ ಮಂಜೂರಾದ ದಿನಾಂಕದಿಂದ 3 ವರ್ಷಗಳ ಅಂತ್ಯದೊಳಗೆ 34,600 (ಮೂವತ್ತನಾಲ್ಕು ಸಾವಿರದ ಆರುನೂರು)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.

9. ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. **ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ:**
ವೆಬ್‌ಸೈಟ್: **www.tatapower.com**
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಯೋಗ್ಯತೆ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲೆ ತಿಳಿಸಿದಂತೆ ಟಿಪಿಸಿ ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.
12. ಪ್ರಕಟವಾದ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆಗಳು/ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಅವುಗಳನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಇಮೇಲ್ ಐಡಿ: asst.secykerc@gmail.com ಗೆ ಸಲ್ಲಿಸಬಹುದು. ಈ ವೈಶಿಷ್ಟ್ಯವನ್ನು ಬಳಸುವಲ್ಲಿ ಯಾವುದೇ ತೊಂದರೆ ಎದುರಾದರೆ, ಸಂಬಂಧಪಟ್ಟ ಭಾಗಿದಾರರು ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10:00 ರಿಂದ ಸಂಜೆ 5:00ರವರೆಗೆ ಮೊಬೈಲ್ ಸಂಖ್ಯೆ: 8147 144 627 ಗೆ ಅಥವಾ ಇಮೇಲ್ ಐಡಿ: asst.secykerc@gmail.com ಗೆ ಕೆಇಆರ್‌ಸಿ ಕಚೇರಿಯನ್ನು ಸಂಪರ್ಕಿಸಬಹುದು.
13. ಮೇಲೆ ನಮೂದಿಸಿದ ಇಮೇಲ್ ಐಡಿ ಮೂಲಕ ತಮ್ಮ ಸಲಹೆ/ಆಕ್ಷೇಪಣೆ ಸಲ್ಲಿಸಿರುವ ವ್ಯಕ್ತಿಯು ತಮ್ಮ ಸಲ್ಲಿಕೆಯ ಯಾವುದೇ ಪ್ರತಿಯನ್ನು (ಹಾರ್ಡ್ ಕಾಪಿ) ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರವೇಶವಿಲ್ಲದ ವ್ಯಕ್ತಿಗಳು ತಮ್ಮ ಸಲಹೆ/ಆಕ್ಷೇಪಣೆಯನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ, ಶ್ರೀ. ವಿ. ಎಚ್. ವಾಗ್ಲೆ, ಟಾಟಾ ಪವರ್ ಕಂಪನಿ ಲಿಮಿಟೆಡ್ [ದೂರವಾಣಿ: (91-22)-67172953, ಇಮೇಲ್: vidyadhar.wagle@tatapower.com] ಅವರಿಗೆ ಸೇವೆಯ ಪುರಾವೆಯೊಂದಿಗೆ, ದಿ ಸೆಕ್ರೆಟರಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿಳಾಸ: ನಂ. 16ಸಿ-1, ಮಿಲ್ಲರ್ಸ್ ರೋಡ್, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ 560052 ಇವರಿಗೆ ಉದ್ದೇಶಿಸಿ ಲಿಖಿತ ರೂಪದಲ್ಲಿ (ಹಾರ್ಡ್ ಕಾಪಿ) ಸಲ್ಲಿಸಬಹುದು; ಮತ್ತು ಅದರಲ್ಲಿ ಕಳುಹಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಇಮೇಲ್ ವಿಳಾಸ (ಇದ್ದರೆ) ನಮೂದಿಸಿರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ ನಂತರ** ಸ್ವೀಕರಿಸಿದ ಸಲಹೆಗಳು ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ/ಅಭಿಪ್ರಾಯಕ್ಕೆ ಅದನ್ನು ಸ್ವೀಕರಿಸಿದ ಮೂರು ದಿನಗಳ ಒಳಗೆ ಉತ್ತರಿಸಲಿದೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ/ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು

ಸಹಿ/-
ವಿದ್ಯಾಧರ ಹರಿ ವಾಗ್ಲೆ
ಚೀಫ್ – ರೆಗ್ಯುಲೇಟರಿ
ಸ್ಥಳ: ಮುಂಬೈ
ದಿನಾಂಕ: 25 ಮೇ, 2026
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

TATA
TATA POWER
THE TATA POWER COMPANY LIMITED,
Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ವಿದ್ಯುತ್ ಕಾಯ್ದೆ 2003ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಜೆಇಎಸ್‌ಕಾಂನ ನಾಲ್ಕು (4) ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ ಪ್ರದೇಶಗಳಿಗೆ ವಿತರಣಾ ಪರವಾನಗಿ ಮಂಜೂರು ಮಾಡುವ ಕುರಿತು ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯ ಬಗ್ಗೆ ಸಲಹೆಗಳು / ಆಕ್ಷೇಪಣೆಗಳನ್ನು ಆಹ್ವಾನಿಸುವ ಸೂಚನೆ

(ಪ್ರಕರಣ ಸಂಖ್ಯೆ: MP/05/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು, ವಿದ್ಯುತ್ ಕಾಯ್ದೆ 2003ರ ಕಲಂ 14 ಮತ್ತು 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) (ಲೈಸೆನ್ಸಿಂಗ್) ನಿಯಮಾವಳಿ, 2004 ಮತ್ತು ಅನ್ವಯವಾಗುವ ಇತರ ನಿಯಮಗಳು ಹಾಗೂ ನಿಯಮಾವಳಿಗಳ ಅನ್ವಯ, **ಜೆಇಎಸ್‌ಕಾಂನ ನಾಲ್ಕು (4) ಭೌಗೋಳಿಕವಾಗಿ ಸಂಯೋಜಿತ ಆದಾಯ ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ** ಪ್ರದೇಶಗಳಿಗೆ ಟಿಪಿಸಿಎಲ್‌ಗೆ ವಿತರಣಾ ಪರವಾನಗಿ ಮಂಜೂರು ಮಾಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (KERC/ಆಯೋಗ) ಮುಂದೆ ಅರ್ಜಿ (ಪ್ರಕರಣ ಸಂಖ್ಯೆ MP 05/2026) ಸಲ್ಲಿಸಿದೆ. ಆಯೋಗವು ಕಾಯ್ದೆಯ ಕಲಂ 15(2)ರ ಅಡಿಯಲ್ಲಿ ಟಾಟಾ ಪವರ್ ಸಾರ್ವಜನಿಕ ಸೂಚನೆ ಪ್ರಕಟಿಸಲು ನಿರ್ದೇಶಿಸಿದೆ.
2. **ಅರ್ಜಿಯ ಮುಖ್ಯ ಅಂಶಗಳನ್ನು ಸಂಕ್ಷಿಪ್ತವಾಗಿ ಕೆಳಗಿನಂತೆ ನೀಡಲಾಗಿದೆ:**

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯ್ದೆಯ ಕಲಂ 14ರ 6ನೇ ಉಪವಿಧಾನದ ಅಡಿಯಲ್ಲಿ ವಿತರಣಾ ಪರವಾನಗಿ.
ಅರ್ಜಿದಾರರ ಮುಖ್ಯ ವ್ಯವಹಾರ ಪ್ರದೇಶ:	**ಜೆಇಎಸ್‌ಕಾಂನ ನಾಲ್ಕು (4) ಭೌಗೋಳಿಕವಾಗಿ ಸಂಪರ್ಕಿತ ಆದಾಯ ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ.**

3. **ಅರ್ಜಿಯ ಇತರೆ ಮುಖ್ಯ ಅಂಶಗಳು:**
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳಲ್ಲಿ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ, ಮುಂಬೈಯ 485 ಚ.ಕಿ.ಮೀ. ಪ್ರದೇಶದಲ್ಲಿ 0.8 ದಶಲಕ್ಷಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು, 4850 CKM ಜಾಲದ ಉದ್ದ ಹಾಗೂ 99.99% ಕ್ಕಿಂತ ಹೆಚ್ಚು ವಿಶ್ವಾಸಾರ್ಹತೆಯನ್ನು ಹೊಂದಿದೆ; ಇದು ದೇಶದಲ್ಲೇ ಅತಿ ಉನ್ನತ ಮಟ್ಟದಲ್ಲೊಂದಾಗಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPWODL) ಹಾಗೂ ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಸಂಸ್ಥೆಗಳ ಮೂಲಕ ಟಾಟಾ ಪವರ್ ಗಮನಾರ್ಹ ಕಾರ್ಯಕ್ಷಮತೆಯನ್ನು ತೋರಿಸಿದೆ.
- ಟಾಟಾ ಪವರ್ ಸಂಸ್ಥೆಯು ಶತಮಾನಕ್ಕೂ ಹೆಚ್ಚು ಕಾಲ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ದಿನೇದಿನೇ ಸಂಕೀರ್ಣಗೊಳ್ಳುತ್ತಿರುವ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸಲು ಅಪರೂಪದ ಪರಿಣತಿ ಮತ್ತು ಸಾಮರ್ಥ್ಯವನ್ನು ಹೊಂದಿದೆ. ಅರ್ಜಿದಾರನು ವಿವಿಧ ಸಮನ್ವಯಾತ್ಮಕ ಪ್ರಯೋಜನಗಳನ್ನು ಬಳಸಿಕೊಂಡು, **ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ** ಜಿಲ್ಲೆಗಳನ್ನೊಳಗೊಂಡ ಪ್ರಸ್ತಾವಿತ ಸರಬರಾಜು ಪ್ರದೇಶದಲ್ಲಿನ ಗ್ರಾಹಕರ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾನೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ **ಗುಲ್ಬರ್ಗಾ ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ ಲಿಮಿಟೆಡ್ (GESCOM)** ನ ವಿತರಣಾ ವ್ಯಾಪ್ತಿಗೆ ಒಳಪಡುತ್ತದೆ.

4. **ಅರ್ಜಿದಾರರ ಕಾನೂನುಬದ್ಧ ಸ್ಥಿತಿ ಮತ್ತು ನೋಂದಣಿ ಸಂಖ್ಯೆ:**
ಪಬ್ಲಿಕ್ ಲಿಮಿಟೆಡ್ ಕಂಪನಿ – CIN [L28920MH1919PLC000567].

5. **ಷೇರು ಹಿಡಿಕೆ ಮಾದರಿ**

ಕ್ರ. ಸಂ.	ಷೇರುದಾರರ ಹೆಸರು	ಷೇರು ಹಿಡಿಕೆ ಮಾದರಿ (31 ಮಾರ್ಚ್ 2025ರ ಸ್ಥಿತಿಗೆ)
(i)	ಪ್ರೊಮೋಟರ್ ಮತ್ತು ಪ್ರೊಮೋಟರ್ ಗುಂಪು	1497257565
(ii)	ಸಾರ್ವಜನಿಕರು	1698081982
(iii)	ನಾನ್-ಪ್ರೊಮೋಟರ್ – ನಾನ್-ಪಬ್ಲಿಕ್	0
(iv)	ಡಿಆರ್‌ಗಳ ಅಡಿಪಾಯದ ಷೇರುಗಳು	0
(v)	ನೌಕರರ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	**ಒಟ್ಟು**	**3195339547**

6. **ನಿರ್ವಹಣಾ ವಿವರ (ನಿರ್ದೇಶಕ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕ, ಅಧ್ಯಕ್ಷರು;	· ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಶನ್ಸ್, ರೀಜನಲ್ ಎಂಜಿನಿಯರಿಂಗ್ ಕಾಲೇಜು, ತ್ರಿಚಿ · ಗೌರವ ಡಾಕ್ಟರ್ ಆಫ್ ಲೆಟರ್ಸ್	· ಟಾಟಾ ಸನ್ಸ್ ಅಧ್ಯಕ್ಷತೆ, · ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ;	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ	· ಐಐಟಿ ದೆಹಲಿ ಯಿಂದ ಪಿಎಚ್.ಡಿ. · ನ್ಯಾಷನಲ್ ಲಾ ಸ್ಕೂಲ್ ಬೆಂಗಳೂರು ಯಿಂದ ಮಾಸ್ಟರ್ಸ್ ಇನ್ ಬಿಸಿನೆಸ್ ಲಾ · ದೆಹಲಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ	· ವವಿದ್ಯುತ್ ಕ್ಷೇತ್ರ ತಜ್ಞರು · ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ;	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಾಲ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕಿ	· ಬ್ಯಾಚಲರ್ ಇನ್ ಕಂಪ್ಯೂಟರ್ ಎಂಜಿನಿಯರಿಂಗ್ · ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಅಂತಾರಾಷ್ಟ್ರೀಯ ಹಣಕಾಸು ಮತ್ತು ವ್ಯವಹಾರದಲ್ಲಿ ಮಾಸ್ಟರ್ಸ್;	· ಕಾರ್ಪೊರೇಟ್ ಆಡಳಿತ · ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ;	ಅನುಭವ: 20 ವರ್ಷಗಳಿಗಿಂತ ಹೆಚ್ಚು
4	ಶ್ರೀ ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು;	· ಐಐಟಿ ಕಾನ್ಪುರದಿಂದ ಕೆಮಿಕಲ್ ಎಂಜಿನಿಯರಿಂಗ್ ಬ್ಯಾಚಲರ್ಸ್ · ಐಐಎಂ ಬೆಂಗಳೂರು ಯಿಂದ ಎಂಬಿಎ	· ಇಂಧನ ಕ್ಷೇತ್ರದಲ್ಲಿ ವಿಶಾಲ ಅನುಭವ · ಬಿಪಿಸಿಎಲ್‌ನ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು;	38 ವರ್ಷಗಳಿಗಿಂತ ಹೆಚ್ಚು
5	ಶ್ರೀ ರಾಜೀವ್ ಮೆಹ್ರಿಷಿ, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	· ಇತಿಹಾಸದಲ್ಲಿ ಮಾಸ್ಟರ್ಸ್ · ಯುಕೆ ಯ ಸ್ಟ್ರಾತ್‌ಕ್ಲೈಡ್ ವಿಶ್ವವಿದ್ಯಾಲಯದಿಂದ ಎಂಬಿಎ;	· ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೇಖಾ ಪರಿಶೋಧಕರು · ಸಾರ್ವಜನಿಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ;	ನಾಗರಿಕ ಸೇವೆಯಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕಿ	· ಚಾರ್ಟರ್ಡ್ ಅಕೌಂಟೆಂಟ್	· ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ · ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ;	30 ವರ್ಷಗಳಿಗಿಂತ ಹೆಚ್ಚು
7	ಶ್ರೀ ಸೌರಭ್ ಅಗ್ರವಾಲ್, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	· ಐಐಟಿ ರೂರ್ಕಿಯಿಂದ ಕೆಮಿಕಲ್ ಎಂಜಿನಿಯರಿಂಗ್ ಬ್ಯಾಚಲರ್ಸ್ · ಐಐಎಂ ಕಲ್ಕತ್ತಾದಿಂದ ಪಿಜಿಡಿಎಂ	· ಟಾಟಾ ಸನ್ಸ್ ಗುಂಪಿನ ಮುಖ್ಯ ಹಣಕಾಸು ಅಧಿಕಾರಿ · ಕಾರ್ಪೊರೇಟ್ ಹಣಕಾಸು ಮತ್ತು ತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	· ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	· ರೋಥ್‌ಶೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕರು · ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	· ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯದಿಂದ ವಾಣಿಜ್ಯದಲ್ಲಿ ಬ್ಯಾಚಲರ್ಸ್ · ಐಐಎಂ ಅಹಮದಾಬಾದ್‌ನಿಂದ ಎಂಬಿಎ · ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಅಂಡ್ ಪಾಲಿಟಿಕಲ್ ಸೈನ್ಸ್‌ನಿಂದ ಎಂ.ಎಸ್‌ಸಿ.	· ಭಾರತ ಸರ್ಕಾರದ ಮಾಜಿ ಆದಾಯ ಕಾರ್ಯದರ್ಶಿ · ಹಣಕಾಸು, ತೆರಿಗೆ ಮತ್ತು ಸಾರ್ವಜನಿಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಯಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ ಪ್ರಮೋದ್ ಅಗರವಾಲ್, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	· ಐಐಟಿ ಮುಂಬೈಯಿಂದ ಬಿ.ಟೆಕ್ (ಸಿವಿಲ್) · ಐಐಟಿ ದೆಹಲಿ ಯಿಂದ ಎಂ.ಟೆಕ್ (ಡಿಸೈನ್ ಎಂಜಿನಿಯರಿಂಗ್);	· ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (CMD), ಮಧ್ಯ ಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ · ಯೋಜನಾ ನಿರ್ವಹಣೆ · ವ್ಯೂಹಾತ್ಮಕ ಮೈತ್ರಿಗಳು · ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಯಲ್ಲಿ 30+ ವರ್ಷಗಳಿಗಿಂತ ಹೆಚ್ಚು

7. **ಸಮಾನ ಸ್ವರೂಪದ ಚಟುವಟಿಕೆಗಳಲ್ಲಿ ಕಾರ್ಯಾಚರಣೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:**
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಟಾಟಾ ಪವರ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ಅಡ್ಡಿಯಿಲ್ಲದ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಸರಬರಾಜು ಮಾಡುತ್ತಿದೆ.

I. **ಮುಂಬೈಯಲ್ಲಿ ವಿತರಣಾ ಪರವಾನಗಿ:** ಗೌರವಾನ್ವಿತ MERC, ಟಾಟಾ ಪವರ್‌ಗೆ 25 ವರ್ಷಗಳ ಅವಧಿಗೆ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಒಂದು ಭಾಗಕ್ಕೆ ವಿತರಣಾ ಪರವಾನಗಿ (Distribution License No. 1 of 2014) ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚ.ಕಿ.ಮೀ. ಪ್ರದೇಶದಲ್ಲಿ 0.8 ದಶಲಕ್ಷಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು 4,850 CKM ಜಾಲ ಉದ್ದ 1,076 MW ಗರಿಷ್ಠ ಬೇಡಿಕೆ ಹಾಗೂ ಸುಮಾರು 1.24% ವಿತರಣಾ ನಷ್ಟಗಳೊಂದಿಗೆ ಅತ್ಯಾಧುನಿಕ ವಿತರಣಾ ಜಾಲವನ್ನು ನಡೆಸುತ್ತಿದೆ.

II. **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – DDL) ಅನ್ನು ಜುಲೈ 2002ರಲ್ಲಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ ಸರ್ಕಾರ (49%)ಗಳ ಸಂಯುಕ್ತ ಉಪಕ್ರಮವಾಗಿ ಸಾರ್ವಜನಿಕ-ಖಾಸಗಿ ಭಾಗಧಾರಿ (PPP) ಮಾದರಿಯಲ್ಲಿ ಸ್ಥಾಪಿಸಲಾಯಿತು. ಟಾಟಾ ಪವರ್ – DDL ಸುಮಾರು 2.1 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, ಸುಮಾರು 12500 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ; AT&C ನಷ್ಟ ಮಟ್ಟವು 2002ರ 53.1%ರಿಂದ 2025ರಲ್ಲಿ 5.54%ಕ್ಕೆ ಇಳಿದಿದೆ.

III. **ಸೆಂಟ್ರಲ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ಸಂಯುಕ್ತ ಉಪಕ್ರಮವಾಗಿದ್ದು, ಬಹುಪಾಲು ಹಂಚಿಕೆಯನ್ನು ಟಾಟಾ ಪವರ್ ಕಂಪನಿ (51%) ಹೊಂದಿದೆ. TPCODL 29,354 ಚ.ಕಿ.ಮೀ. ವ್ಯಾಪಕ ವಿತರಣಾ ಪ್ರದೇಶದಲ್ಲಿ 3.3 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, ಜೂನ್ 2020ರಲ್ಲಿ ಸ್ವೀಕರಣದ ಸಮಯದ 30.49% AT&C ನಷ್ಟವು ಈಗ 19.6%ಕ್ಕೆ ಇಳಿದಿದೆ; 114119 ಸರ್ಕ್ಯೂಟ್ ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ.

IV. **ನಾರ್ದರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL) ಅನ್ನು ಏಪ್ರಿಲ್ 2021ರಲ್ಲಿ ಟಾಟಾ ಪವರ್ (51%) ಮತ್ತು GRIDCO Ltd (49%) ಗಳ ಸಂಯುಕ್ತ ಉಪಕ್ರಮವಾಗಿ ರಚಿಸಲಾಯಿತು. TPNODL 27920 ಚ.ಕಿ.ಮೀ. ಪ್ರದೇಶದಲ್ಲಿ 2 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, FY 25 ಕೊನೆಯಲ್ಲಿ AT&C ನಷ್ಟವನ್ನು 12.6% ಮಟ್ಟದಲ್ಲಿಟ್ಟಿದೆ; ಇದು OERC ನಿಗದಿಪಡಿಸಿದ 17.09% ಗುರಿಯಿಗಿಂತ 4.49% ಕಡಿಮೆ. ಸಂಸ್ಥೆ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81168 ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 164629 CKM ಜಾಲವನ್ನು ನಿರ್ವಹಿಸುತ್ತದೆ.

V. **ಸದರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL) ಜನವರಿ 2021ರಲ್ಲಿ ಕಾರ್ಯಾರಂಭ ಮಾಡಿತು. ಸುಮಾರು 2.2 ದಶಲಕ್ಷ ಗ್ರಾಹಕರೊಂದಿಗೆ TPSODL ದಕ್ಷಿಣ ಒಡಿಶಾದ ಸುಮಾರು 48,751 ಚ.ಕಿ.ಮೀ. ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು 112955 CKM ಜಾಲವನ್ನು ನಿರ್ವಹಿಸುತ್ತದೆ; ದಾಖಲಾಗಿದ ಗರಿಷ್ಠ ಬೇಡಿಕೆ 798 MVA ಆಗಿತ್ತು.

VI. **ವೆಸ್ಟರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPWODL) ಟಾಟಾ ಪವರ್ (51%) ಮತ್ತು GRIDCO Limited (49%) ಗಳ ಸಂಯುಕ್ತ ಉಪಕ್ರಮವಾಗಿದ್ದು, ಜನವರಿ 2021ರಲ್ಲಿ ಕಾರ್ಯಾರಂಭ ಮಾಡಿತು. TPWODL 48,373 ಚ.ಕಿ.ಮೀ. ವ್ಯಾಪ್ತಿಯಲ್ಲಿ 2.2 ದಶಲಕ್ಷ ನೋಂದಾಯಿತ ಗ್ರಾಹಕರನ್ನು ಹೊಂದಿದ್ದು, 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82752 ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 179694 ಸರ್ಕ್ಯೂಟ್ ಕಿ.ಮೀ. ಜಾಲವನ್ನು ನಿರ್ವಹಿಸುತ್ತದೆ; FY 25ರಲ್ಲಿ AT&C ನಷ್ಟ 17.1% ಮತ್ತು ಗರಿಷ್ಠ ಬೇಡಿಕೆ 1780 MW ಆಗಿತ್ತು.

VII. **ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ:** ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಅಜ್ಮೇರ್ ವಿದ್ಯುತ್ ವಿತರಣ್ ನಿಗಮ್ ಲಿಮಿಟೆಡ್ ಜೊತೆ Distribution Franchisee Agreement (DFA) ಮಾಡಿಕೊಂಡಿರುವ ವಿತರಣಾ ಫ್ರಾಂಚೈಸಿಯಾಗಿದೆ. TPADL ಅಜ್ಮೇರ್ ನಗರದ ಸುಮಾರು 200 ಚ.ಕಿ.ಮೀ. ಪ್ರದೇಶದಲ್ಲಿ ವಿತರಣಾ ಜಾಲದ ಕಾರ್ಯಾಚರಣೆ ಮತ್ತು ನಿರ್ವಹಣೆ, ಬಿಲ್ಲಿಂಗ್ ಮತ್ತು ಸಂಗ್ರಹಣೆಗೆ ಜವಾಬ್ದಾರಿಯಾಗಿದ್ದು, AT&C ನಷ್ಟವನ್ನು 17.2%ರಿಂದ 7.8%ಕ್ಕೆ ಇಳಿಸುವಲ್ಲಿ ಕೊಡುಗೆ ನೀಡಿದೆ.

8. **ಪ್ರಸ್ತಾವಿತ ಸರಬರಾಜು ಪ್ರದೇಶ, ಅದರ ವಿವರಣೆ ಮತ್ತು ಸೇವೆ ನೀಡಲು ಉದ್ದೇಶಿಸಿರುವ ಗ್ರಾಹಕರ ಸಂಖ್ಯೆ:** ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, **ಜೆಇಎಸ್‌ಕಾಂನ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ ಎಂಬ ನಾಲ್ಕು (4) ಆದಾಯ ಜಿಲ್ಲೆಗಳ ಭೌಗೋಳಿಕವಾಗಿ** ಸಂಯೋಜಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಸರಬರಾಜು ಕೈಗೊಳ್ಳಲು ಉದ್ದೇಶಿಸಿದೆ. ಮೇಲ್ಕಂಡ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಕೆಳಗಿನ ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿವೆ: **1. ಬಳ್ಳಾರಿ ಸಿಟಿ ಕಾರ್ಪೊರೇಷನ್ 2. ಕಲಬುರಗಿ ಸಿಟಿ ಕಾರ್ಪೊರೇಷನ್ 3. ರಾಯಚೂರು ಸಿಟಿ ಕಾರ್ಪೊರೇಷನ್ 4. ಸಿರುಗುಪ್ಪ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 5. ಶಹಾಬಾದ್ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 6. ಸಿಂಧನೂರು ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 7. ಶಹಾಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 8. ಸುರಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 9. ಯಾದಗಿರಿ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.** ಟಿಪಿಸಿ, ಪರವಾನಗಿ ಮಂಜೂರಾದ ಬಳಿಕ 3 ವರ್ಷಗಳ ಅಂತ್ಯದೊಳಗೆ 51,000 ಕ್ಕಿಂತ ಹೆಚ್ಚು (ಐವತ್ತೊಂದು ಸಾವಿರ) ಗ್ರಾಹಕರಿಗೆ ಸೇವೆ ನೀಡಲಿದೆ.

9. ಅರ್ಜಿಯ ಪ್ರತಿಯನ್ನು ಪರಿಶೀಲನೆ ಅಥವಾ ಖರೀದಿಗಾಗಿ ಪಡೆಯಬಹುದಾದ ನೋಡಲ್ ಅಧಿಕಾರಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಹುದ್ದೆ	ಶ್ರೀ ಮನೀಶ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಮತ್ತು ಕನ್ಸ್ಯೂಮರ್ ಎಂಜಿನಿಯರಿಂಗ್ (ಸಿಟಿ).
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿ ವಿಳಾಸ	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ಡಿಸ್ಟ್ರಿಬ್ಯೂಷನ್ ಡಿವಿಷನ್, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬೈ – 400013, ಮಹಾರಾಷ್ಟ್ರ, ಭಾರತ.
(iii)	ಸವಿಸ್ತಾರ ಅರ್ಜಿ ದಾಖಲೆಗಳು ಹಾಗೂ ಸಿಡಿ (ಇಂಗ್ಲಿಷ್‌ನಲ್ಲಿ): ರೂ. 150/- ನಗದು ಅಥವಾ ಮುಂಬೈಯಲ್ಲಿ ಪಾವತಿಸಬಹುದಾದ "The Tata Power Company Limited" ಹೆಸರಿನ ಡಿಡಿ / ಚೆಕ್ ಮುಖಾಂತರ.	
(iv)	ಸವಿಸ್ತಾರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ): ರೂ. 100/-	
(v)	ಸವಿಸ್ತಾರ ಅರ್ಜಿ ದಾಖಲೆಗಳ ಸಿಡಿ (ಇಂಗ್ಲಿಷ್‌ನಲ್ಲಿ): ರೂ. 50/-	

10. **ಅರ್ಜಿಯ ಪ್ರತಿಯನ್ನು ಹಾಗೂ ಉಲ್ಲೇಖಿತ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ: www.tatapower.com**
11. [illegible] The Distribution of Electricity Licence (Additional Requirements of Capital Adequacy, Creditworthiness and Code of Conduct) Rules, 2005 [illegible]
12. [illegible] asst.secykerc@gmail.com [illegible] 8147 144 627 [illegible] asst.secykerc@gmail.com [illegible]
13. [illegible] No. 16C-1, [illegible] 560052 [illegible] Tel: (91-22)-67172953, Email: vidyadharwagle@tatapower.com [illegible] 23 ಜೂನ್ 2026 [illegible]
14. [illegible] 27 ಜೂನ್ 2026ರೊಳಗೆ [illegible]

ಸ್ಥಳ: ಮುಂಬೈ
ದಿನಾಂಕ: 25 ಮೇ, 2026

ಸಹಿ/-
ವಿದ್ಯಾಧರ ವಾಗ್ಳೆ
ಚೀಫ್ - ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

ವಿಪತ್ತು ನಿರ್ವಹಣೆ: ಅಣಕು ಪ್ರದರ್ಶನ

ಯಲಹಂಕ ಕೆರೆಯಲ್ಲಿ ಪ್ರವಾಹ ನಿರ್ವಹಣೆ, ಮಳೆಗಾಲದ ಮುನ್ನೆಚ್ಚರಿಕೆ ಸನ್ನದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಂಗಾರು ಮಳೆಗೂ ಮುನ್ನ ನಡೆದಿರುವ ಪೂರ್ವಸಿದ್ಧತೆ ಹಾಗೂ ಯಾವುದೇ ರೀತಿಯ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮಾಡಿರುವ ಸಿದ್ಧತಾ ಕಾರ್ಯಗಳನ್ನು ಯಲಹಂಕ ಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಅಣಕು ಪ್ರದರ್ಶನದ ಮೂಲಕ ತೋರಿಸಲಾಯಿತು.

ಮಳೆಗಾಲದ ಸಿದ್ಧತೆಗಳ ಅಂಗವಾಗಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ವಿಭಾಗಗಳ ಸಿಬ್ಬಂದಿ, ಯಂತ್ರೋಪಕರಣಗಳು, ತುರ್ತು ಕಾರ್ಯಾಚರಣೆ ತಂಡಗಳ ಸನ್ನದ್ಧತಾ ಕಾರ್ಯಕ್ರಮ ಮತ್ತು ಪರಿಶೀಲನೆ ನಡೆಸಲಾಯಿತು.

ವಿಪತ್ತು ನಿರ್ವಹಣೆಗೆ ಸದಾ ಸನ್ನದ್ಧರಾಗಿದ್ದು ಕಾರ್ಯನಿರ್ವಹಿಸಲು ನಗರ ಪಾಲಿಕೆಯ ಅಧಿಕಾರಿಗಳು ಹಾಗೂ ನಿಯಂತ್ರಣ ಕೊಠಡಿಯ ಸಿಬ್ಬಂದಿ ಸೇರಿದಂತೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಟೆಲಿಕಾಂ, ಅಗ್ನಿಶಾಮಕ ಮತ್ತು ತುರ್ತುಸೇವೆಗಳು ಹಾಗೂ ಇತರೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಕರೆ ನೀಡಲಾಯಿತು.

ಮಳೆಗಾಲದಲ್ಲಿ ಕಾರ್ಯನಿರ್ವಹಿಸುವ ವಿಪತ್ತು ನಿರ್ವಹಣಾ ತಂಡಗಳು ಹಾಗೂ ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆ ಸೇರಿದಂತೆ ವಿವಿಧ ಸಿಬ್ಬಂದಿ ಮತ್ತು ಯಂತ್ರೋಪಕರಣಗಳ ಸನ್ನದ್ಧತೆಯನ್ನು ಪರಿಶೀಲಿಸಲಾಯಿತು.

ಪ್ರವಾಹ ಮತ್ತು ನೀರಿನಲ್ಲಿ ಮುಳುಗುವ ಅವಘಡಗಳ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ರಕ್ಷಣಾ ಕಾರ್ಯಗಳ ಕುರಿತು ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿಯಿಂದ ಪ್ರಾಯೋಗಿಕ ಪ್ರದರ್ಶನ ನಡೆಸಲಾಯಿತು.

ಎನ್‌ಡಿಆರ್‌ಎಫ್ ಕಮಾಂಡರ್ ಅಖಿಲೇಶ್ ಕುಮಾರ್ ಚೌಗಲೆ ಮಾತನಾಡಿ, ಮುಂಗಾರು ಮಳೆ ಸಂದರ್ಭದಲ್ಲಿ ತುರ್ತು ರಕ್ಷಣಾ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯ. ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ತಲುಪುವ ಮುನ್ನವೇ ಸಾರ್ವಜನಿಕರು ಪ್ರಾಥಮಿಕ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ತಿಳಿದುಕೊಳ್ಳಬೇಕು ಎಂದು ಹೇಳಿದರು.

ಮುಂಗಾರು ಮಳೆಯ ಸಂದರ್ಭದಲ್ಲಿ ಸಾರ್ವಜನಿಕರಿಗೆ ಯಾವುದೇ ಅಡಚಣೆ ಯಾಗದಂತೆ ನಗರ ಪಾಲಿಕೆಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಯಾವುದೇ ತುರ್ತು ಪರಿಸ್ಥಿತಿ ಅಥವಾ ಸಮಸ್ಯೆಗಳು ಉಂಟಾದಲ್ಲಿ ನಗರಪಾಲಿಕೆ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಮೊಬೈಲ್ ಸಂಖ್ಯೆಗಳನ್ನೊಳಗೊಂಡ ಗ್ರೂಪ್ ಮೂಲಕ ಪರಸ್ಪರ ಸಮನ್ವಯ ಸಾಧಿಸಿ ತಕ್ಷಣ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಯಿತು. ನಗರ ಪಾಲಿಕೆಯ ಮುಖ್ಯ ಎಂಜಿನಿಯರ್‌ಗಳಾದ ರಾಘವೇಂದ್ರ ಪ್ರಸಾದ್, ಯಮುನಾ, ವಿಪತ್ತು ನಿರ್ವಹಣಾ ಸಮಾಲೋಚಕರು ಸೇರಿದಂತೆ ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ರಕ್ಷಣಾ ದಳ, ಹೋಂ ಗಾರ್ಡ್, ಬಿಎಸ್‌ಎಫ್, ಅಗ್ನಿಶಾಮಕ ದಳ, ಬೆಸ್ಕಾಂ, ಏರ್‌ಟೆಲ್, ಜಿಯೊ, ಬಿಎಸ್‌ಎನ್‌ಎಲ್ ಅಧಿಕಾರಿಗಳು ಹಾಜರಿದ್ದರು.

ಯಲಹಂಕ ಕೆರೆಯಲ್ಲಿ ಪ್ರವಾಹ ನಿರ್ವಹಣೆಯ ಅಣಕು ಪ್ರದರ್ಶನ ನಡೆಯಿತು

ಕಸ ಸಮಸ್ಯೆ: ಸಲಹೆ ಸ್ವೀಕಾರ

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸುವ ಹಾಗೂ ಕಸದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಆಯುಕ್ತ ಕೆ.ಎನ್. ರಮೇಶ್ ಅವರ ಅಧ್ಯಕ್ಷತೆಯಲ್ಲಿ ಸ್ವಯಂಸೇವಾ ಸಂಸ್ಥೆಗಳು ಮತ್ತು ನಾಗರಿಕ ವೇದಿಕೆಗಳ ಪ್ರಮುಖರೊಂದಿಗೆ ಸಭೆ ಜರುಗಿತು.

ಈ ಸಭೆಯಲ್ಲಿ ಬಿಎಸ್‌ಡಬ್ಲ್ಯುಎಂಎಲ್ ರಾಯಭಾರಿ ಅನಿರುದ್ಧ ಜತ್ಕರ್, ಕುಮಾರಸ್ವಾಮಿ ಬಡಾವಣೆಯ ಸಿಟಿಜನ್ ಟಾಸ್ಕ್ ಫೋರ್ಸ್‌ನ ಶ್ರೀನಾಥ್, ಜೆ.ಪಿ. ನಗರದ ವಿಮೆನ್ ಆಫ್ ವಿಸ್ಡಮ್, ಎಚ್‌ಎಸ್‌ಆರ್ ಲೇಔಟ್‌ನ ಎಚ್‌ಎಸ್‌ಆರ್ ಸಿಟಿಜನ್ ಫೋರಂನಂತಹ ನಾಗರಿಕ ವೇದಿಕೆಗಳ ಪ್ರತಿನಿಧಿಗಳು ತಮ್ಮ ಬಡಾವಣೆಗಳ ಸ್ವಚ್ಛತೆಗೆ ಘನತ್ಯಾಜ್ಯ ಸಂಗ್ರಹಣೆ ಹಾಗೂ ನಿರ್ವಹಣೆಗಾಗಿ ಅಳವಡಿಸಿಕೊಂಡಿರುವ ಯೋಜನೆಗಳ ಬಗ್ಗೆ ಚರ್ಚಿಸಿ ಪಾಲಿಕೆಗೆ ಸಲಹೆಗಳನ್ನು ನೀಡಿದರು.

ಬ್ಲ್ಯಾಕ್‌ಸ್ಪಾಟ್‌ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿ, ಕಟ್ಟುನಿಟ್ಟಿನ ನಿಗಾ ವಹಿಸಬೇಕು. ಸಂಜೆ ವೇಳೆಯಲ್ಲೂ ಕಸ ಸಂಗ್ರಹಣೆ ಮಾಡುವುದರಿಂದ ರಸ್ತೆ ಬದಿ ಕಸ ಸುರಿಯುವುದನ್ನು ತಡೆಗಟ್ಟಬಹುದು. ಪ್ರತಿ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣಾ ಕಲಿಕಾ ಕೇಂದ್ರ ಸ್ಥಾಪನೆ ಅಗತ್ಯವಾಗಿದೆ ಎಂದರು.

ಮನೆಗಳ ಬಳಿ ತೆರಳಿ ಕಸ ಸಂಗ್ರಹಣೆ ಮಾಡುವುದನ್ನು ಖಾತರಿಪಡಿಸಿಕೊಳ್ಳಲು, ಪಾಲಿಕೆಯ ಕಸ ಸಂಗ್ರಹಣೆಯ ಎಲ್ಲ ವಾಹನಗಳಿಗೆ ಜಿಪಿಎಸ್ ವ್ಯವಸ್ಥೆ ಕಡ್ಡಾಯ ಮಾಡುವುದು ಸೂಕ್ತ ಎಂದು ತಿಳಿಸಿದರು.

ನಾಗರಿಕರ ಸಹಭಾಗಿತ್ವ ಹಾಗೂ ಸ್ವಯಂಸೇವಾ ಸಂಸ್ಥೆಗಳ ಸಕ್ರಿಯ ಬೆಂಬಲದೊಂದಿಗೆ ಬೆಂಗಳೂರು ದಕ್ಷಿಣ ನಗರ ಪಾಲಿಕೆಯನ್ನು ಕಸಮುಕ್ತ ಮತ್ತು ಸ್ವಚ್ಛ ನಗರವನ್ನಾಗಿ ಮಾಡಲು ಪಾಲಿಕೆ ಬದ್ಧವಾಗಿದೆ ಎಂದು ಕೆ.ಎನ್. ರಮೇಶ್ ತಿಳಿಸಿದರು.

ಕಟ್ಟಡ ನಿರ್ಮಿಸಿ ಹಲವು ತಿಂಗಳು ಕಳೆದರೂ ಸ್ವಂತ ಕಟ್ಟಡಕ್ಕೆ ಮರಳಿಲ್ಲ

ಸ್ಥಳಾಂತರವಾಗದ ಬೆಸ್ಕಾಂ ಕಚೇರಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಉಪವಿಭಾಗದ ಕಟ್ಟಡ ನಿರ್ಮಿಸಿ ಹಲವು ತಿಂಗಳು ಕಳೆದಿದೆ. ಆದರೆ, ಈವರೆಗೂ ಕಚೇರಿಯನ್ನು ಬಾಡಿಗೆ ಕಟ್ಟಡದಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮಾಡಲು ಅಧಿಕಾರಿಗಳು ಮುಂದಾಗಿಲ್ಲ.

ಬೆಸ್ಕಾಂ ಸ್ವಂತ ನಿವೇಶನದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ವಿಶಾಲವಾದ ಜಾಗದಲ್ಲಿ ಬಹುಮಹಡಿಯ ಮೂರು ಅಂತಸ್ತಿನ ಕಟ್ಟಡ ನಿರ್ಮಿಸಲಾಗಿದೆ. ನೆಲಮಹಡಿಯಲ್ಲಿ ಪಾರ್ಕಿಂಗ್ ಸೇರಿ ಮೂರು ಅಂತಸ್ತಿನ ಕಟ್ಟಡ ಪೂರ್ಣಗೊಂಡು ಹಲವು ತಿಂಗಳು ಕಳೆದಿದ್ದರೂ, ನಾಗದೇವನಹಳ್ಳಿಯ ಆರ್.ಆರ್.ಲೇಔಟ್‌ನಲ್ಲಿರುವ ಖಾಸಗಿ ಕಟ್ಟಡದಲ್ಲಿಯೇ ಬೆಸ್ಕಾಂ ಕೆಂಗೇರಿ ಉಪವಿಭಾಗದ ಕಚೇರಿ ಕಾರ್ಯನಿರ್ವಹಿಸುತ್ತಿದೆ. ಅಲ್ಲಿ ಪ್ರತಿ ತಿಂಗಳು ₹2.50 ಲಕ್ಷ ಬಾಡಿಗೆ ಪಾವತಿಸುತ್ತಿದ್ದು, ಕಚೇರಿಯನ್ನು ಅಲ್ಲಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮಾಡಲು ಅಧಿಕಾರಿಗಳು ಮೀನಾ ಮೇಷ ಎಣಿಸುತ್ತಿದ್ದಾರೆ.

ವಿಶ್ವೇಶ್ವರಯ್ಯ 4ನೇ ಬ್ಲಾಕ್‌ನಲ್ಲಿ ನಿರ್ಮಾಣಗೊಂಡಿರುವ ಬೆಸ್ಕಾಂ ಕಟ್ಟಡ

'ಬಾಡಿಗೆ ಕಟ್ಟಡವು ಬೆಸ್ಕಾಂನ ನಿವೃತ್ತ ಅಧೀಕ್ಷಕ ಎಂಜಿನಿಯರ್ ಅವರಿಗೆ ಒಳಪಟ್ಟಿದ್ದು, ಅವರಿಗೆ ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಬಾಡಿಗೆ ಸಂದಾಯವಾಗುತ್ತಿದೆ. ಅವರಿಗೆ ಅನುಕೂಲ ಮಾಡಿಕೊಡಲು ಅಲ್ಲಿಂದ ಕಚೇರಿ ಸ್ಥಳಾಂತರ ಮಾಡುತ್ತಿಲ್ಲ' ಎಂದು ಸಾರ್ವಜನಿಕರು ದೂರಿದ್ದಾರೆ.

'ಜನಗಣತಿಗೆ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಇದರಿಂದಾಗಿ ಸ್ವಂತ ಕಟ್ಟಡಕ್ಕೆ ಕಚೇರಿ ಸ್ಥಳಾಂತರ ಕಾರ್ಯ ವಿಳಂಬವಾಗಿದೆ. ಶೀಘ್ರವೇ ಹಿರಿಯ ಅಧಿಕಾರಿಗಳ ಅನುಮತಿ ಪಡೆದು, ಕಚೇರಿಯನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗುವುದು' ಎಂದು ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅನುರಾಧ ತಿಳಿಸಿದರು.

'ಕಟ್ಟಡವನ್ನು ಸುಂದರವಾಗಿ, ಆಡಳಿತಾತ್ಮಕವಾಗಿ ಕೆಲಸ ನಿರ್ವಹಿಸಲು ನಿರ್ಮಾಣ ಮಾಡಲಾಗಿದೆ. ಕಚೇರಿ ಸ್ಥಳಾಂತರಕ್ಕೆ ಬೆಸ್ಕಾಂ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ಕಾರ್ಯಪಾಲಕ ಎಂಜಿನಿಯರ್ (ಸಿವಿಲ್) ಲಿಂಗೇಗೌಡ ಜೆ.ಟಿ. ಹೇಳಿದರು.

ಚಂದಾಪುರ ಆರ್‌ಟಿಒ ಕಚೇರಿ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದಾಪುರ ಪ್ರಾದೇಶಿಕ ಸಾರಿಗೆ ಕಚೇರಿಯು ನೂತನವಾಗಿ ನಿರ್ಮಿಸಿರುವ ಕಟ್ಟಡದಲ್ಲಿ ಮೇ 29ರಿಂದ ಕಾರ್ಯ ನಿರ್ವಹಿಸಲಿದೆ.

ಆನೇಕಲ್ ತಾಲ್ಲೂಕು ಹುಸ್ಕೂರು ರಸ್ತೆ ಚಿಕ್ಕನಾಗಮಂಗಲದಲ್ಲಿ ಬಿಎಂಟಿಸಿ ಡಿಪಿ–38ರ ಬಳಿ ನೂತನ ಕಟ್ಟಡ ನಿರ್ಮಿಸಲಾಗಿದೆ. ಮರ್ಸೂರು ಗ್ರಾಮದ ಚಂದಾಪುರ-ಆನೇಕಲ್ ಮುಖ್ಯ ರಸ್ತೆಯಲ್ಲಿ ಇಲ್ಲಿವರೆಗೆ ಕಾರ್ಯನಿರ್ವಹಿಸುತ್ತಿದ್ದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಚೇರಿ (ದೂರವಾಣಿ: 080– 2782765) ಸ್ಥಳಾಂತರವಾಗುತ್ತಿದೆ ಎಂದು ಹೆಚ್ಚುವರಿ ಸಾರಿಗೆ ಆಯುಕ್ತರು ತಿಳಿಸಿದ್ದಾರೆ.

ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ

ಪೀಣ್ಯ ದಾಸರಹಳ್ಳಿ: ಸಮೀಪದ ಬಾಬಣ್ಣ ಬಡಾವಣೆ 4ನೇ ಕ್ರಾಸ್‌ನಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು. ಸ್ಥಳೀಯ ಜನರ ಸಮಸ್ಯೆಗಳನ್ನು ಆಲಿಸಿ, ಶೀಘ್ರ ಪರಿಹಾರ ಒದಗಿಸುವ ಭರವಸೆ ನೀಡಿದರು. ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಮುಖಂಡರಾದ ಟಿ. ಶಿವಕುಮಾರ್, ಹುಚ್ಚ ರಂಗಯ್ಯ, ಜಯಕೃಷ್ಣ, ಎಂ.ಆರ್. ಶ್ರೀನಿವಾಸ್, ಕಾಂತರಾಜು, ಶಿವಕುಮಾರ್, ಜಲಮಂಡಳಿ ಎಇಇ ನಾಗರಾಜು, ಬೆಸ್ಕಾಂ ಇಲಾಖೆ ರಾಚಪ್ಪ ಉಪಸ್ಥಿತರಿದ್ದರು.

ಉದ್ಯೋಗ ಮೇಳಕ್ಕೆ ಉತ್ತಮ ಸ್ಪಂದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವತಿಯಿಂದ ಏರ್ಪಡಿಸಿದ್ದ ಉದ್ಯೋಗ ಮಹಾಮೇಳಕ್ಕೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ ಚಾಲನೆ ನೀಡಿದರು. ಮೇಳದಲ್ಲಿ ವಿವಿಧ ವಲಯಗಳಿಗೆ ಸಂಬಂಧಿಸಿದ 175 ಕಂಪನಿಗಳ ಪ್ರತಿನಿಧಿ ಗಳು ಭಾಗವಹಿಸಿದ್ದರು. ಸುಮಾರು ಮೂರು ಸಾವಿರ ಆಕಾಂಕ್ಷಿಗಳು ತಮ್ಮ ಹೆಸರು ನೋಂದಾಯಿಸಿಕೊಂಡು ನೇರ ಸಂದರ್ಶನದಲ್ಲಿ ಪಾಲ್ಗೊಂಡರು.

ಕ್ವೆಸ್, ಎಥ್ನಸ್, ಎಡುಫ್ಯಾಕ್ಟರಿ, ಮ್ಯಾಜಿಕ್ ಬಸ್ ಮತ್ತು ಎಸ್‌ಎಸ್.ಬಿ.ಸಲ್ಯೂಷನ್ಸ್ ಸಂಸ್ಥೆಗಳ ಜಂಟಿ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಮೇಳದಲ್ಲಿ ನೂರಾರು ಅರ್ಹ ಅಭ್ಯರ್ಥಿಗಳು ನೇಮಕಾತಿ ಪತ್ರಗಳನ್ನು ಪಡೆದುಕೊಂಡರು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ನೂತನ ಶೈಕ್ಷಣಿಕ ವಿಭಾಗದಲ್ಲಿ ಜರುಗಿದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಎಸ್.ಆರ್.ನಿರಂಜನ, ಕೌಶಲ ಆಧಾರಿತ ಶಿಕ್ಷಣ ತಕ್ಷಣದ ಅಗತ್ಯವಾಗಿದೆ. ಪಠ್ಯಕ್ರಮದ ಅಧ್ಯಯನದ ಜೊತೆಗೆ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ವ್ಯಕ್ತಿತ್ವ ವಿಕಾಸದ ಮೂಲಕ ಶೈಕ್ಷಣಿಕ ಜೀವನದ ಗುರಿ ಸಾಧನೆಗೆ ಭದ್ರ ಅಡಿಪಾಯ ರೂಪಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಳಂದ, ತಕ್ಷಶಿಲಾ ವಿಶ್ವವಿದ್ಯಾಲಯಗಳ ಶಿಕ್ಷಣ ವ್ಯವಸ್ಥೆ ಹಾಗೂ ಗುರು-ಶಿಷ್ಯ ಪರಂಪರೆಯ ಕುರಿತು ಪ್ರಸ್ತಾಪಿಸಿದ ಅವರು, ಶಿಕ್ಷಣದ ಗುಣಮಟ್ಟ ಮತ್ತು ಬೋಧನಾ ವಿಧಾನಗಳ ಸುಧಾರಣೆಗೆ ವಿಶೇಷ ಗಮನ ಹರಿಸುವಂತೆ ಸೂಚಿಸಿದರು. ರಾಜ್ಯದ 13 ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಉದ್ಯಮ ವಲಯ ನಿರ್ದೇಶಿತ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುತ್ತಿರುವ ಬಗ್ಗೆ ತಿಳಿಸಿದರು, ಉನ್ನತ ಶಿಕ್ಷಣ ಇಲಾಖೆ ಇತ್ತೀಚೆಗೆ ಹಮ್ಮಿಕೊಂಡಿದ್ದ 'ಕ್ಯಾಂಪಸ್ ಟು ಕರಿಯರ್' ಕಾರ್ಯಕ್ರಮ ಹೊಸ ಆಯಾಮವನ್ನು ಒದಗಿಸಿದೆ ಎಂದರು.

ಕುಲಸಚಿವ ಎ. ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಪ್ರಾದೇಶಿಕ ನಿರ್ದೇಶಕರಾದ ಲಕ್ಷ್ಮಿ ಪ್ರಸಾದ್. ಕೆ., ಹಾಗೂ ವಿ.ವಿ ತರಬೇತಿ ಮತ್ತು ನಿಯೋಜನೆ ಕೇಂದ್ರದ ನಿರ್ದೇಶಕ ಪ್ರೊ. ರಿತಿಕಾ ಸಿನ್ಹಾ, ಸಂಯೋಜಕ ಡಾ.ಎ.ನಬಿ ಹಾಜರಿದ್ದರು.

ಜಿಆರ್‌ಟಿ ಜ್ಯುವೆಲ್ಲರ್ಸ್‌ನಿಂದ ಗೋಲ್ಡ್ ಎಕ್ಸ್‌ಚೇಂಜ್ ಮೇಳ

ಬೆಂಗಳೂರು: ಆಭರಣ ಜಗತ್ತಿನಲ್ಲಿ ತನ್ನದೇ ಪ್ರತ್ಯೇಕ ಛಾಪು ಮೂಡಿಸುವ ಮೂಲಕ ಗ್ರಾಹಕರ ಅಪಾರ ವಿಶ್ವಾಸ ಗಳಿಸಿರುವ ಭಾರತದ ಪ್ರಮುಖ ಜ್ಯುವೆಲ್ಲರಿ ಬ್ರ್ಯಾಂಡ್‌ಗಳಲ್ಲಿ ಒಂದಾದ 'ಜಿಆರ್‌ಟಿ ಜ್ಯುವೆಲ್ಲರ್ಸ್' ಬಹುನಿರೀಕ್ಷಿತ 'ಗೋಲ್ಡ್ ಎಕ್ಸ್‌ಚೇಂಜ್ ಮೇಳ'ವನ್ನು ಆರಂಭಿಸಿದೆ. ಗ್ರಾಹಕರು ತಮ್ಮ ಹಳೆಯ ಚಿನ್ನವನ್ನು ಕೊಟ್ಟು ಹೊಸ ವಿನ್ಯಾಸದ ಆಭರಣ ತಮ್ಮದಾಗಿಸಿಕೊಳ್ಳಬಹುದಾಗಿದೆ. ಜತೆಗೆ, ಮಾರುಕಟ್ಟೆ ಮೌಲ್ಯವನ್ನು ಸಹ ಪಡೆಯಬಹುದಾಗಿದೆ. ಈ ಮೇಳ ಸೀಮಿತ ಅವಧಿಗೆ ಇರಲಿದ್ದು, ಗ್ರಾಹಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಂಸ್ಥೆ ತಿಳಿಸಿದೆ. ಈ ಅಭಿಯಾನದ ಭಾಗವಾಗಿ ಹಳೆಯ ಚಿನ್ನವನ್ನು ವಿನಿಮಯ ಮಾಡಿಕೊಳ್ಳುವ ಗ್ರಾಹಕರಿಗೆ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ ₹150 ರೂಪಾಯಿಗಳನ್ನು ನೀಡಲಾಗುತ್ತದೆ. ಮುಂಬರುವ ಮದುವೆಗಳು, ಹಬ್ಬಗಳು ಮತ್ತು ವಿಶೇಷ ಸಮಾರಂಭಗಳಿಗಾಗಿ ಹಳೆಯ ಒಡವೆಗಳನ್ನು ನೀಡಿ, ನವನವೀನ ಹಾಗೂ ಆಕರ್ಷಕ ವಿನ್ಯಾಸದ ಆಭರಣಗಳಿಗೆ ಅಪ್‌ಗ್ರೇಡ್ ಮಾಡಿಕೊಳ್ಳಲು ಇದು ಗ್ರಾಹಕರಿಗೆ ಅತ್ಯುತ್ತಮ ಅವಕಾಶವಾಗಿದೆ.

ದೇಶದ ಪ್ರಗತಿಗೆ ಸಹಕಾರಿ: ಈಗಾಗಲೇ ಲಕ್ಷಾಂತರ ಭಾರತೀಯರು ಜಿಆರ್‌ಟಿ ಜ್ಯುವೆಲ್ಲರ್ಸ್‌ನಲ್ಲಿ ತಮ್ಮ ಹಳೆಯ ಚಿನ್ನವನ್ನು ವಿನಿಮಯ ಮಾಡಿಕೊಳ್ಳಲು ಮುಂದಾಗಿದ್ದಾರೆ. ಈ ವಿಶೇಷ ಹೆಜ್ಜೆಯಿಂದ ಭಾರತವು ಚಿನ್ನದ ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಮತ್ತು ಹೆಚ್ಚು ಸುಸ್ಥಿರ ಚಿನ್ನದ ಆರ್ಥಿಕತೆಯನ್ನು ಉತ್ತೇಜಿಸಲು ಒಂದು ಸಾಮೂಹಿಕ ಹೆಜ್ಜೆಯಾಗಿದೆ.

ಈ ಮೇಳದ ಕುರಿತು ಮಾತನಾಡಿದ ಜಿಆರ್‌ಟಿ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್.ಆನಂದ್ ಅನಂತಪದ್ಮನಾಭನ್, ಭಾರತೀಯ ಕುಟುಂಬಗಳು ಮತ್ತು ಸಂಪ್ರದಾಯಗಳಲ್ಲಿ ಚಿನ್ನವು ಯಾವಾಗಲೂ ಅತ್ಯಮೂಲ್ಯವಾದ ಸ್ಥಾನವನ್ನು ಹೊಂದಿದೆ. ನಮ್ಮ 'ಗೋಲ್ಡ್ ಎಕ್ಸ್‌ಚೇಂಜ್ ಮೇಳ'ದ ಮೂಲಕ, ಗ್ರಾಹಕರು ತಮ್ಮ ಹಳೆಯ ಚಿನ್ನಕ್ಕೆ ಹೆಚ್ಚಿನ ಮೌಲ್ಯವನ್ನು ಪಡೆದುಕೊಳ್ಳುವಂತೆ ನಾವು ಪ್ರೋತ್ಸಾಹಿಸುತ್ತಿದ್ದೇವೆ. ಜತೆಗೆ ಸ್ವಾವಲಂಬಿ ಮತ್ತು ಬಲಿಷ್ಠ ಭಾರತದ ನಿರ್ಮಾಣಕ್ಕೆ ಕೊಡುಗೆ ನೀಡಲು ಇದು ಸಹಕಾರಿಯಾಗಿದೆ' ಎಂದರು. ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್.ರಾಧಾಕೃಷ್ಣನ್ ಮಾತನಾಡಿ, 'ಜಿಆರ್‌ಟಿ ಜ್ಯುವೆಲ್ಲರ್ಸ್‌ನಲ್ಲಿ ಪ್ರತಿಯೊಂದು ಯೋಜನೆಯನ್ನು ಗ್ರಾಹಕರ ಲಾಭ ಮತ್ತು ದೀರ್ಘಕಾಲೀನ ಮೌಲ್ಯವನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗುತ್ತದೆ. ಈ ಮೇಳವು ಗ್ರಾಹಕರು ಹೆಚ್ಚಿನ ಸೌಲಭ್ಯಗಳೊಂದಿಗೆ ಸುಂದರವಾದ ಹೊಸ ಆಭರಣಗಳಿಗೆ ಅಪ್‌ಗ್ರೇಡ್ ಮಾಡಿಕೊಳ್ಳಲು ಸಹಾಯ ಮಾಡುವುದಲ್ಲದೆ, ಪ್ರತಿಯೊಂದು ವಿನಿಮಯವೂ ಭಾರತದ ಭವಿಷ್ಯಕ್ಕೆ ಕೊಡುಗೆ ನೀಡುವ ಒಂದು ಅರ್ಥಪೂರ್ಣ ಆಂದೋಲನಕ್ಕೆ ಪ್ರೇರಣೆ ನೀಡುತ್ತದೆ' ಎಂದರು.

ನಂಬಿಕೆಯ 6 ದಶಕಗಳ ಪಯಣ: 1964 ರಲ್ಲಿ ಸ್ಥಾಪನೆಯಾದ ಜಿಆರ್‌ಟಿ ಜ್ಯುವೆಲ್ಲರ್ಸ್, ತನ್ನ ಅಪ್ರತಿಮ ಕರಕುಶಲತೆ, ಸದಾಕಾಲಕ್ಕೂ ಒಪ್ಪುವ ವಿನ್ಯಾಸಗಳು ಮತ್ತು ಗ್ರಾಹಕರ ದೃಢವಾದ ನಂಬಿಕೆಗೆ ಹೆಸರಾಗಿದೆ. ಚಿನ್ನ, ವಜ್ರ, ಪ್ಲಾಟಿನಂ, ಬೆಳ್ಳಿ ಮತ್ತು ಅಮೂಲ್ಯ ರತ್ನಗಳ ಅತ್ಯದ್ಭುತ ಕಲೆಕ್ಷನ್‌ಗಳನ್ನು ಹೊಂದಿರುವ ಜಿಆರ್‌ಟಿ, ದಕ್ಷಿಣ ಭಾರತ ಮತ್ತು ಸಿಂಗಾಪುರದಾದ್ಯಂತ 65 ಕ್ಕೂ ಹೆಚ್ಚು ಶೋರೂಮ್‌ಗಳ ಮೂಲಕ ತಲೆಮಾರುಗಳಿಂದ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ.

GRT JEWELLERS
ಗೋಲ್ಡ್ ಎಕ್ಸ್‌ಚೇಂಜ್ ಮೇಳ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

'ದಾದಿಯರ ಸಮಸ್ಯೆ ಸರಿಪಡಿಸಲಾಗುವುದು'

ಬೆಂಗಳೂರು: 'ಆರೋಗ್ಯ ವ್ಯವಸ್ಥೆಯ ಬೆನ್ನೆಲುಬು ಆಗಿರುವ ದಾದಿಯರು (ನರ್ಸ್) ಕಡಿಮೆ ಸಂಬಳ, ಅನಿಯಮಿತ ಕೆಲಸದ ಅವಧಿ ಮುಂತಾದ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಅದನ್ನು ಸರಿಪಡಿಸುವ ಹೊಣೆಗಾರಿಕೆ ನಮ್ಮದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕರ್ನಾಟಕ ಶುಶ್ರೂಷಕ ಶಿಕ್ಷಕರ ಸಂಘದ ಸಹಯೋಗದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ದಾದಿಯರ ದಿನಾಚರಣೆಯಲ್ಲಿ ಮಾತನಾಡಿದರು. 'ನರ್ಸ್ ವೃತ್ತಿ ಸಂಕೀರ್ಣವಾದುದು. ಆರೋಗ್ಯ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸಬೇಕಾದರೆ ನರ್ಸ್‌ಗಳ ಪಾತ್ರ ಹಿರಿದು' ಎಂದು ಶ್ಲಾಘಿಸಿದರು.

'ನರ್ಸ್ ತರಬೇತಿ ನೀಡುವುದು ಬಹಳ ಮುಖ್ಯ. ಸಂಖ್ಯೆಗಿಂತ ಗುಣಮಟ್ಟ ಪ್ರಮುಖವಾದುದು. ನರ್ಸ್ ಆಗಿ ಕೆಲಸ ಮಾಡುವಾಗ ಸಮಯೋಚಿತ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ನಾಯಕತ್ವ ಗುಣ, ಮಾತೃಹೃದಯ, ಅನುಕಂಪ ಬಹಳ ಮುಖ್ಯವಾಗುತ್ತದೆ' ಎಂದು ತಿಳಿಸಿದರು.

ವಿಧಾನ ಸಭೆಯ ಅಧ್ಯಕ್ಷ ಯು.ಟಿ. ಖಾದರ್, ಶಾಸಕ ಡಾ. ರಂಗನಾಥ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಭಗವಾನ್, ಕರ್ನಾಟಕ ಶುಶ್ರೂಷಕ ಶಿಕ್ಷಕರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ನಗರದಲ್ಲಿ ಇಂದು

'ನೃಪವೈಭವ–2025–26: ಅಧ್ಯಕ್ಷತೆ: ಮೋಹನ್ ಕುಮಾರ್ ಬಿ.ಕೆ., ಅತಿಥಿಗಳು: ಜಿ. ಶೋಭಾ, ಮಿಮಿಕ್ರಿ ಗೋಪಿ, ಪವನ ನಾಗರಾಜ್, ಅದಾ ಫಾತಿಮಾ, ಟಿ.ಎಂ. ಮಂಜುನಾಥ, ಧನಂಜಯ, ಅಣ್ಣಪ್ಪ ಪೂಜಾರಿ, ಹಾಲೇಶಪ್ಪ ಆರ್., ಯು.ಬಿ. ರಾಯ್, ಆಯೋಜನೆ ಮತ್ತು ಸ್ಥಳ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 10

'ಕೃಷಿ ನವೋದ್ಯಮಗಳ ಸಮಾವೇಶ 2.0': ಉದ್ಘಾಟನೆ: ಎನ್. ಚೆಲುವರಾಯಸ್ವಾಮಿ, ಅತಿಥಿಗಳು: ಕೆ. ರಾಜೇಂದ್ರ, ವೈ.ಎಸ್. ಪಾಟೀಲ, ಜಿತೇಂದ್ರ ಕುಮಾರ್, ಅಧ್ಯಕ್ಷತೆ: ಎಸ್.ವಿ. ಸುರೇಶ, ಆಯೋಜನೆ: ಅಗ್ರಿ ಇನೊವೇಷನ್ ಸೆಂಟರ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಉತ್ತರ ಬ್ಲಾಕ್, ಜಿಕೆವಿಕೆ ಆವರಣ, ಬೆಳಿಗ್ಗೆ 10

ದಿ. ಎಚ್.ಎಸ್. ದೊರೆಸ್ವಾಮಿ ಅವರಿಗೆ ಕರ್ನಾಟಕದ ಗೌರವಾರ್ಪಣೆ: ಉದ್ಘಾಟನೆ: ಸಿದ್ದರಾಮಯ್ಯ, ದೊರೆಸ್ವಾಮಿ ಅವರ ಅಂಕಣ ಬರಹಗಳ ಕೊನೆಯ ಕಂತು 'ನೂರರ ನೋಟ' ಭಾಗ–2 ಬಿಡುಗಡೆ, ಅತಿಥಿಗಳು: ತೀಸ್ತಾ ಸೆಟಲ್‌ವಾಡ್, ದಿನೇಶ್ ಗುಂಡೂರಾವ್, ಎಂ.ಸಿ. ಸುಧಾಕರ್, ಜಿಗ್ನೇಶ್ ಮೇವಾನಿ, ರಿಜ್ವಾನ್ ಅರ್ಷದ್, ಬಿ. ರಮೇಶ್, ಇಂದಿರಾ ಕೃಷ್ಣಪ್ಪ, ಆಯೋಜನೆ: ಡಾ.ಎಚ್.ಎಸ್. ದೊರೆಸ್ವಾಮಿ ಸ್ಮಾರಕ ಪ್ರತಿಷ್ಠಾನ ಬೆಂಗಳೂರು, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 10.30ರಿಂದ



ತೀಸ್ತಾ ಸೆಟಲ್‌ವಾಡ್

'ಇಂದಿನ ಕಾಲಘಟ್ಟದಲ್ಲಿ ಅನುವಾದಕರು ಎದುರಿಸುವ ಸವಾಲುಗಳು' ಉಪನ್ಯಾಸ: ಡಾ. ನಾ. ಸೋಮೇಶ್ವರ, ಎನ್.ಎಸ್. ಶಂಕರ್, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ಟ್ರಾನ್ಸ್‌ಲೇಷನ್ ಸ್ಟಡೀಸ್ ಮಲ್ಲೇಶ್ವರ, ಸ್ಥಳ: ಗಾಂಧಿ ಸಾಹಿತ್ಯ ಸಂಘ, ಎಂಟನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10.30

'ಪ್ರೊ.ವಿ.ಕೃ. ಗೋಕಾಕ್' ಉಪನ್ಯಾಸ: ರುದ್ರೇಶ್ ಅದರಂಗಿ, ಆಶಯ ನುಡಿ: ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಮೇಕೆದಾಟು: ತಮಿಳುನಾಡು ಅರ್ಜಿ ವಜಾ

ತೀರ್ಪಿನ ಪುನರ್ ಪರಿಶೀಲನೆ ಅಗತ್ಯ ಇಲ್ಲ: ಸುಪ್ರೀಂ ಕೋರ್ಟ್ ಪೀಠ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2025ರ ನವೆಂಬರ್ ತೀರ್ಪಿನ ಮರು ಪರಿಶೀಲನೆಯ ಅರ್ಜಿ
- ತೆರೆದ ನ್ಯಾಯಾಲಯದಲ್ಲಿ ವಿಚಾರಣೆಗೆ ಕೋರಿದ್ದ ತಮಿಳುನಾಡು

ನವದೆಹಲಿ: ಕರ್ನಾಟಕದ ಪ್ರಸ್ತಾವಿತ ಮೇಕೆದಾಟು ಯೋಜನೆ ವಿರುದ್ಧದ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿದ 2025ರ ನವೆಂಬರ್ ತೀರ್ಪನ್ನು ಮರು-ಪರಿಶೀಲಿಸಬೇಕು ಎಂದು ಕೋರಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ತೆರೆದ ನ್ಯಾಯಾಲಯದಲ್ಲಿ ವಿಚಾರಣೆಗೆ ಕೋರಿ ತಮಿಳುನಾಡು ಸಲ್ಲಿಸಿದ್ದ ಈ ಅರ್ಜಿಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ತಿರಸ್ಕರಿಸಿತು.

ವಕೀಲರ ಮೌಖಿಕ ವಾದಗಳಿಲ್ಲದೆ ದಾಖಲೆಗಳ ಮೂಲಕ ನ್ಯಾಯಮೂರ್ತಿಗಳ ಕೊಠಡಿಗಳಲ್ಲಿ ಪರಿಶೀಲನಾ ಅರ್ಜಿಯ ವಿಚಾರಣೆ ನಡೆಸಲಾಗುತ್ತದೆ.

‘ಮರು ಪರಿಶೀಲನಾ ಅರ್ಜಿಯ ವಿಷಯಗಳು ಮತ್ತು ಅದರೊಂದಿಗೆ ಲಗತ್ತಿಸಲಾದ ದಾಖಲೆಗಳನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. ತೀರ್ಪಿನ ಪುನರ್ ಪರಿಶೀಲನೆ ಅಗತ್ಯ ಇಲ್ಲ’ ಎಂದು ಪೀಠವು ಇತ್ತೀಚೆಗೆ ಬಿಡುಗಡೆ ಮಾಡಿದ ತನ್ನ ಆದೇಶದಲ್ಲಿ ತಿಳಿಸಿದೆ.

ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ 2025ರ ನವೆಂಬರ್‌ನಲ್ಲಿ ವಜಾಗೊಳಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಹಾಗೂ ಎನ್.ವಿ. ಅಂಜಾರಿಯಾ ಪೀಠವು, ‘ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮಾತ್ರ ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಅನುಮತಿ ನೀಡಿದೆ. ತಮಿಳುನಾಡಿನ ಆಕ್ಷೇಪಣೆಗಳನ್ನು ತಜ್ಞರು ಪರಿಶೀಲಿಸಿದ ಬಳಿಕವೇ ಈ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಇದನ್ನು ಪ್ರಶ್ನಿಸಿ ತಮಿಳುನಾಡು ಅರ್ಜಿ ಸಲ್ಲಿಸಿರುವುದು ಅವಧಿಪೂರ್ವ’ ಎಂದು ಅಭಿಪ್ರಾಯಪಟ್ಟಿತ್ತು.

‘ತಮಿಳುನಾಡಿನ ಆಕ್ಷೇಪಣೆಗಳನ್ನು ಹಾಗೂ ತಜ್ಞ ಸಂಸ್ಥೆಗಳು, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಗಳ (ಸಿಡಬ್ಲ್ಯುಎಂಎ) ಅಭಿಪ್ರಾಯಗಳನ್ನು ಪರಿಗಣಿಸಿದ ನಂತರವೇ ಆಯೋಗವು ಯೋಜನೆಗೆ ಅನುಮೋದನೆ ನೀಡಲಿದೆ’ ಎಂದು ಪೀಠ ತಿಳಿಸಿತ್ತು.

‘ನ್ಯಾಯಾಲಯ ಮತ್ತು ಪ್ರಾಧಿಕಾರಗಳ ನಿರ್ದೇಶನಗಳನ್ನು ಅನುಸರಿಸಿ ಕರ್ನಾಟಕ ರಾಜ್ಯವು ಕಾವೇರಿ ನೀರನ್ನು ಹರಿಸಲು ಬದ್ಧವಾಗಿರಬೇಕು. ಒಂದು ವೇಳೆ, ಈ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ಕರ್ನಾಟಕ ವಿಫಲವಾದರೆ, ನ್ಯಾಯಾಂಗ ನಿಂದನೆ ಎಸಗಿದ ಅಪಾಯ ಎದುರಿಸಲಿದೆ’ ಎಂದು ಪೀಠ ಎಚ್ಚರಿಸಿತ್ತು. ಆದಾಗ್ಯೂ, ‘ನ್ಯಾಯಾಲಯದ ಎಲ್ಲ ನಿರ್ದೇಶನಗಳನ್ನು ಪಾಲಿಸಲಾಗಿದೆ. ತಮಿಳುನಾಡು ಎತ್ತಿರುವ ಅನೇಕ ಪ್ರಶ್ನೆಗಳು ಅತಿಯಾದುದು’ ಎಂದು ಕರ್ನಾಟಕ ವಾದಿಸಿತ್ತು.

ಕಾನೂನು ಕ್ರಮ ಚುರುಕುಗೊಳಿಸಿ: ಅಧಿಕಾರಿಗಳಿಗೆ ವಿಜಯ್ ಸೂಚನೆ

ಚೆನ್ನೈ (ಪಿಟಿಐ): ಮೇಕೆದಾಟು-ವಿನಲ್ಲಿ ಕಾವೇರಿ ನದಿಗೆ ಅಣೆಕಟ್ಟು ನಿರ್ಮಿಸುವ ಕರ್ನಾಟಕದ ಪ್ರಸ್ತಾವದ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಸೋಮವಾರ ಪರಿಶೀಲನಾ ಸಭೆ ನಡೆಸಿದರು.

ಮೇಕೆದಾಟುವಿನಲ್ಲಿ ಅಣೆಕಟ್ಟು ಕಟ್ಟುವ ಕರ್ನಾಟಕದ ಯೋಜನೆಗೆ ತಮಿಳುನಾಡು ಸರ್ಕಾರ ಆರಂಭದಿಂದಲೂ ವಿರೋಧ ವ್ಯಕ್ತಪಡಿಸುತ್ತಿದೆ.

ಕರ್ನಾಟಕ ಸರ್ಕಾರವು ಯೋಜನೆಗೆ ಭೂಮಿ ಪೂಜೆ ನೆರವೇರಿಸಲಿದೆ ಎಂಬ ಕಾರಣಕ್ಕೆ ಈ ಸಭೆ ನಡೆದಿದೆ ಎಂದು ಪ್ರಕಟಣೆ ತಿಳಿಸಿದೆ.

ತಮಿಳುನಾಡಿನ ಹಕ್ಕು ರಕ್ಷಿಸಲು ಹಾಗೂ ರೈತರ ಹಿತಾಸಕ್ತಿ ಕಾಪಾಡಲು ವಿವರವಾದ ಪರಿಶೀಲನಾ ಸಭೆ ನಡೆಸಲಾಯಿತು ಎಂದು ತಿಳಿಸಿದೆ.

’ಕೋರ್ಟ್ ತೀರ್ಪನ್ನು ಗಮನದಲ್ಲಿ ಇಟ್ಟುಕೊಂಡು ವಿವರವಾದ ಸಮಾಲೋಚನೆಗಳನ್ನು ನಡೆಸಿದ ನಂತರ ಕಾನೂನು ಕ್ರಮಗಳನ್ನು ಚುರುಕುಗೊಳಿಸಲು ಮುಖ್ಯಮಂತ್ರಿ ನಿರ್ದೇಶಿಸಿದರು’ ಎಂದು ಪ್ರಕಟಣೆ ತಿಳಿಸಿದೆ.

ಸಿ. ಜೋಸೆಫ್ ವಿಜಯ್

ಕುಡಿಯುವ ನೀರಿನ ಅವಶ್ಯಕತೆ ಹಾಗೂ ವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಸಮತೋಲನ ಜಲಾಶಯ ನಿರ್ಮಿಸಲು ಕರ್ನಾಟಕ ಯೋಜಿಸಿದೆ.

ಅಡ್ವೊಕೇಟ್ ಜನರಲ್ ವಿಜಯ್ ನಾರಾಯಣ್, ಸಚಿವರಾದ ಎನ್. ಆನಂದ್, ಆಧವ್ ಅರ್ಜುನ, ಆರ್. ನಿರ್ಮಲಕುಮಾರ್ ಸಭೆಯಲ್ಲಿ ಇದ್ದರು.

ಪೇಜಾವರ ಶ್ರೀಗಳ ಸ್ಮೃತಿವನ ಉದ್ಘಾಟನೆ

ಪೇಜಾವರ ಮಠದ ಯೋಜನೆಗೆ ಅನುದಾನ: ಈಶ್ವರ ಖಂಡ್ರೆ

ಪ್ರಜಾವಾಣಿ ವಾರ್ತೆ

ವಿಶ್ವೇಶತೀರ್ಥ ಶ್ರೀಪಾದರ ಸ್ಮೃತಿವನವನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೋಮವಾರ ಉದ್ಘಾಟಿಸಿದರು. ವಿಶ್ವಪ್ರಸನ್ನ ತೀರ್ಥ ಶ್ರೀಗಳು ಉಪಸ್ಥಿತರಿದ್ದರು

ಬ್ರಹ್ಮಾವರ (ಉಡುಪಿ): ‘ಪೇಜಾವರ ಮಠದ ಹಿಂದಿನ ಪೀಠಾಧಿಪತಿಯಾ-ಗಿದ್ದ ವಿಶ್ವೇಶತೀರ್ಥ ಶ್ರೀಪಾದರು ತಮ್ಮ ಪ್ರಗತಿಪರ ಚಿಂತನೆಗಳ ಮೂಲಕ ನಾಡಿನ ಜನರ ಮನಗೆದ್ದಿದ್ದರು’ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಉಡುಪಿ ಬಳಿ ನೀಲಾವರದಲ್ಲಿ ಅರಣ್ಯ ಇಲಾಖೆ ಅಂದಾಜು ₹2 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಶ್ರೀಗಳ ಸ್ಮೃತಿ ವನ ಹಾಗೂ ಕಂಚಿನ ಪುತ್ಥಳಿಯನ್ನು ಉದ್ಘಾಟಿಸಿ ಮಾತನಾಡಿದರು.

ಸ್ಮೃತಿವನದ ಸಮೀಪದಲ್ಲೇ ಎರಡು ಎಕರೆಯಲ್ಲಿ ಹೊಸ ವನ ನಿರ್ಮಿಸುವ ಪೇಜಾವರ ಮಠದ ಯೋಜನೆಗೆ ಸರ್ಕಾರದಿಂದ ₹1 ಕೋಟಿ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

‘ಮಹಾವನ’ ನಿರ್ಮಿಸಲು ಸಿದ್ಧ: ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಶ್ರೀಗಳು ಅವರು, 2031 ಪೇಜಾವರ ಶ್ರೀಗಳ ಜನ್ಮ ಶತಮಾನೋತ್ಸವ ವರ್ಷವಾಗಿದ್ದು, ಅವರ ಸ್ಮರಣಾರ್ಥ ‘ಮಹಾವನ’ ನಿರ್ಮಿಸುವ ಕನಸಿದೆ. 1,000 ಎಕರೆ ಬರಡು ಭೂಮಿ ನೀಡಿದರೂ ಮಹಾವನ ನಿರ್ಮಿಸಲು ಮಠ ಸಿದ್ಧವಿದೆ ಎಂದರು.

ಶ್ರೀಗಳ ಪ್ರಸ್ತಾವಕ್ಕೆ ಸಚಿವರು, ಈ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿ-ಸಲಾಗುವುದು ಎಂದರು. ಶಾಸಕರಾದ ಯಶ್‌ಪಾಲ್ ಸುವರ್ಣ, ಕಿರಣ್ ಕುಮಾರ್ ಕೊಡ್ಗಿ, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ತ್ರಿಪಾಠಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿ. ಕರಿಕಾಲನ್ ಉಪಸ್ಥಿತರಿದ್ದರು.

ಕೋಟ್ಯಂತರ ಗ್ರಾಹಕರ ಜೇಬಿನ ಹೊರೆ ಇಳಿಸಿದ ಗೃಹ ಜ್ಯೋತಿ

ಕರೆಂಟ್ ಬಿಲ್‌ನಿಂದ ಮುಕ್ತಿ, ಬದುಕಿಗೆ ಆರ್ಥಿಕ ಶಕ್ತಿ । ಕತ್ತಲ ಮನೆಗಳಿಗೆ ಬೆಳಕಿನ ಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: ದಿನನಿತ್ಯದ ಬದುಕಿನ ವೆಚ್ಚಗಳು ಗಗನಕ್ಕೇರುತ್ತಿರುವ ಈ ಕಾಲದಲ್ಲಿ, ಸಾಮಾನ್ಯ ಕುಟುಂಬವೊಂದರ ಮಾಸಿಕ ಬಜೆಟ್ ಅನ್ನು ಅತಿ ಹೆಚ್ಚು ಕಾಡುವ ವಿಷಯವೆಂದರೆ ಅದು ಅಗತ್ಯ ಸೇವೆಗಳ ಬಿಲ್ ಪಾವತಿ. ಇಂತಹ ಸವಾಲಿನ ದಿನಗಳಲ್ಲಿ ರಾಜ್ಯದ ಬಡ ಹಾಗೂ ಕೆಳ–ಮಧ್ಯಮ ವರ್ಗದ ಕುಟುಂಬಗಳ ಮನೆ–ಮನಗಳನ್ನು ಬೆಳಗಿದ ಯೋಜನೆ ’ಗೃಹಜ್ಯೋತಿ’.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಾರಿಗೆ ತಂದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಈ ಯೋಜನೆ, ಕಳೆದ ಮೂರು ವರ್ಷಗಳಲ್ಲಿ ಕೇವಲ ಉಚಿತ ವಿದ್ಯುತ್ ನೀಡುವ ಸೌಲಭ್ಯವಾಗಿ ಉಳಿಯದೆ, ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಯಾಗಿ ಹೊರಹೊಮ್ಮಿದೆ. ಸರ್ಕಾರದ ಇಂಧನ ಇಲಾಖೆಯ ಅಂಕಿ–ಅಂಶಗಳ ಪ್ರಕಾರ, ರಾಜ್ಯದ 1.64 ಕೋಟಿಗೂ ಅಧಿಕ ಗೃಹ ವಿದ್ಯುತ್ ಗ್ರಾಹಕರು ಈ ಯೋಜನೆಯಡಿ ನೋಂದಾಯಿಸಿಕೊಂಡು ’ಶೂನ್ಯ ಬಿಲ್’ (Zero Bill) ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ ₹26,115 ಕೋಟಿ ಅನುದಾನವನ್ನು ವೆಚ್ಚ ಮಾಡಿದ್ದು, ವಿದ್ಯುತ್ ಸರಬರಾಜು ಕಂಪನಿಗಳಿಗೆ (ESCOMs) ಸಬ್ಸಿಡಿ ರೂಪದಲ್ಲಿ ಪಾವತಿಸುತ್ತಿದೆ.

2023ರ ಆಗಸ್ಟ್ 5ರಂದು ಕಲಬುರಗಿಯಲ್ಲಿ ಅಧಿಕೃತವಾಗಿ ಚಾಲನೆ ಪಡೆದ ಈ ಯೋಜನೆ, ರಾಜ್ಯದ ಪ್ರತಿಯೊಂದು ಮನೆಗೂ ಗರಿಷ್ಠ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಭರವಸೆಯನ್ನು ಯಶಸ್ವಿಯಾಗಿ ಈಡೇರಿಸಿದೆ. ಈ ಯೋಜನೆಯ ಅತ್ಯಂತ ಪ್ರಗತಿಪರ ನಿರ್ಧಾರವೆಂದರೆ, ಇದು ಕೇವಲ ಸ್ವಂತ ಮನೆ ಉಳ್ಳವರಿಗಷ್ಟೇ ಸೀಮಿತವಾಗದೆ, ಲಕ್ಷಾಂತರ ಬಾಡಿಗೆ ಮನೆಗಳ ನಿವಾಸಿಗಳಿಗೂ ವಿಸ್ತರಣೆಯಾಯಿತು. ಇದರಿಂದಾಗಿ ನಗರ ಹಾಗೂ ಗ್ರಾಮೀಣ ಭಾಗದ ಶ್ರಮಿಕ ವರ್ಗಕ್ಕೆ ಅತಿ ದೊಡ್ಡ ಆರ್ಥಿಕ ನೆಮ್ಮದಿ ಸಿಕ್ಕಂತಾಗಿದೆ.

ದೇಶಕ್ಕೇ ಮಾದರಿಯಾದ ಇಂಧನ ಕ್ರಾಂತಿ

ಕರ್ನಾಟಕದ ಈ ‘ಗೃಹಜ್ಯೋತಿ’ ಮಾದರಿಯು ದೇಶದ ಇಂಧನ ವಲಯದಲ್ಲೇ ಒಂದು ಕ್ರಾಂತಿ–ಕಾರಿ ಹೆಜ್ಜೆಯಾಗಿದೆ. ಕೇವಲ ಉಚಿತ ಸೌಲಭ್ಯ ನೀಡುವುದಷ್ಟೇ ಅಲ್ಲದೆ, ಗ್ರಾಹಕರು ತಮ್ಮ ಸರಾಸರಿ ಬಳಕೆಯ ಮಿತಿಯೊಳಗೆ ವಿದ್ಯುತ್ ಬಳಸುವಂತೆ ಪ್ರೇರೇಪಿಸುವ ಮೂಲಕ ವಿದ್ಯುತ್ ಉಳಿತಾಯದ (Power Conservation) ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ದೇಶದ ಹಲವು ರಾಜ್ಯಗಳು ಇಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತಮ್ಮಲ್ಲೂ ಜಾರಿಗೆ ತರಲು ಆಸಕ್ತಿ ತೋರುತ್ತಿರುವುದು ಇದರ ಸಾಧನೆಯಾಗಿದೆ.

ಶೂನ್ಯ ಬಿಲ್‌ನಿಂದ ಗ್ರಾಮೀಣ ಆರ್ಥಿಕತೆ ಚೇತರಿಕೆ

ಪ್ರತಿ ತಿಂಗಳು ವಿದ್ಯುತ್ ಬಿಲ್ ರೂಪದಲ್ಲಿ ಉಳಿತಾಯವಾಗುತ್ತಿರುವ ₹800 ರಿಂದ ₹1,500 ವರೆಗಿನ ಹಣವು ಬಡ ಮತ್ತು ಮಧ್ಯಮ ವರ್ಗದವರ ಜೇಬಿನಲ್ಲೇ ಉಳಿಯುತ್ತಿದೆ. ಈ ಹಣವನ್ನು ಪೋಷಕರು ತಮ್ಮ ಮಕ್ಕಳ ಶಾಲಾ ಸೌಲಭ್ಯಗಳಿಗೆ, ಉತ್ತಮ ಪೌಷ್ಟಿಕ ಆಹಾರ ಧಾನ್ಯಗಳ ಖರೀದಿಗೆ ಮತ್ತು ಮನೆಯ ಹಿರಿಯರ ಔಷಧಿ ವೆಚ್ಚಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಸಣ್ಣಪುಟ್ಟ ಉದ್ದಿಮೆಗಳನ್ನು ಕೂಡ ಮನೆಯಿಂದಲೇ ಆರಂಭಿಸಿದ್ದಾರೆ. ಆ ಮೂಲಕ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿದ್ದು, ಗ್ರಾಮೀಣ ಆರ್ಥಿಕತೆಯೂ ಚೇತರಿಸಿಕೊಳ್ಳುತ್ತಿದೆ.

BESCOM
68,27,630 ಫಲಾನುಭವಿಗಳು
₹12,168 ಕೋಟಿ ಅನುದಾನ

HESCOM
34,50,833 ಫಲಾನುಭವಿಗಳು
₹4,523 ಕೋಟಿ ಅನುದಾನ

GESCOM
23,96,139 ಫಲಾನುಭವಿಗಳು
₹3,367 ಕೋಟಿ ಅನುದಾನ

C.E.S.C, MYSORE
23,50,753 ಫಲಾನುಭವಿಗಳು
₹3,032 ಕೋಟಿ ಅನುದಾನ

MESCOM
16,37,123 ಫಲಾನುಭವಿಗಳು
₹2,889 ಕೋಟಿ ಅನುದಾನ

ದುಡಿದು ತಿನ್ನುವ ನಮ್ಮಂಥವರಿಗೆ ಕರೆಂಟ್ ಬಿಲ್ ಕಟ್ಟುವುದೇ ದೊಡ್ಡ ಕಗ್ಗಂಟಾಗಿತ್ತು. ಎರಡು ದಿನದ ಕಷ್ಟದ ದುಡಿಮೆಯನ್ನು ಅದಕ್ಕೇ ಮುಡಿಪಾಗಿಡಬೇಕಿತ್ತು. ಈಗ ಸಿದ್ದರಾಮಯ್ಯನವರ ಕಡೆಯಿಂದ ಕರೆಂಟ್ ಸಂಪೂರ್ಣ ಉಚಿತವಾಗಿದೆ. ಇದರಿಂದ ಉಳಿಯುವ ಹಣ ನಮ್ಮ ಹೊಟ್ಟೆ ತುಂಬಿಸುತ್ತಿದೆ. ಅಷ್ಟೇ ಅಲ್ಲ, ನಮ್ಮ ಮಕ್ಕಳು ಯಾವುದೇ ಭಯವಿಲ್ಲದೆ ರಾತ್ರಿ ಹೊತ್ತು ನೆಮ್ಮದಿಯಿಂದ ಓದಿಕೊಳ್ಳಲು ಈ ಯೋಜನೆ ಬೆಳಕಾಗಿದೆ.
▶▶ ಮಹದೇವಪ್ಪ ವಾಲ್ಮೀಕಿ, ಹಾವೇರಿ

ಕೂಲಿ ಮಾಡಿ ದಿನದ ತುತ್ತು ಹುಡುಕುವ ಜನ ನಾವು. ತಿಂಗಳಿಗೆ ಸಾವಿರ ರೂಪಾಯಿ ಕರೆಂಟ್ ಬಿಲ್ ಬರುತ್ತಿತ್ತು. ಬಿಲ್ ಕಟ್ಟಲು ಎರಡು ದಿನದ ಇಡೀ ಕೂಲಿಯನ್ನು ಎತ್ತಿಡಬೇಕಿತ್ತು. ಆದರೆ ಗೃಹಜ್ಯೋತಿಯಿಂದಾಗಿ ‘ಜೀರೋ ಬಿಲ್’ ಬರುತ್ತಿದೆ. ಕರೆಂಟ್ ಫ್ರೀ ಆಗಿದ್ದರಿಂದ ಬಡವರ ಬದುಕಿಗೆ ಬಹಳ ಅನುಕೂಲವಾಗಿದೆ.
▶▶ ಲಕ್ಷ್ಮಣಕುಮಾರ್, ರಾಯಚೂರು

ಬಂಡವಾಳದ ಕೊರತೆಯಿಂದಾಗಿ ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ನೀಡಲು ಹೊಸ ಯಂತ್ರ ಖರೀದಿಸಲಾಗದೆ ಹಾಗೂ ವಿದ್ಯುತ್ ವೆಚ್ಚ ಭರಿಸಲು ಚಿಂತಿಸುತ್ತಿದ್ದೆ. ಇಂತಹ ಸಮಯದಲ್ಲಿ ಸರ್ಕಾರದ ‘ಗೃಹಜ್ಯೋತಿ’ ಯೋಜನೆಯ ಉಚಿತ ಕರೆಂಟ್ ನನಗೆ ದೊಡ್ಡ ಬಲ ತುಂಬಿತು. ವಿದ್ಯುತ್ ಬಿಲ್‌ನ ಚಿಂತೆ ಇಲ್ಲದಾದಾಗ, ಪ್ರತಿ ತಿಂಗಳು ಬರುತ್ತಿದ್ದ ‘ಗೃಹಲಕ್ಷ್ಮಿ’ ಹಣವನ್ನು ಅತ್ಯಂತ ಜೋಪಾನವಾಗಿ ಕೂಡಿಟ್ಟು ಹೊಸ ಹೊಲಿಗೆ ಯಂತ್ರಗಳನ್ನು ಖರೀದಿಸಿ ಸ್ವಂತ ‘ಟೈಲರಿಂಗ್ ಕ್ಲಾಸ್’ ಆರಂಭಿಸಿದೆ!
▶▶ ಅಮೀನಾ ಬೇಗಂ, ಶಹಾಪುರ



ಬಡವರ ಮನೆ ಬೆಳಗುವುದೇ ನಿಜವಾದ ಸುಶಾಸನ
ಪ್ರತಿ ತಿಂಗಳು ಕೋಟ್ಯಂತರ ಮನೆಗಳಿಗೆ ಗೃಹಜ್ಯೋತಿಯಡಿ ಶೂನ್ಯ ಬಿಲ್ ತಲುಪುತ್ತಿರುವುದನ್ನು ನೋಡಿದಾಗ ಆಗುವ ತೃಪ್ತಿ ಅಪಾರ. ಜನರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿ, ಅವರ ಬದುಕಿನ ಗುಣಮಟ್ಟವನ್ನು ಹೆಚ್ಚಿಸುವುದೇ ನಮ್ಮ ಪ್ರಗತಿಪರ ಕರ್ನಾಟಕದ ಮೂಲ ಆಶಯ.
▶▶ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಇಂಧನ ವಲಯದಲ್ಲಿ ಕರ್ನಾಟಕದ ಹೊಸ ಇತಿಹಾಸ
ಗೃಹಜ್ಯೋತಿ ಯೋಜನೆಯು ಜನಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಹೊಸ ಶಕ್ತಿ ತುಂಬಿದೆ. ಗೃಹಬಳಕೆಯ ವಿದ್ಯುತ್ ಬಿಲ್‌ನಿಂದ ಮುಕ್ತಿ ನೀಡುವುದರ ಜೊತೆಗೆ, ಜನರಲ್ಲಿ ಜವಾಬ್ದಾರಿಯುತ ವಿದ್ಯುತ್ ಬಳಕೆಯ ಶಿಸ್ತನ್ನು ತಂದಿರುವುದು ಈ ಯೋಜನೆಯ ದೊಡ್ಡ ಯಶಸ್ಸು.
▶▶ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು


ಪಾರದರ್ಶಕ ಮತ್ತು ನಿರಂತರ ಇಂಧನ ಸೇವೆ
ಅತ್ಯಂತ ಸಂಕೀರ್ಣವಾದ ವಿದ್ಯುತ್ ವಿತರಣಾ ವ್ಯವಸ್ಥೆಯ ನಡುವೆಯೂ, ನಮ್ಮ ಇಲಾಖೆಯು 1.64 ಕೋಟಿಗೂ ಅಧಿಕ ಗ್ರಾಹಕರಿಗೆ ಯಾವುದೇ ಗೊಂದಲವಿಲ್ಲದೆ ಗೃಹಜ್ಯೋತಿಯ ಸೌಲಭ್ಯವನ್ನು ಯಶಸ್ವಿಯಾಗಿ ತಲುಪಿಸಿದೆ.
▶▶ ಕೆ.ಜೆ. ಜಾರ್ಜ್, ಇಂಧನ ಸಚಿವರು

ಕರ್ನಾಟಕ ವಾರ್ತೆ

‘ಪಾಠ ಕಲಿಯದ ಎನ್‌ಟಿಎ’

ಒಂದನೇ ಪುಟದಿಂದ...

ಕೇಂದ್ರ ಸರ್ಕಾರವು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಮುಖ್ಯಸ್ಥ ಕೆ. ರಾಧಾಕೃಷ್ಣನ್ ನೇತೃತ್ವದಲ್ಲಿ ರಚಿಸಿದ್ದ ಸಮಿತಿಗೆ, ಎನ್‌ಟಿಎ ಕಾರ್ಯಚಟುವಟಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸುವಂತೆಯೂ ನಿರ್ದೇಶಿಸಿದೆ.

ಮರು ಪರೀಕ್ಷೆಯ ಮೇಲ್ವಿಚಾರಣೆ ಮಾಡಲು ನೂತನ ಸಂಸ್ಥೆಯನ್ನು ರಚಿಸುವವರೆಗೂ ಉನ್ನತ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ನೇಮಿಸುವ ನಿರ್ದೇಶನವನ್ನು ನೀಡಬೇಕು ಎಂದು ಎಫ್‌ಎಐಎಂಎ ತನ್ನ ಅರ್ಜಿಯಲ್ಲಿ ಕೋರಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಬೇಕು. ಸೈಬರ್ ಭದ್ರತಾ ತಜ್ಞರು, ವಿಧಿವಿಜ್ಞಾನ ವಿಜ್ಞಾನಿಗಳು ಈ ಸಮಿತಿಯಲ್ಲಿ ಇರಬೇಕು. ಸೋರಿಕೆ ಸಂಭವಿಸದಂತೆ ನೋಡಿಕೊಳ್ಳಬೇಕು ಎಂದಿದೆ.

2024ರಲ್ಲಿ ನೀಟ್– ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆಯು ಸೋರಿಕೆಯಾದ ನಂತರ ಪರೀಕ್ಷೆಯನ್ನು ರದ್ದುಗೊಳಿಸಲು ನಿರಾಕರಿಸಿದ್ದ ಸುಪ್ರೀಂ ಕೋರ್ಟ್, ಪ್ರಶ್ನೆಪತ್ರಿಕೆ ಸೋರಿಕೆ ಆಗದಂತೆ ನಿಭಾಯಿಸುವ ಗುರಿ ಹೊಂದಿದ್ದ ವಿವಿಧ ನಿರ್ದೇಶನ ನೀಡಿತ್ತು. ರಾಧಾಕೃಷ್ಣನ್ ಸಮಿತಿಯ ಶಿಫಾರಸುಗಳಾದ ಪರೀಕ್ಷಾ ಭದ್ರತೆ, ಪ್ರಶ್ನೆಪತ್ರಿಕೆಗಳ ಸಾಗಣೆ. ಸಿ.ಸಿ.ಟಿ.ವಿ. ಕ್ಯಾಮೆರಾ ಕಣ್ಗಾವಲು, ಅಭ್ಯರ್ಥಿಗಳ ಪರಿಶೀಲನೆ, ಗೂಢಲಿಪೀಕರಣ ಶಿಷ್ಟಾಚಾರ, ತಾಂತ್ರಿಕ ಸುರಕ್ಷತೆ, ನೈಜ ಸಮಯದ ಮೇಲ್ವಿಚಾರಣೆ, ಕುಂದು ಕೊರತೆ ಪರಿಹಾರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಆದೇಶವನ್ನು ಪೀಠವು ವಿಸ್ತರಿಸಿದೆ.

ತಮಿಳುನಾಡು: ರೈತರ ಬೆಳೆ ಸಾಲ ಮನ್ನಾ

ಚೆನ್ನೈ (ಪಿಟಿಐ): ತಮಿಳುನಾಡಿನ ಸಹಕಾರ ಬ್ಯಾಂಕ್‌ಗಳಲ್ಲಿ ಬೆಳೆ ಸಾಲವಾಗಿ ಅತಿ ಸಣ್ಣ ರೈತರು ಪಡೆದಿರುವ ₹50,000 ವರೆಗಿನ ಸಾಲವನ್ನು ಮನ್ನಾ ಮಾಡುವುದಾಗಿ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಸೋಮವಾರ ಘೋಷಿಸಿದ್ದಾರೆ.

ಅಲ್ಲದೆ ದೊಡ್ಡ ಹಿಡುವಳಿದಾರರ ಸಾಲವನ್ನು ₹5,000 ವರೆಗೂ ಮನ್ನಾ ಮಾಡುವುದಾಗಿಯೂ ಅವರು ಪ್ರಕಟಿಸಿದ್ದಾರೆ.

ಸರ್ಕಾರದ ಈ ಕ್ರಮದಿಂದ 14.22 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹2,044 ಕೋಟಿ ಹೊರೆಯಾಗಲಿದೆ ಎಂದು ಅಂದಾಜಿಸಲಾಗಿದೆ.

ವಿಧಾನಸಭಾ ಚುನಾವಣೆಗೂ ಮುನ್ನ ಟಿವಿಕೆ ಮುಖ್ಯಸ್ಥ ವಿಜಯ್ ಅವರು ನೀಡಿದ್ದ ಹಲವು ಚುನಾವಣಾ ಭರವಸೆಗಳಲ್ಲಿ ರೈತರ ಬೆಳೆ ಸಾಲ ಮನ್ನಾ ಕೂಡ ಸೇರಿತ್ತು.

‘ಸರ್ಕಾರದ ಈಗಿನ ಆರ್ಥಿಕ ಸ್ಥಿತಿ ಮತ್ತು ಸಂಪ-ನ್ಮೂಲಗಳನ್ನು ಪರಿಗಣಿಸಿ 2025ರ ಮೇ 1ರಿಂದ 2026ರ ಫೆಬ್ರುವರಿ 28ರವರೆಗೂ ಸಹಕಾರ ಬ್ಯಾಂಕ್‌ಗಳಿಂದ ರೈತರು ಪಡೆದಿರುವ ಬೆಳೆ ಸಾಲಗಳನ್ನು ಮನ್ನಾ ಮಾಡಲು ಮುಖ್ಯಮಂತ್ರಿ ಆದೇಶಿಸಿದ್ದಾರೆ’ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ಮುಂದಿನ ಕೃಷಿ ಋತುವಿಗೆ ಸಾಲ ಪಡೆಯಲು ಬಯಸುವ ರೈತರಿಗೆ ಈ ಬೆಳೆ ಸಾಲ ಮನ್ನಾ ಉಪಯುಕ್ತವಾಗಲಿದೆ ಎಂದು ಪ್ರಕಟಣೆ ಹೇಳಿದೆ.

ಕೊಡೈಕೆನಾಲ್: ಉಚಿತ ಪ್ರವೇಶ

ಕೊಡೈಕೆನಾಲ್ (ತಮಿಳುನಾಡು) (ಪಿಟಿಐ): ಕೊಡೈಕೆನಾಲ್ ಅರಣ್ಯ ಪ್ರದೇಶ ವ್ಯಾಪ್ತಿಯ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಮೇ 31ರ ವರೆಗೆ ಉಚಿತ ಪ್ರವೇಶಕ್ಕೆ ಅವಕಾಶವಿದೆ. ಪಿಲ್ಲರ್ ರಾಕ್, ಗುನಾ ಕೇವ್ಸ್, ದಿ ಪೈನ್ ಫಾರೆಸ್ಟ್ ಹಾಗೂ ಮೊಯಿರ್ ಪಾಯಿಂಟ್‌ಗಳ ಸ್ಥಳ ವೀಕ್ಷಣೆ ಮಾಡಬಹುದು ಎಂದು ದಿಂಡಿಗಲ್ ಜಿಲ್ಲಾಧಿಕಾರಿ ಎಸ್.ಸರವಣನ್ ಸೋಮವಾರ ಮಾಹಿತಿ ನೀಡಿದ್ದಾರೆ.

ದರ್ಶನ್ ಪ್ರಕರಣ: ಕೋರ್ಟ್ ಬದಲು

ಒಂದನೇ ಪುಟದಿಂದ...

ಜೂನ್ 1ರಿಂದ 59ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯಲಿದೆ.

ಒಂದು ವರ್ಷದ ಒಳಗೆ ಪ್ರಕರಣದ ವಿಚಾರಣೆ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದ ಬೆನ್ನಲ್ಲೇ ಪ್ರಮುಖ 60 ಸಾಕ್ಷಿಗಳ ವಿಚಾರಣೆಗೆ ಸಿದ್ಧತೆ ನಡೆದಿದೆ. ನ್ಯಾಯಾಧೀಶರಾದ ಸುಜಾತಾ ಮಡಿವಾಳಪ್ಪ ಸಾಂಬ್ರಾಣಿ ಅವರು ಪ್ರಕರಣದ ವಿಚಾರಣೆ ನಡೆಸಲಿದ್ದಾರೆ. ಸಿಟಿ ಸಿವಿಲ್ ಕೋರ್ಟ್‌ನ ಡೆಪ್ಯುಟಿ ರಿಜಿಸ್ಟ್ರಾರ್ ಈ ಕುರಿತು ಆದೇಶ ಹೊರಡಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಈ ಆದೇಶದ ಪ್ರತಿಯನ್ನು ದರ್ಶನ್ ಪರ ವಕೀಲರು ಸೆಷನ್ಸ್ ಕೋರ್ಟ್‌ಗೆ ಸಲ್ಲಿಸಿದ್ದಾರೆ.

ಮಾನ್ ಹೇಳಿಕೆ: ಪರಿಶೀಲನೆಗೆ ‘ಸುಪ್ರೀಂ’ ನಕಾರ

ನವದೆಹಲಿ (ಪಿಟಿಐ): ‘ಬೀದಿನಾಯಿಗಳನ್ನು ಕೊಲ್ಲಲು ಸುಪ್ರೀಂ ಕೋರ್ಟ್ ನಮಗೆ ಮುಕ್ತ ಅವಕಾಶ ನೀಡಿದೆ’ ಎಂಬ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರ ಹೇಳಿಕೆಯನ್ನು ಸದ್ಯಕ್ಕೆ ನಾವು ಪರಿಶೀಲನೆಗೆ ಒಳಪಡಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಮಾನ್ ಹೇಳಿಕೆಯನ್ನು ಪರಿಶೀಲಿಸುವಂತೆ ವಕೀಲರೊಬ್ಬರು ಮಾಡಿದ ಮನವಿಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ತಿರಸ್ಕರಿಸಿತು. ‘ನಿಮ್ಮ ಮನವಿಯನ್ನು ನಾವು ಪುರಸ್ಕರಿಸುವುದಿಲ್ಲ. ನೀವು ಬೇಕಾದರೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮೊರೆ ಹೋಗಬಹುದು’ ಎಂದು ಹೇಳಿತು.

‘ಮುಖ್ಯಮಂತ್ರಿಯೊಬ್ಬರು ಹೇಳಿಕೆ ನೀಡಿದ್ದಾರೆ ಎಂಬ ಕಾರಣಕ್ಕೆ ನಾವು ನಮ್ಮ ತೀರ್ಪನ್ನು ಬದಲಿಸಬೇಕೆ?’ ಎಂದು ವಕೀಲರನ್ನು ಪೀಠ ಕೇಳಿತು.

‘ಆಕ್ರಮಣಕಾರಿ ನಾಯಿಗಳನ್ನು ಕೊಲ್ಲಬಹುದು’ ಎಂದು ಮೇ 19ರ ತನ್ನ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ‘ಸುಪ್ರೀಂ ಕೋರ್ಟ್‌ನ ತೀರ್ಪನ್ನು ಅನುಸರಿಸಿ, ಅಪಾಯಕಾರಿ ಬೀದಿ ನಾಯಿಗಳನ್ನು ಕೊಲ್ಲಲು ಪಂಜಾಬ್ ಸರ್ಕಾರ ಬೃಹತ್ ಅಭಿಯಾನ ಪ್ರಾರಂಭಿಸಲಿದೆ. ಸುಪ್ರೀಂ ಕೋರ್ಟ್‌ಗೆ ಧನ್ಯವಾದಗಳು’ ಎಂದು ಮಾನ್ ಕಳೆದ ವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

ಎಐಎಡಿಎಂಕೆ: ಮೂವರು ಶಾಸಕರ ರಾಜೀನಾಮೆ– ಟಿವಿಕೆ ಸೇರ್ಪಡೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ಎಐಎಡಿಎಂಕೆ ನಾಯಕರಾದ ಸಿ.ವಿ. ಷಣ್ಮುಗಂ ಮತ್ತು ಎಸ್.ಪಿ.ವೇಲುಮಣಿ ನೇತೃತ್ವದ ಬಂಡಾಯ ಶಾಸಕರ ಗುಂಪಿನ ಪೈಕಿ ಮೂವರು ಶಾಸಕರು ಸೋಮವಾರ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ, ಆಡಳಿತಾರೂಢ ಟಿವಿಕೆ ಸೇರ್ಪಡೆಗೊಂಡಿದ್ದಾರೆ.

ಕರ್ನಾಟಕದಂಥ ರಾಜ್ಯಗಳಲ್ಲಿ ಕೇಳಿಬರುತ್ತಿದ್ದ ‘ಆಪರೇಷನ್ ಕಮಲ’ವನ್ನು ನೆನಪಿಸುವಂಥ ಘಟನೆ ಇದಾಗಿದೆ. ಇದು ಶಾಸಕರ ಖರೀದಿ ಎಂದು ವಿಪಕ್ಷಗಳಾಗಿ ರುವ ಡಿಎಂಕೆ, ಎಐಎಡಿಎಂಕೆ ಟೀಕಿಸಿವೆ.

ಮಧುರಾಂತಕಮ್ ಕುಮಾರವೇಲು, ಜಯಕುಮಾರ್ ಹಾಗೂ ಸತ್ಯಭಾಮ ಅವರು ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ. ಈ ಮೂಲಕ ಪಕ್ಷಾಂತರ ತಡೆ ಕಾನೂನಿನ ಅನ್ವಯ ಅನರ್ಹರಾವುದರಿಂದ ಪಾರಾಗಿದ್ದಾರೆ. ಮುಂಬರುವ ಉಪ ಚುನಾವಣೆಯಲ್ಲಿ ಟಿವಿಕೆಯಿಂದ ಸ್ಪರ್ಧಿಸಲು ಇವರಿಗೆ ಅವಕಾಶ ನೀಡುವ ಸಾಧ್ಯತೆಗಳಿವೆ.

ಈ ಬೆಳವಣಿಗೆ ಎಐಎಡಿಎಂಕೆ ಪಕ್ಷಕ್ಕೆ ಮತ್ತೊಂದು ಹೊಡೆತವಾಗಿದ್ದು, ವಿಜಯ್ ನೇತೃತ್ವದ ಟಿವಿಕೆಯು ಮಿತ್ರ ಪಕ್ಷಗಳ ಸಹಾಯವಿಲ್ಲದೇ ಪೂರ್ಣ ಬಹುಮತದೊಂದಿಗೆ ಸರ್ಕಾರ ನಡೆಸಲು ಬೆಂಬಲ ನೀಡುವ ನಿಟ್ಟಿನಲ್ಲಿ ಇನ್ನೂ ಹಲವು ಬಂಡಾಯ ಶಾಸಕರೂ ಇದೇ ಮಾರ್ಗ ಅನುಸರಿಸುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಈಗಾಗಲೇ ಟಿವಿಕೆ ಪಕ್ಷದ ತಂಡವು ಬಂಡಾಯ ಶಾಸಕರ ಪೈಕಿ ಕನಿಷ್ಠ ಆರು ಮಂದಿಯ ಸಂಪರ್ಕದಲ್ಲಿದ್ದು, ಶೀಘ್ರದಲ್ಲೇ ಅವರೂ ರಾಜೀನಾಮೆ ಸಲ್ಲಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಮಾಜಿ ಮುಖ್ಯಮಂತ್ರಿ, ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಮಾತನಾಡಿ, ರಾಜ್ಯದಲ್ಲಿ‘ ಕುದುರೆ ವ್ಯಾಪಾರ’ವು ಕುದುರೆಯಷ್ಟೇ ವೇಗವಾಗಿ ನಡೆದಿದೆ ಎಂದಿದ್ದಾರೆ. ಜತೆಗೆ ಟಿವಿಕೆಯನ್ನು ಬೆಂಬಲಿಸುತ್ತಿರುವುದಾಗಿ ಕಾಂಗ್ರೆಸ್ ವಿರುದ್ಧವೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪೂರ್ವ ನಿಯೋಜಿತ ಕುತಂತ್ರ: ಕಿಡಿ

ಬಂಡಾಯ ಶಾಸಕರ ನಡೆಗೆ ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ.ಪಳನಿಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದು, ಶಾಸಕರ ಈ ರಾಜೀನಾಮೆಯೂ ಪೂರ್ವ-ನಿಯೋಜಿತ ಕುತಂತ್ರ ಎಂದಿದ್ದಾರೆ. ಟಿವಿಕೆ ವಿರುದ್ಧ ಕಿಡಿಕಾರಿರುವ ಅವರು, ‘ತಮಿಳುನಾಡು ರಾಜಕೀಯದಲ್ಲೂ ಇಂಥ ‘ಶಾಸಕರ ಖರೀದಿ’ಯನ್ನು ಶುರು ಮಾಡುವ ಮೂಲಕ ಟಿವಿಕೆಯು ರಾಜ್ಯದ ರಾಜಕೀಯ ಪದ್ಧತಿಯನ್ನು ಕೀಳು ಮಟ್ಟಕ್ಕೆ ತಂದಿದೆ ಎಂದೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಅಂಗವಿಕಲರ ಸಾಧನಗಳ ಮೇಲಿನ ಜಿಎಸ್‌ಟಿ ಕೈಬಿಡಿ’

ಬೆಂಗಳೂರು: ಅಂಗವಿಕಲರು ಸ್ವತಂತ್ರವಾಗಿ ಜೀವನ ನಡೆಸಲು ಸಹಾಯಕವಾಗುವ ಎಲ್ಲ ಸಾಧನಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಬೇಕು, ಇಲ್ಲವೇ ಅದನ್ನು ಸಂಪೂರ್ಣ ಮನ್ನಾ ಮಾಡಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ.

ಸಂತೋಷ್ ಲಾಡ್

ಅಂಗವಿಕಲರು ಬಳಸುವ ವಿವಿಧ ಸಾಧನಗಳು, ಸಲಕರಣೆಗಳ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತಿದೆ. ಇವು ಐಷಾರಾಮಿ ವಸ್ತುಗಳಲ್ಲ, ಅವಶ್ಯಕವಾಗಿ ಬೇಕಾದ ಸಲಕರಣೆಗಳು. ಹೀಗಾಗಿ ಅವುಗಳನ್ನು ಶೂನ್ಯ ತೆರಿಗೆ ಅಥವಾ ವಿನಾಯಿತಿ ಪಡೆದ ವರ್ಗದ ಅಡಿಯಲ್ಲಿ ಸೇರಿಸಬೇಕು. ಅಲ್ಲದೆ ಕೈಗೆಟುಕುವ ರೀತಿ ಇವು ತಯಾರಾಗಬೇಕು. ಇದರಿಂದ ಲಕ್ಷಾಂತರ ಅಂಗವಿಕಲರಿಗೆ ಪ್ರಯೋಜನವಾಗಲಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಅಂಗವಿಕಲರ ಶಿಕ್ಷಣ, ಉದ್ಯೋಗ, ಆರೋಗ್ಯ ರಕ್ಷಣೆ ಮತ್ತು ದೈನಂದಿನ ಸಾಮಾಜಿಕ ಜೀವನದಲ್ಲಿ ಭಾಗವಹಿಸಲು ವಿನಾಯಿತಿಯು ಹೆಚ್ಚಿನ ಅನುವು ಮಾಡಿಕೊಡುತ್ತದೆ. ಅವರ ಸಲಕರಣೆಗಳ ಮೇಲೆ ಜಿಎಸ್‌ಟಿ ವಿಧಿಸಿದರೆ ಅಂಗವಿಕಲರು ಮತ್ತು ಅವರ ಕುಟುಂಬಗಳ ಮೇಲೆ ಅಧಿಕ ಆರ್ಥಿಕ ಹೊರೆ ಬೀಳುತ್ತದೆ ಎಂದು ವಿವರಿಸಿದ್ದಾರೆ.

‘ಕೇಂದ್ರದಿಂದ ₹43 ಲಕ್ಷ ಕೋಟಿ ಲೂಟಿ’

ಕಾಂಗ್ರೆಸ್ ಆರೋಪ: ರೈತರು, ಬಡವರು, ಕಾರ್ಮಿಕರು, ಮಹಿಳೆಯರ ಜೇಬಿಗೆ ಕತ್ತರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 12 ವರ್ಷಗಳಲ್ಲಿ ಪ್ರತಿ ದಿನ ಸುಮಾರು ₹1,000 ಕೋಟಿಯಂತೆ ಪೆಟ್ರೋಲ್, ಡೀಸೆಲ್ ತೆರಿಗೆ ಮೂಲಕ ₹43 ಲಕ್ಷ ಕೋಟಿ ಹೆಚ್ಚುವರಿ ಸಂಗ್ರಹಿಸಿದ್ದು, ಜನಸಾಮಾನ್ಯರ ಹಣವನ್ನು ಬಿಜೆಪಿ ಲೂಟಿ ಮಾಡಿದೆ’ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಕುರಿತು ಸೋಮವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಮಾತನಾಡಿದರು.

‘ಐದು ರಾಜ್ಯಗಳ ಚುನಾವಣೆ ಮುಗಿಯುತ್ತಿದ್ದಂತೆ ಕೇಂದ್ರ ಸರ್ಕಾರ ಇಂಧನ ಲೂಟಿ ಆರಂಭಿಸಿದೆ. ಪೆಟ್ರೋಲ್, ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ ₹7.52 ಹೆಚ್ಚಿಸಲಾಗಿದೆ. ವೇತನ ವರ್ಗ, ರೈತರು, ಬಡವರು, ಗೃಹಿಣಿಯರು, ಸಣ್ಣ ಉದ್ಯಮಿಗಳು ಹಾಗೂ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕಿದೆ. ಇದು ಬಿಜೆಪಿ ಹಾಗೂ ಕೇಂದ್ರ ಸರ್ಕಾರ ಮಾಡುತ್ತಿರುವ ವಂಚನೆ ಮತ್ತು ಸುಲಿಗೆ’ ಎಂದು ದೂರಿದರು.

‘ಅತಿರೇಕದ ಲೂಟಿ ಮತ್ತು ಪಿಕ್‌ಪಾಕೆಟ್ ವಿರುದ್ಧ ಸಾಮಾನ್ಯ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕೇಂದ್ರ ಸರ್ಕಾರ ಅಬಕಾರಿ ಸುಂಕವನ್ನು 21 ಬಾರಿ ಪರಿಷ್ಕರಿಸಿದೆ. 12 ಬಾರಿ ಬೆಲೆ ಹೆಚ್ಚಳ ಮಾಡಿದೆ. ಸಾಮಾನ್ಯ ಜನರ ಹಣವನ್ನು ದೋಚುವ ವ್ಯವಸ್ಥಿತ ಮಾದರಿ ಹುಟ್ಟುಹಾಕಿದೆ
ರಣದೀಪ್ ಸಿಂಗ್ ಸುರ್ಜೇವಾಲಾ
ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ

ಆದರೂ, ಬಿಜೆಪಿ ನಾಯಕರು ಜನರ ಸಂಕಷ್ಟವನ್ನು ಹಾಸ್ಯ ಮಾಡುತ್ತಿದ್ದಾರೆ. ಕನ್ನಡಿಗರೂ ಸೇರಿದಂತೆ ದೇಶದ ಜನರು ಎದುರಿಸುತ್ತಿರುವ ಜೀವನೋಪಾಯದ ಬಿಕ್ಕಟ್ಟಿಗೆ ಸ್ಪಂದಿಸದೆ ಮೌನವಾಗಿದ್ದಾರೆ. ಗೃಹಬಳಕೆ, ವಾಣಿಜ್ಯ ಬಳಕೆಯ ಎಲ್‌ಪಿಜಿ, ಸಣ್ಣ ಎಫ್‌ಟಿಎಲ್ ಸಿಲಿಂಡರ್ ಹಾಗೂ ಸಿಎನ್‌ಜಿ ಬೆಲೆಗಳಲ್ಲೂ ಲೂಟಿ ಮಾಡಿದೆ. ಕೇಂದ್ರದ ನಿರ್ಧಾರವು ದೈನಂದಿನ ಬಳಕೆಯ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳ ಮೇಲೂ ಪರಿಣಾಮ ಬೀರಿದೆ’ ಎಂದು ಟೀಕಿಸಿದರು.

‘ಯುಪಿಎ ಅವಧಿಯಲ್ಲಿ (ಮೇ, 2014) ಪ್ರತಿ ಲೀಟರ್ ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ ₹71.41, ಡೀಸೆಲ್ ಬೆಲೆ ₹56.71 ಇತ್ತು. ಈಗ ಬೆಂಗಳೂರಿನಲ್ಲಿ ಪ್ರತಿ ಲೀಟರ್‌ಗೆ ಪೆಟ್ರೋಲ್ ₹110.89 ಹಾಗೂ ಡೀಸೆಲ್ ₹98.80 ಇದೆ. 2014ರ ಕಚ್ಚಾ ತೈಲ ಪ್ರತಿ ಬ್ಯಾರೆಲ್‌ಗೆ 108 ಡಾಲರ್ ಇತ್ತು. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಪ್ರಾರಂಭವಾಗುವ ಮುಂಚೆ ಪ್ರತಿ ಬ್ಯಾರೆಲ್‌ಗೆ 70 ಡಾಲರ್‌ಗೆ ಹೋಲಿಸಿದರೆ, ಪೆಟ್ರೋಲ್ ₹61.60 ಮತ್ತು ಡೀಸೆಲ್ ₹56.99 ಇರಬೇಕಾಗಿತ್ತು. ಉಳಿದ ಹೆಚ್ಚುವರಿ ಹಣ ಬಿಜೆಪಿಯ ಲೂಟಿ’ ಎಂದು ಆರೋಪಿಸಿದರು.

‘ತುರ್ತು ಸಂದರ್ಭಗಳಲ್ಲಿ ದೇಶಕ್ಕೆ ನೆರವಾಗಲು ಇರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ತುರ್ತು ಮೀಸಲು ನಿಧಿಯನ್ನು ಲೂಟಿ ಮಾಡುವ ಹಂತಕ್ಕೂ ತಲುಪಿದೆ. ಮೇ 23ರಂದು, ಅಂದರೆ 2 ದಿನಗಳ ಹಿಂದೆ, ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯವು ಕುಸಿದಿರುವುದರ ಲಾಭವನ್ನು ಪಡೆದುಕೊಂಡು, ಆರ್‌ಬಿಐನ ಅಮೂಲ್ಯವಾದ ವಿದೇಶಿ ವಿನಿಮಯ ಮೀಸಲನ್ನು ಮಾರಾಟ ಮಾಡುವ ಮೂಲಕ ಮೋದಿ ಸರ್ಕಾರವು ಆರ್‌ಬಿಐನಿಂದ ₹2.87 ಲಕ್ಷ ಕೋಟಿ ಪಡೆದುಕೊಂಡಿದೆ’ ಎಂದು ದೂರಿದರು.

ದರ ಏರಿಸಿ ಕಾಂಗ್ರೆಸ್ ಲೂಟಿ : ಅಶೋಕ

ಕಾಂಗ್ರೆಸ್ ಸರ್ಕಾರ ಪೆಟ್ರೋಲ್ ಮೇಲೆ ವ್ಯಾಟ್ ಹೆಚ್ಚಿಸುವ ಮೂಲಕ ದರ ಏರಿಕೆ ಮಾಡಿ ರಾಜ್ಯದ ಜನರನ್ನು ಲೂಟಿ ಮಾಡುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮೆರಿಕ–ಇರಾನ್ ಯುದ್ಧದಿಂದಾಗಿ ಪೆಟ್ರೋಲ್ ಬಳಕೆ ಕಡಿಮೆ ಮಾಡಲು ಬೇರೆ ಬೇರೆ ದೇಶಗಳು ಅಲ್ಲಿನ ಗ್ರಾಹಕರಿಗೆ ನಿರ್ಬಂಧ ಹಾಕಿದ್ದರೂ, ನಮ್ಮ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅಂತಹ ನಿರ್ಬಂಧಗಳನ್ನು ಹಾಕಿಲ್ಲ ಎಂದರು.

ಕರ್ನಾಟಕದಲ್ಲಿ ಪೆಟ್ರೋಲ್ ದರ ಲೀಟರ್‌ಗೆ ₹110.89 ಇದೆ. ಉಳಿದ ರಾಜ್ಯಗಳಲ್ಲಿ ಕಡಿಮೆ ಇದೆ. ರಾಜ್ಯದಲ್ಲಿ ವ್ಯಾಟ್ ಹೆಚ್ಚು ಮಾಡಿದ್ದರಿಂದ ಹೆಚ್ಚುವರಿ ಆದಾಯ ಕೇಂದ್ರ ಸರ್ಕಾರಕ್ಕೆ ಹೋಗುವುದಿಲ್ಲ. ಆ ಹಣ ರಾಜ್ಯದ ಬೊಕ್ಕಸಕ್ಕೆ ಬರುತ್ತದೆ. ಹೆಚ್ಚುವರಿ ₹6,000 ಕೋಟಿಯನ್ನು ‘ಗ್ಯಾರಂಟಿ’ ಯೋಜನೆಗೆ ಬಳಸುತ್ತಿದ್ದಾರೆ ಎಂದು ದೂರಿದರು.

ಈಗ ಪ್ರತಿ ಲೀಟರ್ ಪೆಟ್ರೋಲ್ ಮಾರಾಟದಿಂದ ₹1.15 ಹೆಚ್ಚುವರಿ ಆದಾಯ ರಾಜ್ಯ ಸರ್ಕಾರಕ್ಕೆ ಸಿಗುತ್ತಿದೆ. ಜನರಿಗೆ ಸಹಾಯ ಮಾಡಬೇಕೆಂಬ ಮನಸ್ಸಿದ್ದರೆ ರಾಜ್ಯ ಸರ್ಕಾರವೇ ತೆರಿಗೆ ಇಳಿಕೆ ಮಾಡಬೇಕು. ಇಲ್ಲವಾದರೆ ಹೆಚ್ಚುವರಿ ಆದಾಯ ಪಡೆಯುತ್ತಿರುವ ಸತ್ಯ ಸಂಗತಿಯನ್ನಾದರೂ ಜನರಿಗೆ ಹೇಳಬೇಕು. ಒಂದು ಕಡೆ ಇವರೇ ದರ ಏರಿಕೆ ಮಾಡಿ, ಅದರ ಲಾಭ ಪಡೆದು, ಈ ಹೋರಾಟ ಮಾಡುವುದಾಗಿ ಹೇಳುವ ಮೂಲಕ ಜನರಿಗೆ ವಂಚನೆ ಮಾಡುತ್ತಿದ್ದಾರೆ. ರಾಜಕೀಯ ಕಾರಣಕ್ಕಾಗಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಜಿಲ್ಲಾ ಕೇಂದ್ರಗಳಲ್ಲಿ 30ಕ್ಕೆ ಪ್ರತಿಭಟನೆ

ತೈಲ ಬೆಲೆ ಏರಿಕೆ ವಿರುದ್ಧ ಮೇ 30ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರುದ್ಧ ನಿಘಂಟಿನಲ್ಲಿರುವ ಎಲ್ಲಾ ಪದ ಪ್ರಯೋಗ ಮಾಡಿ ಟೀಕಿಸಿದರೂ ಮಾನ ಮರ್ಯಾದೆ ಇಲ್ಲದೆ ತೈಲ ಬೆಲೆ ಹೆಚ್ಚಿಸಲಾಗಿದೆ. ಕೇಂದ್ರದ ಸುಲಿಗೆ ನಿಲ್ಲಿಸುವಲ್ಲಿ ಆರ್.ಅಶೋಕ, ಬಿ.ವೈ.ವಿಜಯೇಂದ್ರ ವಿಫಲರಾಗಿದ್ದಾರೆ. ಇಂತಹ ಸಮಯದಲ್ಲೂ ರಾಜ್ಯ ಸರ್ಕಾರವನ್ನೇ ಟೀಕಿಸುತ್ತಿದ್ದಾರೆ. ಕೇಂದ್ರದ ಬೆಲೆ ಏರಿಕೆ ಹಾಗೂ ರಾಜ್ಯ ನಾಯಕರ ವರ್ತನೆ ವಿರುದ್ಧ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೋರಾಟ ಮಾಡುವಂತೆ ಕಾಂಗ್ರೆಸ್ ಕಾರ್ಯಕರ್ತರಿಗೆ ಸೂಚಿಸಲಾಗುವುದು. ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದರು.

ಚಿಟಿಕೆ ಸುದ್ದಿ

ವೆಂಕಟೇಶ್‌ಗೆ ಯೋಜನೆ: ಹೆಚ್ಚುವರಿ ಹೊಣೆ

ಬೆಂಗಳೂರು: ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರಿಗೆ ಯೋಜನೆ ಹಾಗೂ ಸಾಂಖ್ಯಿಕ ಖಾತೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಡಿ.ಸುಧಾಕರ್ ಅವರ ನಿಧನದ ಬಳಿಕ ಯೋಜನೆ ಮತ್ತು ಸಾಂಖ್ಯಿಕ ಖಾತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಇತ್ತು. ಅದನ್ನು ಈಗ ವೆಂಕಟೇಶ್ ಅವರಿಗೆ ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ.

ವಿಭಾ ಸಾಹಿತ್ಯ ಪ್ರಶಸ್ತಿ; ಹಸ್ತಪ್ರತಿ ಆಹ್ವಾನ

ಹುಬ್ಬಳ್ಳಿ: ಕವಯತ್ರಿ ವಿಭಾ ಅವರ ನೆನಪಿನಲ್ಲಿ ನೀಡುವ ‘ವಿಭಾ ಸಾಹಿತ್ಯ ಪ್ರಶಸ್ತಿ-2026’ಗೆ ಸ್ವರಚಿತ ಕವಿತೆಗಳ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ.

ಅನುವಾದಿತ ಕವಿತೆಗಳು, ಚುಟುಕು, ಹನಿಗವನಗಳನ್ನು ಪರಿಗಣಿಸುವು-ದಿಲ್ಲ. ಹಸ್ತಪ್ರತಿ ಕಳಿಸಲು ಕೊನೆಯ ದಿನಾಂಕ ಜೂನ್ 30. ಡಿಟಿಪಿ, ಬರವಣಿಗೆ ಮಾಡಿದ ಹಸ್ತಪ್ರತಿಯನ್ನು ಕಳಿಸಬಹುದು.ಪ್ರಶಸ್ತಿಯು ₹10 ಸಾವಿರ ನಗದು, ಫಲಕ ಒಳಗೊಂಡಿದೆ. ಹಸ್ತಪ್ರತಿ ಕಳುಹಿಸಬೇಕಾದ ವಿಳಾಸ: ಸುನಂದಾ ಮತ್ತು ಪ್ರಕಾಶ ಕಡಮೆ, ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ-2026, ನಂ. 90, 'ನಾಗಸುಧೆ ಜಗಲಿ', 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ- 580031. ಮೊ.ಸಂ: 93806 13683.

ಸುದ್ದಿ 2 ನಿಮಿಷ

ಲಕ್ಕುಂಡಿ: 13 ಸಾಲುಗಳ ಶಾಸನ ಪತ್ತೆ

ಗದಗ: ತಾಲ್ಲೂಕಿನ ಐತಿಹಾಸಿಕ ಲಕ್ಕುಂಡಿ ಗ್ರಾಮದ ಕಟ್ಟಿಹಳ್ಳದಲ್ಲಿ ಸೋಮವಾರ ಚಾಲುಕ್ಯರ ರಾಜ ಎರಡನೇ ಜಗದೇಕಮಲ್ಲನ ಆಳ್ವಿಕೆ ಅವಧಿಯ 13 ಸಾಲುಗಳುಳ್ಳ ಶಾಸನ ಪತ್ತೆಯಾಗಿದೆ.

ಪ್ರಾಚ್ಯ ಅವಶೇಷಗಳ ಅನ್ವೇಷಣೆ ವೇಳೆ ಇಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಇರುವ ಬಟ್ಟೂರು ಮತ್ತು ಕವಲೂರ ಅವರಿಗೆ ಸೇರಿದ ಜಮೀನಿನ ಹತ್ತಿರದ ಕಟ್ಟಿಹಳ್ಳದ ಪಕ್ಕದಲ್ಲಿ ಈ ಶಾಸನ ಪತ್ತೆಯಾಗಿದೆ.

‘ಶಾಸನದ ಆರಂಭದಲ್ಲಿ ಶಿವಸ್ತುತಿ ಇದೆ. ಇದು ಶಿವಾಲಯಕ್ಕೆ ಭೂದಾನ ಕೊಟ್ಟ ಶಾಸನವಾಗಿರಬಹುದು. ಶಾಸನದ ಸ್ಪಷ್ಟವಾದ ಕಾಲ ಲಭ್ಯವಿಲ್ಲ. ಜಗದೇಕಮಲ್ಲನ ಆಳ್ವಿಕೆಯ ಕಾಲ ಕ್ರಿಶ 1139-1149. ಜಗದೇಕ ಮಲ್ಲನ 10 ವರ್ಷದ ಆಡಳಿತದ ಅವಧಿಯಲ್ಲಿ ಈ ಶಾಸನ ರಚನೆ ಆಗಿರಬಹುದು. ಲಿಪಿದೃಷ್ಟಿಯಿಂದ ಶಾಸನದ ಕಾಲವನ್ನು 12ನೇ ಶತಮಾನದ ರಚನೆ ಎಂದೂ ಹೇಳಬಹುದು’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

‘ಅಣುಸ್ಥಾವರ: ಯಾವುದೇ ಪ್ರಸ್ತಾವ ಬಂದಿಲ್ಲ’

ಉಡುಪಿ: ‘ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಬೇಸೂರಿನಲ್ಲಿ ಅಣುಸ್ಥಾವರ ಘಟಕ ನಿರ್ಮಾಣಕ್ಕೆ ಸಂಬಂಧಿಸಿ ಇಲ್ಲಿಯವರೆಗೆ ಯಾವುದೇ ಪ್ರಸ್ತಾವ ಬಂದಿಲ್ಲ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಕಾರ್ಕಳದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ಸಂಬಂಧ ಸಮೀಕ್ಷೆ ನಡೆಯುತ್ತಿರುವ ವಿಚಾರವೂ ನಮ್ಮ ಗಮನಕ್ಕೆ ಬಂದಿಲ್ಲ. ಪ್ರಸ್ತಾವ ಬಂದಾಗ ಪ್ರತಿಕ್ರಿಯಿಸುತ್ತೇವೆ’ ಎಂದರು.

‘ಪಶ್ಚಿಮಘಟ್ಟದ ಸಂರಕ್ಷಣೆಗೆ ಸರ್ಕಾರ ಅಗತ್ಯ ಕ್ರಮವನ್ನು ಕೈಗೊಂಡಿದೆ. ಕಸ್ತೂರಿ ರಂಗನ್ ವರದಿ ತಿರಸ್ಕಾರ ಮಾಡಬೇಕೆಂದು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ. ಪಶ್ಚಿಮಘಟ್ಟ ನಮ್ಮಲ್ಲಿ ಶೇ 83ರಷ್ಟು ಸುರಕ್ಷಿತವಾಗಿದೆ’ ಎಂದು ತಿಳಿಸಿದರು.

ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕನ್ನಡಿಗರಾದ ಎಂ.ಅಂಕೇಗೌಡ, ಎಸ್‌.ಜಿ. ಸುಶೀಲಮ್ಮ ಅವರಿಗೆ ಪದ್ಮಶ್ರೀ, ಶತಾವಧಾನಿ ಡಾ.ಆರ್‌.ಗಣೇಶ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಿದರು

ವಿವಿಧ ಸಾಧಕರಿಗೆ ಪದ್ಮ ಪ್ರಶಸ್ತಿ ಪ್ರದಾನ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ ಪದ್ಮ ಪ್ರಶಸ್ತಿ ಪ್ರದಾನ ಮಾಡಿದರು. ಬಾಲಿವುಡ್ ನಟ, ದಿವಂಗತ ಧರ್ಮೇಂದ್ರ ಪರವಾಗಿ ನಟಿ, ಅವರ ಪತ್ನಿ ಹೇಮಾ ಮಾಲಿನಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ ಮಾಡಿದರು.

ಇದೇ ವೇಳೆ, ಶಾಸ್ತ್ರೀಯ ಸಂಗೀತಗಾರ, ವಯೋಲಿನ್ ವಾದಕ ಎನ್.ರಾಜಂ, ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಭಗತ್ ಸಿಂಗ್ ಕೋಶಿಯಾರಿ, ಕನ್ನಡಿಗ ಶತಾವಧಾನಿ ಆರ್.ಗಣೇಶ್, ಕೋಟಕ್ ಮಹೀಂದ್ರ ಬ್ಯಾಂಕ್‌ನ ಸಂಸ್ಥಾಪಕ ಉದಯ್ ಸುರೇಶ್ ಕುಮಾರ್ ಕೋಟಕ್, ಜಠರಕರುಳಿನ ತಜ್ಞ ಕಲ್ಲಿಪಟ್ಟಿ ರಾಮಸ್ವಾಮಿ ಪಳನಿಸ್ವಾಮಿ ಅವರಿಗೂ ಪದ್ಮಭೂಷಣ ಪ್ರದಾನ ಮಾಡಿದರು.

ಮರಣೋತ್ತರವಾಗಿ ಜಾಹೀರಾತು ದಿಗ್ಗಜ ಪೀಯೂಷ್ ಪಾಂಡೆ ಪರವಾಗಿ ಪತ್ನಿ, ಮಾಜಿ ಸಂಸದ ವಿಜಯ್ ಕುಮಾರ್ ಮಲ್ಹೋತ್ರಾ ಅವರ ಮಗ ಪ್ರಶಸ್ತಿ ಸ್ವೀಕರಿಸಿದರು.

ವಿದ್ವಾಂಸ ಶತಾವಧಾನಿ ಡಾ.ಆರ್. ಗಣೇಶ್ ಅವರಿಗೆ ಪದ್ಮಭೂಷಣ, ಮಂಡ್ಯದ ಅಂಕೇಗೌಡ ಜ್ಞಾನ ಪ್ರತಿಷ್ಠಾನ ಪುಸ್ತಕ ಮನೆಯ ವ್ಯವಸ್ಥಾಪಕ ಟ್ರಸ್ಟಿ ಎಂ.ಅಂಕೇಗೌಡ, ಸಾಮಾಜಿಕ ಕಾರ್ಯಕರ್ತೆ ಎಸ್.ಜಿ. ಸುಶೀಲಮ್ಮ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

‘ವಂದೇಮಾತರಂ’ ಗೀತೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡು, ನಂತರ ರಾಷ್ಟ್ರಗೀತೆ ಜನಗಣಮನ ನುಡಿಸಲಾಯಿತು. ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿ-ದ್ದರು.

2026ನೇ ಸಾಲಿನಲ್ಲಿ 131 ಮಂದಿ ಸಾಧಕರಿಗೆ ಪದ್ಮ ಪ್ರಶಸ್ತಿ ನೀಡಲು ದ್ರೌಪದಿ ಮುರ್ಮು ಅವರು ಅನುಮೋದನೆ ನೀಡಿದ್ದರು. ಇದರಲ್ಲಿ 5 ಮಂದಿಗೆ ಪದ್ಮವಿಭೂಷಣ, 13 ಮಂದಿಗೆ ಪದ್ಮಭೂಷಣ, 113 ಮಂದಿಗೆ ಪದ್ಮಶ್ರೀ ನೀಡಲಾಗುತ್ತದೆ. ಎರಡು ಸಲ ನಡೆಯುವ ಪ್ರತ್ಯೇಕ ಕಾರ್ಯಕ್ರಮದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪದ್ಮ ಪ್ರಶಸ್ತಿ ಸ್ವೀಕಾರಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉದ್ದಂಡವಾಗಿ ನಮಸ್ಕರಿಸಿದ ಪುದುಚೆರಿಯ ಸಿಲಂಬಮ್ ತರಬೇತುದಾರ ಕೆ.ಪಜನಿವೇಲ್

ಸಚಿವರು, ಅಧಿಕಾರಿಗಳ ವಿರುದ್ಧ ಬಿಜೆಪಿ ಮುಖಂಡರ ಆಕ್ರೋಶ

ಮುರಿನಕಟ್ಟೆ ವಿವಾದ: ಭಟ್ಕಳದಲ್ಲಿ ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ಕಾರವಾರ/ಭಟ್ಕಳ: ನಗರದ ಜಾಗಟೆಬೈಲ್ ಬಳಿ ಹೊಸದಾಗಿ ನಿರ್ಮಿಸಿದ್ದ ಮುರಿನಕಟ್ಟೆಯನ್ನು ತೆರವುಗೊಳಿಸಿದ ಘಟನೆ ಹಿನ್ನೆಲೆಯಲ್ಲಿ ಬಿಗುವಿನ ಸ್ಥಿತಿ ನಿರ್ಮಾಣವಾಗಿದೆ. ಭಟ್ಕಳ ನಗರ, ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೇ 27ರ ಬೆಳಿಗ್ಗೆವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

‘ದೇವಿಯ ಹೊರೆ ಇರಿಸುವ ಜಾಗವಾಗಿರುವ ಮುರಿನಕಟ್ಟೆ ಸ್ಥಳ ಯಥಾಸ್ಥಿತಿ ಇದೆ. ಅದಕ್ಕೆ ಧಕ್ಕೆ ಆಗಿಲ್ಲ. ಕಟ್ಟೆ ಸ್ಥಳಾಂತರಕ್ಕೆ ಕೆಲವರು ನಿರ್ಮಿಸಿದ್ದ ಹೊಸ ಕಟ್ಟೆಗೆ ಹಾನಿ ಮಾಡಲಾಗಿದೆ. ಈ ಸಂಬಂಧ 8 ಕಿಡಿಗೇಡಿಗಳನ್ನು ಬಂಧಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ತಿಳಿಸಿದರು.

‘ಮರುನಿರ್ಮಿಸಿದ್ದ ಮುರಿನಕಟ್ಟೆಗೆ ಕೆಲ ಮುಸ್ಲಿಂ ಯುವಕರು ಹಾನಿ ಮಾಡಿದ್ದಾರೆ. ಗುಂಪುಗೂಡಿ ಪೊಲೀಸರ ಮೇಲೆ ಹಲ್ಲೆಯೂ ಮಾಡಿದ್ದಾರೆ’ ಎಂದು ಆರೋಪಿಸಿ ಬಿಜೆಪಿ ಮುಖಂಡರು, ಹಿಂದೂ ಜಾಗರಣ ವೇದಿಕೆ ಮತ್ತು ಇತರ ಸಂಘಟನೆಗಳ ಕಾರ್ಯಕರ್ತರು ಭಾನುವಾರ ತಡರಾತ್ರಿ ಠಾಣೆ ಎದುರು ಪ್ರತಿಭಟನೆ ನಡೆಸಿದ್ದರು. ಕಟ್ಟೆ ಇದ್ದ ಸ್ಥಳಕ್ಕೆ ತೆರಳಲೂ ಯತ್ನಿಸಿದ್ದರು. ಅವರನ್ನು ತಡೆದ ಪೊಲೀಸರು ವಶಕ್ಕೆ ಪಡೆದು, ಬಿಡುಗಡೆಗೊಳಿಸಿದ್ದರು.

ಪ್ರತಿಭಟನಾಕಾರರ ಮನವೊಲಿಸಲು ಸ್ಥಳಕ್ಕೆ ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ವಿರುದ್ಧವೂ ಸಂಘಟನೆಗಳ ಕಾರ್ಯಕರ್ತರು ಘೋಷಣೆ ಕೂಗಿದರು.

‘ಹೊಸದಾಗಿ ನಿರ್ಮಿಸಿದ್ದ ಕಟ್ಟೆಯನ್ನು ಕಿಡಿಗೇಡಿಗಳು ನಾಶಪಡಿಸಿದ್ದಾರೆ. ಆದರೆ, ಕಟ್ಟೆಗೆ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ದಿಕ್ಕುತಪ್ಪಿಸುತ್ತಿದ್ದಾರೆ’ ಎಂದು ಬಿಜೆಪಿ ಮುಖಂಡ ಸುನೀಲ ನಾಯ್ಕ ಆರೋಪಿಸಿದರು.

‘ರಾಷ್ಟ್ರೀಯ ಹೆದ್ದಾರಿ ಅಂಚಿನಲ್ಲಿರುವ ಮುರಿನಕಟ್ಟೆ ಜಾಗ ಯಥಾಸ್ಥಿತಿಯಲ್ಲಿ ಇರಲಿದೆ. ಸಾರ್ವಜನಿಕರು ವದಂತಿಗಳನ್ನು ನಂಬಬಾರದು’ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಮನವಿ ಮಾಡಿದ್ದಾರೆ.

ಭಟ್ಕಳದಲ್ಲಿ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರಲು ಯತ್ನಿಸಿದವರ ಮೇಲೆ ನಿಗಾ ಇಟ್ಟಿದ್ದು, ಸಾಮಾಜಿಕ ಜಾಲತಾಣದಲ್ಲಿ ಕೋಮು ಭಾವನೆ ಕೆರಳಿಸುವ ಸಂದೇಶ ಕಳಿಸಿದರೆ ಕ್ರಮ ಜರುಗಿಸುತ್ತೇವೆ
ದೀಪನ್ ಎಂ.ಎನ್
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸಮಾಜದ ಶಾಂತಿ ಕೆಡಿಸಿ, ಅಟ್ಟಹಾಸ ಮೆರೆದ ಮತ್ತು ಪೊಲೀಸರ ಮೇಲೆ ಕೈ ಮಾಡಿದ ದುಷ್ಕರ್ಮಿಗಳನ್ನು ತಕ್ಷಣವೇ ಬಂಧಿಸಿ, ಮುರಿನಕಟ್ಟೆಯನ್ನು ಮತ್ತೆ ನಿರ್ಮಿಸಿ
ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಭಟ್ಕಳ ನಗರದಲ್ಲಿ ಪೊಲೀಸರು ಪಥಸಂಚಲನ ನಡೆಸಿದರು

ವಿವಾದ ಏಕೆ?

ಭಟ್ಕಳದ ಜಾಗಟೆಬೈಲ್ ಬಳಿ, ರಾಷ್ಟ್ರೀಯ ಹೆದ್ದಾರಿ ಅಂಚಿನಲ್ಲಿದ್ದ ಮುರಿನಕಟ್ಟೆಯನ್ನು ಕೆಲ ವರ್ಷದ ಹಿಂದೆ ಹೆದ್ದಾರಿ ವಿಸ್ತರಣೆಗೆ ತೆರವುಗೊಳಿಸಲಾಗಿತ್ತು. ಮುರಿನಕಟ್ಟೆಯ ಬದಲು ಕಟ್ಟೆ ಇದ್ದ ಜಾಗದಲ್ಲಿ ದೇವಿಯ ಹೊರೆ ಸಾಮಗ್ರಿ ಇರಿಸಲಾಗುತ್ತಿತ್ತು.

‘ಈ ಜಾಗದಲ್ಲಿ ಹೆದ್ದಾರಿ ನಿರ್ಮಾಣ ಆಗಲಿದೆ. ಹೀಗಾಗಿ ಅಲ್ಲಿಯೇ ಪಕ್ಕದಲ್ಲಿನ ಸರ್ಕಾರಿ ಜಾಗದಲ್ಲಿ ಕಟ್ಟೆ ಮರುನಿರ್ಮಿಸಿಕೊಳ್ಳುತ್ತೇವೆ’ ಎಂದು ಪಟ್ಟು ಹಿಡಿದು ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಕಟ್ಟೆ ನಿರ್ಮಿಸಿದ್ದಾರೆ.

‘ಮುಂಚೆ ಇದ್ದ ಜಾಗದಲ್ಲಿ ಕಟ್ಟೆ ನಿರ್ಮಾಣಕ್ಕೆ ವಿರೋಧವಿಲ್ಲ. ಆದರೆ, ಹೊಸ ಜಾಗದಲ್ಲಿ ಕಟ್ಟೆಯನ್ನು ನಿರ್ಮಾಣ ಮಾಡಲು ಅವಕಾಶ ನೀಡಬಾರದು’ ಎಂಬುದು ಮುಸ್ಲಿಮರ ವಾದ. ಈ ತಕರಾರು ಈಗ ಗೊಂದಲಕ್ಕೆ ಕಾರಣವಾಗಿದೆ.

ರಾಜ್ಯಸಭಾ ಸ್ಥಾನಕ್ಕೆ ನಾನೂ ಆಕಾಂಕ್ಷಿ: ಸದಾನಂದಗೌಡ

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ನಾನೂ ಆಕಾಂಕ್ಷಿ’ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಸೋಮವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಸಕ್ರಿಯ ಚುನಾವಣಾ ರಾಜಕೀಯದಿಂದ ದೂರ ಉಳಿದಿದಿರುವೆ. ಎನ್‌ಡಿಎ ಮಿತ್ರ ಪಕ್ಷದ ಸ್ಥಾನ ಖಾಲಿ ಆಗಲಿದ್ದು, ನನ್ನನ್ನು ಆಯ್ಕೆ ಮಾಡಬೇಕೆಂದು ಮನವಿ ಮಾಡಿದ್ದೇನೆ’ ಎಂದು ಹೇಳಿದರು.

‘ರಾಜ್ಯ ಬಿಜೆಪಿ ಅಧ್ಯಕ್ಷರ ಬದಲಾವಣೆ ಪ್ರಸ್ತಾಪ ಇಲ್ಲ. ಇನ್ನೊಂದು ವರ್ಷದಲ್ಲಿ ಅವರ ಅವಧಿ ಮುಗಿಯುತ್ತದೆ. ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ರಾಜ್ಯಕ್ಕೆ ಬಂದು ಕಾರ್ಯಕರ್ತರಲ್ಲಿ ಹುರುಪು ತುಂಬಿದ್ದಾರೆ’ ಎಂದು ಹೇಳಿದರು.

‘ರಾಜ್ಯದ ಜನ ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸಲಾಗದ ಕಾಂಗ್ರೆಸ್‌ನ ಹಿಂದೂ ವಿರೋಧಿ ಧೋರಣೆಯಿಂದ ಜನ ರೋಸಿ ಹೋಗಿದ್ದಾರೆ. ಈಗ ಚುನಾವಣೆ ನಡೆದರೂ ಕಾಂಗ್ರೆಸ್ ಐವತ್ತು ಸ್ಥಾನ ಕೆಳಗಿಳಿಯಲಿದೆ’ ಸದಾನಂದಗೌಡ ಅವರು ಹೇಳಿದರು.

‘ಯೂರಿಯಾ ಸೇರಿ ಕೆಲ ರಸಗೊಬ್ಬರಗಳನ್ನು ಅಕ್ರಮವಾಗಿ ದಾಸ್ತಾನು ಮಾಡುವವರ ಲೈಸೆನ್ಸ್ ಅನ್ನು ಸರ್ಕಾರ ರದ್ದುಪಡಿಸಬೇಕು’ ಎಂದು ಪ್ರತಿಪಾದಿಸಿದರು.

ಕಾಕ್ರೋಚ್ ಜನತಾ ಪಾರ್ಟಿಗೆ ಶೀಘ್ರ ಮುಕ್ತಿ ಸಿಗುತ್ತದೆ. ಮನೆಯಲ್ಲಿ ಜಿರಳೆ ಕಂಡರೆ ಔಷಧಿ ಹಾಕ್ತಾರೆ. ನಾವು ಜಿರಳೆಗಳಿಗೆ ಔಷಧಿ ಹಾಕುತ್ತಿದ್ದೇವೆ
ಡಿ.ವಿ. ಸದಾನಂದಗೌಡ
ಮಾಜಿ ಮುಖ್ಯಮಂತ್ರಿ

ಭಟ್ಕಳ ದುರಂತ: ಪಡುಶಿರಾಲಿಯ ಜಮೀನಿನಲ್ಲಿ ಸಾಮೂಹಿಕ ಅಂತ್ಯಸಂಸ್ಕಾರ • ಮಕ್ಕಳ ಕಣ್ಣೀರ ಕೋಡಿ

ಶ್ರಮಿಕರ ಊರಲ್ಲಿ ಸ್ಮಶಾನ ಮೌನ

• ಮೋಹನ ನಾಯ್ಕ

ಭಟ್ಕಳ (ಉತ್ತರ ಕನ್ನಡ): ‘ಸಾಲ ತೀರಿಸಿ, ಹೊಸ ಮನೆ ಕಟ್ಟುತ್ತೇನೆ. ಖುಷಿಯಾಗಿರೋಣ’ ಎನ್ನುತ್ತಿದ್ದ ಅಮ್ಮ, ದಿನವಿಡೀ ದುಡಿಯುತ್ತಿದ್ದಳು. ‘ನಮಗೆ ಮನೆ ಬೇಡ. ನಮ್ಮಮ್ಮನನ್ನು ತಂದುಕೊಡಿ’ ಎಂದ ತಾಲ್ಲೂಕಿನ ಶಾರದಹೊಳೆಯ ಪಡುಶಿರಾಲಿಯ ಮಕ್ಕಳಿಬ್ಬರು ಗೋಳಿಡುತ್ತಿದ್ದರೆ, ಅಲ್ಲಿ ಸೇರಿದ್ದವರು ಕಣ್ಣೀರಾಗುತ್ತಿದ್ದರು.

‘ಆಶಾ ಕಾರ್ಯಕರ್ತೆಯಾಗಿ ಮಳೆ, ಬಿಸಿಲೆನ್ನದೆ ಓಡಾಡುತ್ತಿದ್ದಳು. ಈ ದುಡಿಮೆ ಸಾಲದು ಎಂದು ಬೆಳಿಗ್ಗೆ, ಸಂಜೆ ಕಾಲ್ನಡಿಗೆಯಲ್ಲೇ ಊರು ಸುತ್ತಿ ಪಿಗ್ಮಿ ಸಂಗ್ರಹಿಸುತ್ತಿದ್ದಳು. ಭಾನುವಾರ ಚಿಪ್ಪಿಕಲ್ಲು ಅರಸಿ ಹೋಗಿದ್ದಳು. ಈಗ ಆಕೆ ದೂರವಾಗಿದ್ದಾಳೆ’ ಎನ್ನುತ್ತ ಮೃತ ನಾಗರತ್ನ ಜಟ್ಟಪ್ಪ ನಾಯ್ಕ ಅವರ ಮಕ್ಕಳು ಗೋಳಾಡಿದರು.

ಹೊಟ್ಟೆಪಾಡಿಗೆ ಕೂಲಿ ಮಾಡಿ ಜೀವನ ಕಟ್ಟಿಕೊಳ್ಳುವ ಶ್ರಮಿಕರ ಊರಿನಲ್ಲಿ ಸೋಮವಾರ ಮೌನ, ಆಕ್ರಂದನ ಮನೆ ಮಾಡಿತು. ಗ್ರಾಮದ ‘ಹೆಗ್ಗಡತಿ’ ಮನೆತನದ 8 ಮಂದಿ ಸೇರಿ 11 ಜನರ ಸಾವಿನ ನೋವಿನಿಂದ ಹೊರಬರಲಾಗದೆ ಗ್ರಾಮಸ್ಥರು, ಅವರ ಸಂಬಂಧಿಕರು ಕಣ್ಣೀರು ಸುರಿಸಿದರು.

ಶಿರಾಲಿಯ ಕಳ್ಳಿಕಟ್ಟೆ ನದಿಯಲ್ಲಿ ಚಿಪ್ಪಿಕಲ್ಲು ತೆಗೆಯಲು ಹೋಗಿ ನೀರಿನಲ್ಲಿ ಮುಳುಗಿ ಮೃತಪಟ್ಟ 11 ಜನರ ಕುಟುಂಬದ ಕಥೆ ಮನಕಲಕುವಂತಿದೆ. ಮನೆ ನಿರ್ಮಾಣ, ಮಕ್ಕಳ ಮದುವೆ, ಮಕ್ಕಳಿಗೆ ಶಿಕ್ಷಣ ಹೀಗೆ ಒಂದೊಂದು ಕನಸು ಹೊತ್ತು ನೀರಿಗಿಳಿದವರು ಬದುಕು ಕಟ್ಟಿಕೊಳ್ಳುವ ಮೊದಲೆ ಮಸಣ ಸೇರಿದ್ದಾರೆ.

‘ಗ್ರಾಮಸ್ಥರು ಚಿಪ್ಪಿಕಲ್ಲು ಸಂಗ್ರಹಕ್ಕೆ ತೆರಳುವುದು ಇದೇ ಮೊದಲಲ್ಲ. ನೀರಿನ ಏರಿಳಿತ ನೋಡಿಕೊಂಡೆ ನದಿಗೆ ಇಳಿಯುವ ಅವರೆಲ್ಲ ಹೇಗೆ ಎಚ್ಚರ ತಪ್ಪಿದರು ಎಂಬುದೇ ಅರ್ಥವಾಗುತ್ತಿಲ್ಲ’ ಎಂದು ಗ್ರಾಮಸ್ಥರು ಹೇಳಿದರು.

‘ಹೆಗ್ಗಡತಿ ಮನೆಯ ಕುಟುಂಬದ ಒಂದೆ ಮನೆಯ ಮೂವರು ಸೊಸೆಯರ ಪೈಕಿ ನಾಗರತ್ನ ಹಾಗೂ ಮಂಜಮ್ಮಾ ನಾಯ್ಕ ಮೃತಪಟ್ಟಿದ್ದಾರೆ. ಲಕ್ಷ್ಮೀ ಶಿವರಾಂ ನಾಯ್ಕ ಅವರ 4 ಮಕ್ಕಳು ಅನಾಥವಾಗಿದ್ದಾರೆ. 8ನೇ ತರಗತಿ ಓದುತ್ತಿರುವ ತಮ್ಮ, 10ನೇ ಹಾಗೂ ಪಿಯುಸಿ ತರಗತಿ ಓದುತ್ತಿರುವ ಇಬ್ಬರು ತಂಗಿಯರ ಜವಾಬ್ದಾರಿ ಈಗ ತಾನೆ ಪಾರ್ಟ್‌ ಟೈಂ ಕೆಲಸಕ್ಕೆ ಹೋಗುತ್ತಿದ್ದ ಹಿರಿಯ ಅಕ್ಕನ ಹೆಗಲಿಗೇರಿದೆ’ ಎಂದು ಗ್ರಾಮಸ್ಥರೊಬ್ಬರು ತಿಳಿಸಿದರು.

‘ನಾಗರತ್ನ ಪರಮೇಶ್ವರ ನಾಯ್ಕ ಅವರಿಗೆ 9 ವರ್ಷದ ಅವಳಿ ಹೆಣ್ಣು ಮಕ್ಕಳು ಹಾಗೂ 8ನೇ ತರಗತಿಯಲ್ಲಿ ಓದುತ್ತಿರುವ ಮಗ ಇದ್ದಾನೆ. ಮಾದೇವ ನಾಯ್ಕ ಮತ್ತು ಲಕ್ಷ್ಮಿ ನಾಯ್ಕ ದಂಪತಿಯ ಇಬ್ಬರು ಮಕ್ಕಳು ಅಪ್ಪ–ಅಮ್ಮನ ಅಗಲಿಕೆ ನೋವಿನಿಂದ ಅಸ್ವಸ್ಥಗೊಂಡು ಆಸ್ಪತ್ರೆ ಸೇರಿದ್ದಾರೆ. ತಾಯಿ ಜೊತೆ ತೆರಳಿದ ಉಮೇಶ ತಾಯಿ ರಕ್ಷಣೆಗೆ ಹೋಗಿ ತಾನು ಮುಳುಗಡೆಯಾಗಿ ಮೃತಪಟ್ಟಿದ್ದಾರೆ’ ಎಂದು ನೋವಿನ ಸಂಗತಿಯನ್ನು ತೆರೆದಿಟ್ಟರು.

ಗ್ರಾಮದ ಕೃಷಿ ಜಮೀನಿನಲ್ಲಿ ಮೃತದೇಹಗಳ ಸಾಮೂಹಿಕವಾಗಿ ಅಂತ್ಯಸಂಸ್ಕಾರ ನಡೆಯಿತು.

ನಾಗರತ್ನ ಜಟ್ಟಪ್ಪ ನಾಯ್ಕ

ಲಕ್ಷ್ಮೀ ಶಿವರಾಂ ನಾಯ್ಕ

ಶಿರಾಲಿಯ ದುರಂತದಲ್ಲಿ ಮೃತಪಟ್ಟ ಕುಟುಂಬಗಳ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಿಸುವ ಜವಾಬ್ದಾರಿ ಹೊರಲಿದ್ದೇನೆ
ಮಂಕಾಳ ವೈದ್ಯ
ಜಿಲ್ಲಾ ಉಸ್ತುವಾರಿ ಸಚಿವ

ಮೃತ ನಾಗರತ್ನ ಜಟ್ಟಪ್ಪ ನಾಯ್ಕ ಹಾಗೂ ಮೃತ ಮಂಜಮ್ಮ ಗೋಯ್ದ ನಾಯ್ಕ ಮನೆ ಮಂದಿ ರೋದಿಸಿದರು

ಮೃತರ ಸಂಖ್ಯೆ 11ಕ್ಕೆ ಏರಿಕೆ

ಚಿಪ್ಪಿಕಲ್ಲು ತೆಗೆಯಲು ಹೋಗಿ ನದಿ ನೀರಿನಲ್ಲಿ ಮುಳುಗಿದ್ದ ಪಡುಶಿರಾಲಿ ನಿವಾಸಿ ಮಾದೇವ ಜಟ್ಟಪ್ಪ ನಾಯ್ಕ (52) ಮೃತದೇಹ ಸೋಮವಾರ ಬೆಳಿಗ್ಗೆ ಪತ್ತೆಯಾಗಿದೆ. ಇದರೊಂದಿಗೆ ಮೃತರ ಸಂಖ್ಯೆ 11ಕ್ಕೆ ಏರಿದೆ.

ನದಿಯಲ್ಲಿ ಚಿಪ್ಪಿಕಲ್ಲು ಅರಿಸಲು ತೆರಳಿದ್ದ 14 ಜನರಲ್ಲಿ ಮೂವರು ಬದುಕುಳಿದಿದ್ದಾರೆ. ಅವರಿಗೆ ಉಡುಪಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.



ಯುವ ಮನಸ್ಸುಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ತೇಜಸ್ವಿ ಸೂರ್ಯ, ನಿತಿನ್ ನವೀನ್, ಬಿ.ವೈ.ವಿಜಯೇಂದ್ರ ಭಾಗವಹಿಸಿದ್ದರು

‘ಯುವ ಜನರಿಗೆ ಹೆಚ್ಚು ಅವಕಾಶ ಸೃಷ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತವು ಸೆಮಿಕಂಡಕ್ಟರ್ ಕ್ಷೇತ್ರ, ನವೋದ್ಯಮ, ಡಿಜಿಟಲ್ ನಾವೀನ್ಯತೆ ಮತ್ತು ಕೌಶಲ್ಯಾಭಿವೃದ್ಧಿ ಕ್ಷೇತ್ರಗಳಲ್ಲಿ ಹೊಸ ಮೈಲುಗಲ್ಲುಗಳನ್ನು ಸೃಷ್ಟಿಸಿದೆ. ಇದರಿಂದ ಯುವ ಜನರಿಗೆ ಹೆಚ್ಚು ಅವಕಾಶಗಳು ಸೃಷ್ಟಿ ಆಗಿವೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಹೇಳಿದ್ದಾರೆ.

‘ಯೂತ್ ಫಾರ್ ನೇಷನ್’ ಆಯೋಜಿಸಿದ್ದ ‘ಯುವ ಮನಸ್ಸುಗಳೊಂದಿಗೆ ಸಂವಾದ’ ಕಾರ್ಯ-ಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಭಾರತ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಎತ್ತರವನ್ನು ತಲುಪುತ್ತಿದೆ. ಈ ಮೂಲಕ ನಮ್ಮ ಯುವ ಜನತೆಗೆ ಹಿಂದೆಂದೂ ಕಾಣದಂತಹ ಅವಕಾಶಗಳು ಸೃಷ್ಟಿಯಾಗಿವೆ’ ಎಂದರು.

‘ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಯುವ ಜನರ ಆಕಾಂಕ್ಷೆಗಳಿಗೆ ದ್ರೋಹ ಬಗೆದಿದೆ. ಕಾಂಗ್ರೆಸ್ ಆಡಳಿತದಲ್ಲಿ ಮಿತಿ ಮೀರಿದ ಭ್ರಷ್ಟಾಚಾರ ಮತ್ತು ದುರಾಡಳಿತವು, ಭಾರತದ ಯುವ ಜನತೆಯ ಭವಿಷ್ಯ ಮತ್ತು ಸಾಮರ್ಥ್ಯದ ಬಗ್ಗೆ ಕಾಂಗ್ರೆಸ್ ಪಕ್ಷಕ್ಕಿರುವ ಸಂಪೂರ್ಣ ದೂರದೃಷ್ಟಿಯ ಕೊರತೆಯನ್ನು ಬಟಾಬಯಲು ಮಾಡಿದೆ’ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ತೇಜಸ್ವಿ ಸೂರ್ಯ ಮತ್ತು ಇತರರು ಇದ್ದರು.

ಕಲಬುರಗಿ, ಬೀದರ್: ತಂಪೆರೆದ ಮಳೆ

ಕಲಬುರಗಿ: ಕಲಬುರಗಿ ಹಾಗೂ ಬೀದರ್ ಜಿಲ್ಲೆಯ ವಿವಿಧೆಡೆ ಮಳೆ ಮುಂದುವರಿದಿದೆ. ಬಿಸಿಲಿನಿಂದ ತತ್ತರಿಸಿದ್ದ ಇಳೆಗೆ ತಂಪೆರೆದಿದೆ.

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ವಿವಿಧೆಡೆ ಸೋಮವಾರ ಸಂಜೆ ಎರಡು ಗಂಟೆ ಉತ್ತಮ ಮಳೆ ಸುರಿದಿದೆ. ಬಿರುಗಾಳಿಗೆ ಟಿನ್ ಶೆಡ್‌ಗಳು, ಗೂಡಂಗಡಿಗಳ ಪತ್ರಾಗಳು ಹಾರಿವೆ. ಹಲವೆಡೆ ಗಿಡ–ಮರಗಳು ಧರೆಗುರುಳಿವೆ.

ಸೇಡಂ ಪಟ್ಟಣದಲ್ಲಿರುವ ಚಿಂಚೋಳಿ ರಸ್ತೆ ಮೇಲೆ ಟಿನ್ ಶೆಡ್ ಅಂಗಡಿಯೇ ಹಾರಿಬಂದು ಬಿದ್ದಿದ್ದರಿಂದ ವಾಹನಗಳ ಸವಾರರಿಗೆ ಅಡಚಣೆ ಉಂಟಾಯಿತು.

ಬೀದರ್ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಗುಡುಗು, ಮಿಂಚು ಸಹಿತ ಗಂಟೆಗೂ ಹೆಚ್ಚು ಕಾಲ ಮಳೆಯಾಗಿದೆ. ಜಿಲ್ಲೆಯ ಔರಾದ್, ಹುಮನಾಬಾದ್, ಕಮಲನಗರ, ಭಾಲ್ಕಿಯಲ್ಲೂ ಮಳೆಯಾಗಿದೆ.

ಸೂಲಿವಾರ ಗಣಿಗಾರಿಕೆ: ಎರಡು ದಿನದಲ್ಲಿ ಪರಿಶೀಲನೆ

'ಫೋನ್ ಇನ್' ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಭರವಸೆ

ಪ್ರಜಾವಾಣಿ ಫೋನ್-ಇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾವರೆಕೆರೆ ಹೋಬಳಿಯ ಸೂಲಿವಾರ ಪ್ರದೇಶದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆ ಪ್ರದೇಶಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಲಾಗುವುದು. ಅಧಿಕೃತ ಗಣಿಗಾರಿಕೆಯಾಗಿದ್ದರೆ, ಜನರಿಗೆ ತೊಂದರೆಯಾಗದಂತೆ ಮುಂಜಾಗ್ರತೆ ಕ್ರಮಗಳನ್ನು ವಹಿಸಲು ಸೂಚಿಸಲಾಗುವುದು, ಅನಧಿಕೃತವಾಗಿದ್ದರೆ ಮುಚ್ಚಿಸಲಾಗುವುದು...

ಭೂ ಒತ್ತುವರಿ, ಪೋಡಿ, ಪೌತಿ ಖಾತೆ ಸಮಸ್ಯೆ ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು 'ಪ್ರಜಾವಾಣಿ' ಸೋಮವಾರ ಹಮ್ಮಿಕೊಂಡಿದ್ದ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ನೀಡಿದ ಭರವಸೆ ಇದು. ಸುಮಾರು ಒಂದೂವರೆ ತಾಸು ಎಡೆಬಿಡದೆ ಕರೆಗಳು ಬಂದವು. 'ಸೂಲಿವಾರ ಗಣಿಗಾರಿಕೆಯಿಂದ ಆಗುತ್ತಿರುವ ಸಮಸ್ಯೆ'ಗಳ ಬಗ್ಗೆಯೇ ಹೆಚ್ಚು ಮಂದಿ ಕರೆ ಮಾಡಿದರು.

ಸೂಲಿವಾರದ ಸರ್ವೆ ನಂಬರ್ 60ರಲ್ಲಿ 5 ಎಕರೆ ಆಟದ ಮೈದಾನ, 2 ಎಕರೆ ಸ್ಮಶಾನ, 10 ಎಕರೆ ಬಿಎಂಟಿಸಿಗೆ ಮಂಜೂರಾದ ಜಾಗದಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ದೂಳಿನಲ್ಲಿ ಕುಳಿತುಕೊಳ್ಳಲು ಆಗುತ್ತಿಲ್ಲ. 10ಕ್ಕೂ ಹೆಚ್ಚು ಮಂದಿ ಉಸಿರಾಟದ ಕಾರಣದಿಂದ ಮೃತಪಟ್ಟಿದ್ದು, ಅದಕ್ಕೆ ಕಲ್ಲು ಗಣಿಗಾರಿಕೆಯೇ ಕಾರಣ. ದೂಳು ಸೇವಿಸಿ ಕುರಿ, ಮೇಕೆ, ಹಸುಗಳೂ ಮೃತಪಟ್ಟಿವೆ. ಬೆಳೆ ಹಾನಿಗೆ ಪರಿಹಾರ ನೀಡಿಲ್ಲ ಎಂದು ಸ್ಥಳೀಯರಾದ ಭರತ್, ಕೃಷ್ಣೇಗೌಡ, ಮಾರಪ್ಪ, ರಾಜು, ಅರುಣ್ ಕುಮಾರ್, ಯೋಗೇಶ್ ಸಹಿತ ಅನೇಕರು ಸಮಸ್ಯೆ ಮುಂದಿಟ್ಟರು. 'ರೈತರು ಬೇಕಾ ಬಂಡೆ ಬೇಕಾ' ಎಂದು ಪ್ರಶ್ನಿಸಿದರು.

'ರೈತರೂ ಬೇಕು. ಬಂಡೆಯೂ ಬೇಕು. ರೈತರಿಲ್ಲದೇ ಕೃಷಿ ಇಲ್ಲ. ಅದೇ ರೀತಿ ಕಲ್ಲು, ಜಲ್ಲಿ ಇಲ್ಲದೇ ರಸ್ತೆ ಆಗಲ್ಲ, ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಕಾನೂನು ಬದ್ಧವಾಗಿ ಗಣಿಗಾರಿಕೆ ಮಾಡಬೇಕಾಗುತ್ತದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಪ ನಿರ್ದೇಶಕರೊಂದಿಗೆ ಮಾತನಾಡುತ್ತೇನೆ. ಮಂಗಳವಾರವೇ ಪರಿಶೀಲನೆ ಮಾಡಲು ಹೇಳುತ್ತೇನೆ' ಎಂದು ಜಿಲ್ಲಾಧಿಕಾರಿ ತಿಳಿಸಿದರು. ಅದೇ ವಿಷಯಕ್ಕೆ ಬೇರೆ ಬೇರೆ ಕರೆಗಳು ಬರತೊಡಗಿದಾಗ, 'ನಾನೇ ಪರಿಶೀಲಿಸುತ್ತೇನೆ' ಎಂದು ಭರವಸೆ ನೀಡಿದರು.

ಅಂಗವಿಕಲರ ಜಮೀನು ಸಮಸ್ಯೆ: 'ರಾಮೋಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ 5 ಎಕರೆ ಜಮೀನನ್ನು ಸರ್ಕಾರವು 230 ಅಂಗವಿಕಲರಿಗೆ ಹಂಚಿಕೆ ಮಾಡಿತ್ತು. ಈಗ ಬಿಡಿಎಗೆ ಮಂಜೂರಾಗಿದೆ ಎಂದು ಬಿಡಿಎ ತಕರಾರು ತೆಗೆದಿದೆ. ಈ ಬಗ್ಗೆ ನಿಮಗೆ ದೂರು ನೀಡಿದಾಗ ಪರಿಶೀಲಿಸಲು ಜಿಲ್ಲಾ ಪಂಚಾಯಿತಿ ಸಿಇಒಗೆ ಸೂಚನೆ ನೀಡಿದ್ದೀರಿ. ಆ ನಂತರ ಯಾವುದೇ ಕಾರ್ಯವಾಗಿಲ್ಲ. ನ್ಯಾಯಾಲಯದಿಂದ ನಾವು ತಡೆಯಾಜ್ಞೆಯನ್ನು ತಂದಿದ್ದೇವೆ. ಅಂಗವಿಕಲರಿಗೆ ನ್ಯಾಯ ಕೊಡಿಸಿ' ಎಂದು ಪ್ರಭುಶಂಕರ ಗೌಡ ಕೆಂಗೇರಿ, ಗಂಗಾಧರ ಎಂ. ಸುಂಕದಕಟ್ಟೆ, ಗಂಗಾಧರ ಚಲ್ಲಘಟ್ಟ ಇನ್ನಿತರರು ತಿಳಿಸಿದರು.



ಜಿ. ಜಗದೀಶ್, ಬೆಂಗಳೂರು ನಗರ ಜಿಲ್ಲಾಧಿಕಾರಿ

'ದಾಖಲೆಗಳನ್ನು ತೆಗೆದುಕೊಂಡು ಬನ್ನಿ. ನಿಮಗೆ ಮೊದಲೇ ಮಂಜೂರಾಗಿದ್ದರೆ, ಆ ಜಮೀನನ್ನು ಬೇರೆ ವ್ಯಕ್ತಿ ಅಥವಾ ಇಲಾಖೆ, ಪ್ರಾಧಿಕಾರಗಳಿಗೆ ನೀಡಲು ಸಾಧ್ಯವಿಲ್ಲ. ಬಿಡಿಎ ಅಧಿಕಾರಿಗಳೊಂದಿಗೆ ಮಾತನಾಡುತ್ತೇನೆ. ನ್ಯಾಯಾಲಯದಲ್ಲಿ ಇರುವ ಪ್ರಕರಣ ಏನು ಎಂಬುದನ್ನೂ ನೋಡುತ್ತೇನೆ' ಎಂದು ಜಗದೀಶ್ ಉತ್ತರಿಸಿದರು.

ಕೆರೆ ಅತಿಕ್ರಮಣ, ಸರ್ಕಾರಿ ಭೂಮಿ ಒತ್ತುವರಿ, ಸ್ಮಶಾನ ಭೂಮಿ ಒತ್ತುವರಿ, ರಾಜಕಾಲುವೆ ಒತ್ತುವರಿ, ಪೌತಿ ಆಗದೇ ಇರುವುದು, 94ಸಿಸಿ ಹಕ್ಕುಪತ್ರ ಸಿಗದಿರುವುದು, ಇನಾಂ ಭೂಮಿಯ ಪಹಣಿಯಲ್ಲಿ ಮೂಲ ಖಾತೆ ದಾಖಲಾಗಿರುವುದು, ಇ-ಖಾತೆ ಆಗದಿರುವುದು, ಪೋಡಿ ತಪ್ಪಾಗಿರುವುದು, ಪಿಂಚಣಿ ಬಾರದೇ ಇರುವುದು, ಅಧಿಕಾರಿಗಳೇ ಸರ್ಕಾರಿ ಭೂಮಿಯನ್ನು ಖಾಸಗಿಯವರಿಗೆ ಖಾತೆ ಮಾಡಿಕೊಟ್ಟಿರುವುದು, ಬೇರೆಡೆಗೆ ಸ್ಥಳಾಂತರಗೊಂಡಾಗ ಮತದಾನದ ಚೀಟಿಯಲ್ಲಿ ಬದಲಾವಣೆ ಆಗದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಸಾರ್ವಜನಿಕರು ಜಿಲ್ಲಾಧಿಕಾರಿಯವರ ಗಮನಕ್ಕೆ ತಂದು ಸಲಹೆ, ಪರಿಹಾರೋಪಾಯಗಳನ್ನು ಪಡೆದರು.

'ಎಷ್ಟೇ ಪ್ರಭಾವಿಯಾದರೂ ಹೆದರುವ ಪ್ರಶ್ನೆಯೇ ಇಲ್ಲ'

'ಜಿಲ್ಲಾಧಿಕಾರಿಯಾಗಿ ಬಂದಮೇಲೆ ಸರ್ಕಾರಿ ಜಮೀನನ್ನು ಉಳಿಸುವುದು ಕರ್ತವ್ಯ. ಶಂಕರ್ ಅವರಂಥ ಜಿಲ್ಲಾಧಿಕಾರಿಗಳು ಹಿಂದೆಯೇ ಆ ಕೆಲಸ ಮಾಡಿದ್ದರು. ಕೆಲವು ಜಿಲ್ಲಾಧಿಕಾರಿಗಳು ಅಪಾಯ ಮೈಮೇಲೆ ಎಳೆದುಕೊಳ್ಳುವುದು ಯಾಕೆ ಎಂದು ಹಿಂದೇಟು ಹಾಕಿರಬಹುದು. ನಾನು ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಒತ್ತುವರಿ ಮಾಡಿಕೊಂಡವರು ಎಷ್ಟೇ ಪ್ರಭಾವಿಗಳಾದರೂ ಹೆದರುವ ಪ್ರಶ್ನೆಯೇ ಇಲ್ಲ' ಎಂದು ಜಿಲ್ಲಾಧಿಕಾರಿ ಜಿ.ಜಗದೀಶ್ ಖಡಕ್ ಉತ್ತರ ನೀಡಿದರು.

'ಒಂದೂವರೆ ವರ್ಷಗಳ ಹಿಂದೆ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಿದಾಗ ಪ್ರಭಾವಿಗಳಿಂದ ಒತ್ತಡ, ಬೆದರಿಕೆಗಳು ಬಂದವು. ಯಾವುದಕ್ಕೂ ಜಗ್ಗದೇ ಕೆಲಸ ಮುಂದುವರಿಸಿದ್ದರಿಂದ ಈಗ ಯಾವ ಕರೆಗಳೂ ಬರುತ್ತಿಲ್ಲ. ಕರೆ ಮಾಡಿ ಪ್ರಯೋಜನವಿಲ್ಲ ಎಂಬುದು ಅವರಿಗೆ ಗೊತ್ತಾಗಿದೆ. ಒತ್ತುವರಿ ತೆರವು ಮಾಡದಂತೆ ಆರಂಭದಲ್ಲಿ ನನಗೆ ಒತ್ತಡದ ಕರೆಗಳು ಬರುವುದನ್ನು ನೋಡಿ, ಇದೆಲ್ಲ ಬೇಡ ಎಂದು ನಮ್ಮ ಮನೆಯ ಸದಸ್ಯರೇ ಹೇಳುತ್ತಿದ್ದರು' ಎಂದರು.

'ಜಿಲ್ಲೆಯ ಎಲ್ಲ 782 ಕೆರೆಗಳನ್ನು ಸಮೀಕ್ಷೆ ಮಾಡಿಸಿದ್ದೇನೆ. ಕೆರೆಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಯುತ್ತಿದೆ. ಕೆರೆ ಮಾತ್ರವಲ್ಲ ಎಲ್ಲ ಒತ್ತುವರಿಗಳ ತೆರವು ಮಾಡಲಾಗುತ್ತಿದೆ. ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಜಮೀನನ್ನು ಈಗಾಗಲೇ ಸರ್ಕಾರಕ್ಕೆ ವಾಪಸ್ ಪಡೆಯಲಾಗಿದೆ. ಅವುಗಳಿಗೆ ಬೇಲಿ ಹಾಕಿ ರಕ್ಷಿಸಲಾಗುತ್ತಿದೆ. ವಾಪಸ್ ಪಡೆಯಲು ಇನ್ನೂ ಬಹಳಷ್ಟು ಜಮೀನಿದೆ. ನಮ್ಮ ಇಲಾಖೆಯ ಅಧಿಕಾರಿಗಳು ಪ್ರತಿ ವಾರದ ಕೊನೇ ದಿನ ಕಾರ್ಯಾಚರಣೆ ಮಾಡುತ್ತಿದ್ದಾರೆ. ನಾನೂ ಭಾಗವಹಿಸುತ್ತಿದ್ದೇನೆ' ಎಂದರು.

ಸ್ವಯಂ ಸೇವಾ ಪೋರ್ಟಲ್

ಭೂ ಸುರಕ್ಷಾ ಯೋಜನೆಯಡಿ ಸೇವೆಗಳನ್ನು ಪಡೆಯಲು ಸ್ವಯಂ ಸೇವಾ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದೆ. ಅಸ್ತಿಗಳ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ಗೆ ಅಪ್‌ಲೋಡ್ ಮಾಡಲಾಗಿದೆ. ಯಾರು ಬೇಕಾದರೂ ಕುಳಿತಲ್ಲಿಂದಲೇ ಪಡೆಯಬಹುದು ಎಂದು ಜಗದೀಶ್ ಮಾಹಿತಿ ನೀಡಿದರು.

https://recordroom.karnataka.gov.in/service4 ಪೋರ್ಟಲ್‌ನಲ್ಲಿ ನಿಮ್ಮ ಮೊಬೈಲ್ ನಂಬರ್ ನೀಡಿ ಲಾಗಿನ್ ಆಗಬೇಕು. ಆ ನಂತರ ಮಾಲೀಕ ಅರ್ಜಿದಾರರ ವಿವರ ಒದಗಿಸಬೇಕು. ದಾಖಲೆಗಳನ್ನು ಹುಡುಕಬೇಕು. ಅಗತ್ಯ ಇರುವ ದಾಖಲೆಗಳ ಪುಟಗಳನ್ನು ಆಯ್ಕೆ ಮಾಡಿ 'ಇಚ್ಛೆಪಟ್ಟಿಗೆ ಸೇರಿಸಬೇಕು. ಅದರ ವೆಚ್ಚವನ್ನು ಆನ್‌ಲೈನ್‌ನಲ್ಲಿಯೇ ಪಾವತಿ ಮಾಡಿ, ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ವಿವರಿಸಿದರು.

ಪ್ರಶ್ನೋತ್ತರ

- **ಪೌತಿ ಖಾತೆ ಮಾಡುವ ಬಗ್ಗೆ ಮಾಹಿತಿ ನೀಡಿ**

ನಾಗರಾಜ್, ಬೆಂಗಳೂರು ನಗರ
ಎಂ.ಜಿ. ನಾರಾಯಣ, ಜಿಗಣಿ

ರಾಜ್ಯದಲ್ಲಿ ಪೌತಿ ಖಾತೆ ಆಂದೋಲನ ನಡೆಯುತ್ತಿದೆ. ನಿಮ್ಮ ಹಿರಿಯರ ಹೆಸರಿನಲ್ಲಿರುವ ಜಮೀನನ್ನು ನಿಮ್ಮ ಹೆಸರಿಗೆ ಮಾಡಿಕೊಳ್ಳಬೇಕಾದರೆ ತಹಶೀಲ್ದಾರ್ ಅಥವಾ ನಾಡ ಕಚೇರಿಯ ಮೂಲಕ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಬೇಕು. ಆರ್‌ಟಿಸಿ ಸಂಖ್ಯೆ, ಮರಣ ಪ್ರಮಾಣಪತ್ರ, ವಂಶವೃಕ್ಷ ಪ್ರಮಾಣಪತ್ರಗಳನ್ನು ಅರ್ಜಿಯ ಜೊತೆಗೆ ಸಲ್ಲಿಸಬೇಕು. ದಾಖಲೆಗಳನ್ನು ಪರಿಶೀಲಿಸಿ, ಸಂಬಂಧಪಟ್ಟವರಿಗೆ ನೋಟಿಸ್ ನೀಡಲಾಗುತ್ತದೆ. ಯಾವುದೇ ತಕರಾರು ಅರ್ಜಿ ಬಾರದೇ ಇದ್ದರೆ 15 ದಿನಗಳಲ್ಲಿ ಪೌತಿ ಖಾತೆಯನ್ನು ಮಾಡಿಕೊಡಲಾಗುತ್ತದೆ.

- **ಮೇಡಹಳ್ಳಿಯ ಸರ್ವೆ ಸಂಖ್ಯೆ 89ರ ಸರ್ಕಾರಿ ಗೋಮಾಳ ಭೂಮಿಯ ಒತ್ತುವರಿ ತೆರವುಗೊಳಿಸಬೇಕು. ಈ ಬಗ್ಗೆ ತಹಶೀಲ್ದಾರಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ?**

ಕಿರಣ್ ಕುಮಾರ್, ಮೇಡಹಳ್ಳಿ,

ಸರ್ಕಾರಿ ಜಮೀನು ಉಳಿಸುವುದೇ ನಮ್ಮ ಕರ್ತವ್ಯ. ಮೇಡಹಳ್ಳಿಯ ಈ ಜಮೀನನ್ನು ತಹಶೀಲ್ದಾರ್ ಮೂಲಕ ಸಮೀಕ್ಷೆ ನಡೆಸಿ, ಒತ್ತುವರಿಯಾಗಿದ್ದರೆ ತೆರವುಗೊಳಿಸಲಾಗುವುದು.

- **ಪಹಣಿ ಪತ್ರದಲ್ಲಿ ಮೂಲ ಖಾತೆದಾರರ ಹೆಸರು ಬರುತ್ತಿದ್ದು, ಈ ಸಮಸ್ಯೆಗೆ ಪರಿಹಾರ ನೀಡಿ**

ನಾಗಣ್ಣ, ಬೆಂಗಳೂರು ನಗರ

ಇನಾಂ ಜಮೀನು ಆಗಿದ್ದರೆ ಪಹಣಿ ಪತ್ರದಲ್ಲಿ ಮೂಲ ಖಾತೆದಾರರ ಹೆಸರು ಬರುತ್ತದೆ. ಈ ಜಮೀನು ನಿಮಗೆ ಮರು ಮಂಜೂರು ಆದ ನಂತರ ಮೂಲ ಖಾತೆದಾರರ ಹೆಸರು ತೆಗೆಯಬೇಕು. ಅದಕ್ಕೆ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಬೇಕು.

- **2014ರಲ್ಲಿ 94 ಸಿಸಿ ಹಕ್ಕುಪತ್ರ ನೀಡಿದರೂ ನೋಂದಣಿ ಆಗುತ್ತಿಲ್ಲ?**

ವಿಲಾಸ್ ಕುಮಾರ್, ಕೆಂಗೇರಿ

ಕೆಂಗೇರಿ ಹೋಬಳಿಯ 199 ಸರ್ವೆ ಸಂಖ್ಯೆಯಲ್ಲಿ 94 ಸಿಸಿ ಹಕ್ಕುಪತ್ರ ನೀಡಲಾಗಿರುವ ಎಲ್ಲರಿಗೂ ನೋಂದಣಿ ಮಾಡಿಕೊಡುವಂತೆ ತಹಶೀಲ್ದಾರ್‌ಗೆ ಸೂಚಿಸುತ್ತೇನೆ.

- **ಕಗ್ಗಲಿಪುರ ಸರ್ವೆ ನಂ. 46ರಲ್ಲಿ 1991–92ರಲ್ಲಿ ಮಂಜೂರು ಆಗಿದೆ. ಆದರೆ ಪೋಡಿ ಆಗುತ್ತಿಲ್ಲ?**

ರಾಮಕೃಷ್ಣಪ್ಪ, ಕಗ್ಗಲಿಪುರ ಬೆಂಗಳೂರು ದಕ್ಷಿಣ ಜಿಲ್ಲೆ

ಅನುಬಂಧಕ್ಕೆ ಸಹಿ ಮಾಡಿ, ಸಮೀಕ್ಷೆ ನಡೆಸಿ, ಪೋಡಿ ಮಾಡಲು ತಹಶೀಲ್ದಾರ್‌ಗೆ ಸೂಚಿಸುತ್ತೇನೆ.

- **ಬೆಂಗಳೂರು ನಗರದಲ್ಲಿ ಬಲಾಢ್ಯರು ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡಿದ್ದಾರೆ. ಅಂತಹವರನ್ನು ಎದುರು ಹಾಕಿಕೊಂಡು ಒತ್ತುವರಿ ತೆರವು ಹೇಗೆ ಮಾಡುತ್ತಿದ್ದೀರಿ?**

ಶ್ರುತಿ, ಬೆಂಗಳೂರು ನಗರ

ಒತ್ತುವರಿ ಆಗಿರುವ ಸರ್ಕಾರಿ ಜಮೀನು ತೆರವುಗೊಳಿಸುವುದು ನಮ್ಮೆಲ್ಲರ ಕರ್ತವ್ಯ. ಕೆಲ ಜಿಲ್ಲಾಧಿಕಾರಿಗಳು ಸವಾಲು ಎದುರಿಸಿ ಕೆಲಸ ಮಾಡುತ್ತಾರೆ. ಕೆಲವರು ಮಾಡುವುದಿಲ್ಲ. ನಾನು ₹20 ಸಾವಿರ ಕೋಟಿ ಮಾರುಕಟ್ಟೆ ಮೌಲ್ಯದ 850 ಎಕರೆಗೆ ಹೆಚ್ಚು ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಿದ್ದೇನೆ.

- **ನಮ್ಮ ತಂದೆ ಮೂರು ವರ್ಷದ ಹಿಂದೆ ಮರಣ ಹೊಂದಿದ್ದಾರೆ. ಅವರ ದೇಹವನ್ನು ವೈದ್ಯಕೀಯ ಆಸ್ಪತ್ರೆಗೆ ದಾನ ಮಾಡಲಾಗಿದೆ. ಆದರೆ ಅವರ ಮರಣ ಪ್ರಮಾಣಪತ್ರವನ್ನು ಇದುವರೆಗೂ ನೀಡುತ್ತಿಲ್ಲ?**

ಶ್ಯಾಮಸುಂದರ್ ಆದಿ, ಬೆಂಗಳೂರು ನಗರ

ಮರಣ ಪ್ರಮಾಣಪತ್ರವನ್ನು ಒಂದು ವರ್ಷದೊಳಗೆ ಪಡೆದುಕೊಳ್ಳಬೇಕು. ಇಷ್ಟು ತಡ ಮಾಡುವುದಕ್ಕೆ ಏನು ಕಾರಣ ಎಂಬುದು ನನಗೆ ಗೊತ್ತಿಲ್ಲ. ಕೂಡಲೇ ನಿಮ್ಮ ತಂದೆಯವರ ಮರಣ ಪ್ರಮಾಣಪತ್ರ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತೇನೆ.

- **ತಪ್ಪಾಗಿ ಪೋಡಿ ಮಾಡಿರುವುದನ್ನು ಸರಿಪಡಿಸಬೇಕು.**

ವಾಸುದೇವಮೂರ್ತಿ, ದಾಸನಪುರ ಹೋಬಳಿ

ತಪ್ಪಾಗಿ ಪೋಡಿ ಆಗಿರುವ ಎಲ್ಲ ದಾಖಲೆಗಳನ್ನು ತೆಗೆದುಕೊಂಡು ಬಂದು ನನ್ನನ್ನು ಭೇಟಿಯಾಗಿ. ಸರಿಪಡಿಸುವಂತೆ ಭೂದಾಖಲೆಗಳ ಉಪನಿರ್ದೇಶಕರಿಗೆ (ಡಿಡಿಎಲ್‌ಆರ್) ಸೂಚಿಸುತ್ತೇನೆ.

- **92 ಸಿಸಿ ಅಡಿ ಅರ್ಜಿ ಹಾಕಿ ಬಹಳ ದಿನಗಳಾದರೂ ಇದುವರೆಗೂ ಅರ್ಜಿ ವಿಲೇವಾರಿ ಆಗಿಲ್ಲ.**

ನಾಗಪ್ಪ, ಕೆ.ಆರ್.ಪುರ

2016ಕ್ಕಿಂತ ಮೊದಲು ನೀವು ಆ ನಿವೇಶನದಲ್ಲಿ ವಾಸಿಸಬೇಕು. ಅಂದಾಗ ಮಾತ್ರ ನಿಮಗೆ ಹಕ್ಕುಪತ್ರ ನೀಡಲು ಬರುತ್ತದೆ. ಈ ಬಗ್ಗೆ ಪರಿಶೀಲಿಸಿ, ನಿಮ್ಮ ಸಮಸ್ಯೆಯನ್ನು ಸರಿಪಡಿಸುವಂತೆ ತಹಶೀಲ್ದಾರ್‌ಗೆ ಸೂಚಿಸುತ್ತೇನೆ.

- **ಹಿರಿಯ ನಾಗರಿಕರ ಪಿಂಚಣಿ ಸರಿಯಾದ ಸಮಯಕ್ಕೆ ಬರುತ್ತಿಲ್ಲ.**

ಪುಷ್ಪಾ ಎಸ್. ರಾವ್, ಗಿರಿನಗರ ವಾರ್ಡ್

ಈ ತಿಂಗಳ ಪಿಂಚಣಿ ಇನ್ನೇನು ಬಿಡುಗಡೆ ಆಗಬೇಕಿದೆ. 2025ರಲ್ಲಿ ಏಳು ತಿಂಗಳ ನಿಮ್ಮ ಪಿಂಚಣಿ ಬಾರದಿರುವುದಕ್ಕೆ ಏನು ಕಾರಣ ಎಂಬುದರ ಬಗ್ಗೆ ಪರಿಶೀಲಿಸುತ್ತೇನೆ. ಜಿಲ್ಲಾಧಿಕಾರಿ ಕಚೇರಿಗೆ ಬಂದು ಭೇಟಿಯಾಗಿ.

- **ನಮ್ಮ ಯಜಮಾನರು ತೀರಿಕೊಂಡು ಐದು ತಿಂಗಳಾಗಿದೆ. ಪೌತಿ ಖಾತೆಯಲ್ಲಿ ಅವರದೇ ಭಾವಚಿತ್ರ ಇದೆ. ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ.**

ಹೇಮಾವತಿ, ಥಣಿಸಂದ್ರ

ಮರಣ ಪ್ರಮಾಣಪತ್ರ, ಜಮೀನಿನ ದಾಖಲೆಗಳನ್ನು ತೆಗೆದುಕೊಂಡು ತಹಶೀಲ್ದಾರ್ ಕಚೇರಿಯಲ್ಲಿ ಅರ್ಜಿ ಹಾಕಬೇಕು. ಕೂಡಲೇ ಪೌತಿ ಖಾತೆ ಮಾಡುವಂತೆ ತಹಶೀಲ್ದಾರ್‌ಗೆ ಸೂಚಿಸುತ್ತೇನೆ.

- **ಮೈಲಪ್ಪನಹಳ್ಳಿಯಲ್ಲಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಡಲಾಗಿದೆ. ಈ ಬಗ್ಗೆ ತನಿಖೆ ನಡೆಸಬೇಕು.**

ಕಿರಣ್, ಯಲಹಂಕ

ಜಿಲ್ಲಾ ಪಂಚಾಯಿತಿ ಸಿಇಒ ಜೊತೆಗೆ ಮಾತನಾಡಿ, ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಲಾಗುವುದು.

- **ತಿಂಡ್ಲು ಸರ್ವೆ ಸಂಖ್ಯೆ 81 ಗುಂಡು ತೋಪಿನ 3 ಎಕರೆ 9 ಗುಂಟೆ ಜಮೀನನ್ನು ಕಬಳಿಸಲಾಗಿದೆ. ಒತ್ತುವರಿ ತೆರವುಗೊಳಿಸಲು ಅರ್ಜಿ ಸಲ್ಲಿಸಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ.**

ಜಗದೀಶ್, ತಿಂಡ್ಲು, ವಿದ್ಯಾರಣ್ಯಪುರ,

ಈ ಬಗ್ಗೆ ಸಮೀಕ್ಷೆ ನಡೆಸುವಂತೆ ತಹಶೀಲ್ದಾರ್‌ಗೆ ಆದೇಶ ನೀಡುತ್ತೇನೆ. ವೀರಭದ್ರಸ್ವಾಮಿ ದೇವಸ್ಥಾನದ ಜಾಗವನ್ನು ತೆರವುಗೊಳಿಸಲು ಸೂಚಿಸುತ್ತೇನೆ.

- **2025ರ ಜನವರಿಯಲ್ಲಿ ಖಾತೆ ಬದಲಾವಣೆಗೆ ಅರ್ಜಿ ಹಾಕಲಾಗಿದೆ. ಎಸಿ ಕಚೇರಿಯಲ್ಲಿ ಬಾಕಿ ಇದೆ.**

ರಾಮಯ್ಯ, ಬೆಟ್ಟದಾಸನಪುರ

ಕಂದಾಯ ಉಪ ವಿಭಾಗಾಧಿಕಾರಿಯವರಿಗೆ ಹೇಳಿ ನಿಮ್ಮ ಅರ್ಜಿಯನ್ನು ವಿಲೇವಾರಿ ಮಾಡಿಸಲಾಗುವುದು.

- **ರಾಮಕೃಷ್ಣಪುರ ಗ್ರಾಮದ ಕೆರೆ ಒತ್ತುವರಿಯಾಗಿದೆ. ಇದುವರೆಗೂ ಈ ಕೆರೆಯ ಸಮೀಕ್ಷೆ ಆಗಿಲ್ಲ.**

ವೇಣುಗೋಪಾಲ್, ಜಿಗಣಿ ಹೋಬಳಿ, ಆನೇಕಲ್

ಬೆಂಗಳೂರು ನಗರ ಜಿಲ್ಲೆಯ ಎಲ್ಲ 782 ಕೆರೆಗಳ ಸಮೀಕ್ಷೆ ಆಗಿದೆ. ಶೇ 80ರಷ್ಟು ಒತ್ತುವರಿ ತೆರವುಗೊಳಿಸಲಾಗಿದೆ. ರಾಮಕೃಷ್ಣಪುರ ಕೆರೆಯ ಒತ್ತುವರಿಯನ್ನು ತೆರವುಗೊಳಿಸಲು ತಹಶೀಲ್ದಾರ್‌ಗೆ ನಿರ್ದೇಶನ ನೀಡುತ್ತೇನೆ.

- **ಇನಾಂ ಜಮೀನು ಮರು ಮಂಜೂರಾಗಿದ್ದರೂ ನೋಂದಣಿ ಆಗಿಲ್ಲ. ತಹಶೀಲ್ದಾರ್‌ಗೆ ಅರ್ಜಿ ಹಾಕಿದರೂ ಸ್ಪಂದಿಸುತ್ತಿಲ್ಲ.**

ಕೃಷ್ಣಪ್ಪ, ದೇವ

ಇನಾಂ ಭೂಮಿಯ ದಾಖಲೆಗಳನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ ನೀಡುತ್ತೇನೆ.

- **ಎಚ್‌ಬಿಆರ್ ಬಡಾವಣೆಯ ಸ್ಮಶಾನ ಜಾಗದ 1 ಎಕರೆ 15 ಗುಂಟೆ ಒತ್ತುವರಿ ತೆರವುಗೊಳಿಸಬೇಕು**

ದಾನೀಶ್, ಎಚ್‌ಬಿಆರ್ ಬಡಾವಣೆ

ಸರ್ವೆ ಸಂಖ್ಯೆ 229ರ ಸ್ಮಶಾನದ ಸಮೀಕ್ಷೆ ನಡೆಸಿ ಒತ್ತುವರಿ ಆಗಿದ್ದರೆ ತೆರವುಗೊಳಿಸಲು ತಹಶೀಲ್ದಾರ್‌ಗೆ ಸೂಚಿಸುತ್ತೇನೆ.

- **ಕೌಡೇನಹಳ್ಳಿ ಕೆರೆ 20 ಎಕರೆ ಜಮೀನು ಒತ್ತುವರಿ ತೆರವುಗೊಳಿಸಿ**

ನಾರಾಯಣಪ್ಪ, ರಾಮಮೂರ್ತಿನಗರ

ಕೌಡೇನಹಳ್ಳಿ ಕೆರೆ ಸಮೀಕ್ಷೆ ಆಗಿದೆ. ಆದರೆ ಒತ್ತುವರಿ ತೆರವುಗೊಂಡಿಲ್ಲ. ಈ ಬಗ್ಗೆ ತಹಶೀಲ್ದಾರ್ ಅವರೊಂದಿಗೆ ಮಾತನಾಡಿ, ಒತ್ತುವರಿ ತೆರವುಗೊಳಿಸಲು ಸೂಚಿಸುತ್ತೇನೆ.

- **ಬೆಳಗಾವಿ ಜಿಲ್ಲೆಯ ಗೋಕಾಕ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಇದೆ. ಈಗ ನಾನು ಬೆಂಗಳೂರಿನಲ್ಲಿ ವಾಸಿಸುತ್ತಿದ್ದು, ಇಲ್ಲಿಯ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ನೋಂದಣಿ ಹೇಗೆ ಮಾಡಿಕೊಳ್ಳಬೇಕು.**

ಜಿ.ವಿ. ಮಳಗಿ, ಬೆಂಗಳೂರು ನಗರ

8ಎ ಫಾರಂ ಮೂಲಕ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬೇಕು. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸಮರ್ಪಕ ದಾಖಲೆಗಳನ್ನು ನೀಡಿ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬಹುದು.

- **ಇ-ಖಾತಾ ಮಾಡಿಸಲು ಆರ್‌ಟಿಸಿ, ಬಾಂಡ್ ಸೇರಿದಂತೆ ಸಂಬಂಧಪಟ್ಟ ದಾಖಲೆ ನೀಡಿದರೂ ನೋಂದಣಿ ಆಗುತ್ತಿಲ್ಲ. ಅಧಿಕಾರಿಗಳು ಕಾವೇರಿ 2.0 ತಂತ್ರಾಂಶದಲ್ಲಿ ಅರ್ಜಿ ಹಾಕುವಂತೆ ಸೂಚಿಸುತ್ತಿದ್ದಾರೆ. ನಾವು ಏನು ಮಾಡಬೇಕು?**

ಕೃಷ್ಣಮೂರ್ತಿ ಎ.ಎಂ., ಬೆಂಗಳೂರು ನಗರ

ಇದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಇ-ಖಾತಾ ಮಾಡಲು ನೋಂದಣಿ ಇಲಾಖೆಯಲ್ಲಿಯೇ ಒಂದು ಕೌಂಟರ್ ತೆರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತೇನೆ.

ಕೆಎಸ್‌ಆರ್‌ಟಿಸಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೇಷ್ಯಾ ನೀಡುವ ಅಂತರರಾಷ್ಟ್ರೀಯ ಮಟ್ಟದ ಗೋಲ್ಡನ್ ಗ್ಲೋಬ್ ಟೈಗರ್ಸ್ ಅವಾರ್ಡ್ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನೀಡುವ ಫೈನಾನ್ಸಿಯಲ್ ಎಕ್ಸ್‌ಪ್ರೆಸ್ ಮೊಬಿಲಿಟಿ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ.

ನಿಗಮದಲ್ಲಿ ನೌಕರರಿಗೆ ಪರಿಣಾಮಕಾರಿ ತರಬೇತಿ ಹಾಗೂ ಪಾರದರ್ಶಕ ನೇಮಕಾತಿ ಪ್ರಕ್ರಿಯೆಗಾಗಿ ಅವಾರ್ಡ್ ಫಾರ್ ಎಕ್ಸಲೆನ್ಸ್ ಇನ್ ಟ್ರೈನಿಂಗ್ ವಿಭಾಗದಲ್ಲಿ ಅಂತರ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಎಕ್ಸಲೆನ್ಸ್ ಇನ್ ಪಬ್ಲಿಕ್ ಟ್ರಾನ್ಸ್‌ಪೋರ್ಟೇಶನ್ ವರ್ಗದಲ್ಲಿ ಧ್ವನಿಸ್ಪಂದನ ಉಪಕ್ರಮಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಮಲೇಷ್ಯಾದ ಕ್ವಾಲಾಲಂಪುರ ನಗರದಲ್ಲಿ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು, ನವದೆಹಲಿಯ ದಿ ಲಲಿತ್ ಹೋಟೆಲ್‌ನಲ್ಲಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್‌ಗೆ ರಾಜ್ಯ ಬಾಲಕಿಯರ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಕರ್ನಾಟಕ ಬಾಲಕಿಯರ ತಂಡವು ಪುದುಚೇರಿಯಲ್ಲಿ ನಡೆಯುತ್ತಿರುವ 76ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್‌ನ ಎ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಸೋಮವಾರ 74–47ರಿಂದ ಹರಿಯಾಣ ವಿರುದ್ಧ ಜಯ ಸಾಧಿಸಿತು. ಅದರೊಂದಿಗೆ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿತು.

ರಾಜೀವಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶ್ರಾವಣಿ ಶಿವಣ್ಣ 19 ಅಂಕ ಗಳಿಸಿದರೆ, ಅವರಿಗೆ ನಿಧಿ ಉಮೇಶ್ (17 ಅಂಕ) ಹಾಗೂ ನಿಲಾಯ ರೆಡ್ಡಿ (15 ಅಂಕ) ಉತ್ತಮ ಸಾಥ್ ನೀಡಿದರು. ಹರಿಯಾಣ ತಂಡದ ಅಂಶಿಕಾ ಜೈನ್ (14 ಅಂಕ) ಹೋರಾಟ ತೋರಿದರು.

ರಾಜ್ಯ ಬಾಲಕಿಯರ ತಂಡವು ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ 89–62ರಿಂದ ಹಾಲಿ ಚಾಂಪಿಯನ್ ತಮಿಳುನಾಡು ತಂಡವನ್ನು ಪರಾಭವಗೊಳಿಸಿತ್ತು.

ಆದರೆ, ಈಗಾಗಲೇ ಎಂಟರ ಘಟ್ಟ ತಲುಪಿರುವ ರಾಜ್ಯ ಬಾಲಕರ ತಂಡವು ಬಿ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ 68–94ರಿಂದ ಹರಿಯಾಣ ವಿರುದ್ಧ ಸೋಲನುಭವಿಸಿತು. ಹರಿಯಾಣ ತಂಡದ ಅಜಯ್ (36 ಅಂಕ), ಮಯಾಂಕ್ (24 ಅಂಕ) ಹಾಗೂ ರಾಹುಲ್ (21 ಅಂಕ) ಅಮೋಘ ಆಟವಾಡಿದರು. ರಾಜ್ಯ ತಂಡದ ಆದಿತ್ಯ ವಿಠ್ಠಲ ಶೆಣೈ ಹಾಗೂ ವೈಭವ್ ಗೌಡ ತಲಾ 12 ಅಂಕ ಗಳಿಸಿ, ಹೋರಾಟ ತೋರಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲೆಮಾರಿ ಸುಡುಗಾಡು ಸಿದ್ಧ ಮಹಾಸಭಾ ವತಿಯಿಂದ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಸಿ. ಎಸ್. ದ್ವಾರಕನಾಥ್ ಅವರು ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಬಳಿಕ ಮಾತನಾಡಿದ ಅವರು, ಅಂಬೇಡ್ಕರ್ ಅವರ ಜೀವನ ಮತ್ತು ಸಂಘರ್ಷದ ವಿಚಾರಗಳನ್ನು ಅಳವಡಿಸಿಕೊಂಡು ಸಮಾಜದ ಜನರಿಗೆ ಸಹಕಾರಿಯಾಗಬೇಕೆಂದು ತಿಳಿಸಿದರು.

ಅಲೆಮಾರಿ ಸುಡುಗಾಡು ಸಿದ್ಧ ಮಹಾಸಭಾದ ಅಧ್ಯಕ್ಷ ಬಿ. ಎಲ್. ಹನುಮಂತಪ್ಪ ಮಾತನಾಡಿ, ಅಂಬೇಡ್ಕರ್ ಅವರು ದೇಶಕ್ಕೆ ಮತ್ತು ನಿರ್ಗತಿಕ ಸಮಾಜಗಳಿಗೆ ನೀಡಿದ ಕೊಡುಗೆಗಳ ಬಗ್ಗೆ ತಿಳಿಸಿದರು.

ರಾಜ್ಯ ಕಾರ್ಯದರ್ಶಿ ಹುಸೇನಪ್ಪ ಅವರು ಪ್ರಾಸ್ತವಿಕವಾಗಿ ಮಾತನಾಡಿದರು. ಮುಖಂಡ ಮಹೇಶ್ ಗಂಟೆ ವಂದಿಸಿದರು.

ನಗರದಲ್ಲಿ ಅಲೆಮಾರಿ ಸುಡುಗಾಡು ಸಿದ್ಧ ಮಹಾಸಭಾ ಏರ್ಪಡಿಸಿದ್ದ ಸಮಾರಂಭದಲ್ಲಿ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ವಿದ್ಯುತ್ ವಿತರಣೆ: ಪರವಾನಗಿ ಕೋರಿದ ಖಾಸಗಿ ಕಂಪನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ವಿತರಣಾ ಪರವಾನಗಿ ನೀಡುವಂತೆ ಕೋರಿ ಮೊದಲ ಬಾರಿಗೆ ಖಾಸಗಿ ಕಂಪನಿಯೊಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಅರ್ಜಿ ಸಲ್ಲಿಸಿದೆ. ಕೆಇಆರ್‌ಸಿ ನಿಯಮಗಳ ಪ್ರಕಾರ ಖಾಸಗಿ ಕಂಪನಿಗಳಿಗೆ ವಿದ್ಯುತ್ ವಿತರಿಸಲು ಅವಕಾಶವಿದೆ. ಆದರೆ, ರಾಜ್ಯದಲ್ಲಿ ಇದುವರೆಗೆ ಯಾವುದೇ ಖಾಸಗಿ ಕಂಪನಿಗೆ ವಿದ್ಯುತ್ ವಿತರಣೆಗೆ ಅವಕಾಶ ನೀಡಿರಲಿಲ್ಲ.

'ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಿಪಿಸಿಎಲ್) ಬೆಸ್ಕಾಂ ವ್ಯಾಪ್ತಿಯ ಚಿಕ್ಕಬಳ್ಳಾಪುರ, ರಾಮನಗರ, ಕೋಲಾರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ. ಮೆಸ್ಕಾಂ ವ್ಯಾಪ್ತಿಯ ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ ಹಾಗೂ ಹೆಸ್ಕಾಂ ವ್ಯಾಪ್ತಿಯ ಬೆಳಗಾವಿ, ಉತ್ತರ ಕನ್ನಡ, ಧಾರವಾಡ ಹಾಗೂ ಚೆಸ್ಕಾಂ ವ್ಯಾಪ್ತಿಯ ಮೈಸೂರು, ಚಾಮರಾಜನಗರ ಮತ್ತು ಹಾಸನದಲ್ಲಿ ವಿದ್ಯುತ್ ವಿತರಿಸಲು ಪರವಾನಗಿ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದೆ' ಎಂದು ಮೂಲಗಳು ತಿಳಿಸಿವೆ.

ಟಾಟಾ ಪವರ್ ಕಂಪನಿ ಲಿಮಿಟೆಡ್‌ನವರು ಕೆಇಆರ್‌ಸಿ ಮುಂದೆ ಈಗಾಗಲೇ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಪರವಾನಗಿ ನೀಡುವುದರಿಂದ ಆಗುವ ಸಾಧಕ–ಬಾಧಕಗಳ ಬಗ್ಗೆ ವ್ಯಾಪಕವಾಗಿ ಸಮಾಲೋಚನೆ ನಡೆಸಿದ ಬಳಿಕ ಈ ಬಗ್ಗೆ ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

'ವಿದ್ಯುತ್ ವಿತರಣಾ ಕ್ಷೇತ್ರಕ್ಕೆ ಖಾಸಗಿ ಕಂಪನಿಗಳು ಪ್ರವೇಶಿಸಿದರೆ ಎಸ್ಕಾಂಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳು ಸುಮಾರು ₹40 ಸಾವಿರ ಕೋಟಿ ನಷ್ಟದಲ್ಲಿವೆ. ಇಂಧನ ಕ್ಷೇತ್ರಕ್ಕೆ ಖಾಸಗಿ ಕಂಪನಿಗಳು ಪ್ರವೇಶ ಪಡೆಯುವುದರಿಂದ ಸಾರ್ವಜನಿಕರಲ್ಲಿ ನಿರೀಕ್ಷೆಗಳು ಹೆಚ್ಚುತ್ತವೆ. ಕೆಲವು ಗ್ರಾಹಕರನ್ನು ಖಾಸಗಿಯವರು ಸೆಳೆಯಬಹುದು' ಎಂದು ಬೆಸ್ಕಾಂನ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಖಾಸಗಿ ಕಂಪನಿಗಳು ಸ್ಪರ್ಧಾತ್ಮಕ ಬೆಲೆ ನಿಗದಿಪಡಿಸಿ, ಗ್ರಾಹಕರಿಗೆ ವಿದ್ಯುತ್ ಪೂರೈಕೆ ಮಾಡಬಹುದು' ಎಂದು ಕೆಇಆರ್‌ಸಿ ಸಲಹಾ ಮಂಡಳಿಯ ಮಾಜಿ ಸದಸ್ಯ ಎಂ.ಜಿ. ಪ್ರಭಾಕರ್ ತಿಳಿಸಿದರು.

ಹಾಕಿ ಟೂರ್ನಿ: ಸುಮಿಯಾ ಮಿಂಚು; ಎಸ್‌ಟಿಸಿ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಿಯಾ ಶೇಕ್ ಅವರು ಗಳಿಸಿದ ಐದು ಗೋಲುಗಳ ನೆರವಿನಿಂದ ಮಡಿಕೇರಿಯ 'ಸಾಯ್' ತರಬೇತಿ ಕೇಂದ್ರ (ಎಸ್‌ಟಿಸಿ) ತಂಡವು ಸೋಮವಾರ ಆರಂಭಗೊಂಡ 'ಹಾಕಿ ಕರ್ನಾಟಕ' ರಾಜ್ಯ 16 ವರ್ಷದೊಳಗಿನ ಬಾಲಕಿಯರ ಟೂರ್ನಿಯಲ್ಲಿ 13–0ಯಿಂದ ಕೆಜಿಎಫ್‌ನ ಎವರ್‌ಗ್ರೀನ್ ಸ್ಪೋರ್ಟ್ಸ್ ಅಕಾಡೆಮಿ ವಿರುದ್ಧ ಏಕಪಕ್ಷೀಯ ಗೆಲುವು ಸಾಧಿಸಿತು.

ಶಾಂತಿನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಸ್‌ಟಿಸಿ ತಂಡವು ಆರಂಭದಿಂದಲೇ ಗೋಲುಗಳ ಮಳೆಗರೆಯಿತು. ಸುಮಿಯಾ (3ನೇ, 4ನೇ, 6ನೇ, 8ನೇ ಹಾಗೂ 34ನೇ ನಿ.) ಐದು ಗೋಲುಗಳ ಸಾಧನೆ ಮಾಡಿದರು.

ಸಬಿತಾ ಎ. (10ನೇ ಹಾಗೂ 15ನೇ ನಿ.) ಮತ್ತು ನಾಗಮಣಿ ಆರ್. (17ನೇ ಹಾಗೂ 37ನೇ ನಿ.) ತಲಾ ಎರಡು ಗೋಲು ಗಳಿಸಿದರೆ, ಗ್ರೀಷ್ಮಾ ಪೊನ್ನಪ್ಪ (14ನೇ ನಿ.), ಶ್ರುತಿ ಬೋಯಾ (29ನೇ ನಿ.), ಜ್ಞಾನೇಶ್ವರಿ ಜಿ. (30ನೇ ನಿ.) ಹಾಗೂ ನೀಲಮ್ಮ ಎನ್.ಆರ್. (40ನೇ ನಿ.) ತಲಾ ಒಂದು ಗೋಲಿನ ಕಾಣಿಕೆ ನೀಡಿದರು. ಎವರ್‌ಗ್ರೀನ್ ತಂಡದ ಆಟಗಾರ್ತಿಯರು ಎದುರಾಳಿ ತಂಡದ ರಕ್ಷಣಾ ವ್ಯವಸ್ಥೆಯನ್ನು ಭೇದಿಸುವಲ್ಲಿ ವಿಫಲರಾದರು.

ದಿನದ ಇನ್ನೊಂದು ಪಂದ್ಯದಲ್ಲಿ ಕೆಜಿಎಫ್‌ನ ಸೇಂಟ್ ತೆರೆಸಾ ಶಿಕ್ಷಣ ಸಂಸ್ಥೆ ತಂಡವು 1–0ಯಿಂದ ಬೆಂಗಳೂರು ಬ್ಲ್ಯೂಸ್ ಹಾಕಿ ಕ್ಲಬ್ ತಂಡದ ವಿರುದ್ಧ ಜಯಿಸಿತು. ಜಿದ್ದಾಜಿದ್ದಿನಿಂದ ಸಾಗುತ್ತಿದ್ದ ಈ ಪಂದ್ಯದಲ್ಲಿ ತೆರೆಸಾ ತಂಡದ ಬಿಂದುಶ್ರೀ ಪಿ. (35ನೇ ನಿ.) ನಿರ್ಣಾಯಕ ಗೋಲು ಗಳಿಸಿದರು.

ರಣವೀರ್ ಸಿಂಗ್ ನಿಷೇಧಿಸಿದ ಎಫ್‌ಡಬ್ಲ್ಯುಐಸಿಇ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: 'ಡಾನ್ 3' ಸಿನಿಮಾದಿಂದ ಕೊನೆಯ ಕ್ಷಣದಲ್ಲಿ ಹೊರನಡೆದ ನಟ ರಣವೀರ್ ಸಿಂಗ್ ಅವರೊಂದಿಗೆ ಕೆಲಸ ಮಾಡುವುದಿಲ್ಲ ಎಂದು ಫೆಡರೇಷನ್ ಆಫ್ ವೆಸ್ಟರ್ನ್ ಇಂಡಿಯಾ ಸಿನಿ ಎಂಪ್ಲಾಯೀಸ್‌ನ (ಎಫ್‌ಡಬ್ಲ್ಯುಐಸಿಇ) 4 ಲಕ್ಷಕ್ಕೂ ಹೆಚ್ಚಿನ ಸದಸ್ಯರು ಸೋಮವಾರ ತಿಳಿಸಿದ್ದಾರೆ.

ರಣವೀರ್ ಸಿಂಗ್

'ಡಾನ್ 3' ಚಿತ್ರಕ್ಕಾಗಿ ಮೂರು ವರ್ಷಗಳಿಂದ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಪ್ರಿ-ಪ್ರೊಡಕ್ಷನ್ ಹಂತದಲ್ಲೇ ₹45 ಕೋಟಿಗಿಂತ ಹೆಚ್ಚು ಖರ್ಚು ಮಾಡಲಾಗಿದೆ. ರಣವೀರ್ ಸಿಂಗ್ ಅವರು ಚಿತ್ರದಿಂದ ಹೊರ ನಡೆದಿದ್ದಾರೆ' ಎಂದು ಚಿತ್ರದ ನಿರ್ಮಾಪಕ ಫರ್ಹಾನ್ ಅಖ್ತರ್ ಆರೋಪಿಸಿದ್ದಾರೆ.

ಅಖ್ತರ್ ಮತ್ತು ಅವರ ಪಾಲುದಾರ ರಿತೇಶ್ ಸಿಧ್ವಾನಿ ಅವರು ರಣವೀರ್ ವಿರುದ್ಧ 'ಇಂಡಿಯನ್ ಫಿಲ್ಮ್ ಆ್ಯಂಡ್ ಟೆಲಿವಿಷನ್ ಡೈರೆಕ್ಟರ್ಸ್ ಅಸೋಸಿಯೇಷನ್'ಗೆ ದೂರು ನೀಡಿದ್ದರು. ಆ ಸಂಸ್ಥೆಯು ಮುಂದಿನ ಕ್ರಮಕ್ಕಾಗಿ ಈ ದೂರನ್ನು ಎಫ್‌ಡಬ್ಲ್ಯುಐಸಿಇಗೆ ವರ್ಗಾಯಿಸಿತ್ತು.

ಏಷ್ಯಾದ ಅತೀ ಎತ್ತರದ ರೋಪ್‌ವೇಯಲ್ಲಿ ದೋಷ

ಗಂಟೆಗಟ್ಟಲೆ ಸಿಲುಕಿದ್ದ ಪ್ರವಾಸಿಗರು

ಶ್ರೀನಗರ (ಪಿಟಿಐ): ಏಷ್ಯಾದ ಅತಿ ಎತ್ತರದ ರೋಪ್‌ವೇಯಲ್ಲಿ ತಾಂತ್ರಿಕ ದೋಷ ಕಂಡುಬಂದ ಕಾರಣ, ಗುಲ್‌ಮಾರ್ಗ್ ಗೊಂಡೋಲಾ ಕೇಬಲ್ ಕಾರಿನ 65 ಕ್ಯಾಬಿನ್‌ಗಳಲ್ಲಿ 300ಕ್ಕೂ ಹೆಚ್ಚು ಪ್ರವಾಸಿಗರು ಗಂಟೆಗಟ್ಟಲೆ ಸಿಲುಕಿದ ಘಟನೆ ಸೋಮವಾರ ನಡೆದಿದ್ದು, ಎಲ್ಲರನ್ನೂ ರಕ್ಷಿಸಲಾಗಿದೆ.

ಕೆಲ ಪ್ರವಾಸಿಗರು ನೆಲದಿಂದ ಸುಮಾರು 500 ಅಡಿ ಎತ್ತರದಲ್ಲಿ ಕ್ಯಾಬಿನ್‌ಗಳಲ್ಲಿ ಸಿಲುಕಿಕೊಂಡಿದ್ದರು. ವಿವಿಧ ಏಜೆನ್ಸಿಗಳ ಸಿಬ್ಬಂದಿ ಏಳು ಗಂಟೆ ಕಾರ್ಯಾಚರಣೆ ನಡೆಸಿ ಎಲ್ಲರನ್ನೂ ರಕ್ಷಿಸಿ, ಸ್ಥಳಾಂತರಿಸಿದರು ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಭಾರಿ ಮಳೆಯಿದ್ದ ಕಾರಣ ರಕ್ಷಣಾ ಕಾರ್ಯಾಚರಣೆ ವಿಳಂಬವಾಯಿತು ಎಂದು ಅವರು ವಿವರಿಸಿದ್ದಾರೆ.

ಮಧ್ಯಾಹ್ನದ ವೇಳೆ ತಾಂತ್ರಿಕ ದೋಷ ಕಂಡು ಬಂದ ಕೂಡಲೇ ಕೇಬಲ್ ಕಾರ್ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಯಿತು ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮತ್ತು ಭಾರತೀಯ ಸೇನೆಯ ಸಿಬ್ಬಂದಿ ಹಗ್ಗ ಮತ್ತು ಏಣಿಗಳ ಸಹಾಯದಿಂದ ಪ್ರವಾಸಿಗರನ್ನು ಸುರಕ್ಷಿತವಾಗಿ ಕೆಳಗಿಳಿಸಿದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೇಬಲ್ ಕಾರುಗಳಲ್ಲಿ ಸಿಲುಕಿದ್ದ ಪ್ರವಾಸಿಗರನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದರು –ಪಿಟಿಐ ಚಿತ್ರ

ಪರವಾನಗಿ ಪ್ರಕ್ರಿಯೆ ಸರಳೀಕರಣ, ಎಂ.ಆರ್.ಪಿ ಪರಿಷ್ಕರಣೆ ವ್ಯವಸ್ಥೆ: ಸಚಿವ ತಿಮ್ಮಾಪುರ

'ಅಬಕಾರಿ ಸುಂಕ: ₹40 ಸಾವಿರ ಕೋಟಿ ಆದಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಪಾರ ವಹಿವಾಟು ಸುಲಭಗೊಳಿಸಲು ಮತ್ತು ರಾಜ್ಯದ ಮದ್ಯ ಉತ್ಪಾದನಾ ವ್ಯವಸ್ಥೆ ಬಲಪಡಿಸಲು ಸರ್ಕಾರ ಒಂದು ವರ್ಷದಲ್ಲಿ ಮಹತ್ವದ ಸುಧಾರಣೆಗಳನ್ನು ತಂದಿದೆ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ನಗರದಲ್ಲಿ ನಡೆದ ಉದ್ಯಮದ ಪ್ರಮುಖ ಸಮಾವೇಶದಲ್ಲಿ ಮಾತನಾಡಿದ ಅವರು, 'ಅಬಕಾರಿ ಸುಂಕದ ಮೂಲಕ ವಾರ್ಷಿಕವಾಗಿ ಸುಮಾರು ₹40 ಸಾವಿರ ಕೋಟಿ ಆದಾಯ ಗಳಿಸಲಾಗುತ್ತಿದೆ. ಇದು ರಾಜ್ಯದ ಆರ್ಥಿಕತೆಯಲ್ಲಿ ಈ ಕ್ಷೇತ್ರದ ಪ್ರಾಮುಖ್ಯ ತೋರಿಸುತ್ತದೆ. ಆದರೆ, ನಮ್ಮ ಉದ್ದೇಶ ಕೇವಲ ಆದಾಯ ಗಳಿಕೆಯಲ್ಲ; ಸುಸ್ಥಿರ ಬೆಳವಣಿಗೆಯ ಮೂಲಕ ಗ್ರಾಹಕರು, ರೈತರು, ಉತ್ಪಾದಕರು ಮತ್ತು ಸ್ಥಳೀಯ ಸಮೂಹಕ್ಕೆ ಪ್ರಯೋಜನವಾಗುವ ಸಮತೋಲಿತ ವ್ಯವಸ್ಥೆ ನಿರ್ಮಿಸುವುದು' ಎಂದು ಸಚಿವರು ಸ್ಪಷ್ಟಪಡಿಸಿದರು.

'ಪರವಾನಗಿ ಪ್ರಕ್ರಿಯೆ ಸರಳೀಕರಣ, ಎಂ.ಆರ್.ಪಿ ಪರಿಷ್ಕರಣೆ ವ್ಯವಸ್ಥೆ, ಡಿಜಿಟಲ್ ಅನುಸರಣೆ ಹಾಗೂ ವಾರ್ಷಿಕ ಪರವಾನಗಿ ನವೀಕರಣ ಸುಧಾರಣೆಗಳ ಮೂಲಕ ಹೆಚ್ಚು ಪಾರದರ್ಶಕ ಮತ್ತು ತಂತ್ರಜ್ಞಾನ ಆಧಾರಿತ ವ್ಯವಸ್ಥೆ ನಿರ್ಮಿಸುತ್ತಿದ್ದೇವೆ. ಉದ್ಯಮದ ದೀರ್ಘಾವಧಿ ಹೂಡಿಕೆಗೆ ಪೂರಕವಾಗಿ 2030ರವರೆಗೆ ನೀತಿ ಸ್ಥಿರತೆ ಒದಗಿಸಲು ಸರ್ಕಾರ ಬದ್ಧವಾಗಿದೆ' ಎಂದು ಭರವಸೆ ನೀಡಿದರು.

ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಶಿವಕುಮಾರ್ ಈಶ್ವರನ್ ಮಾತನಾಡಿ, 'ನೀರಿನ ಸಂರಕ್ಷಣೆ ಮತ್ತು ಇಂಧನ ದಕ್ಷತೆಯು ಈ ಉದ್ಯಮದ ಭವಿಷ್ಯವನ್ನು ನಿರ್ಧರಿಸಲಿವೆ. ಮದ್ಯದ ಉದ್ಯಮದ ಬೆಳವಣಿಗೆಯ ಲಾಭವು ಗ್ರಾಮೀಣ ಭಾಗಕ್ಕೂ ತಲುಪಬೇಕು. ಬ್ರೂವರಿಗಳಿಗೆ ಅಗತ್ಯವಿರುವ ಬಾರ್ಲಿ, ಧಾನ್ಯಗಳು ಮತ್ತು ಹಣ್ಣುಗಳನ್ನು ಹೊರಗಿನಿಂದ ತರಿಸುವ ಬದಲು ರಾಜ್ಯದ ರೈತರಿಂದ ನೇರವಾಗಿ ಖರೀದಿಸಬೇಕು. ಇದರಿಂದ ಸ್ಥಳೀಯ ಪೂರೈಕೆ ಸರಪಳಿ ಬಲಗೊಳ್ಳುತ್ತದೆ' ಎಂದು ಸಲಹೆ ನೀಡಿದರು.

ರಾಜ್ಯದ 2ನೇ ಮತ್ತು 3ನೇ ಹಂತದ ನಗರಗಳ ಕೈಗಾರಿಕಾ ಸಾಮರ್ಥ್ಯವನ್ನು ಬಳಸಿಕೊಂಡು, ಮದ್ಯ ತಯಾರಿಕಾ ಉಪಕರಣಗಳ ಉತ್ಪಾದನಾ ಹಬ್ ಆಗಿ ಕರ್ನಾಟಕವನ್ನು ಪರಿವರ್ತಿಸುವ ಕುರಿತು ಸಮಾವೇಶದಲ್ಲಿ ಚರ್ಚಿಸಲಾಯಿತು.

ಜಂಟಿ ಅಬಕಾರಿ ಆಯುಕ್ತರು, ಡಿಸ್ಟಿಲರಿಗಳ ಪ್ರತಿನಿಧಿಗಳು, ಪರಿಸರ ಸುಸ್ಥಿರತೆ ತಜ್ಞರು ಹಾಗೂ ತಂತ್ರಜ್ಞಾನ ಪೂರೈಕೆದಾರರು ಭಾಗವಹಿಸಿದ್ದರು.

ಕ್ರಾಫ್ಟ್ ಬ್ರೂವರಿಗಳಿಗೆ ಪ್ರಶಸ್ತಿ

ಇದೇ ವೇಳೆ ಭಾರತದ ಕ್ರಾಫ್ಟ್ ಬ್ರೂವಿಂಗ್ ಉದ್ಯಮದ ಅತ್ಯುತ್ತಮ ಸಾಧನೆಗಾಗಿ ಪ್ರಶಸ್ತಿ ವಿತರಿಸಲಾಯಿತು. 'ಅಮೆರಿಕನ್ ಬ್ರೂ ವರ್ಕ್ಸ್' ಸಂಸ್ಥೆಗೆ ಅತ್ಯುತ್ತಮ ಬ್ರೂವರ್ ಪ್ರಶಸ್ತಿ ಲಭಿಸಿದರೆ, 'ಕ್ಲಿಂಗ್ ಬ್ರೂವರಿ' ಮತ್ತು 'ಒಯಾಸಿಸ್' ಸಂಸ್ಥೆಗಳು ಅತ್ಯುತ್ತಮ ಬೀರ್ ಲೈನ್-ಅಪ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡವು.

ಬೌರಿಂಗ್ ದುರಂತ: ಕೊನೆಗೂ ಎಫ್ಐಆರ್

ತಡೆಗೋಡೆ ಕುಸಿದು ಏಳು ಮಂದಿ ಮೃತಪಟ್ಟಿದ್ದ ಪ್ರಕರಣ
• ಚೆನ್ನೈನ ಎಎಸ್ಆರ್ ಟ್ರೇಡರ್ಸ್ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌರಿಂಗ್ ಆಸ್ಪತ್ರೆ ಆವರಣದ ತಡೆಗೋಡೆ ಕುಸಿದು ಏಳು ಮಂದಿ ಮೃತಪಟ್ಟು, ಹಲವರು ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ದುರಂತ ಸಂಭವಿಸಿ 21 ದಿನಗಳಾದ ಮೇಲೆ ಪುಲಕೇಶಿನಗರ ಉಪ ವಿಭಾಗ ವ್ಯಾಪ್ತಿಯ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಚಂದ್ರು ಅವರು ನೀಡಿದ ದೂರಿನ ಮೇಲೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 106(1) ಅಡಿ ಚೆನ್ನೈನ ಎಎಸ್ಆರ್ ಟ್ರೇಡರ್ಸ್ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮುಖ್ಯಾಂಶಗಳು
- ಚೆನ್ನೈನ ಎಎಸ್ಆರ್ ಟ್ರೇಡರ್ಸ್ ವಿರುದ್ಧ ಎಫ್ಐಆರ್
- ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡದ ಸಂಸ್ಥೆ
- ತನಿಖೆ ಆರಂಭಿಸಿದ ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು

ನಗರದಲ್ಲಿ ಏಪ್ರಿಲ್ 30ರ ಸಂಜೆ ಧಾರಾಕಾರ ಮಳೆ ಸುರಿದಿತ್ತು. ಆಗ ಬೌರಿಂಗ್ ಆಸ್ಪತ್ರೆಯ ತಡೆಗೋಡೆ ಕುಸಿದಿದ್ದರಿಂದ ಸಾವು–ನೋವಿಗೆ ಕಾರಣವಾಗಿತ್ತು. ಘಟನೆ ನಡೆದು 21 ದಿನ ಕಳೆದ ಮೇಲೆ ಅಂದರೆ ಮೇ 20ಕ್ಕೆ ಪ್ರಕರಣ ದಾಖಲಾಗಿದೆ. ಇದಕ್ಕೂ ಮೊದಲು ಅಸಹಜ ಸಾವು ಪ್ರಕರಣ ದಾಖಲಾಗಿತ್ತು.

‘ಪ್ರಕರಣದ ತನಿಖೆಗೆಂದು ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಸಮಿತಿಯು ತನಿಖೆ ನಡೆಸಿ ವರದಿ ಸಲ್ಲಿಸಿದೆ’ ಎಂದು ಮೂಲಗಳು ಹೇಳಿವೆ.

ಎಫ್ಐಆರ್‌ನಲ್ಲಿ ಏನಿದೆ?: ‘ಬೌರಿಂಗ್ ಅಂಡ್ ಲೇಡಿ ಕರ್ಜನ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನೂತನ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನದಲ್ಲಿದ್ದ ಹಳೆಯ ಕಟ್ಟಡಗಳನ್ನು ತೆರವುಗೊಳಿಸುವ ಕಾಮಗಾರಿಯನ್ನು ಚೆನ್ನೈನ ಎಎಸ್ಆರ್ ಟ್ರೇಡರ್ಸ್ ಹೆಸರಿನ ಗುತ್ತಿಗೆ ಸಂಸ್ಥೆಗೆ ನೀಡಲಾಗಿತ್ತು. ಗುತ್ತಿಗೆ ಸಂಸ್ಥೆಯು ವೈಜ್ಞಾನಿಕವಾಗಿ ತ್ಯಾಜ್ಯವನ್ನು ವಿಲೇವಾರಿ ಮಾಡದೇ ಕಟ್ಟಡಗಳನ್ನು ನೆಲಸಮಗೊಳಿಸಿದ್ದ ಸ್ಥಳದಲ್ಲೇ ಬಿಟ್ಟುಹೋಗಿರುವುದು ದುರಂತಕ್ಕೆ ಕಾರಣವಾಗಿದೆ. ಬೌರಿಂಗ್ ಆಸ್ಪತ್ರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಭೇಟಿ ನೀಡಿದ್ದ ವೇಳೆ ‘ತ್ಯಾಜ್ಯವನ್ನು ವಿಲೇವಾರಿ ಮಾಡದೇ ಸ್ಥಳದಲ್ಲೇ ಬಿಟ್ಟು ಹೋಗಿರುವ ಗುತ್ತಿಗೆ ಸಂಸ್ಥೆ’ಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸೂಚನೆ ನೀಡಿದ್ದರು. ಅದರಂತೆ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಬಳಿ ತಡೆಗೋಡೆ ಕುಸಿದಿದ್ದ ದೃಶ್ಯ (ಸಂಗ್ರಹ ಚಿತ್ರ)

ದುರಂತದಲ್ಲಿ ಬೆಂಗಳೂರಿನ ಎಂ.ಆರ್ ಪಾಳ್ಯದ ಬಟ್ಟೆ ವ್ಯಾಪಾರಿ ಮೊಹಮ್ಮದ್ ಅಬ್ದುಲ್ ಹಕ್ (52), ಡಿ.ಜೆ. ಹಳ್ಳಿಯ ಪಾದರಕ್ಷೆ ವ್ಯಾಪಾರಿ ಫಯಾಜ್ ಅಹ್ಮದ್ (39), ಕೆ.ಜಿ ಹಳ್ಳಿ, ವಿದ್ಯಾರ್ಥಿನಿ ಮುಸಾವೀರ್ ಬೇಗಂ (6), ಕೇರಳಂನಿಂದ ಪ್ರವಾಸಕ್ಕೆ ಬಂದಿದ್ದ ಸ್ಮಿತಾ (47) ಮತ್ತು ಕೆ.ಕೆ.ಲತಾ (57), ಉತ್ತರ ಪ್ರದೇಶದ ವ್ಯಾಪಾರಿ ಸಲಾವುದ್ದೀನ್ ಅನ್ಸಾರಿ (36), ಅಸ್ಸಾಂನ ಕೆಲಸಗಾರ ನಸೀಮುಲ್ಲಾ (19) ಅವರು ಮೃತಪಟ್ಟಿದ್ದರು.

ಸ್ಪಷ್ಟನೆ ನೀಡದ ಸಂಸ್ಥೆ

ಒಪ್ಪಂದದ ಪ್ರಕಾರ ತ್ಯಾಜ್ಯವನ್ನು ವಿಲೇವಾರಿ ಮಾಡದ ಸಂಸ್ಥೆಗೆ ಮೇ 18ರ ಒಳಗೆ ಸ್ಪಷ್ಟನೆ ನೀಡುವಂತೆ ಇ–ಮೇಲ್ ಮೂಲಕ ತಿಳಿಸಲಾಗಿತ್ತು. ಆದರೆ, ಸಂಸ್ಥೆಯ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

ಕುರಿ, ಮೇಕೆ ಸಾಕಾಣಿಕೆ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಹೆಬ್ಬಾಳದ ಪಶು ವೈದ್ಯಕೀಯ ಮಹಾವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿರುವ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಕಾರ್ಯಕ್ರಮಕ್ಕೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಸೋಮವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಕುರಿ ಮತ್ತು ಮೇಕೆ ಸಾಕಾಣಿಕೆ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ವೈಜ್ಞಾನಿಕವಾಗಿ ಕುರಿ ಮತ್ತು ಮೇಕೆ ಸಾಕಾಣಿಕೆ ಮಾಡಿದರೆ ಉತ್ತಮ ಆದಾಯ ಗಳಿಸಬಹುದು. ತಳಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ವಿಜ್ಞಾನಿಗಳೊಂದಿಗೆ ಚರ್ಚಿಸಬೇಕು. ತಳಿಗಳ ಬೇಡಿಕೆಗೆ ಅನುಗುಣವಾಗಿ ಸಾಕಾಣಿಕೆ ಮಾಡಿದರೆ ಹೆಚ್ಚು ಆದಾಯ ಪಡೆದುಕೊಳ್ಳಬಹುದು’ ಎಂದು ತಿಳಿಸಿದರು.

ಪಶು ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ. ನಾಗರಾಜ ಆರ್. ಮಾತನಾಡಿ, ‘ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಕಾರ್ಯಕ್ರಮ ಆಯೋಜನೆ ಮಾಡಿರುವುದು ರೈತರಿಗೆ ಅನುಕೂಲ ಆಗಲಿದೆ. ಕುರಿ ಮತ್ತು ಮೇಕೆ ಸಾಕಾಣಿಕೆ ಮಾಡುವ ತಾಂತ್ರಿಕ ಮಾಹಿತಿ ಪಡೆದು, ವೈಜ್ಞಾನಿಕವಾಗಿ ಸಾಕಾಣಿಕೆ ಮಾಡಿದರೆ ಉತ್ತಮ ಇಳುವರಿ ಪಡೆದುಕೊಳ್ಳಬಹುದು. ಆಯಾ ಪ್ರದೇಶಕ್ಕೆ ಅನುಗುಣವಾಗಿ ಕುರಿ ಮತ್ತು ಮೇಕೆಗಳ ಆಯ್ಕೆ ಮಾಡಿ ಸಾಕಾಣಿಕೆ ಮಾಡಬೇಕು’ ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ವೈ.ಎನ್. ಶಿವಲಿಂಗಯ್ಯ ಮಾತನಾಡಿ, ‘ಇತ್ತೀಚಿನ ದಿನಗಳಲ್ಲಿ ಕುರಿ ಮತ್ತು ಮೇಕೆಯ ಮಾಂಸಕ್ಕೆ ಹೆಚ್ಚು ಬೇಡಿಕೆ ಇದೆ’ ಎಂದು ತಿಳಿಸಿದರು. ಸಿ. ನಾರಾಯಣಸ್ವಾಮಿ, ಶಿವಶಂಕರ್ ಎಂ., ಪ್ರಾಧ್ಯಾಪಕರಾದ ಲತಾ ಆರ್. ಕುಲಕರ್ಣಿ ಹಾಗೂ ವಿವಿಧ ಜಿಲ್ಲೆಗಳಿಂದ ಬಂದಿದ್ದ 31 ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಮಕ್ಕಳು ಸಾವು

ಮಾಲೂರು (ಕೋಲಾರ): ತಾಲ್ಲೂಕಿನ ಮಾಸ್ತಿ ಹೋಬಳಿ ಕೊತ್ತೂರು ಗ್ರಾಮದಲ್ಲಿ ಸೋಮವಾರ ನೀರಿನ ಹೊಂಡದಲ್ಲಿ ಈಜಲು ಹೋಗಿದ್ದ ಇಬ್ಬರು ಮಕ್ಕಳು ಮುಳುಗಿ ಮೃತಪಟ್ಟಿದ್ದಾರೆ.

ಗ್ರಾಮದ ವೆಂಕಟೇಶಪ್ಪ ಎಂಬುವರ ಮೊಮ್ಮಕ್ಕಳಾದ ದೇವಕಿರಣ್ (12) ಹಾಗೂ ವಿನೀತ್ ಕುಮಾರ್ (9) ನೀರು ಪಾಲಾದವರು. ಶಾಲೆಗೆ ಬೇಸಿಗೆ ರಜೆ ಇದ್ದ ಹಿನ್ನೆಲೆಯಲ್ಲಿ ತಾತನ ಮನೆಗೆ ಬಂದಿದ್ದರು. ಬಿಸಿಲ ಧಗೆ ಕಾರಣ ಹೊಂಡದಲ್ಲಿ ಈಜಲು ಹೋಗಿದ್ದರು.

ಬಂಗಾರಪೇಟೆ ತಾಲ್ಲೂಕಿನ ಕಾಮಸಮುದ್ರ ಸಮೀಪದ ಬಗ್ಗಟ್ಟಿ ಗ್ರಾಮದ ಭಾಗ್ಯಮ್ಮ ಹಾಗೂ ಚಂದ್ರಪ್ಪ ಪುತ್ರ ದೇವಕಿರಣ್ ಬೆಂಗಳೂರಿನ ರಾಮಮೂರ್ತಿ ನಗರದ ಸರ್ಕಾರಿ ಶಾಲೆಯಲ್ಲಿ 6ನೇ ತರಗತಿ ಓದುತ್ತಿದ್ದ. ಅಶ್ವತ್ಥಪ್ಪ ಮತ್ತು ಗೌರಮ್ಮ ಪುತ್ರ ವಿನೀತ್ ಕುಮಾರ್ ಬಂಗಾರಪೇಟೆ ಸರ್ಕಾರಿ ಶಾಲೆಯಲ್ಲಿ 3ನೇ ತರಗತಿ ಓದುತ್ತಿದ್ದ.

ಜಿಲ್ಲೆಯಲ್ಲಿ 20 ದಿನಗಳಲ್ಲಿ ಏಳು ಮಂದಿ ನೀರು ಪಾಲಾಗಿದ್ದಾರೆ. ಈಗ ಮತ್ತಿಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ಶೌಚಾಲಯದಲ್ಲಿ ಫೋಟೊ, ವಿಡಿಯೊ ಚಿತ್ರೀಕರಿಸಲು ಯತ್ನ: ಎಫ್ಐಆರ್

ಬೆಂಗಳೂರು: ಆಸ್ಪತ್ರೆಯ ಶೌಚಾಲಯ ದಲ್ಲಿ ಗರ್ಭಿಣಿಯ ಫೋಟೊ, ವಿಡಿಯೊ ಚಿತ್ರೀಕರಿಸಲು ಯತ್ನಿಸಿದ ಆರೋಪದಡಿ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆ ನೀಡಿದ ದೂರಿನ ಮೇಲೆ ಹೌಸ್‌ಕೀಪಿಂಗ್ ಸಿಬ್ಬಂದಿ ಕೃಷ್ಣ ರಾಮ್ ಪಾಂಗಿಂಗ್ ಮತ್ತು ಆಸ್ಪತ್ರೆ ಆಡಳಿತ ಮಂಡಳಿ ವಿರುದ್ಧ ಪ್ರಕರಣ ದಾಖಲಾಗಿದೆ. ಮೇ 21ರಂದು ಮಧ್ಯಾಹ್ನ ಸರ್ಜಾಪುರ ರಸ್ತೆಯಲ್ಲಿ ಖಾಸಗಿ ಆಸ್ಪತ್ರೆಯೊಂದರಲ್ಲಿ ಘಟನೆ ನಡೆದಿತ್ತು ಎಂದು ಮೂಲಗಳು ಹೇಳಿವೆ.

ಆಸ್ಪತ್ರೆಯ ಶೌಚಾಲಯವನ್ನು ಬಳಸುತ್ತಿದ್ದಾಗ, ಅಲ್ಲಿನ ಹೌಸ್‌ಕೀಪಿಂಗ್ ಸಿಬ್ಬಂದಿ ಕೃಷ್ಣರಾಮ್ ಪಾಂಗಿಂಗ್ ಎಂಬಾತ ಸಂಶಯಾಸ್ಪದವಾಗಿ ವರ್ತಿಸುತ್ತಿರುವುದು ಅವರ ಗಮನಕ್ಕೆ ಬಂದಿತ್ತು. ಮೊಬೈಲ್ ಫೋನ್ ಬಳಸಿ, ಶೌಚಾಲಯದ ಒಳಗಿನ ದೃಶ್ಯಗಳನ್ನು ಚಿತ್ರೀಕರಣ ಮಾಡುತ್ತಿರುವುದನ್ನು ಗಮನಿಸಿದ ಮಹಿಳೆ ತಕ್ಷಣ ಆತನನ್ನು ಪ್ರಶ್ನಿಸಿದ್ದರು. ಇದರಿಂದ ಗಾಬರಿಗೊಂಡ ಆರೋಪಿ ಸ್ಥಳದಿಂದ ಪರಾರಿ ಆಗಲು ಯತ್ನಿಸಿದ್ದ. ತಕ್ಷಣವೇ ಆಸ್ಪತ್ರೆಯ ಆಡಳಿತ ಮಂಡಳಿಗೆ ಮಹಿಳೆ ಮಾಹಿತಿ ನೀಡಿದ್ದರು ಎಂದು ಮೂಲಗಳು ಹೇಳಿವೆ.

‘ಆರೋಪಿಯ ಮೊಬೈಲ್‌ನಲ್ಲಿ ಹಲವು ಮಹಿಳೆಯರ ಫೋಟೊ ಹಾಗೂ ವಿಡಿಯೊಗಳು ಇವೆ ಎಂಬುದಾಗಿ ಮಹಿಳೆ ಆರೋಪಿಸಿದ್ದರು. ಆರೋಪಿಯ ಮೊಬೈಲ್ ಜಪ್ತಿ ಮಾಡಿಕೊಂಡು ಪರಿಶೀಲನೆ ನಡೆಸಲಾಗಿದೆ. ಆರೋಪಿಯ ಮೊಬೈಲ್‌ನಲ್ಲಿ ಸದ್ಯಕ್ಕೆ ಯಾವುದೇ ಆಕ್ಷೇಪಾರ್ಹ ಫೋಟೊ ಅಥವಾ ವಿಡಿಯೊಗಳು ಇಲ್ಲ. ದತ್ತಾಂಶ ಅಳಿಸಿ ಹಾಕಿರುವ ಸಾಧ್ಯತೆ ಇದೆ. ಮೊಬೈಲ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಆರೋಪಿ ಹಾಗೂ ಆಸ್ಪತ್ರೆಯ ಆಡಳಿತ ಮಂಡಳಿಗೆ ನೋಟಿಸ್ ಜಾರಿ ಮಾಡಿ ತನಿಖೆ ಚುರುಕುಗೊಳಿಸಲಾಗಿದೆ’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಸೈದುಲ್ಲಾ ಅಡಾವತ್ ತಿಳಿಸಿದ್ದಾರೆ.

ಚಿಕ್ಕಬಾಣಾವರದ ಅಬ್ಬಿಗೆರೆ ಮುಖ್ಯರಸ್ತೆಯ ಬಾರ್ ಎದುರು ಗಲಾಟೆ
ಡ್ರ್ಯಾಗರ್‌ನಿಂದ ಇರಿದು ವ್ಯಕ್ತಿ ಕೊಲೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರದ ಅಬ್ಬಿಗೆರೆ ಮುಖ್ಯ ರಸ್ತೆಯ ಮೀನಾ ಬಾರ್ ಎದುರು ಭಾನುವಾರ ತಡ ರಾತ್ರಿ ನಡೆದ ಗಲಾಟೆಯಲ್ಲಿ ಆಟೊ ಚಾಲಕ, ರಜಾಕ್ ಸಾಬ್ ಪಾಳ್ಯದ ಸೈಯದ್ ಶಫಿ (36) ಅವರನ್ನು ದುಷ್ಕರ್ಮಿಯೊಬ್ಬ ಡ್ರ್ಯಾಗರ್‌ನಿಂದ ಇರಿದು ಕೊಲೆ ಮಾಡಿದ್ದಾನೆ.

ಸೈಯದ್ ಶಫಿ

ದರ್ಶನ್ ಅಲಿಯಾಸ್ ‘ದಾಸ’ ತನ್ನ ಸ್ನೇಹಿತರ ಜತೆಗೆ ಪಾರ್ಟಿ ಮಾಡಲು ಬಾರ್‌ಗೆ ಭಾನುವಾರ ರಾತ್ರಿ ಬಂದಿದ್ದ. ಬಾರ್ ಬಾಗಿಲು ಮುಚ್ಚಿದ ಮೇಲೆ ಎಲ್ಲರೂ ಹೊರಕ್ಕೆ ಬಂದಿದ್ದರು. ಹೊರಗೆ ಬಂದ ದರ್ಶನ್ ಹಾಗೂ ಸಹಚರರು ಮೂತ್ರ ವಿಸರ್ಜನೆ ಮಾಡಲು ರಸ್ತೆಬದಿಗೆ ತೆರಳಿದ್ದರು. ಅಲ್ಲೇ ಪಕ್ಕದಲ್ಲಿ ಆಟೊದಲ್ಲಿ ಇಬ್ಬರು ವ್ಯಕ್ತಿಗಳು ಕುಳಿತಿದ್ದರು. ಆಟೊದಲ್ಲಿ ಕುಳಿತಿದ್ದ ಶಫಿ ಅವರು ‘ಏನೋ ನನ್ನನ್ನು ಗುರಾಯಿಸುತ್ತಿದ್ದೀಯಾ’ ಎಂದು ದರ್ಶನ್ ಅವರನ್ನು ಪ್ರಶ್ನಿಸಿದ್ದರು. ಆಗ ಶಫಿ ಹಾಗೂ ದರ್ಶನ್ ನಡುವೆ ಗಲಾಟೆ ನಡೆದಿತ್ತು. ನಂತರ, ದರ್ಶನ್ ಡ್ರ್ಯಾಗರ್ ತೆಗೆದು ಸೈಯದ್ ಶಫಿ ಅವರ ಕುತ್ತಿಗೆಯ ಬಳಿ ಚುಚ್ಚಿದ್ದ. ರಕ್ತದ ಮಡುವಿನಲ್ಲಿ ಬಿದಿದ್ದ ಸೈಯದ್ ಶಫಿ ಸ್ಥಳದಲ್ಲೇ ಮೃತಪಟ್ಟರು. ಆಟೊದಲ್ಲಿದ್ದ ಮತ್ತೊಬ್ಬ ವ್ಯಕ್ತಿ ಓಡಿಹೋಗಿ ಪಾರಾಗಿದ್ದಾನೆ ಎಂದು ಮೂಲಗಳು ಹೇಳಿವೆ.

ಶಫಿ ಅವರ ಚಿಕ್ಕಮ್ಮನ ಮಗ ಮೊಹಮ್ಮದ್ ನಯಾಜ್ ನೀಡಿರುವ ದೂರು ಆಧರಿಸಿ ಚಿಕ್ಕಬಾಣಾವರ ಪೊಲೀಸರು ಪ್ರಕರಣ ದಾಖಲಿಸಿ ಆರೋಪಿಗಳ ಬಂಧನಕ್ಕೆ ತೀವ್ರ ಶೋಧ ಕೈಗೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಹಣಕಾಸು ವಿಚಾರಕ್ಕೆ ಗಲಾಟೆ: ಆಟೊ ಚಾಲಕನ ಕೊಲೆ

ಅಪರಾಧ ಸುದ್ದಿ

ಬೆಂಗಳೂರು: ಹಣಕಾಸು ವಿಚಾರಕ್ಕೆ ನಡೆದ ಗಲಾಟೆಯಲ್ಲಿ ತಾವರೆಕೆರೆಯ ಉದಯ ಲೇಔಟ್‌ನ ಎರಡನೇ ಹಂತದ ನಿವಾಸಿ, ಆಟೊ ಚಾಲಕ ಎನ್. ರಕ್ಷಿತ್ ಅವರನ್ನು ಕೊಲೆ ಮಾಡಿ ಮೃತದೇಹವನ್ನು ಎಸೆದು ಆರೋಪಿಗಳು ಪರಾರಿ ಆಗಿದ್ದಾರೆ.

ರಕ್ಷಿತ್ ಅವರ ತಾಯಿ ಪುಷ್ಪಾ ಅವರು ನೀಡಿದ ದೂರಿನ ಮೇಲೆ ಮೋಹಿನ್ ಪಾಷಾ ಹಾಗೂ ಹಸನ್ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಎನ್.ರಕ್ಷಿತ್ ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ರಕ್ಷಿತ್ ಅವರಿಂದ ಕಂಬೀಪುರದ ನಿವಾಸಿ ಮೋಹಿನ್ ಪಾಷಾ ಹಣ ಪಡೆದುಕೊಂಡಿದ್ದ. ಸ್ನೇಹಿತನೇ ಆಗಿದ್ದ ಮೋಹಿನ್ ಪಾಷಾನಿಂದ ಹಣ ತೆಗೆದುಕೊಂಡು ಬರುವುದಾಗಿ ಹೇಳಿ ಭಾನುವಾರ ಸಂಜೆ ರಕ್ಷಿತ್ ಮನೆಯಿಂದ ಹೊರಟಿದ್ದರು. ಹಣ ವಾಪಸ್ ಕೇಳಿದ ವಿಚಾರಕ್ಕೆ ಭಾನುವಾರ ಸಂಜೆ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಆಗ ಆರೋಪಿಗಳಾದ ಮೋಹಿನ್ ಪಾಷಾ ಹಾಗೂ ಹನಸ್ ಸೇರಿಕೊಂಡು ರಕ್ಷಿತ್ ಮೇಲೆ ದೊಣ್ಣೆಯಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದರು. ಮೃತದೇಹವನ್ನು ರಾಮಸಂದ್ರದ ಖಾಲಿ ಪ್ರದೇಶದ ಗುಂಡಿಯಲ್ಲಿ ಎಸೆದು ಹೋಗಿದ್ದಾರೆ ಎಂದು ಪೊಲೀಸರು ಹೇಳಿದರು.

ಜಲಾಶಯದಲ್ಲಿ ಕಾಡಾನೆ ಕಳೇಬರ ಪತ್ತೆ

ಪ್ರಜಾವಾಣಿ ವಾರ್ತೆ

ದಾಂಡೇಲಿ: ತಾಲ್ಲೂಕಿನ ಬೊಮ್ಮನಹಳ್ಳಿ ಜಲಾಶಯದಲ್ಲಿ ಕಾಡಾನೆ ಕಳೇಬರ ಸೋಮವಾರ ಪತ್ತೆಯಾಗಿದೆ. 9ರಿಂದ 10 ವರ್ಷದ ಗಂಡು ಆನೆಯ ಕಳೇಬರ ಎಂದು ಗುರುತಿಸಲಾಗಿದೆ.

ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಜಲಾಶಯದಿಂದ ಆನೆಯ ಮೃತದೇಹವನ್ನು ಹೊರತೆಗೆದು, ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು.

'ಆನೆಯ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕವೇ ಗೊತ್ತಾಗಲಿದೆ' ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ದೊಣ್ಣೆಯಿಂದ ಹೊಡೆದು ವ್ಯಕ್ತಿ ಕೊಲೆ

ಬೆಂಗಳೂರು: ಊಟ ಮಾಡುವಾಗ ಇಬ್ಬರ ನಡುವೆ ಗಲಾಟೆ ನಡೆದು, ವ್ಯಕ್ತಿಯೊಬ್ಬರನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ಕುಂದಲಹಳ್ಳಿಯಲ್ಲಿ ನಡೆದಿದೆ.

ಮೆಹಬೂಬ್ ಬಾಷಾ

ಎಸ್.ಮೆಹಬೂಬ್ ಬಾಷಾ (59) ಕೊಲೆಯಾದವರು.

ಕೃತ್ಯ ಎಸಗಿದ ಸುಂದರಮೂರ್ತಿ ವಿರುದ್ಧ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೆಹಬೂಬ್ ಬಾಷಾ ಅವರ ಪುತ್ರಿ ಸಬೀಹಾ ಅವರು ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ಮೆಹಬೂಬ್ ಬಾಷಾ ಅವರಿಗೆ ವಿಪರೀತ ಮದ್ಯ ಸೇವಿಸುವ ಅಭ್ಯಾಸವಿತ್ತು. ಭಾನುವಾರ ಸಹ ವಿಪರೀತ ಮದ್ಯ ಸೇವಿಸಿದ್ದರು. ರಾತ್ರಿ 9.30ರ ಸುಮಾರಿಗೆ ಊಟ ಮಾಡುವಾಗ ಸುಂದರ ರಾಜ್ ಅವರೊಂದಿಗೆ ಗಲಾಟೆ ನಡೆದು, ದೊಣ್ಣೆಯಿಂದ ಹೊಡೆದು ಕೊಲೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೇಗುಲ ಶುಚಿಗೊಳಿಸಿದ ಆಡಳಿತ ಮಂಡಳಿ

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರಸ್ವಾಮಿ ದೇವಾಲಯದ ಗದ್ದುಗೆ ಭಾಗದ ಗರ್ಭಗುಡಿ ಪ್ರದೇಶಕ್ಕೆ ಸ್ವಾಮೀಜಿಯೊಬ್ಬರು ಪ್ರವೇಶ ಮಾಡಿದ ಕಾರಣ ಸೋಮವಾರ ಸಂಜೆ ದೇವಾಲಯವನ್ನು ಶುಚಿಗೊಳಿಸಲಾಗಿದೆ.

ದೇವಾಲಯದ ಸಿದ್ಧಲಿಂಗೇಶ್ವರ ಸ್ವಾಮಿ ಗದ್ದುಗೆಗೆ ಪೂಜೆ ಮಾಡಲು ಸರದಿ ಅರ್ಚಕರಿಗೆ ಮಾತ್ರ ಅವಕಾಶವಿದೆ. ಸೋಮವಾರ ಗದಗ ಕಡೆಯಿಂದ ಬಂದಿದ್ದ ಸ್ವಾಮೀಜಿಯೊಬ್ಬರು ಗರ್ಭಗುಡಿ ಪ್ರವೇಶಿಸಿದ್ದರು. ಇದಕ್ಕೆ ಭಕ್ತರಿಂದ ತೀವ್ರ ಅಸಮಾಧಾನ ವ್ಯಕ್ತವಾಗಿತ್ತು. ದೇವಾಲಯದ ಆಡಳಿತಾಧಿಕಾರಿಗಳು ಹೋಮ ನಡೆಸಿದರು. ಎಡೆ ಸಮರ್ಪಣೆ ಮತ್ತು ಪೂಜಾ ವಿಧಿಗಳು ನಡೆದವು.

ಸರದಿ ಅರ್ಚಕರು ಮತ್ತು ಆಗಮಿಕರ ನಿರ್ಲಕ್ಷ್ಯದಿಂದ ಈ ಘಟನೆ ನಡೆದಿದೆ. ಭಕ್ತರ ಭಾವನೆಗೆ ಧಕ್ಕೆಯಾಗಿದೆ. ಸಂಬಂಧಪಟ್ಟ ಅರ್ಚಕರು ಮತ್ತು ಆಗಮಿಕರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಜಗದೀಶ್ ತಿಳಿಸಿದ್ದಾರೆ.

‘ಮೇ 31ರಂದು ಜಾಣ ಜಾಣೆಯರ ನಗೆ ಹಬ್ಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಣ–ಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್ ವತಿಯಿಂದ ‘ಜಾಣ–ಜಾಣೆಯರ ನಗೆ ಉತ್ಸವ’ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಮೇ 31ರಂದು ನಡೆಯಲಿದೆ ಎಂದು ಚೌಡಯ್ಯ ಮೆಮೋರಿಯಲ್ ಹಾಲ್ ಕಾರ್ಯದರ್ಶಿ ಸುಮಾ ಸುಧೀಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಿಮಿಕ್ರಿ ದಯಾನಂದ್, ಪ್ರೊ. ಎಂ. ಕೃಷ್ಣೇಗೌಡ, ಮಿಮಿಕ್ರಿ ಗೋಪಿ, ಗಂಗಾವತಿ ಪ್ರಾಣೇಶ್, ವೈ.ವಿ. ಗುಂಡೂರಾವ್, ಕೋಗಳಿ ಕೊಟ್ರೇಶ್, ಕಿರ್ಲೋಸ್ಕರ್ ಸತ್ಯ, ಶಿವಾರ ಉಮೇಶ್, ಪ್ರಹ್ಲಾದಾಚಾರ್ಯ ಹಾಗೂ ಎಂ.ಎಸ್. ನರಸಿಂಹಮೂರ್ತಿ ಅವರು ನಗೆಹಬ್ಬದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಂಗೀತ ನಿರ್ದೇಶಕ ಗುರುಕಿರಣ್, ಡ್ರಮ್ಸ್ ದೇವ ವಿಶೇಷ ಪ್ರದರ್ಶನ ನೀಡಲಿದ್ದಾರೆ. ಈ ಉತ್ಸವದಲ್ಲಿ 60 ಕಲಾವಿದರಿಗೆ ತಲಾ ₹10 ಲಕ್ಷ ಮೌಲ್ಯದ ಆರೋಗ್ಯ ವಿಮಾ ಪಾಲಿಸಿಯನ್ನು ಉಚಿತವಾಗಿ ವಿತರಿಸಲಾಗುತ್ತದೆ ಎಂದು ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

IN THE COURT OF THE LX ADDL CITY CIVIL & SESSIONS JUDGE, AT BANGALORE (CCH-61)
MISC PETITION: 549 OF 2017
BETWEEN:
Smt. Vijayalakshmi, W/o Late B.R. Ramakrishna, Residing at: No.3, Link Road, 2nd Cross, Malleshwaram, Bengaluru-560003
and others ...Petitioners
AND:
V. Chandrashekar and others. ...Respondents
Notice/Summons to the Respondent No. 1(a) and 1(b) Under Order V Rule 20 of the Code of Civil Procedure 1908.
1(a). Smt. Lakshmamma @ Lakshmi, W/o Late V. Chandrashekar, Major, R/at 1st Main, 2nd Cross, Kaverinagar, R.T. Nagar Post, Bengaluru-560 040.
1(b). Sri Vasanthkumar, S/o Late V. Chandrashekar, Major, R/at 1st Main, 2nd Cross, Kaverinagar, R.T. Nagar Post, Bengaluru-560040.
...Respondents
Whereas, the Petitioners herein have filed the above Miscellaneous Petition No. 549/2017 before this Hon'ble Court seeking revocation of the said Succession certificate;
Whereas, Respondent No. 1 is deceased and the application for brining legal Representatives namely Respondent No.1(a) and 1(b) have been filed;
Wherefore the Respondent No 1(a) and 1(b) are hereby called upon to appear before this Court either in person or through a pleader duly instructed on 15.07.2026 at 11 AM to show cause against the Petitioner failing which the above Petition will be heard in your absence by considering the Respondent No 1(a) and (b) as absent.
Given under my dated and the seal of this Hon'ble Court dated 22nd April 2026 at Bengaluru.
By the Order of the Court
Sd/- Senior Sheristedar
City Civil Court, Bengaluru
Advocate for Petitioner:
B N PRAKASH, ADVOCATE
LAWYERS INC
ADVOCATES & SOLICITORS
No.15/2, V.S. Raju Road, 12th Block, Kumara Park West, Bengaluru-560 020.
Ph: +91 (080) 4155 3014

PERSONAL

Change of Name

I, BHAVANA V, D/O Venkatesh K S, residing at NO.002 Bhargava Dhama No. 56/56A NR Punjab National Bank Anandnagar, Bangalore 560024, hereby declare that my name shall henceforth be written and known as Bhavana Venkatesh for all purposes.

I, G PRASADA REDDY S/o G SREENIVASA REDDY have changed my name to G PRASAD REDDY vide affidavit dated: 25/5/2026 Before Notary Vanajakshi. R Bangalore.

I, MARLYN RUPIKA, have changed my daughter's name from SONIYA RACHEL ADVANI to SONIYA RACHEL, vide affidavit dated 25/05/2026 before notary M.Rajendra, Bangalore.

I, LAKSHMI W/o G PRASAD REDDY have changed my name to LAKSHMI KOTHANUR MUNIREDDY vide affidavit dated: 25/5/2026 Before Notary Vanajakshi. R Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EDUCATION
To Place your Classified Ads Contact: 9845114560

3M
3M INDIA LIMITED
CIN: L31300KA1987PLC013543
Registered Office: Plot Nos. 48-51, Electronic City, Hosur Road, Bengaluru – 560100
Phone: 080-22231414 |
Email id: investorhelpdesk.in@mmm.com
Website: www.3m.com/in
Corrigendum
In the publication titled *"Extract of the Financial Results for the quarter and year ended 31 March 2026"* of 3M India Limited, published on 23 May 2026 in all editions of *Business Line* and Bengaluru edition of *Prajavani*, the note above the financial figures table should be read as **"Rs. in Crores,** *except per share data, unless otherwise stated"* instead of **"Rs. in Lakhs,** *except per share data, unless otherwise stated."* Please take this change into consideration. All other contents of the publication remain unchanged.
For 3M India Limited
Pratap Rudra Bhuvanagiri
Company Secretary & Compliance Officer
Date: May 25, 2026
Place: Bengaluru

ನೈಋತ್ಯ ರೈಲ್ವೆ
ಮುಕ್ತ ಟೆಂಡರ್ ಸೂಚನೆ ಸಂಖ್ಯೆ. ಬಿಇ–29–2026–27–ಒಟಿ–02 (ಇ–ಟೆಂಡರಿಂಗ್ ಮೂಲಕ)
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಕೆಲಸದ ವಿವರಣೆ	ಅಂದಾಜು ಮೌಲ್ಯ
1	ಬಿಇ–29–2026–27–ಒಟಿ–02	ಹಳೆಯ ಸಾಂಪ್ರದಾಯಿಕ ಎಸಿ ಘಟಕಗಳ ಬದಲಿಗೆ ಬಿಇಇ 5 ಸ್ಟಾರ್ ರೇಟಿಂಗ್ ಹೊಂದಿರುವ ಹವಾನಿಯಂತ್ರಣ ಘಟಕಗಳನ್ನು ಸಮಯದ ಆಧಾರದ ಮೇಲೆ ಒದಗಿಸುವುದು ಮತ್ತು ಬೆಂಗಳೂರು ವಿಭಾಗದ ಮೇಲೆ ಹಳೆಯ ಬಿಇಇ 5 ಸ್ಟಾರ್ ರೇಟಿಂಗ್ ಹೊಂದಿರುವ ಗೀಸರ್‌ಗಳ ಬದಲಿಗೆ ಬಿಇಇ 5 ಸ್ಟಾರ್ ರೇಟಿಂಗ್ ಹೊಂದಿರುವ ಗೀಸರ್‌ಗಳನ್ನು ಸಮಯದ ಮತ್ತು ಸ್ಥಿತಿಯ ಆಧಾರದ ಮೇಲೆ ಒದಗಿಸುವುದು 2) ಬೆಂಗಳೂರು ವಿಭಾಗದಲ್ಲಿ ಪ್ರಮುಖ ಜಿಎಲ್ಆರ್ ಗಳ ಮೇಲೆ ಸ್ಟ್ಯಾಂಡ್‌ಬೈ ಪಂಪ್‌ಗಳನ್ನು ಒದಗಿಸುವುದು ಮುಗಿಸುವ ಅವಧಿ (ತಿಂಗಳು): 08 ತಿಂಗಳು	ರೂ. 1,02,70,867/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–06–2026 ರಂದು 15.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ ಜನರಲ್/, ಬೆಂಗಳೂರು
ಪಿಯುಬಿ/146/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27
ಸುಲಭ ಟಿಕೆಟ್ ಬುಕಿಂಗ್, ಪಿಎನ್ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪದ್ಮನಾಭನಗರ ವಿಭಾಗ, ಸಾಗರ್ ಆಸ್ಪತ್ರೆ ಎದುರು, ಕುಮಾರಸ್ವಾಮಿ ಲೇಔಟ್, ಬೆಂಗಳೂರು – 560111.
ಸಂಖ್ಯೆ: ಕಾಅ(ಪನ)/ಟೆಂಡರ್/02/2026–27 ದಿನಾಂಕ: 25–05–2026
ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಏಕ ಲಕೋಟೆ ಪದ್ಧತಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಪದ್ಮನಾಭನಗರ ವಿಭಾಗ, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಯಲ್ಲಿ ನೋಂದಾಯಿತರಾದ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–1)

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ವಾರ್ಡ್ ಸಂಖ್ಯೆ. 192 (ಹಳೇ ವಾರ್ಡ್ ಸಂಖ್ಯೆ. 181) ಕುಮಾರಸ್ವಾಮಿ ಲೇಔಟ್ ಇಲ್ಲಿನ ಪದ್ಮನಾಭನಗರ ವಿಭಾಗ ಕಛೇರಿ ಆವರಣದಲ್ಲಿರುವ ವಾರ್ಡ್ ಕಛೇರಿ ಕಟ್ಟಡದ ದುರಸ್ತಿ ಕೆಲಸಗಳ ಕಾಮಗಾರಿ. (4ನೇ ಕರೆ) – (ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 5.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 12,500/–

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸುವ ದಿನಾಂಕ: 10–06–2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ. 3) ಟೆಂಡರ್‌ನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 11–06–2026 ರಂದು 16.05 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಪದ್ಮನಾಭನಗರ ವಿಭಾಗ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಪದ್ಮನಾಭನಗರ ವಿಭಾಗ, ಬೆಂದನಪಾ.

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/184/2026
ದಿನಾಂಕ : 19–05–2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಚಾಮರಾಜನಗರ (CMNR) ನಿಲ್ದಾಣ ಯಾರ್ಡ್ ಮರುರೂಪಿಸಲು ನಿರ್ಮಾಣ ಮತ್ತು ಹೊಸ ಅಗ್ರಹಾರ (HAH) ನಿಲ್ದಾಣದ ಚೈ:48655ನಲ್ಲಿ ಹೆಚ್ಚುವರಿ ಲೂಪ್‌ಲೈನ್ ಒದಗಿಸುವುದಕ್ಕಾಗಿ ಸಂಯೋಜಿತ ಕಾಮಗಾರಿ (ಸಿವಿಲ್, ವಿದ್ಯುತ್ ಸಾಮಾನ್ಯ ಮತ್ತು ಓಹೆಚ್ಇ ಕಾಮಗಾರಿಗಳು) (ಟೆಂಡರ್ ಉಲ್ಲೇಖ ಸಂ. ಸಿಎಂಎನ್ಆರ್–ಹೆಚ್‌ಎಹೆಚ್–ಯಾರ್ಡ್–ಲೂಪ್‌ಲೈನ್)	ರೂ. 57,03,74,165/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–06–2026 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು
ಪಿಯುಬಿ/149/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂಖ್ಯೆ ಇಸಿಎನ್–ಟಿಆರ್‌ಡಿ–04–2025–ಆರ್‌ಟಿ ದಿನಾಂಕ 19.05.2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಎಸ್‌ಡಬ್ಲ್ಯೂಆರ್ ವಲಯದ ಹುಬ್ಬಳ್ಳಿಯ ಮುಖ್ಯ ವಿದ್ಯುತ್ ಅಭಿಯಂತರರು, ನಿರ್ಮಾಣ ವ್ಯಾಪ್ತಿಯಲ್ಲಿ ವಿವಿಧ ನಿರ್ಮಾಣ ಸ್ಥಳಗಳು/ವಿಭಾಗಗಳಿಗೆ (ಬೆಂಗಳೂರು ದಂಡು ಮತ್ತು ಹುಬ್ಬಳ್ಳಿ ಘಟಕ) ಯೋಜನಾ ಮೇಲ್ವಿಚಾರಣಾ ಸೇವೆಗಳನ್ನು ಒದಗಿಸಲು ಯೋಜನಾ ಮೇಲ್ವಿಚಾರಣಾ ಸೇವೆಗಳ ಸಂಸ್ಥೆ (ಪಿಎಸ್‌ಎಸ್‌ಎ) ನೇಮಕಕ್ಕಾಗಿ ಪ್ರಸ್ತಾವನೆ (ಆರ್ ಎಫ್‌ಪಿ)ಯ ವಿನಂತಿ	ರೂ. 2,56,49,420.16/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03–07–2026 ರಂದು 11.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಉಪ ಮುಖ್ಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ-I/ ನಿರ್ಮಾಣ/ಬೆಂಗಳೂರು ದಂಡು
ಪಿಯುಬಿ/147/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27
ಸುಲಭ ಟಿಕೆಟ್ ಬುಕಿಂಗ್, ಪಿಎನ್ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

₹39,437 ಕೋಟಿ ವೆಚ್ಚದ ತ್ಯಾಜ್ಯ ಗುತ್ತಿಗೆಗೆ ಅಸ್ತು

ಒಂದೇ ಸಂಸ್ಥೆಗೆ 30 ವರ್ಷ ಗುತ್ತಿಗೆ, ಪ್ರತಿವರ್ಷ ಶೇ 5ರಷ್ಟು ಹೆಚ್ಚಳ: ಸಚಿವ ಸಂಪುಟ ಸಮ್ಮತಿ

• ನವೀನ್ ಮಿನೇಜಸ್

ಬೆಂಗಳೂರು: ಹಣಕಾಸು ಇಲಾಖೆಯ ಎಚ್ಚರಿಕೆಯನ್ನು ನಿರ್ಲಕ್ಷಿಸಿ, ರಾಜ್ಯ ಸರ್ಕಾರವು ₹39,437 ಕೋಟಿ ವೆಚ್ಚದ ಘನತ್ಯಾಜ್ಯ ನಿರ್ವಹಣೆಯ ಎರಡು ಬೃಹತ್ ಗುತ್ತಿಗೆಗಳಿಗೆ ಅನುಮೋದನೆ ನೀಡಿದೆ.

ಹೆಚ್ಚಿದ ವೆಚ್ಚ, ವಾರ್ಷಿಕ ಏರಿಕೆ ಮತ್ತು ಒಂದೇ ಸಂಸ್ಥೆಯೊಂದಿಗೆ ದೀರ್ಘಾವಧಿಯ ಒಪ್ಪಂದದ ಬಗ್ಗೆ ಹಣಕಾಸು ಇಲಾಖೆ ಎಚ್ಚರಿಕೆ ನೀಡಿತ್ತು. ಆದರೂ, ಹೈದರಾಬಾದ್‌ನ ರಾಮ್‌ಕೀ ಗ್ರೂಪ್‌ನ ಸೋದರ ಸಂಸ್ಥೆಯಾದ ದಿಲ್ಲಿ ಎಂಎಸ್‌ಡಬ್ಲ್ಯು ಸಲ್ಯೂಷನ್ಸ್ ಲಿಮಿಟೆಡ್‌ಗೆ ಗುತ್ತಿಗೆ ನೀಡಲಾಗಿದ್ದು, ನಗರದಲ್ಲಿ ಪ್ರತಿನಿತ್ಯ 5,200 ಟನ್ ತ್ಯಾಜ್ಯವನ್ನು ಸಂಸ್ಕರಿಸುವುದು ಮತ್ತು ವಿಲೇವಾರಿ ಮಾಡುವ ಕಾರ್ಯವನ್ನು ಮುಂದಿನ 30 ವರ್ಷ ಸಂಸ್ಥೆ ನಿರ್ವಹಿಸಲಿದೆ.

ಸರ್ಕಾರದ ಆಂತರಿಕ ಟಿಪ್ಪಣಿಗಳು ಪತ್ರಿಕೆಗೆ ಲಭ್ಯವಾಗಿದ್ದು, ಸಚಿವ ಸಂಪುಟದಲ್ಲಿ ಈ ಗುತ್ತಿಗೆಯ ಅನುಮೋದನೆಗೆ ಮಂಡಿಸುವ ಮುನ್ನ, ನಗರಾಭಿವೃದ್ಧಿ ಇಲಾಖೆ ಗುತ್ತಿಗೆಯ ಪ್ರಸ್ತಾವ ಸಲ್ಲಿಸಿದಾಗ ಹಣಕಾಸು ಇಲಾಖೆ ನಾಲ್ಕು ಪ್ರಮುಖ ಆಕ್ಷೇಪಣೆಗಳನ್ನು ದಾಖಲಿಸಿದೆ. ಅಲ್ಲದೆ, ಈ ಪ್ರಸ್ತಾವನ್ನು ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಬೇಕು ಎಂದು ಸಲಹೆ ನೀಡಿತ್ತು. ಇದೆಲ್ಲದರ ನಡುವೆಯೂ ಸಚಿವ ಸಂಪುಟ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ.

ಗುತ್ತಿಗೆ ಆರಂಭವಾಗುವ ಮೊದಲೇ ಅತಿಹೆಚ್ಚು ವೆಚ್ಚವನ್ನು ಮಾಡುವ ಬಗ್ಗೆ ಆರ್ಥಿಕ ಇಲಾಖೆ ಪ್ರಮುಖ ಆಕ್ಷೇಪಣೆ ದಾಖಲಿಸಿತ್ತು.

ಯಲಹಂಕ, ದಾಸರಹಳ್ಳಿ, ಪೂರ್ವ ಮತ್ತು ಪಶ್ಚಿಮ ವಲಯಗಳನ್ನು ಒಳಗೊಂಡ ಉತ್ತರ ಪ್ಯಾಕೇಜ್‌ನ ಅಂದಾಜು ವೆಚ್ಚ ₹17,982.90 ಕೋಟಿ ಎಂದು ನಗರಾಭಿವೃದ್ಧಿ ಇಲಾಖೆ ನಮೂದಿಸಿದೆ. ಆದರೆ, ₹21,444 ಕೋಟಿಗೆ ಬಿಡ್ ಮಾಡಲಾಗಿದ್ದು, ₹3,461 ಕೋಟಿ ಮೂಲ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿದೆ.

ಇದೇ ರೀತಿ ಆರ್. ಆರ್. ನಗರ, ಮಹದೇವಪುರ, ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯಗಳನ್ನು ಒಳಗೊಂಡ ದಕ್ಷಿಣ ಪ್ಯಾಕೇಜ್‌ನ ಅಂದಾಜು ವೆಚ್ಚ ₹15,065 ಕೋಟಿ. ₹17,993.33 ಕೋಟಿಗೆ ಬಿಡ್ ಸಲ್ಲಿಸಲಾಗಿದ್ದು, ₹2,928 ಕೋಟಿ ಹೆಚ್ಚಿನ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ಒಟ್ಟಾರೆ, ₹6,389 ಕೋಟಿ ವೆಚ್ಚ ಹೆಚ್ಚಾಗಿದೆ.

ಮುಂದಿನ 30 ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷವೂ ಶೇ 5ರಷ್ಟು ಹೆಚ್ಚು ಮಾಡುವ ಒಪ್ಪಂದದ ಬಗ್ಗೆಯೂ ಹಣಕಾಸು ಇಲಾಖೆ ಆಕ್ಷೇಪ ಸಲ್ಲಿಸಿದೆ. ಮುಂದಿನ 30 ವರ್ಷಗಳಿಗೆ ಈ ರೀತಿ ಹೆಚ್ಚಳಕ್ಕೆ ಒಪ್ಪಿಗೆ ನೀಡಿದರೆ, ಪ್ರಸ್ತುತ ದರಕ್ಕಿಂತ ನಾಲ್ಕೂವರೆ ಪಟ್ಟು ಹೆಚ್ಚಾಗಲಿದೆ. ರಿಯಾಯಿತಿ ಅವಧಿಯಲ್ಲಿ ಶೇ 430ರಷ್ಟು ದರ ಹೆಚ್ಚಳವಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಒಂದೇ ಸಂಸ್ಥೆಗೆ ಎರಡೂ ಗುತ್ತಿಗೆಗಳನ್ನು ನೀಡಿರುವುದರಿಂದ ಒಂದೇ ಸಂಸ್ಥೆಯ ಮೇಲೆ ಅವಲಂಬಿತವಾಗುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಇದು ಬೆಂಗಳೂರಿನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಮೂರು ದಶಕ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯ ನಿಯಂತ್ರಣಕ್ಕೆ ನೀಡಿದಂತಾಗುತ್ತದೆ ಎಂದು ಆರ್ಥಿಕ ಇಲಾಖೆ ಆತಂಕ ವ್ಯಕ್ತಪಡಿಸಿದೆ.

ಸರ್ಕಾರದಿಂದ ಭೂಮಿ: ಸಹಿ ಹಾಕದ ಸಿ.ಎಂ

ಸರ್ಕಾರವೇ ಸೌಲಭ್ಯಗಳಿಗಾಗಿ ಭೂಮಿಯನ್ನು ಒದಗಿಸುತ್ತಿರುವಾಗ ಮತ್ತು ಖಾಸಗಿ ಹೂಡಿಕೆಯ ಅಪ್ಪಣೆ ಇಲ್ಲದಿರುವಾಗ, ಇಷ್ಟು ಸುದೀರ್ಘ ಅವಧಿಯ ಒಪ್ಪಂದದ ಅಗತ್ಯವೇನು ಎಂದು ಪ್ರಶ್ನಿಸಿರುವ ಹಣಕಾಸು ಇಲಾಖೆ, ಗುತ್ತಿಗೆಯ ಅವಧಿಯನ್ನು 30 ವರ್ಷಗಳಿಂದ 10 ವರ್ಷಗಳಿಗೆ ಕಡಿತಗೊಳಿಸಲು ಮತ್ತು ವಾರ್ಷಿಕ ವೆಚ್ಚದ ಏರಿಕೆಯನ್ನು ಶೇ 2.5ಕ್ಕೆ ಮಿತಿಗೊಳಿಸಲು ಶಿಫಾರಸು ಮಾಡಿದೆ.

ಮತ್ತೊಂದೆಡೆ, ಬೆಂಗಳೂರಿನ ಹದಗೆಡುತ್ತಿರುವ ಕಸದ ಬಿಕ್ಕಟ್ಟನ್ನು ಉಲ್ಲೇಖಿಸಿ ನಗರಾಭಿವೃದ್ಧಿ ಇಲಾಖೆಯು ಈ ಪ್ರಸ್ತಾವನ್ನು ಸಮರ್ಥಿಸಿಕೊಂಡಿದೆ. ನಗರದಲ್ಲಿ ಪ್ರತಿದಿನ ಸುಮಾರು 5,200 ಟನ್ ಕಸ ಉತ್ಪಾದನೆಯಾಗುತ್ತದೆ. ಆದರೆ, 1,800 ಟನ್‌ಗಳಷ್ಟು ಮಾತ್ರ ವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತಿದೆ. ಉಳಿದ ತ್ಯಾಜ್ಯವೆಲ್ಲವೂ ಭೂಭರ್ತಿ ಪ್ರದೇಶಕ್ಕೆ ಸೇರುತ್ತಿದೆ. ಈ ಯೋಜನೆಯು ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊರೆಯನ್ನು ಹೇರುವುದಿಲ್ಲ ಮತ್ತು ಇದರ ಸಂಪೂರ್ಣ ವೆಚ್ಚವನ್ನು ಐದು ನಗರ ಪಾಲಿಕೆಗಳೇ ಭರಿಸಲಿವೆ ಎಂದು ಹೇಳಿದೆ.

ನಗರಾಭಿವೃದ್ಧಿ ಇಲಾಖೆಯ ವಾದವನ್ನು ಒಪ್ಪದ ಹಣಕಾಸು ಇಲಾಖೆಯು, ಸಚಿವ ಸಂಪುಟದ ಅನುಮೋದನೆಗೂ ಮುನ್ನ ಈ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ತಜ್ಞರು ಮತ್ತು ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಸರ್ಕಾರಕ್ಕೆ ಸಲಹೆ ನೀಡಿತ್ತು.

ಈ ಮಧ್ಯೆ ಕಳೆದ ಗುರುವಾರ ನಡೆದ ಸಚಿವ ಸಂಪುಟವು ಈ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕಡತದ ನಡವಳಿಕೆಗೆ ಇನ್ನೂ ಸಹಿ ಹಾಕಿಲ್ಲ ಎಂದು ತಿಳಿದುಬಂದಿದೆ.

ಬೇಡಿಕೆ ಈಡೇರಿಕೆ: ನಾಳೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇಪಿಎಸ್–95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರು ಮೇ 27ರ ಬೆಳಿಗ್ಗೆ 10.30ಕ್ಕೆ ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ.

ಇಪಿಎಸ್ ವ್ಯಾಪ್ತಿಗೆ ಬರುವ ಹಲವು ನಿವೃತ್ತ ನೌಕರರು ₹5 ಸಾವಿರ ನೀಡಬೇಕು. ಹತ್ತು ವರ್ಷಗಳಲ್ಲಿ ಲಕ್ಷಾಂತರ ಇಪಿಎಸ್ ನೌಕರರು ವಯೋಸಹಜ ಹಾಗೂ ಅನಾರೋಗ್ಯದಿಂದ ಮೃತಪಟ್ಟಿದ್ದಾರೆ. ನ್ಯಾಯಾಲಯದ ಆದೇಶವನ್ನು ಬದಿಗಿರಿಸಲಾಗಿದೆ ಎಂದು ಸಂಘದ ಅಧ್ಯಕ್ಷ ನಂಜುಂಡೇಗೌಡ ಬೇಸರ ವ್ಯಕ್ತಪಡಿಸಿದರು.

ಪಿಂಚಣಿ ಭತ್ಯೆ ಹೆಚ್ಚಳ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆ ಬೀಳುವುದಿಲ್ಲ. 82 ಲಕ್ಷ ಇಪಿಎಸ್ ನಿವೃತ್ತರಿಂದ ಸಂಗ್ರಹಿಸಿದ ಹಣದಲ್ಲಿ ಅನ್‌ಕ್ಲೇಮ್ಡ್ ಕಾರ್ಪಸ್ ಮೊತ್ತ ಸುಮಾರು ₹95 ಸಾವಿರ ಕೋಟಿ ಇದ್ದು, ಇದನ್ನು ವಿನಿಯೋಗಿಸಿದರೆ ಹಣಕಾಸಿನ ಕೊರತೆ ಉಂಟಾಗುವುದಿಲ್ಲ ಎಂದು ಹೇಳಿದ್ದಾರೆ.

ಚಿತ್ರಾವಳಿ

ನಗರದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಮಹಿಳಾ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರ ಮೇಲೆ ಆಗುತ್ತಿರುವ ಮಾನಸಿಕ ಕಿರುಕುಳವನ್ನು ಖಂಡಿಸಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಕ್ಷೇಮಾಭಿವೃದ್ಧಿ ಒಕ್ಕೂಟ ಹಾಗೂ ರಾಷ್ಟ್ರೀಯ ಅಂಬೇಡ್ಕರ್ ಸೇನೆ ವತಿಯಿಂದ ಕುಲಪತಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಲಾಯಿತು

ನಗರದ ಕೃಷ್ಣರಾಜ ರಸ್ತೆಯ ಕೋಟೆ ಶ್ರೀಪ್ರಸನ್ನ ವೆಂಕಟರಮಣ ಸ್ವಾಮಿಯ 19ನೇ ಬೆಳ್ಳಿ ಬ್ರಹ್ಮರಥೋತ್ಸವ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನೆರವೇರಿತು

– ಪ್ರಜಾವಾಣಿ ಚಿತ್ರ

ಕಾರ್ಮಿಕರ ವೇತನ ಪರಿಷ್ಕರಣೆಯ ಪರಿಣಾಮ

‘ಬಿರಿಯಾನಿ ದರ ₹500ಕ್ಕೆ ಏರಲಿದೆ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಾರ್ಮಿಕರ ಕನಿಷ್ಠ ವೇತನದಲ್ಲಿ ಸರಾಸರಿ ಶೇ 60ರಷ್ಟು ಏರಿಕೆ
- ಹೋಟೆಲ್, ಉಪಾಹಾರ ಗೃಹಗಳ ಮೇಲೆ ಗಂಭೀರ ಪರಿಣಾಮ ಎಚ್ಚರಿಕೆ



ಬೆಂಗಳೂರು: ಸರ್ಕಾರವು ಕಾರ್ಮಿಕರ ವೇತನ ಹೆಚ್ಚಳ ಮಾಡಿರುವುದರಿಂದ ಗ್ರಾಹಕರ ಮೇಲೆ ದುಷ್ಪರಿಣಾಮ ಬೀರಲಿದೆ. ಬಿರಿಯಾನಿ ದರ ₹500ಕ್ಕೆ ತಲುಪಲಿದೆ ಎಂದು ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ (ಕೆಎಸ್‌ಎಚ್‌ಎ) ಎಚ್ಚರಿಸಿದೆ.

ಪ್ರಸ್ತುತ ಇರುವ ವೇತನಕ್ಕೆ ಹೋಲಿಸಿದರೆ, ಕನಿಷ್ಠ ವೇತನದಲ್ಲಿ ಸರಾಸರಿ ಶೇ 60ರಷ್ಟು ಏರಿಕೆ ಮಾಡಲಾಗಿದೆ. ಇದು ಹೋಟೆಲ್, ಉಪಾಹಾರ ಗೃಹಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಒಂದು ಪ್ಲೇಟ್ ಇಡ್ಲಿ ಬೆಲೆ ಪ್ರಸ್ತುತ ₹50 ಇರುವುದು ₹90ಕ್ಕೆ ಏರಲಿದೆ. ₹80-90 ಇರುವ ಮಸಾಲೆ ದೋಸೆ ದರ ₹150ಕ್ಕೆ ತಲುಪಲಿದೆ. ಸಸ್ಯಾಹಾರಿ ಊಟದ ದರ ₹250ಕ್ಕೆ ಏರುವುದು ಎಂದು ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸರ್ಕಾರವು ತಾಲ್ಲೂಕು ಮಟ್ಟದಲ್ಲಿ ಕೌಶಲರಹಿತ ಕಾರ್ಮಿಕರಿಗೆ ₹19,300, ಜಿಬಿಎ ವ್ಯಾಪ್ತಿಯಲ್ಲಿ ₹23,376ರಿಂದ ಹಿರಿಯ ಕೌಶಲ ಹೊಂದಿದ ಕಾರ್ಮಿಕರಿಗೆ ₹31,100ರವರೆಗೆ ಕನಿಷ್ಠ ವೇತನ ಪರಿಷ್ಕರಿಸಿದೆ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ₹1,884 ರಿಂದ ₹3,152ಕ್ಕೆ ಏರಿಕೆಯಾಗಿದೆ. ಎಲ್ಲ ದಿನಸಿ ವಸ್ತುಗಳು, ವಿದ್ಯುತ್ ದರ ಹಾಗೂ ಕಸ ಸೆಸ್ ಏರಿಕೆಯಾಗಿದ್ದು, ಸಣ್ಣ ಹೋಟೆಲ್ ಮಾಲೀಕರ ಮೇಲಿನ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಹೇಳಿದ್ದಾರೆ.

ಕನಿಷ್ಠ ವೇತನ ಪರಿಷ್ಕರಣೆ ಜಾರಿಗೊಳಿಸುವ ಸಂದರ್ಭದಲ್ಲಿ ಆತಿಥ್ಯ ಕ್ಷೇತ್ರವನ್ನು ಪ್ರತ್ಯೇಕ ವರ್ಗವಾಗಿ ಪರಿಗಣಿಸುವಂತೆ ಸರ್ಕಾರಕ್ಕೆ ಸಂಘ ಮನವಿ ಮಾಡಿತ್ತು, ಆದರೆ, ಆ ಮನವಿಯನ್ನು ಸರ್ಕಾರ ಪರಿಗಣಿಸಿಲ್ಲ. ಹೋಟೆಲ್ ಉದ್ಯಮಕ್ಕೆ ಸಂಬಂಧಿಸಿದಂತೆ ಕನಿಷ್ಠ ವೇತನದ ಬಗ್ಗೆ ಮರುಪರಿಶೀಲನೆ ನಡೆಸಬೇಕು. ಸಣ್ಣ ಹೋಟೆಲ್‌ಗಳ ಮಾಲೀಕರು ಹಾಗೂ ಗ್ರಾಹಕರಿಗೆ ಆಗಬಹುದಾದ ಸಂಕಷ್ಟವನ್ನು ತಪ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ವಿಜ್ಞಾನಿ ರಾಮ ಬಿ.ಭಟ್ ನಿಧನ



ರಾಮ ಬಿ.ಭಟ್

ಕುಂದಾಪುರ (ಉಡುಪಿ): ಕಾಸರಗೋಡಿನ ಧರ್ಮತ್ತಡ್ಕದ ವಿಜ್ಞಾನಿ ರಾಮ.ಬಿ.ಭಟ್ (83) ವಯೋಸಹಜ ಅಸ್ವಸ್ಥತೆಯಿಂದ ಭಾನುವಾರ ಕೆನಡಾದ ಟೊರೆಂಟೋದಲ್ಲಿ ನಿಧನರಾದರು. ಅವರಿಗೆ ಪತ್ನಿ ಪಾರ್ವತಿ ಭಟ್, ಮಕ್ಕಳಾದ ಡಾ.ಮಮತಾ ಭಟ್ ಮತ್ತು ಡಾ.ಅಪರ್ಣಾ ಭಟ್ ಇದ್ದಾರೆ.

ಎಂ.ಟೆಕ್. ಪದವಿಯ ನಂತರ ‘ನಾದ ಮತ್ತು ಕಂಪನ’ ವಿಷಯದಲ್ಲಿ ಡಾಕ್ಟರೇಟ್ ಪಡೆದಿದ್ದ ಅವರು, ತಿರುವನಂತಪುರಂ ಸಮೀಪದ ರಾಕೆಟ್ ಉಡಾವಣಾ ಕೇಂದ್ರ ಹಾಗೂ ಅಮೆರಿಕದ ನಾಸಾದಲ್ಲಿ ಸೇವೆ ಸಲ್ಲಿಸಿದ್ದರು. ಕೆನಡಾದ ಮಾಂಟ್ರಿಯಲ್‌ನ ಕಾನ್ಕಾರ್ಡಿಯಾ ಯುನಿವರ್ಸಿಟಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಡೀನ್ ಆಗಿ ಕಾರ್ಯ ನಿರ್ವಹಿಸಿದ್ದರು. ನೂರಾರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರು.

ಇವರು ಬರೆದ 200ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟವಾಗಿವೆ.

‘ನನಗೆ ಇರಲಿ ಬಾಳಿಕೆ’ ಕವನ ಸಂಕಲನ, ಬಾಳಿಕೆಯಿಂದ ಕೆನಡಾಕ್ಕೆ’ ಅನುಭವ ಕಥನ, ಇಂಗ್ಲಿಷ್‌ನಲ್ಲಿ ‘ದಿ ಡಿವೈನ್ ಆಂಜನೇಯ’ ಮತ್ತು ‘ಝುವಾಂಗ್ ಜಾಂಗ್ಸ್ ಜರ್ನಿ ಟು ದ ವೆಸ್ಟ್’ ಎರಡು ಕಾದಂಬರಿಗಳು ಪ್ರಕಟಗೊಂಡಿವೆ. ಮೃತರು, ಲೇಖಕಿ ಪಾರ್ವತಿ ಜಿ. ಐತಾಳ್ ಅವರ ಸಹೋದರ.

‘ಮಕ್ಕಳ ಉತ್ತಮ ಭವಿಷ್ಯಕ್ಕೆ ಶಿಕ್ಷಣವೇ ಸೂತ್ರ’

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ, ಸನ್ಮಾನಿಸಲಾಯಿತು. ಸಚಿವ ಕೃಷ್ಣ ಬೈರೇಗೌಡ, ಮೀನಾಕ್ಷಿ ಕೃಷ್ಣ ಬೈರೇಗೌಡ, ಎನ್‌ಎನ್‌ ಶ್ರೀನಿವಾಸಯ್ಯ, ಎಂ. ಜಯಗೋಪಾಲಗೌಡ ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಯಲಹಂಕ: ‘ಮಕ್ಕಳ ಭವಿಷ್ಯ ಉಜ್ವಲವಾಗಬೇಕಾದರೆ ಶಿಕ್ಷಣವೇ ಪ್ರಮುಖ ಸೂತ್ರವಾಗಿದೆ. ಆದ್ದರಿಂದ ಎಲ್ಲ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗಬೇಕು’ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ಸ್ವಯಂಸೇವಕರ ಸಂಘದ ಆಶ್ರಯದಲ್ಲಿ ಸಹಕಾರನಗರದ ಗಣೇಶ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ನಮ್ಮೂರ ಹೆಮ್ಮೆ-2026 ಕಾರ್ಯಕ್ರಮದಲ್ಲಿ ಕೊಡಿಗೇಹಳ್ಳಿ ಹಾಗೂ ರಾಜೀವ್‌ಗಾಂಧಿನಗರ ವಾರ್ಡ್ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ 650ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ, ಸನ್ಮಾನಿಸಿ ಅವರು ಮಾತನಾಡಿದರು.

‘ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಉತ್ತೇಜಿಸುವುದರ ಜೊತೆಗೆ ಇತರ ಮಕ್ಕಳಿಗೂ ಸ್ಫೂರ್ತಿ ಆಗುವ ಉದ್ದೇಶದಿಂದ ನಮ್ಮೂರ ಹೆಮ್ಮೆ ಕಾರ್ಯಕ್ರಮವನ್ನು ಐದು ವರ್ಷಗಳಿಂದ ನಡೆಸಲಾಗುತ್ತಿದೆ. ಈ ವರ್ಷ ವಿವಿಧ ವಾರ್ಡ್‌ಗಳಲ್ಲಿ ಕನಿಷ್ಠ 4 ಸಾವಿರ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸುವ ಉದ್ದೇಶ ಇದೆ’ ಎಂದು ಮಾಹಿತಿ ನೀಡಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣ ಬೈರೇಗೌಡ ಮಾತನಾಡಿ, ‘ನಮ್ಮ ಕ್ಷೇತ್ರದ ಹಲವು ವಿದ್ಯಾರ್ಥಿಗಳು ಇಂದು ದೇಶ-ವಿದೇಶಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಯುರೋಪ್, ಅಮೆರಿಕ, ಜರ್ಮನಿ, ಜಪಾನ್ ಹಾಗೂ ರಷ್ಯಾದಲ್ಲೂ ನಮ್ಮ ಮಕ್ಕಳು ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಆಗಿದೆ’ ಎಂದರು.

ಇದೇ ಸಂದರ್ಭದಲ್ಲಿ ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಸಲುವಾಗಿ ಆಯೋಜಿಸಿದ್ದ ‘ನಮ್ಮ ಯಂಗ್ ಸ್ಟಾರ್’ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನೃತ್ಯ ಮತ್ತು ಗಾಯನಕ್ಕೆ ಸಂಬಂಧಿಸಿದಂತೆ 24 ತಂಡಗಳು ಭಾಗವಹಿಸಿ ಪ್ರದರ್ಶನ ನೀಡಿದವು. ಇದರಲ್ಲಿ ಅಂತಿಮವಾಗಿ 5 ತಂಡಗಳು ಆಯ್ಕೆಯಾಗಿ, ಮುಂದಿನ ಗ್ರ್ಯಾಂಡ್ ಫಿನಾಲೆ ಹಂತಕ್ಕೆ ಪ್ರವೇಶ ಪಡೆದವು.

ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಎಂ. ಜಯಗೋಪಾಲಗೌಡ, ವಿ. ಹರಿ, ವೆಂಕಟಸ್ವಾಮಿ, ಕೆ.ಆರ್. ರಾಜು, ಹನುಮಂತಿ, ಕೆ. ಮಂಜುನಾಥ್, ಕೆ. ದಿಲೀಪ್‌ಕುಮಾರ್, ಹರೀಶ್ ಜೋಡಿದಾರ್, ಶಾಂತಮ್ಮ ಉಪಸ್ಥಿತರಿದ್ದರು.

ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದವರಿಗೆ ಎಂ.ವೇಣು ಅವರು ಪದಕ ನೀಡಿ ಗೌರವಿಸಿದರು

ನಾಗರಿಕ ಹಕ್ಕುಗಳಿಗಾಗಿ ಜಾಗೃತಿ ಓಟ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಮಾನತೆ, ಏಕತೆ, ಯುವಶಕ್ತಿ, ಸಾಮಾಜಿಕ ನ್ಯಾಯದ ಮೌಲ್ಯಗಳ ಜಾಗೃತಿಗಾಗಿ ವೈಚಾರಿಕ ಪ್ರಗತಿಪರ ವೇದಿಕೆ (ಕರ್ನಾಟಕ) ಬೆಳತ್ತೂರಿನಲ್ಲಿ ಹಮ್ಮಿಕೊಂಡಿದ್ದ ‘ಹಕ್ಕುಗಳಿಗಾಗಿ ಓಟ’ ಮ್ಯಾರಥಾನ್‌ನಲ್ಲಿ ನೂರಾರು ಜನ ಪಾಲ್ಗೊಂಡಿದ್ದರು.

5 ಕಿ.ಮೀ. ಹಾಗೂ 10 ಕಿ.ಮೀ. ಮ್ಯಾರಥಾನ್‌ಗೆ ಬಾಕ್ಸಿಂಗ್ ಕ್ರೀಡಾಪಟು ಎಂ. ವೇಣು ಅವರು ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ‘ಯುವ ಪೀಳಿಗೆ ಆರೋಗ್ಯ ಕಾಪಾಡುವುದರ ಜೊತೆಗೆ ನಮ್ಮ ಹಕ್ಕುಗಳನ್ನು ರಕ್ಷಿಸಲು ಹೋರಾಟ ಮಾಡಬೇಕು. ದೇಶದ ಏಕತೆಯ ದೃಷ್ಟಿಯಿಂದ ನಾವೆಲ್ಲರೂ ಒಂದಾಗಬೇಕು’ ಎಂದು ಕರೆ ನೀಡಿದರು.

ವೈಚಾರಿಕ ಪ್ರಗತಿಪರ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಮಾತನಾಡಿ, ‘ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯಗಳನ್ನು ಸಾರ್ವಜನಿಕರಿಗೆ ತಲುಪಿಸುವ ಉದ್ದೇಶದಿಂದ ಈ ಮ್ಯಾರಥಾನ್ ಹಮ್ಮಿಕೊಳ್ಳಲಾಗಿತ್ತು. 5 ಹಾಗೂ 10 ಕಿ.ಮೀ. ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದವರಿಗೆ ₹25 ಸಾವಿರ ನಗದು ಬಹುಮಾನವನ್ನು ಬರುವ ಮೇ 31ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪದಾಧಿಕಾರಿಗಳಾದ ಎಂ.ಆರ್. ವೆಂಕಟೇಶ್, ಚಿನ್ನಸ್ವಾಮಿ, ಅಸಿಫ್, ವಿಜಯನ್, ಬೆಳತ್ತೂರು ರಮೇಶ್, ಮಹೇಂದ್ರ, ಕೆ. ಗಂಗಾಧರ್, ಮಾಸ್ತಿ ಜಗನ್ನಾಥ್, ಕಾಂಚನಾ, ಆದೂರು ಮುನಿರಾಜು ಪಾಲ್ಗೊಂಡಿದ್ದರು.

ಸಾರ್ವಜನಿಕ ಪ್ರಕಟಣೆ

ಫಾರಂ ಯುಆರ್‌ಸಿ–2

ಕಂಪನಿಗಳ ಕಾಯ್ದೆ, 2013ರ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ [ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 374(ಬಿ) ಮತ್ತು ಕಂಪನಿಗಳ (ನೋಂದಣಿಗೆ ಅಧಿಕೃತ) ನಿಯಮಗಳು, 2014ರ ನಿಯಮ 4(1)ರ ಪ್ರಕಾರ] ನೋಂದಣಿ ಕುರಿತಾದ ಜಾಹೀರಾತು ಪ್ರಕಟಣೆ

1. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 366ರ ಸಬ್ ಸೆಕ್ಷನ್ (2)ರ ಪ್ರಕಾರ, ಈಗಿನಿಂದ ಹದಿನೈದು ದಿನಗಳ ಬಳಿಕ ಆದರೆ ಇಂದಿನಿಂದ ಮೂವತ್ತು ದಿನಗಳ ಅವಧಿ ಪೂರ್ಣಗೊಳ್ಳುವುದಕ್ಕೆ ಮುನ್ನ, **ಪ್ರೆಸ್ಟೀಜ್ ರಿಯಾಲ್ಟಿ ವೆಂಚರ್ಸ್** ಎಂಬ ಒಂದು ಪಾಲುದಾರಿಕೆ ಸಂಸ್ಥೆಯನ್ನು, ಕಂಪನಿಗಳ ಕಾಯ್ದೆ, 2013ರ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ಷೇರುಗಳ ಮುಖಾಂತರ ಕಂಪನಿ ಲಿಮಿಟೆಡ್ ಎಂಬುದಾಗಿ ನೋಂದಾಯಿಸಬಹುದು ಎಂದು ಕೋರಿ, ಕರ್ನಾಟಕದ ಕಂಪನಿಗಳ ರಿಜಿಸ್ಟ್ರಾರ್‌ಗೆ ಅರ್ಜಿ ಸಲ್ಲಿಸಲು ಉದ್ದೇಶಿಸಲಾಗಿರುತ್ತದೆ.

2. ಉದ್ದೇಶಿತ ಕಂಪನಿಯ ಪ್ರಮುಖ ಉದ್ದೇಶಗಳು ಕೆಳಗಿನಂತಿರುತ್ತವೆ:

i) ಹಾಸ್ಪಿಟ್ಯಾಲಿಟಿ ಯೋಜನೆಗಳನ್ನು ಅಭಿವೃದ್ಧಿ, ನಿರ್ಮಾಣ ಹಾಸ್ಪಿಟ್ಯಾಲಿಟಿ ಯೋಜನೆಗಳನ್ನು, ಕಚೇರಿಗಳನ್ನು ಮತ್ತು ನಿರ್ಮಿತ ಪ್ರದೇಶಗಳನ್ನು ಒಳಗೊಂಡಿರುವ ಸ್ಥಿರಾಸ್ತಿಗಳನ್ನು ನಿರ್ವಹಿಸುವ ಜೊತೆಗೆ ಸೌಲಭ್ಯಗಳನ್ನು ಮತ್ತು ಸೌಕರ್ಯಗಳನ್ನು ನಿರ್ವಹಿಸುವ ಅಥವಾ ಇನ್ನಾವುದೇ ಅರೇಂಜ್‌ಮೆಂಟ್‌ಗಳನ್ನು ನಿರ್ವಹಿಸುವ ವ್ಯವಹಾರ ಮಾಡುವುದು.

ii) ರೆಸಾರ್ಟ್‌ಗಳ, ಟೈಮ್ ಶೇರ್, ರೆಸ್ಟೋರೆಂಟ್‌ಗಳ, ಹೊಟೇಲ್‌ಗಳ, ಕ್ಲಬ್‌ಗಳ, ಹಾಲಿಡೇ ಹೌಸ್‌ಗಳ, ಕನ್ವೆನ್ಷನ್ ಸೆಂಟರ್‌ಗಳ, ವಿಲ್ಲಾಗಳ, ಫ್ಲ್ಯಾಟ್‌ಗಳ, ಅಪಾರ್ಟ್‌ಮೆಂಟ್‌ಗಳ, ಕೊಠಡಿಗಳ, ಮನೆಗಳ ನಿರ್ಮಾಣ ಮಾಡುವುದು.

iii) ರಿಯಲ್ ಎಸ್ಟೇಟ್ ಕನ್ಸಲ್ಟಂಟ್, ಸರ್ವೇಯರ್ಸ್ ವ್ಯವಹಾರ ನಡೆಸುವುದು ಮತ್ತು ಯೋಜನಾ ನಿರ್ವಹಣೆ, ನಿರ್ಮಾಣಗಳ ಸೇವೆಗಳನ್ನು ಪೂರೈಸುವುದು ಮತ್ತು ಒದಗಿಸುವುದು, ಬಡಾವಣೆಗಳ, ಲ್ಯಾಂಡ್‌ಸ್ಕೇಪ್‌ಗಳ ರಚನೆ, ವಿನ್ಯಾಸ, ಕಾನೂನು ಮತ್ತು ಹಣಕಾಸು ಹಾಗೂ ರೆಂಟಲ್ ವಿಷಯಗಳ ನಿರ್ವಹಣೆ, ಜಾಹೀರಾತು ಮತ್ತು ವರದಿಗಳ, ಯೋಜನೆಗಳ, ಪ್ರಮಾಣಪತ್ರಗಳ ತಯಾರಿಕೆ ಉದ್ದೇಶಕ್ಕಾಗಿ ಅಥವಾ ಬಂಡವಾಳ, ಹಣಕಾಸು, ಜಮೀನು ಖರೀದಿ ವ್ಯವಸ್ಥೆಗಾಗಿ ವಿವಿಧ ಸರ್ಕಾರಿ ಪ್ರಾಧಿಕಾರಗಳಲ್ಲಿ, ಬ್ಯಾಂಕ್‌ಗಳಲ್ಲಿ ಮತ್ತು ಇನ್ನಿತರ ಅಂತಹ ಪ್ರಾಧಿಕಾರಗಳಲ್ಲಿ ಮತ್ತು ನಿರಾಕ್ಷೇಪಣೆ, ಪರವಾಣಿಗೆ, ಅನುಮತಿ, ಅನುಮೋದನೆ ಪಡೆಯಲು ಕಕ್ಷಿದಾರರನ್ನು ಪ್ರತಿನಿಧಿಸುವ ಮತ್ತು ಪ್ರಾಧಿಕಾರಗಳಿಂದ ಆದೇಶ ಪಡೆದುಕೊಳ್ಳುವ ವ್ಯವಹಾರ ಮಾಡುವುದು.

3. ಉದ್ದೇಶಿತ ಕಂಪನಿಯ ಕರಡು ಮೆಮೊರ್ಯಾಂಡಮ್ ಹಾಗೂ ಆರ್ಟಿಕಲ್ಸ್ ಆಫ್ ಅಸೋಸಿಯೇಶನ್ ಪ್ರತಿಗಳನ್ನು ಪ್ರೆಸ್ಟೀಜ್ ಫಾಲ್ಕನ್ ಟವರ್, ನಂ. 19, ಬ್ರಂಟನ್ ರಸ್ತೆ, ಬೆಂಗಳೂರು–560025 ವಿಳಾಸದಲ್ಲಿರುವ ಕಂಪನಿಯ ಕಚೇರಿಯಲ್ಲಿ ಪರಿಶೀಲಿಸಬಹುದು.

4. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಸದರಿ ಕಂಪನಿಯ ಅರ್ಜಿಯನ್ನು ಯಾರಾದರೂ ಆಕ್ಷೇಪಿಸುವುದಾದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗೆ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6,7,8, ಸೆಕ್ಟರ್ 5, ಐಎಂಟಿ ಮಾನೇಸರ್, ಜಿಲ್ಲಾ ಗುರಗಾಂವ್–122050, ಹರ್ಯಾಣ ಇವರನ್ನು ಲಿಖಿತ ರೂಪದಲ್ಲಿ ಸಂಪರ್ಕಿಸಬಹುದು, ಜೊತೆಗೆ ಆಕ್ಷೇಪಣೆಗಳ ಒಂದು ಪ್ರತಿಯನ್ನು ಉದ್ದೇಶಿತ ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೆ ರವಾನಿಸುವುದು.

ಸಹಿ/– ಪ್ರೆಸ್ಟೀಜ್ ಹಾಸ್ಪಿಟ್ಯಾಲಿಟಿ ವೆಂಚರ್ಸ್ ಲಿಮಿಟೆಡ್ ಪರವಾಗಿ ಪಾಲುದಾರರು (ಪ್ರತಿನಿಧಿಸುವವರು ಶ್ರೀ. ಇರ್ಫಾನ್ ರಜಾಕ್)	ಸಹಿ/– ನಾರ್ಥ್‌ಲ್ಯಾಂಡ್ ಹೋಲ್ಡಿಂಗ್ ಕಂಪನಿ ಲಿಮಿಟೆಡ್ ಪರವಾಗಿ ಪಾಲುದಾರರು (ಪ್ರತಿನಿಧಿಸುವವರು ಶ್ರೀ. ಮೊಹಮದ್ ಜೈದ್ ಸಾದಿಕ್)

ದಿನಾಂಕ: 26.05.2026
ಸ್ಥಳ: ಬೆಂಗಳೂರು

ನಗರಸಭಾ ಕಾರ್ಯಾಲಯ, ಹೊಸಕೋಟೆ–562114 ಬೆಂಗಳೂರು ಗ್ರಾಮಾಂತರ ಜಿಲ್ಲೆ

ತಾಲ್ಲೂಕು ಆಫೀಸ್ ಪಕ್ಕ, ಹಳೆ ಬಸ್ ನಿಲ್ದಾಣ, ದೂರವಾಣಿ: 27931221,
Email- itstaff_ulb_hosakote@yahoo.com
Web Site. www.hosakotecity.mrc.gov.in

ನಂ.ನ.ಸ.ಹೊ/ಕಂ.ಶಾ./ಸಿ.ಆರ್/01 /2026–27 ದಿನಾಂಕ: 22–05–2026

ವಾಣಿಜ್ಯ ಮಳಿಗೆಗಳ ಇ-ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೊಸಕೋಟೆ ನಗರಸಭೆಯ ಒಡೆತನದ ವಾಣಿಜ್ಯ ಸಂಕೀರ್ಣಗಳ ಮಳಿಗೆಗಳನ್ನು **ಸರ್ಕಾರದ ಸುತ್ತೋಲೆಗಳ ಸಂಖ್ಯೆ: (1) ನಆಇ/301/ಜಿಇಎಲ್/2017 ದಿನಾಂಕ:19.07.2019 ಮತ್ತು (2) ಸಂ.ನಅಇ/254/GEL/2021/ಇ ದಿನಾಂಕ: 04–11–2022 ರ ಮಾರ್ಗಸೂಚಿಗಳು, ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ರವರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಜಿನಕೋಬ/(ಪಿ2)/ವಿವ/ಹೊನ/153/2021–22 ದಿನಾಂಕ: 09–10–2025 ಹೊಸಕೋಟೆ ನಗರಸಭೆಯ ಸಾಮಾನ್ಯ ಸಭೆ ದಿನಾಂಕ: 07–07–2021ರ ವಿಷಯ ಸಂಖ್ಯೆ 42 ಮತ್ತು ದಿನಾಂಕ: 26– 12–2022 ವಿಷಯ ಸಂಖ್ಯೆ 17ರ ತೀರ್ಮಾನದಂತೆ** ಮಳಿಗೆಗಳ ಮರುಪಾವತಿ ಠೇವಣಿ ಹಾಗೂ ಬಾಡಿಗೆ ಮೊತ್ತಗಳನ್ನು ನಿಗದಿಗೊಳಿಸಿ, ಮೀಸಲಾತಿಗಳನ್ನು ಪರಿಗಣಿಸಿ ಮಂಜೂರಾತಿ ಆದೇಶ ನೀಡಲಾಗಿದ್ದು ಈ ಕೆಳಕಂಡ ವಾಣಿಜ್ಯ ಮಳಿಗೆಗಳನ್ನು 12 ವರ್ಷಗಳ ಅವಧಿಗೆ ಗರಿಷ್ಠ ಬಾಡಿಗೆ ಮೊತ್ತಕ್ಕೆ ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ದಿನಾಂಕ: **17–06–2026 ರಂದು ಮದ್ಯಾಹ್ನ 2.30 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ಇ–ಹರಾಜು ಮೂಲಕ** ಪ್ರಕಟಣೆಯಲ್ಲಿ ನಿಗಧಿಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಇ–ಹರಾಜಿನಲ್ಲಿ ಭಾಗವಹಿಸಿ ಮಳಿಗೆಗಳನ್ನು ಬಾಡಿಗೆಗೆ ಪಡೆಯಬಹುದಾಗಿದೆ.

ಇ–ಹರಾಜು (E-Procurment) ಷೆಡ್ಯೂಲ್ ವಿವರಗಳು

ಕ್ರ.ಸಂ	ವಿವರ	ದಿನಾಂಕ/ಸಮಯ
01	ಇ–ಪೋರ್ಟಲ್‌ನಲ್ಲಿ ಹರಾಜು ನೋಟೀಸನ್ನು ಪಡೆಯಲು ಹಾಗೂ ಆಸಕ್ತಿಯನ್ನು ಖಾತರಿಪಡಿಸಲು ದಿನಾಂಕ/ಸಮಯ	**25–05–2026** ರ ಬೆಳಿಗ್ಗೆ 10.30 ಗಂಟೆಯಿಂದ **08–06–2026** ಸಂಜೆ 5.30 ಗಂಟೆಯವರೆಗೆ
02	ಇ–ಹರಾಜಿನಲ್ಲಿ ಭಾಗವಹಿಸುವವರ ದಾಖಲೆಗಳ ಮೌಲ್ಯಮಾಪನ ಕೊನೆಯ ದಿನಾಂಕ/ಸಮಯ	**10–06–2026**ರ ಬೆಳಿಗ್ಗೆ 11.00 ರಿಂದ **15–06–2026** ಸಂಜೆ 5.30 ಗಂಟೆಯವರೆಗೆ
03	ಬಿಡ್ಡಿಂಗ್ ಲೈವ್ ದಿನಾಂಕ/ಸಮಯ	**17–06–2026** ರ ಮದ್ಯಾಹ್ನ 2.30 ಗಂಟೆಯಿಂದ 4.30 ಗಂಟೆಯವರೆಗೆ
04	ಇ–ಟೆಂಡರ್‌ನಲ್ಲಿ ಸಲ್ಲಿಸಲಾಗಿರುವ ಬಿಡ್‌ಗಳನ್ನು ತೆರೆಯುವ ದಿನಾಂಕ/ಸಮಯ	**19–06–2026**ರ ಬೆಳಿಗ್ಗೆ 10.30 ಗಂಟೆಗೆ

ಸಹಿ/–
ಪೌರಾಯುಕ್ತರು
ನಗರಸಭೆ, ಹೊಸಕೋಟೆ

ವಾಸಾಸಂಇ/ವಾಪ್ರ/809/ಶಿರಡಿ ಸಾಯಿ/2026–27

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 07 ಮೇ, 2026

S.O. 2310(E) – ರೈಲ್ವೆ ಕಾಯ್ದೆ, 1989 (1989 ರ 24) ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2 ರ ಷರತ್ತು 7A ನಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ ‘ಸಮರ್ಥ ಪ್ರಾಧಿಕಾರ’ ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ ‘ಮಧ್ಯಸ್ಥರು’ ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಗಿನ ಕೋಷ್ಟಕದ ಕಾಲಮ್ (3) ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದ ವಿಶೇಷ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಂತಹ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನ, ನಿರ್ವಹಣೆ, ನಿರ್ವಹಣೆ ಮತ್ತು ಕಾರ್ಯಾಚರಣೆಯ ಸಾರ್ವಜನಿಕ ಉದ್ದೇಶಕ್ಕಾಗಿ.

ಕ್ರ. ಸಂ.	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1	2	3	4	5
1	ಬೆಂಗಳೂರು ನಗರ – ಮೈಸೂರು ವಿಭಾಗ: ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ KM: 10/900–11/000 ನಲ್ಲಿ LC ಸಂಖ್ಯೆ 10 ರ ಬದಲಿಗೆ ರಸ್ತೆ ಕೆಳ ಸೇತುವೆ ನಿರ್ಮಾಣ.	ಬೆಂಗಳೂರು	ವಿಶೇಷ ಭೂಸ್ವಾಧೀನ ಅಧಿಕಾರಿ, ಬೆಂಗಳೂರು	ಪ್ರಾದೇಶಿಕ ಆಯುಕ್ತರು, ಬೆಂಗಳೂರು

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ಹೆಚ್ಚಿನ ವಿವರಗಳಿಗೆ **https://egazette.gov.in** ಗೆ ಲಾಗ್‌ಆನ್ ಮಾಡಿ.

ಪ್ರದೀಪ್ ಪುರಿ, ಮುಖ್ಯ ಎಂಜಿನಿಯರ್–III, ನಿರ್ಮಾಣ,
ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/148/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ, ಕೆಐಎಡಿಬಿ ಕೇಂದ್ರ ಕಛೇರಿ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ: ಕೆಐಎಡಿಬಿ/ವಿ.ಭೂ.ಆ/773/2026–27 ದಿನಾಂಕ: 14.05.2026

ಸಾರ್ವಜನಿಕ ನೋಟೀಸ್

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟ ಜಮೀನಿನ ಖಾತೆದಾರರು/ ಅನುಭವದಾರರು/ಹಿತಾಸಕ್ತದಾರರಿಗೆ ತಿಳಿಸುವುದೇನೆಂದರೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ–2 ಹೋಬಳಿ, ಮಂಡೂರು ಗ್ರಾಮದ 22–08 ಎ/ಗು ವಿಸ್ತೀರ್ಣದ ಕೆಳಕಂಡ ಸರ್ವೆ ನಂಬರ್‌ಗಳ ಜಮೀನಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಉದ್ದೇಶಕ್ಕಾಗಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಸಿಐ 43 ಎಸ್‌ಪಿಕ್ಯೂ 2007 ದಿನಾಂಕ: 07–02–2007 ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಿರುತ್ತದೆ. ಸದರಿ ಅಧಿಸೂಚನೆಯನ್ನು ಖಾತೆದಾರರ ಒಪ್ಪಿಗೆಯನ್ನು ಪಡೆದು ಹೊರಡಿಸಲಾಗಿರುತ್ತದೆ. ಮುಂದುವರೆದು, ನೋಟೀಸ್ ತಲುಪಿದ 30 ದಿನಗಳ ಒಳಗಾಗಿ ಈ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಕೇಂದ್ರಕಛೇರಿ (ಕೆಐಎಡಿಬಿ) ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001 ಇವರ ಕಛೇರಿಗೆ ಆಕ್ಷೇಪಣೆಯನ್ನು ಲಿಖಿತ ಮೂಲಕ ಖುದ್ದು ಅಥವಾ ಅಧಿಕಾರಿ ಪಡೆದವರ ಮುಖೇನ ಸಲ್ಲಿಸಬಹುದಾಗಿರುತ್ತದೆ ಹಾಗೂ ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಖಾತೆದಾರರ/ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ: ಐನ್ ಎ–ಗು	ಖರಾಬು ಎ–ಗು	ಬಾಕಿ ಎ–ಗು
1	2	3	4	5	6
ಗ್ರಾಮ: ಮಂಡೂರು ಹೋಬಳಿ: ಬಿದರಹಳ್ಳಿ–2 ತಾಲ್ಲೂಕು: ಬೆಂಗಳೂರು ಪೂರ್ವ ಜಿಲ್ಲೆ: ಬೆಂಗಳೂರು					
1.	ಆಂಜನಪ್ಪ ಜಿ. ಬಿನ್ ಗುಂಡಪ್ಪ	21	2–23	0–13	2–10
2.	ಆಂಜನಪ್ಪ ಜಿ. ಬಿನ್ ಗುಂಡಪ್ಪ	22/1	2–14	0–04	2–10
3.	ಆಂಜನಪ್ಪ ಜಿ. ಬಿನ್ ಗುಂಡಪ್ಪ	22/2	2–02	–	2–02
4.	ಆಂಜನಪ್ಪ ಜಿ. ಬಿನ್ ಗುಂಡಪ್ಪ	22/3	0–07	–	0–07
5.	ಆಂಜನಪ್ಪ ಜಿ. ಬಿನ್ ಗುಂಡಪ್ಪ	23	2–11	0–02	2–09
6.	ಶಾಮಣ್ಣ ಬಿನ್ ಮುನಿನಂಜಪ್ಪಬಿ.	35	2–21	0–07	2–14
7.	ಶ್ರೀಧರ ಎಂ.ಎ. ಬಿನ್ ಗೌಡ ಎಂ.ಎ. ಉ. ಎಂ. ಆಂಜನಪ್ಪ	34	3–16	–	3–16
8.	ಎಂ.ಎನ್. ಕೃಷ್ಣಮೂರ್ತಿ ಬಿನ್ ನಂಜಪ್ಪ	36/1	0–36	–	0–36
9.	ಅಪ್ಪಾಜಿಗೌಡ ಬಿನ್ ನಾರಾಯಣಪ್ಪ, ಎಂ.ಎ. ಶ್ರೀಧರ ಬಿನ್ ಗೌಡ ಎಂ. ಬಸಪ್ಪ ಬಿನ್ ಲೇ. ಮುನಿಯಪ್ಪ, ಎಂ. ಪಟಾಲಪ್ಪ ಬಿನ್ ಲೇ. ಮುನಿಯಪ್ಪ	36/2	0–26	0–06	0–20
10.	ಸರಸ್ವತಮ್ಮ ಕೋಂ ಎ. ಕೃಷ್ಣಪ್ಪ, ಜಯಣ್ಣ ಕೋಂ ಲೇ. ನಾರಾಯಣ ಸ್ವಾಮಿ, ಚಾವೇದ್ ಶರೀಫ್ ಬಿನ್ ಲೇ. ಅಬ್ದುಲ್ ಜಲೀಲ್	36/3ಪಿ	1–20	–	1–20
11.	ಜಯಣ್ಣ ಎ ಬಿನ್ ಆಂಜನಪ್ಪ	36/4ಎ	1–03	0–01	1–02
12.	ಸರಸ್ವತಮ್ಮ ಕೋಂ ಎ. ಕೃಷ್ಣಪ್ಪ, ಕಮಲಮ್ಮ ಕೋಂ ಲೇ. ನಾರಾಯಣಸ್ವಾಮಿ, ಚಾವೀದ್ ಷರೀಫ್ ಬಿನ್ ಲೇ. ಅಬ್ದುಲ್ ಜಲೀಲ್	36/4ಬಿ	1–05	–	1–05
13	ಸಿ. ಹೆಚ್. ಸುಬ್ರಮಣ್ಯಬಿನ್ ಲೇಟ್ ಹುಚ್ಚಪ್ಪ ಎಂ.ಹೆಚ್. ನಾರಾಯಣಸ್ವಾಮಿ ಬಿನ್ ಲೇಟ್ ಹುಚ್ಚಪ್ಪ	36/5	0–25	0–06	0–19
14	ಅಪ್ಪಾಜಿಗೌಡ ಬಿನ್ ನಾರಾಯಣಪ್ಪ, ಎಂ. ಬಸಪ್ಪ ಬಿನ್ ಲೇ. ಮುನಿಯಪ್ಪ ಎಂ. ಪಟಾಲಪ್ಪ ಬಿನ್ ಲೇ. ಮುನಿಯಪ್ಪ	37/ಪಿ	1–13	0–01	1–11

–::ಘೋಷ್ವಾರೆ ::–

ಕ್ರ.ಸಂ.	ಗ್ರಾಮದ ಹೆಸರು	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ: ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
1	ಮಂಡೂರು	22–22	1–01	21–21
	ಒಟ್ಟು	**22–22**	**1–01**	**21–21**

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭವದಾರರು/ಹಿತಾಸಕ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತಿ ಅಂಚೆ ಮೂಲಕ ರವಾನಿಸಲಾಗಿತ್ತು. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕುದಾರರುಗಳು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ 1966ರ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಖಾತೆದಾರರು/ಹಿತಾಸಕ್ತಿದಾರರು ಈಗಾಗಲೇ ಭೂಸ್ವಾಧೀನಕ್ಕೆ ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಅದಾಗ್ಯೂ ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ಹಿತಾಸಕ್ತಿ ಉಳ್ಳವರಿಗೆ ಮೇಲ್ಕಂಡ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಮಂಡೂರು ಗ್ರಾಮದ ವಿಚಾರಣೆಯನ್ನು **ದಿನಾಂಕ: 16–06–2026 ರಂದು ಬೆಳಿಗ್ಗೆ 11.30 ಗಂಟೆಗೆ** ನಿಗಧಿಪಡಿಸಲಾಗಿದೆ. ಸದರಿ ದಿನಾಂಕದಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.

ಸಹಿ/–ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ(ಕೇಂದ್ರ ಕಛೇರಿ).

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಬೇರೆಯವರಿಗೆ ಸ್ವಾತಂತ್ರ್ಯ ನೀಡದವರು ಸ್ವತಃ ಸ್ವಾತಂತ್ರ್ಯ ಅನುಭವಿಸಲು ಅನರ್ಹರು.

–ಅಬ್ರಹಾಂ ಲಿಂಕನ್

ಸಂಪಾದಕೀಯ

ಎಲ್ಲೆ ಮೀರಿ ಅರಣ್ಯ ಒತ್ತುವರಿ ಬಿಗಿಗೊಳ್ಳಲಿ ಕಾನೂನಿನ ಬೇಲಿ

ಚಿಕ್ಕಮಗಳೂರು ಜಿಲ್ಲೆಯೊಂದರಲ್ಲಿಯೇ 36,785 ಎಕರೆಯಷ್ಟು ಕಾಡಿನ ಒತ್ತುವರಿ ಆಗಿದೆ ಎಂದು ಅರಣ್ಯ ಇಲಾಖೆ ಗುರುತಿಸಿದೆ. ಈ ಒತ್ತುವರಿಯು ಆತಂಕ ಮೂಡಿಸುವ ವಿದ್ಯಮಾನವಾಗಿದೆ. ಒಂದೆಡೆ, ಕಾಡಿನ ನಾಶ ಅವ್ಯಾಹತವಾಗಿ ನಡೆಯುತ್ತಿದೆ. ಇನ್ನೊಂದೆಡೆ ಅರಣ್ಯ ಪ್ರದೇಶ ದೊಡ್ಡ ಪ್ರಮಾಣದಲ್ಲಿ ಒತ್ತುವರಿ ಆಗಿರುವುದು ಬೆಳಕಿಗೆ ಬರುತ್ತಿದೆ. ಕಾಡನ್ನು ಕಬಳಿಸುತ್ತಿರುವ ಬೆಳವಣಿಗೆಗೆ ಕಾನೂನು ಉಲ್ಲಂಘನೆಯಷ್ಟೇ ಆಗಿರದೆ, ಅರಣ್ಯ ಹಾಗೂ ಅಲ್ಲಿನ ಜೀವಿಗಳ ಸುರಕ್ಷತೆಯ ಪ್ರಶ್ನೆಯೂ ಆಗಿದೆ. ನಾಡಿನ ಪರಿಸರದ ಸುರಕ್ಷತೆ, ಜೀವವೈವಿಧ್ಯ, ಸಾಮಾಜಿಕ ನ್ಯಾಯ ಮತ್ತು ಕಾನೂನು ಆಡಳಿತದ ಮೇಲಿನ ಸಂಘಟಿತ ದಾಳಿಯ ರೂಪದಲ್ಲಿ ಈ ಒತ್ತುವರಿಯನ್ನು ನೋಡಬೇಕಾಗಿದೆ. ತುಂಡು ಭೂಮಿಯ ನಿರೀಕ್ಷೆಯಲ್ಲಿ ಜೀವಮಾನವನ್ನೇ ಕಳೆಯುವವರು ಇರುವ ಸಮಾಜದಲ್ಲಿಯೇ ಕೆಲವರು ದೊಡ್ಡ ಪ್ರಮಾಣದ ಭೂಮಿಯನ್ನು ಅತಿಕ್ರಮಿಸುತ್ತಿದ್ದಾರೆ. ಇಂಥ ಕೃತ್ಯಗಳಿಗೆ ಕಾರಣಕರ್ತರನ್ನಾಗಿ ಭೂಮಾಫಿಯಾವನ್ನಷ್ಟೇ ಗುರುತಿಸಲಾಗದು. ಅಧಿಕಾರಿಗಳ ಸಹಕಾರವಿಲ್ಲದೆ ಸಾವಿರಾರು ಎಕರೆ ಭೂಮಿಯನ್ನು ಕಬಳಿಸುವುದು ಸಾಧ್ಯವಿಲ್ಲ. ಮೀಸಲು ಅರಣ್ಯ, ರಕ್ಷಿತ ಅರಣ್ಯ, ಗ್ರಾಮ ಅರಣ್ಯ, ಸೆಕ್ಷನ್–4 ಘೋಷಿತ ಅರಣ್ಯ, ವರ್ಗೀಕರಿಸದ ಅರಣ್ಯ ಸೇರಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 2,12,942 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಜಿಲ್ಲೆಯ ಮೂರು ಅರಣ್ಯ ವಿಭಾಗಗಳಲ್ಲಿ 9,807 ಅತಿಕ್ರಮಣ ಪ್ರಕರಣಗಳನ್ನು ಅರಣ್ಯ ಇಲಾಖೆ ದಾಖಲಿಸಿದೆ. ಕೊಪ್ಪ ವಿಭಾಗದ ವ್ಯಾಪ್ತಿಯಲ್ಲಿ 28,630 ಎಕರೆ, ಚಿಕ್ಕಮಗಳೂರು ವಿಭಾಗ ವ್ಯಾಪ್ತಿಯಲ್ಲಿ 7,857 ಎಕರೆ ಹಾಗೂ ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ 296 ಎಕರೆ ಒತ್ತುವರಿ ಆಗಿದೆ ಎಂದು ಗುರುತಿಸಲಾಗಿದೆ.

ರಾಜ್ಯದ ವಿವಿಧ ಪ್ರದೇಶಗಳಲ್ಲಿ ಕಾನೂನು ಉಲ್ಲಂಘಿಸಿ ಕಾಡಿನ ಒತ್ತುವರಿ ವ್ಯಾಪಕವಾಗಿ ನಡೆಯುತ್ತಿದೆ; ಕಾಡು–ನಾಡಿನ ಸ್ವಾಸ್ಥ್ಯಕ್ಕೆ ಆತಂಕ ಎದುರಾಗಿದೆ.

ಅರಣ್ಯದ ಪ್ರದೇಶದ ಜೊತೆಗೆ ನಗರ, ಪಟ್ಟಣ ಪ್ರದೇಶಗಳಲ್ಲಿ ಸರ್ಕಾರಿ ಭೂಮಿಯ ಅತಿಕ್ರಮಣ ನಡೆದಿದೆ. ನಾಗಮಂಗಲ ತಾಲ್ಲೂಕಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ನೂರಾರು ಕೋಟಿ ಮೌಲ್ಯದ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಕಬಳಿಸಿರುವ ಪ್ರಕರಣ ಇತ್ತೀಚೆಗಷ್ಟೆ ವರದಿಯಾಗಿದೆ. ಚಿಕ್ಕಮಗಳೂರು ಮಾತ್ರವಲ್ಲದೆ ರಾಜ್ಯದ ಬೇರೆ ಜಿಲ್ಲೆಗಳಲ್ಲಿಯೂ ಕಾಡನ್ನು ಕಬಳಿಸುವ ಪ್ರಯತ್ನಗಳು ನಡೆದಿವೆ. ಕೋಲಾರ, ಹಾಸನ ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶ ಹಾಗೂ ಸರ್ಕಾರಿ ಭೂಮಿಯ ಕಬಳಿಕೆ ಪ್ರಕರಣಗಳು ವರದಿಯಾಗಿವೆ. ರೆಸಾರ್ಟ್, ಹೋಂ ಸ್ಟೇ, ಅಕ್ರಮ ಗಣಿಗಾರಿಕೆ, ಕೃಷಿಭೂಮಿ ವಿಸ್ತರಣೆ, ಮೊದಲಾದವುಗಳ ಸಲುವಾಗಿ ಮಲೆನಾಡಿನಲ್ಲಿ ಅರಣ್ಯ ಒತ್ತುವರಿ ವ್ಯಾಪಕವಾಗಿ ನಡೆದಿದೆ. ರಾಜ್ಯದಲ್ಲಿ ₹50 ಸಾವಿರ ಕೋಟಿ ಮೌಲ್ಯದ ಒತ್ತುವರಿ ಅರಣ್ಯ ಭೂಮಿಯನ್ನು ಇಲಾಖೆಯ ವಶಕ್ಕೆ ಪಡೆಯಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ನಗರ ಮತ್ತು ಪಟ್ಟಣಗಳಿಗೆ ಹೊಂದಿಕೊಂಡಿರುವ ಅರಣ್ಯ ಪ್ರದೇಶ ಒತ್ತುವರಿ ಆಗದಂತೆ ತಡೆಯಲು ಬೇಲಿ ಹಾಕುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದ್ದಾರೆ. ಅರಣ್ಯದ ಸ್ವರೂಪ ಇದ್ದರೂ ಕಂದಾಯ ಕಡತಗಳಲ್ಲಿ 'ಅರಣ್ಯ' ಎಂದು ಮ್ಯುಟೇಶನ್ (ಇಂಡೀಕರಣ) ಆಗಿಲ್ಲ. ಅರಣ್ಯ ಎಂದು ದಾಖಲಾಗದ ಕಾರಣ ಅಕ್ರಮ ಮಂಜೂರಾತಿ, ಒತ್ತುವರಿ ನಡೆಯುತ್ತಿದ್ದು, ಇದನ್ನು ತಡೆಯಲು ಮ್ಯುಟೇಶನ್ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದೂ ಸಚಿವರು ಹೇಳಿದ್ದಾರೆ. ಆದರೆ, ಸಮಸ್ಯೆ ಇರುವುದು ಕಾನೂನುಗಳಿಗೆ ಸಂಬಂಧಿಸಿದ್ದಲ್ಲ; ಅವುಗಳ ಅನುಷ್ಠಾನದ್ದು.

ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚುತ್ತಿರುವುದಕ್ಕೆ ಕಾಡಿನ ಒತ್ತುವರಿಯೂ ಒಂದು ಕಾರಣವಾಗಿದೆ. ಮನುಷ್ಯರ ಹಸ್ತಕ್ಷೇಪದಿಂದ ಕಾಡುಪ್ರಾಣಿಗಳ ನೆಲೆಗಳು ಹಾನಿಗೊಳಗಾಗುತ್ತವೆ ಹಾಗೂ ಪರಿಸರದಲ್ಲಿ ಅಸಮತೋಲನ ಉಂಟಾಗುತ್ತದೆ. ಜೀವವೈವಿಧ್ಯವನ್ನು ಪೋಷಿಸುವ ತಾಯಿಯ ರೂಪದಲ್ಲಿ ಕಾಡನ್ನು ಕಾಣುವ ಬದಲು, ಸೋಟಿನ ಕಂತೆಗಳ ರೂಪದಲ್ಲಿ ನೋಡಲಾಗುತ್ತಿದೆ. ಮಲೆನಾಡಿನ ಅಸ್ತವ್ಯಸ್ತಗೊಳ್ಳುತ್ತಿರುವ ಮಳೆ ಪ್ರಮಾಣದ ಚಕ್ರ, ನದಿಗಳ ಹರಿವಿನ ಪ್ರಮಾಣ ಕ್ಷೀಣಿಸುತ್ತಿರುವುದಕ್ಕೂ ಕಾಡಿನ ಒತ್ತುವರಿಗೂ ಸಂಬಂಧವಿದೆ. ಅಂತರ್ಜಲ ಮಟ್ಟದ ಕುಸಿತ, ಮಣ್ಣಿನ ಸವಕಳಿ ಸೇರಿದಂತೆ ಹಲವು ದುಷ್ಪರಿಣಾಮಗಳಿಗೆ ಅರಣ್ಯವನ್ನು ಶಿಥಿಲಗೊಳಿಸುವ ಪ್ರಯತ್ನಗಳು ಕಾರಣವಾಗುತ್ತಿವೆ. ಭವಿಷ್ಯದ ತಲೆಮಾರುಗಳ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಇಂಥ ನಡವಳಿಕೆ ಅಕ್ಷಮ್ಯ. ಪರಿಸರ ಕಾಳಜಿ ಎನ್ನುವುದು ಕೆಲವರ 'ಅರಣ್ಯ ರೋದನ'ವಾಗಿಯಷ್ಟೇ ಉಳಿದಿರುವ ಸಂದರ್ಭದಲ್ಲಿ ಕಾಡನ್ನು ಕಬಳಿಸುತ್ತಿರುವ ಬೆಳವಣಿಗೆ ತೀವ್ರತೆ ಪಡೆದುಕೊಳ್ಳುತ್ತಿರುವಂತಿದೆ. ಒತ್ತುವರಿಯನ್ನು ತೆರವುಗೊಳಿಸುವಲ್ಲಿ ಸರ್ಕಾರದ ಇಚ್ಛಾಶಕ್ತಿಯೊಂದಿಗೆ ಸ್ಥಳೀಯರ ಸಹಭಾಗಿತ್ವ ಅಗತ್ಯವಾಗಿದೆ. ರಾಜ್ಯದ ಅರಣ್ಯ ಪ್ರದೇಶಗಳನ್ನು ಉಪಗ್ರಹ ಸಮೀಕ್ಷೆಗೆ ಒಳಪಡಿಸುವ ಮೂಲಕ ಅವುಗಳ ಗಡಿಗಳನ್ನು ಗೊತ್ತುಪಡಿಸಬೇಕಾಗಿದೆ. ಅರಣ್ಯ ಒತ್ತುವರಿಗೆ ಕಾರಣರಾದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕಾಗಿದೆ.

ಭಾರತದ ಜಿರಲೆಗಳು ಮತ್ತು ನಾವು

ಅನುರಣನ

ನಾರಾಯಣ ಎ.

> 'ಈ ದೇಶದ ಜಿರಲೆಗಳು' ಎಂದು ತಮ್ಮನ್ನು ಕರೆದುಕೊಂಡಿರುವ ಕೋಟ್ಯಂತರ ಜನರನ್ನು ಯುವಜನರ ಹತಾಶೆ, ಅಸಹನೆ, ಭಾವೋತ್ಕರ್ಷದ ರೂಪದಲ್ಲಿ ನೋಡಲಾಗುತ್ತಿದೆ. ಆದರೆ, ಈ ಜಿರಲೆಗಳು ದೇಶದ ವರ್ತಮಾನ ಕೊಳೆತು ನಾರುತ್ತಿರುವುದನ್ನು ಬಹಿರಂಗಗೊಳಿಸಿವೆ. ರಾಜಕಾರಣದಲ್ಲಿನ ನೈತಿಕ ಅಧಃಪತನಕ್ಕೂ, ಸಮಾಜದ 'ರಾಜಿ' ಮನೋಭಾವಕ್ಕೂ ಕನ್ನಡಿ ಹಿಡಿದಿವೆ.

ಜಾಲತಾಣದಲ್ಲಿ ದಿಢೀರ್ ಆಗಿ ಹುಟ್ಟಿಕೊಂಡು ದಿನಬೆಳಗಾಗುವುದರೊಳಗೆ ಇಡೀ ವ್ಯವಸ್ಥೆ ತಣ್ಣನೆ ಕಂಪಿಸುವಂತೆ ಮಾಡಿದ 'ಜಿರಲೆ ಜನತಾ ಪಕ್ಷ' ಎಂಬ ರಾಜಕೀಯ ವಿಡಂಬನಾ ಆಂದೋಲನವನ್ನು ಕ್ರಾಂತಿ ಎನ್ನಿ, ಪ್ರತಿಕ್ರಾಂತಿ ಎನ್ನಿ, ಯೌವನದ ಹುಚ್ಚಾಟವೆನ್ನಿ, ವಿರೋಧ ಪಕ್ಷಗಳ ವಿರುದ್ಧದ ಪಿತೂರಿ ಎನ್ನಿ, ಅರಾಜಕತೆ ಸೃಷ್ಟಿಸುವ ಹುನ್ನಾರವೆನ್ನಿ, ನಿನ್ನೆ ಬಿದ್ದ ಮಳೆಗೆ ಇಂದು ಹುಟ್ಟಿಕೊಂಡ ಇನ್ನೊಂದು ರಾಜಕೀಯ ಅಣಬೆ ಎನ್ನಿ. ಆಂದೋಲನದಷ್ಟೇ ದಿಢೀರ್ ಆಗಿ ಅದರ ಕುರಿತಾಗಿ ಕೇಳಿಬರುತ್ತಿರುವ ಈ ಎಲ್ಲ ಅಭಿಪ್ರಾಯಗಳಲ್ಲಿ ಯಾವುದಾದರೂ ಒಂದು ಸತ್ಯವಾಗಿರಬಹುದು ಅಥವಾ ಎಲ್ಲವೂ ಸತ್ಯವಾಗಿರಬಹುದು. ಅದೇನೇ ಆಗಿರಲಿ. ಈ ಒಟ್ಟು ವಿದ್ಯಮಾನದಲ್ಲಿ 'ಭಾರತದ ಜಿರಲೆಗಳು ನಾವು' ಎಂದು ತಮ್ಮನ್ನು ತಾವು ಸಂತೋಷದಿಂದ ಕರೆದುಕೊಂಡಿರುವ ಅವರು, ಅರ್ಥಾತ್ ಈ ದೇಶದ ದೊಡ್ಡ ಸಂಖ್ಯೆಯ ಯುವಜನರು, ಬಹಳ ಒಳ್ಳೆಯ ಒಂದು ಕೆಲಸ ಮಾಡಿದ್ದಾರೆ. ಭಾರತದ ಜನಗಳಾದ ನಾವು ಎಪ್ಪತ್ತೈದು ವರ್ಷಗಳಲ್ಲಿ ಈ ದೇಶದ ಸಂವಿಧಾನಕ್ಕೆ ಮಾಡಿದ ದ್ರೋಹವನ್ನು ಅವರು ಕ್ಷಣಮಾತ್ರದಲ್ಲಿ, ದಿನಮಾತ್ರದಲ್ಲಿ ಅಕ್ಷರಶಃ ಬಯಲಿಗೆಳೆದಿದ್ದಾರೆ.

'ನೀವು ದೇಶವನ್ನು ಗಟಾರವನ್ನಾಗಿ ಮಾಡಿದ್ದೀರಿ. ಅದರಲ್ಲಿ ಸಹಜವಾಗಿಯೇ ಹುಟ್ಟಿಕೊಂಡಿರುವ ಜಿರಲೆಗಳು ನಾವು' ಎಂದು ಅವರು ತಿರುಗೇಟು ನೀಡಿದ್ದು ಅಂತಿಂತಹ ನಡೆಯಲ್ಲ. ಅವರು ಪ್ರಸ್ತಾಪಿಸಿರುವ ಗಟಾರದ ನೀರಿನಲ್ಲಿ ಪ್ರತಿಫಲಿಸುತ್ತಿರುವುದು ಆಡಳಿತ ಪಕ್ಷದ ಮುಖ ಮಾತ್ರವಲ್ಲ. ಅಲ್ಲಿ, ವಿರೋಧ ಪಕ್ಷಗಳು, ಮಾಧ್ಯಮಗಳು, ನ್ಯಾಯಾಂಗ, ಕಾರ್ಯಾಂಗ ಮತ್ತು ನಾಗರಿಕ ಸಮಾಜ ಸೇರಿದಂತೆ ಭಾರತದ ಜನಗಳಾದ ನಾವೆಲ್ಲಾ ನಮ್ಮ ನಮ್ಮ ಮುಖಗಳನ್ನು ನೋಡಿಕೊಳ್ಳಬೇಕಿದೆ. ಯಾಕೆಂದರೆ, ಅವರು ಇಂದು ಹೇಳುತ್ತಿರುವುದನ್ನು ನಮಗೆ ಎಪ್ಪತ್ತೈದು ವರ್ಷಗಳಲ್ಲಿ ಹೇಳುವುದಕ್ಕೆ ಸಾಧ್ಯವಾಗದೆ ಹೋದ ಕಾರಣಕ್ಕೆ ಈ ಘೋರ ಗಟಾರ ಸೃಷ್ಟಿಯಾಗಿರುವುದು. ಈಗಲಾದರೂ ಭಾರತದ ಜನಗಳಾದ ನಾವು ಭಾರತದ ಜಿರಲೆಗಳಾದ ಅವರು ಹೇಳುತ್ತಿರುವುದನ್ನು ಕಿವಿಗೊಟ್ಟು ಆಲಿಸಬೇಕು.

ಏನದು ಅವರು ಹೇಳುತ್ತಿರುವುದು? ಏನದು ನಾವು ಕೇಳಿಸಿಕೊಳ್ಳಬೇಕಿರುವುದು? ಒಂದು ಉದಾಹರಣೆ ನೋಡಿ. ಅವರು ನಿರ್ಭಿಡೆಯಿಂದ ಹೇಳಿಕೊಳ್ಳುತ್ತಿದ್ದಾರೆ, ಈ ದೇಶದ ಸಂವಿಧಾನ ಹೇಳಿದ 'ಸೆಕ್ಯುಲರ್ ಮತ್ತು ಸೋಷಿಯಲಿಸ್ಟ್' ತತ್ತ್ವಗಳಲ್ಲಿ ನಮಗೆ ನಂಬಿಕೆ ಇದೆ ಎಂದು. ಇನ್ನೊಂದರ್ಥದಲ್ಲಿ ಅವರು ನೀಡುತ್ತಿರುವ ಕರೆ: 'ಗರ್ವದಿಂದ ಹೇಳಿ ನಾವು ಸೆಕ್ಯುಲರ್', 'ಗರ್ವದಿಂದ ಹೇಳಿ ನಾವು ಸೋಷಿಯಲಿಸ್ಟ್' ಎಂಬಂತಿದೆ. ಸಂವಿಧಾನದ ಸಮರ್ಥನೆಗಾಗಿ ಯಾರಾದರೂ ಹೀಗೆ ಗಟ್ಟಿಯಾಗಿ ಹೇಳುವುದಕ್ಕಾಗಿ ಈ ದೇಶ ಕಾಯುತ್ತಿತ್ತು.

ಇಷ್ಟು ಕಾಲವೂ ಈ ದೇಶದ ಸಂವಿಧಾನ ವಿರೋಧಿಗಳು 'ಸೆಕ್ಯುಲರ್' ಎನ್ನುವ ಪರಿಕಲ್ಪನೆಯನ್ನು ಮುಂದಿಟ್ಟುಕೊಂಡು ಸಂವಿಧಾನದ ವಿರುದ್ಧ ಇನ್ನಿಲ್ಲದ ಅಪಪ್ರಚಾರ ಮಾಡುತ್ತಿದ್ದರೆ, ಭಾರತದ ಜನಗಳಾದ ನಮಗೆ 'ಹೌದು, ನಾವು ಸೆಕ್ಯುಲರ್ ಆಗಿದ್ದೇವೆ ಮತ್ತು ಆಗಿರುತ್ತೇವೆ; ನಾವು ಸೋಷಿಯಲಿಸ್ಟ್ ಆಗಿದ್ದೇವೆ ಮತ್ತು ಆಗಿರುತ್ತೇವೆ, ಇದು ಭಾರತದ ಜನಗಳಾದ ನಾವು ಮಾಡಿದ ಪವಿತ್ರವಾದ ದೃಢ ಸಂಕಲ್ಪ' ಎಂದು ಗಟ್ಟಿಯಾಗಿ ಹೇಳುವ ಧೈರ್ಯ ಇರಲಿಲ್ಲ. (ಇವೆಲ್ಲ ನಲವತ್ತೆರಡನೆಯ ತಿದ್ದುಪಡಿಯಿಂದ ಬಂತು, ನಮ್ಮಲ್ಲಿ ಶತಮಾನಗಳ ಸೆಕ್ಯುಲರ್ ಸಂಸ್ಕೃತಿ ಉಂಟು, ಎಂಬಿತ್ಯಾದಿ ಸಂವಿಧಾನ ವಿರೋಧಿಗಳ ಹಳೆಯ ಹಳವಂಡಗಳ ಬಗ್ಗೆ ಚರ್ಚಿಸಲು ಇಲ್ಲಿ ಜಾಗ ಸಾಲದು.)

ಇನ್ನೂ ಸ್ಪಷ್ಟವಾಗಿ, ಭಾರತದ ಜಿರಲೆಗಳಾದ ಅವರು ಹೇಳಿರುವುದನ್ನು ಕೇಳಿ: 'ಎದ್ದರೆ ಬಿದ್ದರೆ ಹಿಂದೂ ಮುಸ್ಲಿಂ, ಹಿಂದೂ ಮುಸ್ಲಿಂ ಎಂದು ಅರಚುವ ನಿಮ್ಮ ಚಾಳಿ ನಿಲ್ಲಿಸಿ'. ಭಾರತ ಜನ ಗಳಾದ ನಮಗೆ ನಮ್ಮ ಎದೆಯಿಂದ ಇದನ್ನು ಹೇಳಲು ಇಷ್ಟು ಕಾಲ ಸಾಧ್ಯವೇ ಆಗಿರಲಿಲ್ಲ. ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟಿ ಎಷ್ಟು ಓಟು ಪಡೆಯಬಹುದು ಎಂಬ ಒಂದು ರಾಜಕೀಯ ಪಕ್ಷದ ಲೆಕ್ಕಾಚಾರ, ಈ ಎತ್ತಿಕಟ್ಟುವ ರಾಜಕೀಯವನ್ನು ವಿರೋಧಿಸಿದರೆ ಹಿಂದೂಗಳ ಓಟು ಎಷ್ಟು ನಷ್ಟವಾದೀತು ಎನ್ನುವ ಉಳಿದ ಪಕ್ಷಗಳ ಲೆಕ್ಕಾಚಾರದಲ್ಲಿ ಈ ದೇಶ ದ್ವೇಷದ ಕುಲುಮೆಯಾಗಿ ಹೋಯಿತು. ಆ ಬೆಂಕಿಯಲ್ಲಿ ಸಾವಿರ ಸಾವಿರ ಹಸಿಹಸಿ ಜೀವಗಳು ಸುಟ್ಟು ಹೋಗುತ್ತಿರುವಾಗ ಭಾರತದ ಜನಗಳಾದ ನಾವು ಮೌನವಾಗಿದ್ದೆವು. ಸಂವಿಧಾನವನ್ನು ಅಕ್ಷರಶಃ ಅಣಕಿಸಿದ ಮಹಾಮೌನ ಅದು. ಭಾರತದ ಜಿರಲೆಗಳಾದ ಅವರು ಮೌನ ಮುರಿದಿದ್ದಾರೆ. ಭಾರತದಲ್ಲಿ ನಾಗರಿಕತೆ ಮತ್ತು ಮಾನವೀಯತೆ ಇನ್ನೂ ಉಸಿರಾಡುತ್ತಿದೆ ಎಂದು ತೋರಿಸಿದ್ದಾರೆ.

ಅದಕ್ಕಿಂತ ಮುಖ್ಯವಾಗಿ 'ಗಾಂಧೀಜಿ, ನೆಹರೂ ಮತ್ತು ಅಂಬೇಡ್ಕರ್ ನಮಗೆ ಆದರ್ಶ' ಎಂದು ಭಾರತದ ಜಿರಲೆಗಳಾದ ಅವರು ಹೇಳುತ್ತಿದ್ದಾರೆ. ಅದನ್ನು ಕೇಳಿಸಿಕೊಂಡು ಭಾರತದ ಜನಗಳಾದ ನಾವೀಗ ನಮ್ಮನ್ನು ಮುಟ್ಟಿ ನೋಡಿಕೊಳ್ಳಬೇಕಿದೆ. ಈ ದೇಶವನ್ನು ದೇಶವನ್ನಾಗಿ ಮಾಡಿದ, ಈ ದೇಶದ ಜನರನ್ನು ಭಾರತೀಯರನ್ನಾಗಿ ಮಾಡಿದ, ಈ ದೇಶದಲ್ಲಿ ನಾಗರಿಕತೆಯ ಮೂಲ ದ್ರವ್ಯ ಗಳಾದ ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದ ಸಿಂಚನವಾಗುವಂತೆ ಮಾಡಿದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಸಂವಿಧಾನದ ಹಿಂದಿನ ಈ ಮೂರು ಮಹಾನ್ ಚೇತನಗಳ ಮೇಲೆ ಸಂವಿಧಾನ ವಿರೋಧಿಶಕ್ತಿಗಳು ಇನ್ನಿಲ್ಲದಂತೆ ದಾಳಿ ಮಾಡುತ್ತಿದ್ದರೆ, ಭಾರತದ ಜನಗಳಾದ ನಾವು ದಿವ್ಯ ನಿರ್ಲಕ್ಷ್ಯ ತೋರಿದೆವು. ಗಾಂಧಿಯವರ ರಾಕ್ಷಸೀಕರಣ, ನೆಹರೂ ಅವರ ಚಾರಿತ್ರ್ಯಹರಣ ಮತ್ತು ಅಂಬೇಡ್ಕರ್ ಅವರ ಅಪಹರಣವನ್ನು ಸಂವಿಧಾನ ವಿರೋಧಿ ಶಕ್ತಿಗಳು ಇನ್ನಿಲ್ಲದ ಶ್ರದ್ಧೆಯಿಂದ ಮಾಡುತ್ತಿದ್ದಾರೆ. ಅದರ ಕುರಿತು ಭಾರತದ ಜನಗಳಾದ ನಾವು ತೋರಿದ್ದು ದಿವ್ಯ ನಿರ್ಲಕ್ಷ್ಯ. ಈ ಮೂವರ ಪ್ರಭಾವವನ್ನು ಅಳಿಸಿಬಿಟ್ಟರೆ ಸಂವಿಧಾನವನ್ನು ನಾಶಪಡಿಸಿದಂತೆ ಎಂದು ಸಂವಿಧಾನ ವಿರೋಧಿಗಳಿಗೆ ಸ್ಪಷ್ಟವಾಗಿ ಗೊತ್ತಿದೆ.

ನಾವು ಗಾಂಧಿಯವರ ಸಮರ್ಥನೆಯನ್ನು ಗಾಂಧೀವಾದಿಗಳಿಗೆ ಬಿಟ್ಟು ಸುಮ್ಮನಾದೆವು. ನೆಹರೂ ಅವರನ್ನು ಸಮರ್ಥಿಸಲು ಕಾಂಗ್ರೆಸ್ಸಿಗರೂ ಮುಂದೆ ಬರಲಿಲ್ಲ. ಕರ್ನಾಟಕದ ಒಬ್ಬ ನಿಷ್ಠಾವಂತ ಕಾಂಗ್ರೆಸ್ ನಾಯಕ ಪಕ್ಷದ ಪ್ರಚಾರದಲ್ಲಿ ನೆಹರೂ ಭಾವಚಿತ್ರ ಬಳಸುವುದು ಬೇಡ ಎನ್ನುವಷ್ಟರ ಮಟ್ಟಿಗೆ ನೆಹರೂ ಅನಾಥರಾಗಿದ್ದಾರೆ. ಇನ್ನು ಅಂಬೇಡ್ಕರ್ ಅವರನ್ನು ಸಂವಿಧಾನ ವಿರೋಧಿಗಳು ಹೈಜಾಕ್ ಮಾಡುತ್ತಿದ್ದರೆ, ಭಾರತದ ಜನಗಳಾದ ನಾವು ಅವರಿಗೆ ಗಾಂಧಿಯವರ ಜೊತೆಗಿದ್ದ ಭಿನ್ನಾಭಿಪ್ರಾಯಗಳನ್ನು ವೈರಿಗಳಿಬ್ಬರ ಸಂಘರ್ಷ ಎಂಬಂತೆ ಮುಂದಿಟ್ಟು ಸಂವಿಧಾನ ವಿರೋಧಿಗಳಿಗೆ ಯಥಾಶಕ್ತಿ ನೆರವಾದೆವು. ಈ ಮೂಲಕ ಸಂವಿಧಾನಕ್ಕೆ ದ್ರೋಹ ಬಗೆದೆವು. ಆದರೆ, ಭಾರತದ ಜಿರಲೆಗಳಾದ ಅವರಿಗೆ ಯಾವ ಗೊಂದಲವೂ ಇಲ್ಲ. ಅಂಬೇಡ್ಕರ್, ಗಾಂಧಿ ಮತ್ತು ನೆಹರೂ ಅವರನ್ನು ಬಿಟ್ಟರೆ ಭಾರತ ಇಲ್ಲ ಎನ್ನುವುದು ಅವರ ನಿಲುವು. ಜಿರಲೆಗಳಿಗಾದರೂ ಅರ್ಥವಾಯಿತಲ್ಲ. ಅಷ್ಟು ಸಾಕು.

ಜಿರಲೆ ಜನತಾ ಪಕ್ಷದ ಪ್ರಣಾಳಿಕೆ ಬರೀ ಪ್ರಣಾಳಿಕೆಯಲ್ಲ. ಅದು ಭಾರತದ ಜಿರಲೆಗಳಾದ ಅವರು ಭಾರತದ ಜನಗಳಾದ ನಮಗೆ ಸಂಜ್ಞಾತ್ಮಕ ಭಾಷೆಯಲ್ಲಿ (ಕೋಡೆಡ್ ಲಾಂಗ್ವೇಜ್) ನೀಡಿದ ಸಂದೇಶವೂ ಹೌದು. ಎಚ್ಚರಿಕೆಯೂ ಹೌದು. ಒಂದು ದೇಶದಲ್ಲಿ ರಾಜಕಾರಣ ಕೆಡುವುದು, ಕೆಟ್ಟ ರಾಜಕಾರಣಿಗಳು ಅಧಿಕಾರ ಹಿಡಿಯುವುದು ಇತ್ಯಾದಿಗಳೆಲ್ಲ ಇದ್ದದ್ದೇ. ಆದರೆ, ಯಾವ ದೇಶದಲ್ಲಿ ನ್ಯಾಯಾಂಗ ಮತ್ತು ಮಾಧ್ಯಮರಂಗ ಹಾದಿ ತಪ್ಪುತ್ತದೋ ಆ ದೇಶವನ್ನು ದೇವರು ಕೂಡ ರಕ್ಷಿಸಲಾರ ಎಂಬ ಹಳೆಯ ಮಾತನ್ನು ಭಾರತದ ಜನಗಳಾದ ನಾವು ಅರ್ಥಮಾಡಿಕೊಂಡಿಲ್ಲ. ಅರ್ಥ ಮಾಡಿಕೊಂಡವರೂ ನಿರ್ಣಾಯಕವಾಗಿ ಧ್ವನಿ ಎತ್ತಲಿಲ್ಲ. ಭಾರತದ ಜಿರಲೆಗಳಾದ ಅವರು ಮಾತ್ರ ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದು ಮಾತ್ರವಲ್ಲ, ಈ ಪತನವನ್ನು ಯಾವ ಬೆಲೆತೆತ್ತಾದರೂ ತಡೆಯಬೇಕು ಎಂಬ ಅವರ ನಿರ್ಣಾಯಕ ನಿಲುವು ಪ್ರಣಾಳಿಕೆ ಓದಿದರೆ ವೇದ್ಯವಾಗುತ್ತದೆ.

ಯಾವ ದೃಷ್ಟಿಯಿಂದ ನೋಡಿದರೂ ಭಾರತದ ಜಿರಲೆಗಳಾದ ಅವರದ್ದು ಬರಿಯ ಆರ್ಥಿಕ ಪ್ರತಿಭಟನೆಯಲ್ಲ. ಅವರದ್ದು ನೈತಿಕ ಪ್ರತಿಭಟನೆ. ಅವರ ಆಕ್ರೋಶದ ಹಿಂದಿರುವುದು ಉದ್ಯೋಗ ಸಿಗುತ್ತಿಲ್ಲ ಎನ್ನುವ ನಿರಾಶೆ ಅಷ್ಟೇ ಅಲ್ಲ, ಬದುಕು ಅಭದ್ರಸ್ಥಿತಿಯಲ್ಲಿದೆ ಎನ್ನುವ ಆತಂಕ ಮಾತ್ರವಲ್ಲ. ಅವರಿಗೆ ಆಕ್ರೋಶ ತರಿಸುತ್ತಿರುವುದು ಈ ದೇಶದ ನೈತಿಕ ದಿವಾಳಿತನ, ಮಂದಿರಗಳ ಹೆಸರಲ್ಲಿ ನಡೆಯುವ ಅಧರ್ಮ, ನ್ಯಾಯಮಂದಿರಗಳಲ್ಲಿ ನಡೆಯುವ ಪಕ್ಷಪಾತೀ (ಅ)ನ್ಯಾಯ ನಿರ್ಣಯ, ಕೃತ್ರಿಮವನ್ನೇ ಮಹಾನ್ ಕರ್ತೃತ್ವಶಕ್ತಿ ಎಂದು ವಿಶ್ವದಾದ್ಯಂತ ಪ್ರದರ್ಶಿಸುತ್ತಿರುವ ಮಹಾನ್ ನಾಯಕರುಗಳ ನಿರ್ಲಜ್ಜ ನಡವಳಿಕೆ, ಮಾರಾಟವಾದ ಮಾಧ್ಯಮಗಳು, ಆಳುವ ಪಕ್ಷದ ಗುಲಾಮರಂತೆ ವರ್ತಿಸುವ ಚುನಾವಣಾ ಆಯೋಗವೇ ಮುಂತಾದ ಸ್ವಾಯತ್ತ ಸಂಸ್ಥೆಗಳು. ಇವೆಲ್ಲವನ್ನೂ ಈ ದೇಶದ ಹೊಸ ತಲೆಮಾರು ಅಸಹಾಯಕತೆಯಿಂದ ನೋಡುತ್ತಿದೆ. ಅವರು ಮೊಬೈಲ್ ಫೋನ್ ನೋಡುತ್ತಾ ಸಮಯ ಕಳೆಯುತ್ತಿರುವುದು ಜಾಲತಾಣ ಜಗತ್ತಿನ ಆಕರ್ಷಣೆಯಿಂದಲ್ಲ. ಬದಲಿಗೆ ವಾಸ್ತವ ಜಗತ್ತಿನಲ್ಲಿ ನಡೆಯುತ್ತಿರುವ ಅನರ್ಥಕಾರಿ ವ್ಯವಹಾರಗಳಿಂದ ತಪ್ಪಿಸಿಕೊಳ್ಳಲು ಅವರಿಗೆ ಅದೊಂದು ಸುಲಭೋಪಾಯ ಆಗಿರಬೇಕು.

ಜಿರಲೆಗಳ ಜಾಲತಾಣಗಳ ಸಕಲ ಖಾತೆಗಳನ್ನು ಸರ್ಕಾರ ಸ್ಥಗಿತಗೊಳಿಸಬಹುದು. ಆದರೆ, ಖಾತೆಗಳನ್ನು ತಡೆಹಿಡಿದ ಮಾತ್ರಕ್ಕೆ ಎಲ್ಲವೂ ಕೊನೆಗೊಳ್ಳುವುದಿಲ್ಲ. ನೈತಿಕ ಆಕ್ರೋಶ ಕಟ್ಟೆಯೊಡೆದು ಅಪಾಯಕಾರಿಯಾಗದಂತೆ ನೋಡಿಕೊಳ್ಳಬೇಕಾಗಿರುವುದು ಅಗತ್ಯವಾದರೂ ಆಕ್ರೋಶವನ್ನು ಬಲಾತ್ಕಾರದಿಂದ ಅದುಮಿಡುವ ಮೂಲಕ ಅದು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯನ್ನು ಎದುರಿಸಲು ಬೇಕಿರುವುದು ನೈತಿಕಶಕ್ತಿ ಇರುವ ರಾಜಕೀಯ ನಾಯಕತ್ವ. ವರ್ತಮಾನ ಭಾರತದಲ್ಲಿ ಇಲ್ಲದೆ ಹೋಗಿರುವುದು ಇದೊಂದೇ.



ವಾಚಕರ ವಾಣಿ

ಭವಿಷ್ಯ ನಿಧಿ: ಬಡ್ಡಿ ಪಾವತಿ ವಿಳಂಬವೇಕೆ?

ಈ ಹಿಂದೆ ಆಯಾ ತಿಂಗಳಲ್ಲೇ ನೌಕರರ ಭವಿಷ್ಯ ನಿಧಿ ಖಾತೆಯಲ್ಲಿನ ಉಳಿತಾಯದ ಹಣಕ್ಕೆ ಬಡ್ಡಿ ಸಂದಾಯವಾಗುತ್ತಿತ್ತು. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಇದು ಸ್ಥಗಿತಗೊಂಡಿತು. ಆರ್ಥಿಕ ವರ್ಷದ ಅಂತ್ಯದಲ್ಲಿ ಬಡ್ಡಿ ಪಾವತಿ ಮಾಡುವ ಹೊಸ ಪದ್ಧತಿ ಜಾರಿಗೊಂಡಿತು. ಅದರಂತೆ ಕೆಲವು ವರ್ಷಗಳಿಂದ ಏಪ್ರಿಲ್ 1ರಂದು ಅರ್ಹರ ಖಾತೆಗೆ ಬಡ್ಡಿ ಜಮೆಯಾಗುತ್ತಿತ್ತು. ಈ ವರ್ಷ ಮೇ ತಿಂಗಳು ಮುಗಿಯುತ್ತಾ ಬಂದರೂ ಬಡ್ಡಿ ಜಮೆಯಾಗಿಲ್ಲ. ಹಳೆಯ ಪದ್ಧತಿಯಲ್ಲಿ ಪ್ರತಿ ತಿಂಗಳ ಬಡ್ಡಿ ಎಷ್ಟು ಬರಬೇಕೆಂದು ಚಂದಾದಾರರಿಗೆ ಸುಲಭವಾಗಿ ಲೆಕ್ಕ ಸಿಗುತ್ತಿತ್ತು. ಉಳಿತಾಯದ ಹಣಕ್ಕೆ ಸರ್ಕಾರ ನಿಗದಿಪಡಿಸುವ ಶೇಕಡಾವಾರು ಬಡ್ಡಿ ಹಣವನ್ನು ಗುಣಿಸಿ, ಈ ಮಾಸಿಕ ಇಷ್ಟೇ ಬಡ್ಡಿ ಬರುತ್ತದೆಂದು ಖಚಿತವಾಗಿ ಹೇಳಬಹುದಿತ್ತು. ಹೊಸ ಪದ್ಧತಿಯಡಿ ಪ್ರತಿ ತಿಂಗಳು ಸಂದಾಯವಾಗಬೇಕಿದ್ದ ಬಡ್ಡಿ ಮತ್ತು ಚಕ್ರಬಡ್ಡಿ ಸೇರಿಸಿ ನೀಡಲಾಗುತ್ತಿದೆಯೇ ಅಥವಾ ಇಲ್ಲವೇ ಎಂದು ಲೆಕ್ಕ ಹಾಕುವುದು ಕಷ್ಟಕರ ಆಗಿದೆ. ಹಳೆಯ ಮಾನದಂಡವನ್ನೇ ಅನುಸರಿಸಬೇಕಿದೆ.

ಜಿ.ಎಸ್. ಗೋಪಾಲ ನಾಯ್ಕ, ಬೆಂಗಳೂರು

ಇಂಧನ ದರ ಏರಿಕೆಗೆ ಜನಸಾಮಾನ್ಯ ತತ್ತರ

ಪೆಟ್ರೋಲ್, ಡೀಸೆಲ್ ದರ ಮತ್ತೆ ಏರಿಕೆಯಾಗಿದೆ. ಈ ಏರಿಕೆಗೆ ನಿಯಂತ್ರಣವೇ ಇದ್ದಂತಿಲ್ಲ. ರಾಜ್ಯ ಸರ್ಕಾರ ಕೂಡ, ತನ್ನ ಪಾಲಿನ ತೆರಿಗೆ ತಗ್ಗಿಸಿ ಬೆಲೆ ನಿಯಂತ್ರಣಕ್ಕೆ ಮುಂದಾಗಿಲ್ಲ. ಮತ್ತೊಂದೆಡೆ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಆರ್. ಶ್ರೀನಿವಾಸ, 'ನೀರು ಹಾಕಿ ಬಸ್ ಓಡಿಸಲು ಆಗುವುದಿಲ್ಲ' ಎಂದು ಹೇಳುವ ಮೂಲಕ ಬಸ್ ದರ ಏರಿಸುವ ಸುಳಿವು ನೀಡಿದ್ದಾರೆ. ಜನಸಾಮಾನ್ಯರ ಹಿತಾಸಕ್ತಿ ರಕ್ಷಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ವಿಫಲವಾಗಿವೆ.

ಪ್ರಕಾಶ್ ಮಲ್ಕಿ ಒಡೆಯರ್, ಹೂವಿನ ಹಡಗಲಿ

ಕನಿಷ್ಠ ವೇತನ ಏರಿಕೆ: ಕಾರ್ಮಿಕರಿಗೆ ವರ

ಕಾರ್ಮಿಕರ ಕನಿಷ್ಠ ವೇತನವನ್ನು ಶೇ 60ರಷ್ಟು ಏರಿಕೆ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿರುವುದು ಸ್ವಾಗತಾರ್ಹ. ಇತ್ತೀಚೆಗೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದ್ದು, ಕಾರ್ಮಿಕರು ಜೀವನ ನಡೆಸುವುದು ದುಸ್ತರವಾಗಿದೆ. ಇಂತಹ ಸ್ಥಿತಿಯಲ್ಲಿ ವೇತನ ಏರಿಕೆ ಮಾಡಿರುವುದು ಅನುಕೂಲಕರವಾಗಿದೆ. ಇದರಿಂದ ರಾಜ್ಯದ ಒಂದು ಕೋಟಿ ಕಾರ್ಮಿಕರಿಗೆ ಪ್ರಯೋಜನವಾಗಲಿದೆ. ಇಷ್ಟು ವೇತನ ಸಿಗುವಂತೆ ಕ್ರಮವಹಿಸುವುದು ಸರ್ಕಾರದ ಹೊಣೆಯಾಗಿದೆ. ಜೊತೆಗೆ, ಕಾರ್ಮಿಕ ಕಲ್ಯಾಣ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೂ ಆದ್ಯತೆ ನೀಡಬೇಕಿದೆ.

ಪವನ್ ಕುಮಾರ್ ಎಸ್., ಬಳ್ಳಾರಿ

ಬದುಕು ದುಸ್ತರ

ಡೀಸೆಲ್ ದರ ನೂರಕ್ಕೆ ಹತ್ತಿರ
ಪೆಟ್ರೋಲ್ ದರ ನೂರಕ್ಕೂ ಎತ್ತರ
ಹಾಲು, ಗ್ಯಾಸ್ ದರ ಏರಿಕೆ
ನಿರಂತರ
ಜನಜೀವನ ದುಸ್ತರ!
ಅಚ್ಛೇದಿನವೆಂಬ ಭಾಷಣ
ನೆನೆಸಿಕೊಂಡರೆ
ಬದುಕು ನಶ್ವರ!

ಜೆ.ಬಿ ಮಂಜುನಾಥ, ಪಾಂಡವಪುರ

ಕನ್ನಡಿಗರಿಗೆ ಟೆನಿಸ್ ಈಗ ಇನ್ನಷ್ಟು ಹತ್ತಿರ

ಫ್ರೆಂಚ್ ಟೆನಿಸ್ ಟೂರ್ನಿಯ ವೀಕ್ಷಕ ವಿವರಣೆಯನ್ನು ಮೊದಲ ಬಾರಿಗೆ ಕನ್ನಡದಲ್ಲಿ ನೀಡಲು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಸಂಸ್ಥೆ ಮುಂದಾಗಿರುವುದು ಶ್ಲಾಘನೀಯ. ಫ್ರೆಂಚ್ ಟೆನಿಸ್ ಟೂರ್ನಿಯು ಆರು ದಶಕಗಳ ಇತಿಹಾಸ ಹೊಂದಿದೆ. ಪ್ರಸಾರ ಸಂಸ್ಥೆ ಈ ಬಾರಿ ಕನ್ನಡಕ್ಕೂ ಆದ್ಯತೆ ನೀಡಿರುವುದು ಒಳ್ಳೆಯ ಬೆಳವಣಿಗೆ. ಕನ್ನಡದಲ್ಲಿಯೇ ವೀಕ್ಷಕ ವಿವರಣೆ ದೊರೆಯುವುದರಿಂದ ಕ್ರೀಡಾಪ್ರಿಯರು ಟೆನಿಸ್ ಆಟವನ್ನು ಹೆಚ್ಚು ಆಸ್ವಾದಿಸುವುದು ಸಾಧ್ಯವಾಗಲಿದೆ; ಟೆನಿಸ್ ಅಭಿಮಾನಿಗಳಿಗೂ ಹೊಸ ಅನುಭವ.

ನಿತ್ಯ ಆರ್., ದೊಡ್ಡಬಳ್ಳಾಪುರ

ಯುದ್ಧ: ಅವಿವೇಕದ ನಡೆ, ವಿಶ್ವಕ್ಕೆ ಹಿನ್ನಡೆ

ಕೊಲ್ಲಿ ಯುದ್ಧ ಅನಿವಾರ್ಯವಲ್ಲ; ಅದು ಅವಿವೇಕಿಗಳ ನಿರ್ಧಾರದ ಫಲಿತ. ಸ್ವಾರ್ಥ ಸಾಧನೆಗೆ ಸಣ್ಣಪುಟ್ಟ ದೇಶಗಳ ಮೇಲೆ ಹಿಡಿತ ಸಾಧಿಸಲು ಹಾಗೂ ಪ್ರತಿಷ್ಠೆಗಾಗಿ ಇದು ನಡೆಯುತ್ತಿದೆ. ಯುದ್ಧದ ಅಂತಿಮ ಪರಿಣಾಮ ಸಾವು–ನೋವು, ಆಸ್ತಿ–ಪಾಸ್ತಿ ನಷ್ಟ. ಇದನ್ನು ಅಮೆರಿಕ ಅರಿಯಬೇಕಿದೆ. ಇತಿಹಾಸದಲ್ಲಿ ನೆಪೋಲಿಯನ್ ಬೊನಾಪಾರ್ಟೆ, ಚಕ್ರವರ್ತಿ ಅಶೋಕನಂತಹ ಸಾಮ್ರಾಟರು ಯುದ್ಧ ಮಾಡಿ ಗೆದ್ದರೂ ಆತ್ಮಾವಲೋಕನ ಮಾಡಿಕೊಂಡು ಗೆದ್ದ ರಾಜ್ಯವನ್ನು ತ್ಯಜಿಸಿದ ಉದಾಹರಣೆ ಸಿಗುತ್ತದೆ. ಯುದ್ಧದ ಪರಿಣಾಮ ಸಣ್ಣಪುಟ್ಟ ದೇಶಗಳ ಜನಸಾಮಾನ್ಯರು ಅನುಭವಿಸುವ ಸಂಕಷ್ಟ ಹೇಳತೀರದು. ಯುದ್ಧೋನ್ಮಾದ ದೇಶಗಳು ತೈಲ ನಿಕ್ಷೇಪಕ್ಕೆ ಬೆಂಕಿ ಹಾಕುವುದರಿಂದ ಮಾನವ ಕುಲದ ಬಳಕೆಗೆ ಸಿಗಬೇಕಾದ ಇಂಧನ ವ್ಯರ್ಥವಾಗಿ ಸುಟ್ಟುಹೋಗುತ್ತದೆ. ಇದು ಪ್ರಕೃತಿ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

ಗುರುರಾಜ ಅಂಗಡಿ, ಮುನಿರಾಬಾದ್

ಮೇಲ್ಮನೆ ಚುನಾವಣೆ: ಹೊಸಮುಖ ಬೇಕು

ಕರ್ನಾಟಕದಿಂದ ರಾಜ್ಯಸಭೆಗೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರನ್ನು ಬಿಜೆಪಿಯಿಂದ ಆರಿಸಿ ಕಳುಹಿಸುವ ಕುರಿತಂತೆ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ರಾಜ್ಯ ಆಳುವವರು ದೈಹಿಕವಾಗಿ ಸದೃಢರಾಗಿರಬೇಕು. ದೇವೇಗೌಡರಿಗೆ ಈಗ 94 ವರ್ಷ. ಈ ವಯಸ್ಸಿನಲ್ಲಿ ರಾಜ್ಯಸಭೆಗೆ ಕಳುಹಿಸಿ ಹಿರಿಯರನ್ನು ಬಳಲಿಸುವುದು ಸಮಂಜಸವಲ್ಲ. ಸೂಕ್ತ ಅಭ್ಯರ್ಥಿಗಳು ಬಿಜೆಪಿಯಲ್ಲಿ ಇಲ್ಲವೆ? ಇಷ್ಟಕ್ಕೂ ಬಿಜೆಪಿ ಶಾಸಕರು ಬೇರೆ ಪಕ್ಷದವರಿಗೆ ಮತ ಹಾಕುವಂತಾಗುವುದು, ಆ ಶಾಸಕರನ್ನು ಆರಿಸಿ ಕಳುಹಿಸಿದ ಮತದಾರರಿಗೆ ಮಾಡುವ ಮೋಸ ಮತ್ತು ದ್ರೋಹ ಅಲ್ಲವೇ? ರಾಜಕೀಯ ಪಕ್ಷಗಳು ಪ್ರಜೆಗಳಿಗೆ ಉತ್ತರದಾಯಿ ಆಗಿರಬೇಕು.

ಟಿ.ಆರ್. ರಘುನಾಥ್, ಬೆಂಗಳೂರು

ಜಾಲತಾಣ

ಯಶಸ್ಸು ಇರುವುದೆಲ್ಲಿ?

ಯಶಸ್ಸು ಎಂದರೆ ಬ್ರಾಂಡೆಡ್ ಬಟ್ಟೆ ಅಥವಾ ಕಾರುಗಳಲ್ಲ; ಅದು ನಿಮ್ಮದೇ ಹಳ್ಳಿಯಲ್ಲಿ ಸಾಲವಿಲ್ಲದೆ, ನೆಮ್ಮದಿಯ ಜೀವನ ನಡೆಸುವುದು.

ದರ್ಶನ್ ಪುಟ್ಟಣ್ಣಯ್ಯ, ಶಾಸಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕೇಂದ್ರ ಸರ್ಕಾರವು ಎರಡು ವಾರಗಳ ಅಂತರದಲ್ಲಿ ನಾಲ್ಕನೇ ಬಾರಿಗೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದೆ. ಜನರ ತೆರಿಗೆ ಹಣವನ್ನು ಲೂಟಿ ಮಾಡುತ್ತಿದೆ. ಪ್ರತಿದಿನ ನಡೆಯುತ್ತಿರುವ ಈ ದರೋಡೆಯಿಂದ ಲಾಭ ಪಡೆಯುತ್ತಿರುವವರು ಯಾರು?

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

25 ವರ್ಷಗಳ ಹಿಂದೆ

ಶನಿವಾರ, 26-5-2001

• ಶಾಲಾ ವಿದ್ಯಾರ್ಥಿಗಳಿಗೆ ಕ್ಷೇಮ ವಿಮಾ ಯೋಜನೆ ಜಾರಿ

ಬೆಂಗಳೂರು, ಮೇ 25– ಒಂದರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಸುಮಾರು 1.10 ಕೋಟಿ ವಿದ್ಯಾರ್ಥಿಗಳಿಗೆ ಕ್ಷೇಮ ವಿಮಾ ಯೋಜನೆಯನ್ನು ರಾಜ್ಯ ಸರ್ಕಾರ 2001–2002ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಜಾರಿಗೆ ತಂದಿದೆ.

ರಾಜ್ಯ ಶಿಕ್ಷಕ ಕಲ್ಯಾಣ ನಿಧಿ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಮತ್ತು ರೋಟರಿ ಸಂಸ್ಥೆಯಿಂದ ದಿ ಓರಿಯಂಟಲ್ ಇನ್‌ಶ್ಯೂರೆನ್ಸ್ ಸಂಸ್ಥೆಯ ಮೂಲಕ ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಚ್. ವಿಶ್ವನಾಥ್ ಇಲ್ಲಿ ತಿಳಿಸಿದರು.

• ಭಾರತ ಭೇಟಿ: ಮುಷರಫ್‌ಗೆ ಆಹ್ವಾನ ಪತ್ರ ಹಸ್ತಾಂತರ

ನವದೆಹಲಿ, ಮೇ 25 (ಪಿಟಿಐ)– ಸೇನಾಧಿಕಾರಿ ಜನರಲ್ ಪರ್ವೇಜ್ ಮುಷರಫ್ ಅವರಿಗೆ ವಾಜಪೇಯಿ ಅವರ ಮಾತುಕತೆ ಆಹ್ವಾನವನ್ನು ಭಾರತದ ಉಸ್ತುವಾರಿ ಹೈಕಮಿಷನರ್ ಸುಧೀರ್ ವ್ಯಾಸ್ ಅವರು, ಇಂದು ಪಾಕಿಸ್ತಾನದ ವಿದೇಶಾಂಗ ಕಚೇರಿಗೆ ಹಸ್ತಾಂತರಿಸಿದರು.

ಇಸ್ಲಾಮಾಬಾದಿನಲ್ಲಿ ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಇನಾಮುಲ್ ಹಕ್ ಅವರನ್ನು ಇಂದು ಬೆಳಗ್ಗೆ ಭೇಟಿ ಮಾಡಿದ ವ್ಯಾಸ್, ಮುಷರಫ್ ಮತ್ತು ಬೇಗಂ ಮುಷರಫ್ ಅವರನ್ನು ಭಾರತಕ್ಕೆ ಆಹ್ವಾನಿಸುವ ಪತ್ರವನ್ನು ಸಲ್ಲಿಸಿದರು.

75 ವರ್ಷಗಳ ಹಿಂದೆ

ಶನಿವಾರ, 26-5-1951

• 'ಮುಂಬೈ ಪಾನನಿರೋಧ ಶಾಸನ ಕ್ರಮಬದ್ಧ'

ನವದೆಹಲಿ, ಮೇ 25– 1949ರ ಜೂನ್ ತಿಂಗಳಿನಲ್ಲಿ ಮುಂಬೈ ಸರಕಾರ ಜಾರಿಗೆ ತಂದ ಪಾನನಿರೋಧ ಶಾಸನ ಕ್ರಮಬದ್ಧವಾಗಿದೆ ಎಂದು ಸಾರುವುದರ ಮೂಲಕ ಆ ಬಗ್ಗೆ ರಾಜ್ಯಾಂಗದ ಮೂಲಭೂತ ಹಕ್ಕಿನ ದೃಷ್ಟಿಯಲ್ಲಿ ಎದ್ದಿದ್ದ ವಿವಾದವನ್ನು ಈ ದಿನ ಸುಪ್ರೀಂ ಕೋರ್ಟ್ ಅಂತಿಮವಾಗಿ ತೀರ್ಮಾನಿಸಿತು.

'ಮದ್ಯ' ಎಂಬ ಪದಕ್ಕೆ ನಿಘಂಟು ಮತ್ತು ರಾಜ್ಯಾಂಗದಲ್ಲಿನ ಅರ್ಥದಿಂದ ಹಿಡಿದು ಶಾಸನಾಧಿಕಾರದವರೆಗಿನ ವಾದ–ವಿವಾದಗಳನ್ನು ಕೇಳಿದ ಸುಪ್ರೀಂ ಕೋರ್ಟ್, ಈ ದಿನ ಮುಂಬೈನ ಪತ್ರಿಕೋದ್ಯೋಗಿ ಬಾಲ್ಸಾ ಅವರು ಪಾನ ನಿರೋಧ ಶಾಸನದ ವಿರುದ್ಧ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಮುಂಬೈ ಹೈಕೋರ್ಟ್ ಇತ್ತಿದ್ದ ಮನ್ನಣೆಯನ್ನು ತಿರಸ್ಕರಿಸಿ ತೀರ್ಪಿತ್ತಿತು.

ಚುರುಮುರಿ

ದೇವರ ಆಟ

• ಡಿ.ಎಸ್. ಲಿಂಗರಾಜು

'**ಕೇಳ್ರಲಾ,** ಶಿಮ್ಲಾದಲ್ಲಿ ಭೂಕುಸಿತಾದುದ್ದು 'ಆ್ಯಕ್ಟ್ ಆಫ್ ಗಾಡ್' ಕಾರಣಕ್ಕಂತೆ. 'ದೇವರು ಮಾಡಿದ್ದಕ್ಕೆ ನಾವ್ಯಾಕೆ ಪರಿಹಾರ ಕೊಡನ' ಅಂದ್ರಂತೆ ಹೆದ್ದಾರಿ ಪ್ರಾಧಿಕಾರದೋರು' ಯಂಟಪ್ಪಣ್ಣ ಹೇಳಿತು.

'ಅಣೈ ಆ್ಯಕ್ಟ್ ಆಫ್ ಗಾಡ್ ಅಂದ್ರೇನು?' ವಿವರಣೆ ಕೇಳಿದೆ.

'ಕೈ ಮೀರಿ ಆಗೋ ಅನಾಹುತಕ್ಕೆಲ್ಲಾ ಆ್ಯಕ್ಟ್ ಆಫ್ ಗಾಡ್, ದೇವರ ಆಟ, ಅಂದ್ರೆ ದೈವ ನಿಯಾಮಕ ಅಂತಾರೆ' ತುರೇಮಣೆ ವಿಶ್ಲೇಷಿಸಿದರು.

'ಯಾವುದೋ ಒಂದು ಮಕ. ವರ್ಕಿಂಗ್ ವೀಸಾದೋರು ಇನ್ನು ಅರವತ್ತು ದಿನ ಕಳೆದ ಮ್ಯಾಲೆ ವಾಪಾಸ್ ಊರಿಗೆ ಹೊಂಟೋಯ್ತಿರಬೇಕು' ಅಂತ ಟ್ರಂಪಣ್ಣ ಜುಲಾಬು ಕೊಟ್ವನ್ನೆ, ಅವನೇ ಈಗ ಹೊರ್ಮುಜ್ ಸಂಧೀಲಿ ಸಿಗೇಬಿದ್ದಿದ್ರೂ ದೇವರ ಆಟ ಅಂತೀಯಾ?' ಯಂಟಪ್ಪಣ್ಣ ಕೇಳಿತು.

'ಡಿಕೆಗೆ, ಸಿದ್ದಣ್ಣನಿಗೆ ಕೈ ದೇವರುಗಳು ಮಂಗ್ಳಾರ ಬರ್ರಿ ಅಂತ ಬುಲಾವ್ ಕೊಟ್ವವ್ರೆ. ರಾಗಾ, ಸೋಗಾ ದೇವರುಗಳು ಸೀಟು ಕತೆಗೆ ಸೋಬಾನ ಹಾಡಿ ಈವತ್ತನ್ನ ಆಟ ಮುಗಿಸ್ತಾರಾ? ಪ್ರಾರ್ಥನೆ, ಪ್ರಯತ್ನ ಫಲ ಕೊಟ್ಟಿರಬಕು' ತುರೇಮಣೆಗೆ ಕೇಳಿದೆ.

'ಡೀಕೆ, ನನ್ನೇನು ಕರೆದಿಲ್ಲ. ದೆಲ್ಲಿಗೆ ನಾನೋಗಕುಲ್ಲ ಅಂದದಲ್ಲಾಮ ಇದು ಯಾವ ದೇವರ ಆಟವೋ' ತಿಪ್ಪಣ್ಣ ವಿಷಯವನ್ನು ಮತ್ತಷ್ಟು ಜಗ್ಗಿದ.

'ಅವರ ಕತೆ ಇದ್ದುದ್ದೇ ಬುಡಿ. ಸೋಮಾರಿ ರಾಜಕಾರಣಿಗಳು, ಲಂಚಕೋರರು, ಭೂಗಳ್ಳರು ಜನಗಳನ್ನ ದೇವರು ಅಂತ ಉಬ್ಬಿಸಿ ಅವರ ಬ್ಯಾಳೆ ಬೇಯಿಸ್ಕತಾವ್ರೆ ಕಪ್ಪಾ. ಈಗ ಜನ ಕೈಗೆ ಕಿತ್ತೋಗಿರ ಕೆರ ತಗಂದು ಇವರಿಗೆಲ್ಲಾ ರುಬ್ಬಿದ್ರೆ ಅದೂ ಒಂದು ನಮೂನೆ ಆ್ಯಕ್ಟ್ ಆಫ್ ಗಾಡ್ ಅಂದ್ರೆ ದೇವರ ಆಟ ಆತದೆ' ತುರೇಮಣೆ ಹೊಸಾ ವ್ಯಾಖ್ಯಾನ ಕೊಟ್ಟರು.

'ಅಂದ್ರೆ ನೀನೇಳದು ಮತದಾರ ದೇವರುಗಳೇ ವ್ಯವಸ್ಥೆಯ ಕುತ್ತಿಗೆಗೆ ಕವೆಗೋಲು ಹಾಕ್ಯಂದು ತಿರುವಕ್ಕೆ ಶುರುಹಚ್ಕಬೇಕು ಅಂತ ಅಲ್ಲವಾ?' ನಾನು ದೇವರ ಆಟಕ್ಕೆ ಡಿಕ್ರಿ ಮಾಡಿದೆ. ಎಲ್ಲರೂ ದೇವರ ಆಟಕ್ಕೆ ಬೆರಗಾಗುವಂತೆ ಮಕ ಮಾಡಿದರು.

ಸಂಗತ

ಕೊಪ್ಪಳ: ತಾಯ ಮೊಲೆವಾಲು ನಂಜಾದೊಡೆ...

ಕಾರ್ಖಾನೆಗಳ ತ್ಯಾಜ್ಯ ತುಂಬಿಕೊಂಡಿರುವ ಮಣ್ಣು, ನೀರು, ಗಾಳಿಯಿಂದ ಕೊಪ್ಪಳ ಜಿಲ್ಲೆಯ ಅನೇಕ ಗ್ರಾಮಗಳ ನಾಗರಿಕರ ಬದುಕು ಸಂಕಷ್ಟಕ್ಕೆ ಸಿಲುಕಿ ತತ್ತರಿಸುತ್ತಿದೆ.

• ಟಿ.ಆರ್. ಚಂದ್ರಶೇಖರ

ಕೈಗಾರಿಕೆಗಳ ಅಡ್ಡ ಪರಿಣಾಮಗಳು ಒಂದು ಪ್ರದೇಶವನ್ನು ಎಷ್ಟೆಲ್ಲ ಬಾಧಿಸಬಹುದು ಎನ್ನುವುದಕ್ಕೆ ಕೊಪ್ಪಳ ಜಿಲ್ಲೆ ನಿದರ್ಶನದಂತಿದೆ. ಕಬ್ಬಿಣ ಸಂಬಂಧಿ ಉದ್ದಿಮೆಗಳ ಕೇಂದ್ರವಾಗಿ ಬೆಳೆದಿರುವ ಕೊಪ್ಪಳ, ಈಗ ಕಾರ್ಖಾನೆಗಳ ಕಬಂಧ ಬಾಹುಗಳಿಗೆ ಸಿಲುಕಿ ಏದುಸಿರು ಬಿಡುತ್ತಿದೆ.

ಒಂದು ವರದಿಯ ಪ್ರಕಾರ, ಕೊಪ್ಪಳ ತಾಲ್ಲೂಕಿನ ಐದಾರು ಕಿ.ಮೀ. ವ್ಯಾಪ್ತಿಯ ಗ್ರಾಮೀಣ ಪ್ರದೇಶದಲ್ಲಿ 200ಕ್ಕೂ ಹೆಚ್ಚಿನ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಸುಮಾರು 24 ಕಬ್ಬಿಣ ಸಂಬಂಧಿ ದೊಡ್ಡ ಕಾರ್ಖಾನೆಗಳಲ್ಲಿ 13 ಸ್ಪಾಂಜ್ ಕಬ್ಬಿಣ ಕಾರ್ಖಾನೆಗಳಾಗಿವೆ. ಇವುಗಳನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು 'ಕೆಂಪು' ಕಾರ್ಖಾನೆಗಳೆಂದು ವರ್ಗೀಕರಿಸಿದೆ. ಮಂಡಳಿಯ ಪ್ರಕಾರ, ಕೆಂಪು ಘಟಕಗಳು ಅತ್ಯಂತ ವಿಷಕಾರಕ ಮಾಲಿನ್ಯ ಉಂಟು ಮಾಡುವ ಕಾರ್ಖಾನೆಗಳಾಗಿವೆ.

ಕೊಪ್ಪಳ ತಾಲ್ಲೂಕಿನ ಕೈಗಾರಿಕಾ ಪ್ರದೇಶದ ಗ್ರಾಮಗಳಲ್ಲಿ ಮಾಲಿನ್ಯ ಸೂಚ್ಯಂಕವು ಶಿಫಾರಸು ಮಾಡಿದ ಮಟ್ಟಕ್ಕಿಂತ ಅದೆಷ್ಟೋ ಪಟ್ಟು ಅಧಿಕವಾಗಿದೆ. ಇಲ್ಲಿನ ಕಾರ್ಖಾನೆಗಳು ಕಲ್ಲಿದ್ದಲನ್ನು ಬಳಸಿ ಶಾಖೋತ್ಪನ್ನ ಇಂಧನ ಉತ್ಪಾದನೆಯಲ್ಲಿಯೂ ತೊಡಗಿವೆ. ಒಟ್ಟಾರೆ ಈ ಪ್ರದೇಶದಲ್ಲಿ ಯಾವುದೇ ಮಾನದಂಡವಿಲ್ಲದ ಕಾರಣವಾಗಿ ಕಾರ್ಖಾನೆಗಳ ಸಾಂದ್ರತೆ ಮಿತಿಮೀರಿ ಬೆಳೆದಿದೆ. ಈ ಎಲ್ಲ ಕಾರ್ಖಾನೆಗಳು ದೊಡ್ಡ ಪ್ರಮಾಣದ ಮಾಲಿನ್ಯಕಾರಕ ಘಟಕಗಳಾಗಿವೆ. ಇವು ತಮ್ಮ ನೂರಕ್ಕೂ ಹೆಚ್ಚಿನ ಚಿಮಣಿಗಳಿಂದ ಹೊಗೆಯನ್ನು, ಕಪ್ಪು ಕಿಟ್ಟವನ್ನು ಉಗುಳುತ್ತಿವೆ. ಕಲ್ಲಿದ್ದಲಿನ ದೂಳು ಮತ್ತು ಬೂದಿ ಜನರ ಆರೋಗ್ಯವನ್ನು ಹಾಳು ಮಾಡಿದೆ. ಮೊದಲೇ ಇಲ್ಲಿನ ಅಂತರ್ಜಲವು ಫ್ಲೋರೈಡ್‌ಯುಕ್ತವಾಗಿದೆ. ಈಗ ಕಾರ್ಖಾನೆಗಳ ದೂಳು, ಹೊಗೆ, ಕಪ್ಪುಕಿಟ್ಟ ಜಲಮೂಲ ಸೇರುತ್ತಿದೆ. ನದಿ–ಹಳ್ಳಗಳಿಗೆ ಕಾರ್ಖಾನೆಗಳು ಬಿಡುವ ವಿಷಯುಕ್ತ ತ್ಯಾಜ್ಯದಿಂದ ಕುಡಿಯುವ ನೀರು ನಂಜಾಗಿದೆ, ಗಾಳಿಯು ಉಸಿರಾಟಕ್ಕೆ ಯೋಗ್ಯವಾಗಿಲ್ಲ.



ಮರಗಿಡಗಳ ಮೇಲೆ ಮತ್ತು ಕೃಷಿ ಬೆಳೆಗಳ ಮೇಲೆ ಕಾರ್ಖಾನೆಯ ಮಾಲಿನ್ಯಕಾರಕ ಕಣಗಳು ದಟ್ಟವಾಗಿ ಕೂರುವುದರಿಂದ ದ್ಯುತಿಸಂಶ್ಲೇಷಣಾ ಪ್ರಕ್ರಿಯೆಯು ಕುಂಠಿತಗೊಂಡಿದೆ. ಪರಿಣಾಮವಾಗಿ, ಬೆಳೆಗಳ ಇಳುವರಿ ಕುಸಿದಿದೆ. ತೋಟಗಾರಿಕಾ ಬೆಳೆಗಳು ನೆಲಕಚ್ಚಿವೆ. ಅನೇಕ ರೈತರು ಉಳುಮೆ ಮಾಡುವುದನ್ನೇ ಕೈಬಿಟ್ಟಿದ್ದಾರೆ.

ಕೊಪ್ಪಳ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿನ ಊರೊಟ್ಟಿಗಿನ ಸಂಪನ್ಮೂಲಗಳಾದ ಕೆರೆ, ಕಟ್ಟೆ, ಗೋಮಾಳ, ಗೋಕಟ್ಟೆ, ಹಳ್ಳ, ಕೆರೆಅಂಗಳ ಮುಂತಾದವುಗಳನ್ನು ಸೇರಿಸಿಕೊಂಡು ಕಾರ್ಖಾನೆಗಳು ಒತ್ತುವರಿ ಮಾಡಿಕೊಂಡಿವೆ ಇಲ್ಲವೇ ಸರ್ಕಾರವೇ ಪರಭಾರೆ ಮಾಡಿದೆ. ತಾಲ್ಲೂಕಿನ ಬಸಾಪುರ ಗ್ರಾಮದ 44.35 ಎಕರೆ ವಿಸ್ತೀರ್ಣದ ಕೆರೆಯನ್ನು ಉದ್ದಿಮೆಯೊಂದು ತನ್ನ ಖಾಸಗಿ ಆಸ್ತಿಯನ್ನಾಗಿ ಮಾಡಿಕೊಂಡಿದೆ; ಸಾರ್ವಜನಿಕರಿಗೆ, ದನಕರುಗಳಿಗೆ, ಕುರಿ–ಮೇಕೆಗಳಿಗೆ ಅಲ್ಲಿನ ನೀರು ದೊರೆಯದಂತೆ ಮಾಡಿದೆ. ಬೃಹತ್ ಕೆರೆಯ ಸುತ್ತಲೂ ಗೋಡೆ ಕಟ್ಟಿ, ತನ್ನ ಸ್ವಂತ ಆಸ್ತಿಯನ್ನಾಗಿ ಮಾಡಿಕೊಂಡಿದೆ.

ಊರೊಟ್ಟಿಗಿನ ಸಂಪನ್ಮೂಲದ ಪರಭಾರೆ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ 2011ರಲ್ಲಿ ತೀರ್ಪು ನೀಡಿ, ಗ್ರಾಮೀಣ ಪ್ರದೇಶ ದಲ್ಲಿ ಕಾನೂನುಬಾಹಿರವಾಗಿ ಊರೊಟ್ಟಿಗಿನ ಸಂಪನ್ಮೂಲವನ್ನು ವಶಪಡಿಸಿಕೊಂಡಿರುವ ವ್ಯಕ್ತಿಗಳಿಂದ–ಉದ್ದಿಮೆಗಳಿಂದ ಅವುಗಳನ್ನು ಮುಕ್ತಗೊಳಿಸಿ ಸಾರ್ವಜನಿಕರಿಗೆ ದೊರೆಯುವಂತೆ ಮಾಡುವುದಕ್ಕೆ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕೆಂದು ನಿರ್ದೇಶನ ನೀಡಿದೆ. ಆ ನಿರ್ದೇಶನ ಕೊಪ್ಪಳದಲ್ಲಿ ಅನುಷ್ಠಾನಕ್ಕೆ ಬರಬೇಕಾಗಿದೆ.

ಹಿರೇಬದನಾಳ, ಕಿರೆಬದನಾಳ, ಗಿಣಿಗೇರ, ಕಾಸನಕಿಂಡಿ, ಲಚ್ಚನಕೆರೆ, ಕುರ್ಕಿಹಳ್ಳಿ, ಹ್ಯಾಟಿ, ಕನಕಪುರ, ಅಲ್ಲಾನಗರ, ಕುಣಿಕೇರ, ಕುಣಿಕೇರ ತಾಂಡ, ಹಾಲವರ್ತಿ ಮುಂತಾದ ಗ್ರಾಮಗಳ ಮಹಿಳೆಯರು ಮತ್ತು ಮಕ್ಕಳು ಮಾಲಿನ್ಯ ಸಂಬಂಧಿ ರೋಗಗಳನ್ನು ಎದುರಿಸುತ್ತಿದ್ದಾರೆ. ಪಿಎಂ 2.5 ಮತ್ತು ಪಿಎಂ 10 ಮಾಲಿನ್ಯದ ಪ್ರಮಾಣವು ಶಿಫಾರಸು ಮಾಡಿದ ಪ್ರಮಾಣಕ್ಕಿಂತ ಅಧಿಕವಾಗಿದೆ. ಅಂತಹ ಮಾಲಿನ್ಯಕಾರಕ ಗಾಳಿಯ ಸೇವನೆಯಿಂದ ಶ್ವಾಸಕೋಶ ಸಂಬಂಧಿತ ಕಾಯಿಲೆಗಳು ಸಾಮಾನ್ಯವಾಗಿವೆ. ಮಕ್ಕಳು ಚರ್ಮದ ಸೋಂಕಿಗೆ ಬಲಿಯಾಗುತ್ತಿದ್ದಾರೆ. ಮನೆಗಳು, ಗುಡಿಗಳು, ಬೆಳೆಗಳು, ಮರಗಿಡಗಳು ಕಾರ್ಖಾನೆಗಳು ಉಗುಳುವ ಕಿಟ್ಟದಿಂದಾಗಿ ಕಪ್ಪು ಬಣ್ಣಕ್ಕೆ ತಿರುಗಿವೆ. ಕೈಗಾರಿಕಾ ತ್ಯಾಜ್ಯವನ್ನು ಶುದ್ಧೀಕರಿಸದೆ ನದಿಗಳಿಗೆ, ಹಳ್ಳಗಳಿಗೆ, ಬಯಲಿಗೆ ಹರಿಯಬಿಡುತ್ತಿರುವುದರಿಂದ ನೀರು, ಅಂತರ್ಜಲ, ಮಣ್ಣು ಮಾಲಿನ್ಯಕ್ಕೆ ಒಳಗಾಗು ತ್ತಿವೆ. ತುಂಗಭದ್ರಾ ನದಿಯ ಹಿನ್ನೀರಿಗೆ ಅಂಟಿಕೊಂಡ ಪ್ರದೇಶದಲ್ಲಿ ಕಾರ್ಖಾನೆಗಳು ಇರುವುದರಿಂದ ಆ ನದಿಯೂ ಮಾಲಿನ್ಯಕ್ಕೆ ಒಳಗಾಗಿದೆ.

ಅಭಿವೃದ್ಧಿಯು ಜನರ ಜೀವನ ಮತ್ತು ಜೀವನೋಪಾಯಕ್ಕೆ ಸಂಬಂಧಿಸಿದ ಸಂಗತಿ ಎಂಬುದನ್ನು ಸರ್ಕಾರಗಳು ಮತ್ತು ನೀತಿನಿರೂಪಕರು ಮನದಟ್ಟು ಮಾಡಿಕೊಳ್ಳಬೇಕು. ರಸ್ತೆ, ಇಂಧನ, ಕೈಗಾರಿಕೆ, ಮುಂತಾದವು ಅಭಿವೃದ್ಧಿಗೆ ಅಗತ್ಯ. ಆದರೆ, ಅವೇ ಅಭಿವೃದ್ಧಿಯಲ್ಲ. ಇವೆಲ್ಲವೂ ಅಭಿವೃದ್ಧಿಯ ಸಾಧನಗಳಷ್ಟೇ.

ಕೊಪ್ಪಳದ ಪರಿಸರದಲ್ಲಿನ ಕೈಗಾರಿಕೆಗಳ ಉತ್ಪಾದನಾ ಸಾಮರ್ಥ್ಯದ ವಿಸ್ತರಣೆಗೆ ಸರ್ಕಾರ ಅನುಮತಿ ನೀಡಬಾರದು. ಕೇಂದ್ರ ಪರಿಸರ ಇಲಾಖೆ ಶಿಫಾರಸು ಮಾಡಿರುವಂತೆ, ತೀವ್ರವಾಗಿ ಮಾಲಿನ್ಯವನ್ನು ಹರಡುತ್ತಿರುವ ಕಾರ್ಖಾನೆಗಳನ್ನು ಮುಚ್ಚುವ ಮತ್ತು ಕೆಲವನ್ನು ಸ್ಥಳಾಂತರಿಸುವ ಆದೇಶವನ್ನು ಅನುಷ್ಠಾನಗೊಳಿಸಬೇಕು. ಪರಭಾರೆಯಾಗಿರುವ ಮತ್ತು ಒತ್ತುವರಿಯಾಗಿರುವ ಸಂಪನ್ಮೂಲಗಳನ್ನು ಸರ್ಕಾರ ವಶಪಡಿಸಿಕೊಳ್ಳಬೇಕು. ಬಸಾಪುರದ ಕೆರೆಯನ್ನು ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಬೇಕು.

ಕಾರ್ಖಾನೆಗಳ ಮಾಲಿನ್ಯ ಸಮಸ್ಯೆ ಹಾಗೂ ಅದರಿಂದ ಜನರು ಎದುರಿಸುತ್ತಿರುವ ಸಂಕಷ್ಟಗಳ ಕುರಿತಂತೆ ವಿಸ್ತೃತ ಅಧ್ಯಯನ ನಡೆಸಲು ತಜ್ಞರ ಸಮಿತಿ ನೇಮಿಸುವುದು ಸೇರಿದಂತೆ, ಕೊಪ್ಪಳ ಜಿಲ್ಲೆಯ ಜನರ ಹಿತಾಸಕ್ತಿಗೆ ಅಗತ್ಯವಾದ ಎಲ್ಲ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕ್ರಿಕೆಟ್ ಮೈದಾನಗಳ ಸುತ್ತ



ಬೆಂಗಳೂರಿನ ಹೊರವಲಯದಲ್ಲಿ ಕರ್ನಾಟಕ ಗೃಹ ಮಂಡಳಿ ನಿರ್ಮಿಸಲಿರುವ ಕ್ರೀಡಾಂಗಣವು ದೇಶದ ಎರಡನೇ ಅತಿ ದೊಡ್ಡ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನವಾಗಲಿದೆ. ಕ್ರಿಕೆಟ್ ಅನ್ನು ಆರಾಧಿಸುವ ಭಾರತದಲ್ಲಿ ಹೆಚ್ಚು ಆಸನ ಸಾಮರ್ಥ್ಯದ ದೊಡ್ಡ ದೊಡ್ಡ ಕ್ರೀಡಾಂಗಣಗಳು ಇವೆ. ಪ್ರಮುಖ ಕ್ರಿಕೆಟ್ ಕ್ರೀಡಾಂಗಣಗಳ ಮಾಹಿತಿ ಇಲ್ಲಿದೆ

ಅಹಮದಾಬಾದ್‌ನ ಮೊಟೋರಾದಲ್ಲಿರುವ ನರೇಂದ್ರ ಮೋದಿ ಸ್ಟೇಡಿಯಂ ಚಿತ್ರ:ಬಿಸಿಸಿಐ.ಟಿವಿ

• ಸೂರ್ಯನಾರಾಯಣ ವಿ.

▸ **ನರೇಂದ್ರ ಮೋದಿ ಸ್ಟೇಡಿಯಂ | ಸ್ಥಳ: ಅಹಮದಾಬಾದ್, ಗುಜರಾತ್ | ಆಸನ ಸಾಮರ್ಥ್ಯ: 1.32 ಲಕ್ಷ**

ಇದು ಗುಜರಾತ್ ರಾಜ್ಯದ ಅಹಮದಾಬಾದ್‌ನ ಮೊಟೇರಾದಲ್ಲಿ, ಸಾಬರಮತಿ ನದಿಯ ಹತ್ತಿರದಲ್ಲಿ ಇದೆ. 1.32 ಲಕ್ಷ ಆಸನ ಸಾಮರ್ಥ್ಯದ ಈ ಕ್ರೀಡಾಂಗಣವು ಭಾರತದ್ದಷ್ಟೇ ಅಲ್ಲ, ಜಗತ್ತಿನ ಅತಿ ದೊಡ್ಡ ಕ್ರಿಕೆಟ್ ಮೈದಾನವಾಗಿದೆ. ಹಿಂದೆ ಇಲ್ಲಿ ಸರ್ದಾರ್ ಪಟೇಲ್ ಸ್ಟೇಡಿಯಂ ಇತ್ತು. ವಿಶ್ವಕಪ್ ಸೇರಿದಂತೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಪಂದ್ಯಗಳು ನಡೆಯುತ್ತಿದ್ದವು. 2015ರಲ್ಲಿ ಅದನ್ನು ಕೆಡವಿ, ಅದೇ ಸ್ಥಳದಲ್ಲಿ ಹೊಸ ಕ್ರೀಡಾಂಗಣ ನಿರ್ಮಿಸಿ, ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಇಡಲಾಯಿತು. ಸ್ಟೇಡಿಯಂ ಸಾಮರ್ಥ್ಯವನ್ನು ಹಿಂದೆ ಇದ್ದ 50,000ದಿಂದ 1.32 ಲಕ್ಷಕ್ಕೆ ಹೆಚ್ಚಿಸಲಾಯಿತು. 2023ರ ವಿಶ್ವಕಪ್ ಫೈನಲ್ ಪಂದ್ಯ ನಡೆದಿದ್ದು ಇಲ್ಲಿಯೇ. 2030ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟವೂ ಇದೇ ಮೈದಾನದಲ್ಲಿ ನಡೆಯಲಿದೆ.

▸ **ಈಡನ್ ಗಾರ್ಡನ್ಸ್ | ಸ್ಥಳ: ಕೋಲ್ಕತ್ತ, ಪ.ಬಂಗಾಳ | ಆಸನ ಸಾಮರ್ಥ್ಯ: 68,000**

ಅಹಮದಾಬಾದ್‌ನ ಕ್ರೀಡಾಂಗಣ ನವೀಕರಣ ಆಗುವವರೆಗೂ ದೇಶದ ಅತ್ಯಂತ ದೊಡ್ಡ ಕ್ರಿಕೆಟ್ ಮೈದಾನ ಎಂಬ ಹೆಗ್ಗಳಿಕೆಯನ್ನು ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿನ ಈಡನ್ ಗಾರ್ಡನ್ಸ್ ಕ್ರೀಡಾಂಗಣ ಹೊಂದಿತ್ತು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹಲವು ದಾಖಲೆಗಳು, ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾದ ಈ ಮೈದಾನದ ಆಸನ ಸಾಮರ್ಥ್ಯ 68 ಸಾವಿರ. ಕ್ರಿಕೆಟ್ ವಿಶ್ವಕಪ್‌ನ ಇತಿಹಾಸದಲ್ಲಿ ಮೊದಲು ಮೂರು ಫೈನಲ್ ಪಂದ್ಯಗಳು ನಡೆದಿದ್ದು ಇಂಗ್ಲೆಂಡ್‌ನ ಲಾರ್ಡ್ಸ್‌ನಲ್ಲಿ. ಆ ಬಳಿಕ, ಅಂದರೆ 1987ರ ವಿಶ್ವಕಪ್‌ನ ಫೈನಲ್ ಪಂದ್ಯ ನಡೆದಿದ್ದು ಈಡನ್ ಗಾರ್ಡನ್ಸ್‌ನಲ್ಲಿ. 2001ರಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದ ಬಾರ್ಡರ್–ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಎರಡನೇ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ವಿ.ವಿ.ಎಸ್.ಲಕ್ಷ್ಮಣ್, ರಾಹುಲ್ ದ್ರಾವಿಡ್ ಅವರ ಅಮೋಘ ಜೊತೆಯಾಟ ಮತ್ತು ಸ್ಪಿನ್ನರ್ ಹರ್ಭಜನ್ ಸಿಂಗ್ ಅವರ ಕೈಚಳಕದಿಂದ ಭಾರತ ತಂಡಕ್ಕೆ ಅವಿಸ್ಮರಣೀಯ ಗೆಲುವು ದಕ್ಕಿದ್ದು ಹೂಗ್ಲಿ ನದಿಯ ಪಕ್ಕದಲ್ಲಿರುವ ಈ ಸುಂದರ ಕ್ರೀಡಾಂಗಣದಲ್ಲಿ.

▸ **ಶಹೀದ್ ವೀರ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ | ಸ್ಥಳ:ರಾಯಪುರ, ಛತ್ತೀಸಗಢ | ಆಸನ ಸಾಮರ್ಥ್ಯ: 65,000**

ಈ ಬಾರಿಯ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಎರಡನೇ ತವರು ಮೈದಾನವಾಗಿದ್ದ ರಾಯಪುರದ ಶಹೀದ್ ವೀರ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನ ಸದ್ಯಕ್ಕೆ ದೇಶದ ಮೂರನೇ ಅತಿ ದೊಡ್ಡ ಕ್ರೀಡಾಂಗಣ. ಇದರ ಆಸನ ಸಾಮರ್ಥ್ಯ 65 ಸಾವಿರ. ಛತ್ತೀಸಗಢ ಸರ್ಕಾರದ ಮಾಲೀಕತ್ವದಲ್ಲಿರುವ ಮೈದಾನ 2008ರಿಂದ ಬಳಕೆಯಲ್ಲಿದೆ. ದೇಶದ ಬೇರೆ ಕ್ರೀಡಾಂಗಣಗಳಿಗೆ ಹೋಲಿಸಿದರೆ, ಇಲ್ಲಿ ಪಂದ್ಯಗಳು ನಡೆಯುವುದು ಕಡಿಮೆ.

▸ **ಡಾ.ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ | ಸ್ಥಳ: ನವಿಮುಂಬೈ, ಮಹಾರಾಷ್ಟ್ರ | ಆಸನ ಸಾಮರ್ಥ್ಯ: 55,000**

2007ರಲ್ಲಿ ಆರಂಭಗೊಂಡ ಈ ಕ್ರೀಡಾಂಗಣದ ಮಾಲೀಕತ್ವವನ್ನು ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ಹೊಂದಿದೆ. ಐಪಿಎಲ್, ಡಬ್ಲ್ಯುಪಿಎಲ್, ಏಕದಿನ ಪಂದ್ಯಗಳು ಇಲ್ಲಿ ನಡೆಯುತ್ತವೆ. 55 ಸಾವಿರದಷ್ಟು ಪ್ರೇಕ್ಷಕರಿಗೆ ಕುಳಿತುಕೊಳ್ಳುವ ವ್ಯವಸ್ಥೆ ಇಲ್ಲಿದೆ.

ಇತರ ಪ್ರಮುಖ ಕ್ರಿಕೆಟ್ ಮೈದಾನಗಳು

- ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂ, ಲಖನೌ, ಉತ್ತರ ಪ್ರದೇಶ. ಸಾಮರ್ಥ್ಯ: **50,100**
- ಗ್ರೀನ್ ಫೀಲ್ಡ್ ಇಂಟರ್‌ನ್ಯಾಷನಲ್ ಸ್ಟೇಡಿಯಂ, ತಿರುವನಂತಪುರ, ಕೇರಳಂ. ಸಾಮರ್ಥ್ಯ: **50,000**
- ಜವಾಹರಲಾಲ್ ನೆಹರೂ ಕ್ರೀಡಾಂಗಣ, ಕೊಚ್ಚಿ, ಕೇರಳಂ. ಸಾಮರ್ಥ್ಯ: **50,000**
- ಬರ್ಸಾಪಾರಾ ಕ್ರೀಡಾಂಗಣ, ಗುವಾಹಟಿ, ಅಸ್ಸಾಂ. ಸಾಮರ್ಥ್ಯ: **46,000**
- ಬಾರಾಬತಿ ಕ್ರೀಡಾಂಗಣ, ಕಟಕ್, ಒಡಿಶಾ. ಸಾಮರ್ಥ್ಯ: **45,000**
- ಎಂಸಿಎ ಇಂಟರ್‌ನ್ಯಾಷನಲ್ ಸ್ಟೇಡಿಯಂ, ಪುಣೆ, ಮಹಾರಾಷ್ಟ್ರ. ಸಾಮರ್ಥ್ಯ: **42,700**
- ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಹೈದರಾಬಾದ್, ತೆಲಂಗಾಣ, ಸಾಮರ್ಥ್ಯ: **39,200**
- ಎಂ.ಎ.ಚಿದಂಬರಂ ಕ್ರೀಡಾಂಗಣ, ಚೆನ್ನೈ, ತಮಿಳುನಾಡು. ಸಾಮರ್ಥ್ಯ: **38,200**
- ಅರುಣ್‌ಜೇಟ್ಲಿ ಕ್ರೀಡಾಂಗಣ, ನವದೆಹಲಿ. ಸಾಮರ್ಥ್ಯ: **35,200**
- ವಾಂಖೆಡೆ ಕ್ರೀಡಾಂಗಣ, ಮುಂಬೈ, ಮಹಾರಾಷ್ಟ್ರ, ಸಾಮರ್ಥ್ಯ: **33,100**
- ಗ್ರೀನ್ ಪಾರ್ಕ್ ಕ್ರೀಡಾಂಗಣ, ಕಾನ್ಪುರ, ಉತ್ತರಪ್ರದೇಶ. ಸಾಮರ್ಥ್ಯ: **32,000**
- ಆಂಧ್ರಪ್ರದೇಶದ ವಿಶಾಖಪಟ್ಟಣ ಕ್ರಿಕೆಟ್ ಕ್ರೀಡಾಂಗಣ. ಸಾಮರ್ಥ್ಯ: **25,000**
- ಹಿಮಾಚಲ ಪ್ರದೇಶದ ಧರ್ಮಶಾಲಾ ಕ್ರಿಕೆಟ್ ಮೈದಾನ. ಸಾಮರ್ಥ್ಯ: **21,200**

ಆಧಾರ: ಬಿಸಿಸಿಐ.ಟಿವಿ, ದಿ ಗಾರ್ಡಿಯನ್, ಒಲಿಂಪಿಕ್ಸ್.ಕಾಂ

ಎಂ.ಚಿನ್ನಸ್ವಾಮಿ ಕ್ರೀಡಾಂಗಣ

ಬೆಂಗಳೂರಿನ ಹೃದಯ ಭಾಗದಲ್ಲಿರುವ ಎಂ.ಚಿನ್ನಸ್ವಾಮಿ ಅಂತರರಾಷ್ಟ್ರೀಯ ಕ್ರೀಡಾಂಗಣವು ಕರ್ನಾಟಕದ ಏಕೈಕ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಇದನ್ನು ನಿರ್ವಹಿಸುತ್ತಿದೆ. ದೇಶದ ಬೇರೆ ಪ್ರಮುಖ ಕ್ರೀಡಾಂಗಣಗಳಿಗೆ ಹೋಲಿಸಿದರೆ, ಇದರ ಆಸನ ಸಾಮರ್ಥ್ಯ ಕಡಿಮೆ. 33,800 ಪ್ರೇಕ್ಷಕರು ಕುಳಿತುಕೊಳ್ಳಬಹುದು. 2000ನೇ ಇಸವಿಯಿಂದ ಇತ್ತೀಚಿನವರೆಗೂ (ಶ್ರೇಷ್ಠತಾ ಕೇಂದ್ರಕ್ಕೆ ವರ್ಗಾವಣೆ ಆಗುವವರೆಗೆ) ಬಿಸಿಸಿಐನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಈ ಮೈದಾನದಲ್ಲೇ ಕಾರ್ಯಾಚರಿಸುತ್ತಿತ್ತು. ಹಲವು ಅತ್ಯಂತ ಪ್ರತಿಭಾನ್ವಿತ ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ರಿಕೆಟಿಗರನ್ನು ಹುಟ್ಟುಹಾಕಿರುವ ಕೀರ್ತಿ ಈ ಅಕಾಡೆಮಿಯದ್ದು.

ಮೂರು ವರ್ಷಗಳಲ್ಲಿ ಕೆಎಚ್‌ಬಿ ಸ್ಟೇಡಿಯಂ

• ಎ.ಎಂ.ಸುರೇಶ

ಎಲ್ಲವೂ ಅಂದುಕೊಂಡಂತೆ ನಡೆದರೆ ರಾಜಧಾನಿ ಬೆಂಗಳೂರಿನ ಹೊರವಲಯದಲ್ಲಿರುವ ಸೂರ್ಯನಗರದ ನಾಲ್ಕನೇ ಹಂತದಲ್ಲಿ (ಇಂಡ್ಲವಾಡಿ) ದೇಶದ ಎರಡನೇ ಅತಿ ದೊಡ್ಡ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನ ಇನ್ನು ಮೂರು ವರ್ಷಗಳಲ್ಲಿ ಕ್ರಿಕೆಟ್ ಆಟಕ್ಕೆ ಸಿದ್ಧವಾಗಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಕಳೆದ ವರ್ಷದ ಜೂನ್‌ನಲ್ಲಿ ಸಂಭವಿಸಿದ ಕಾಲ್ತುಳಿತದ ಬಳಿಕ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ, ನಗರದ ಹೊರ ಭಾಗದಲ್ಲಿ 80 ಸಾವಿರ ಆಸನಗಳ ಸಾಮರ್ಥ್ಯವಿರುವ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸುವ ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಮೂಲಕ, ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನೂ ನಡೆಸಿದೆ.

75 ಎಕರೆ ವಿಸ್ತೀರ್ಣದಲ್ಲಿ ಮೊದಲ ಹಂತದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಆ ಪ್ರಕಾರ ಒಟ್ಟು ₹943.46 ಕೋಟಿ ವೆಚ್ಚದಲ್ಲಿ ಕರ್ನಾಟಕ ಗೃಹ ಮಂಡಳಿಯು (ಕೆಎಚ್‌ಬಿ) ಕ್ರೀಡಾಂಗಣ ನಿರ್ಮಿಸಲಿದೆ. ಅಲ್ಲದೆ, ಇದಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣ, ವಿದ್ಯುತ್ ಸೌಲಭ್ಯ, ಆಟಗಾರರಿಗೆ ಲಾಕರ್ ರೂಮ್ ಮತ್ತು ಇತರ ಸೌಲಭ್ಯಗಳು, ಒಳಾಂಗಣ ಮತ್ತು ಹೊರಾಂಗಣ ಅಭ್ಯಾಸ ಮೈದಾನ, ನೆಟ್‌ಗಳು, ವಿಐಪಿ ಲಾಂಜ್‌ಗಳು, ಕಾರ್ಪೊರೇಟ್ ಬಾಕ್ಸ್‌ಗಳು ಇತ್ಯಾದಿ ಸೌಲಭ್ಯಗಳು ಇರಲಿವೆ.

ಎರಡನೇ ಹಂತದಲ್ಲಿ 25 ಎಕರೆ ಜಾಗದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲಾಗುತ್ತದೆ. ಇದರಲ್ಲಿ ಒಳಾಂಗಣ, ಹೊರಾಂಗಣ ಕ್ರೀಡೆಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಇದಲ್ಲದೆ ಸಮಾವೇಶ ಕೇಂದ್ರ, ಸುಸಜ್ಜಿತವಾದ ಹೋಟೆಲ್ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತದೆ. ಇವೆಲ್ಲವುಗಳಿಗೆ ಸುಮಾರು ₹1 ಸಾವಿರ ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ.

‘ಭಾರತೀಯ ಕ್ರೀಡಾ ಪ್ರಾಧಿಕಾರ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಜೊತೆ ಮಾತುಕತೆ ನಡೆಸಿ, ಆ ಸಂಸ್ಥೆಗಳ ಸಲಹೆ, ಸೂಚನೆಗಳನ್ನು ಪಡೆದು ಅದಕ್ಕೆ ಅನುಗುಣವಾಗಿ ಕ್ರೀಡಾಂಗಣ ನಿರ್ಮಿಸಲಾಗುತ್ತದೆ’ ಎಂದು ಗೃಹ ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಮೊದಲಿಗೆ 65 ಸಾವಿರ ಆಸನಗಳ ಸಾಮರ್ಥ್ಯದ ಸ್ಟೇಡಿಯಂ ನಿರ್ಮಿಸಲು ಮಂಡಳಿ ಉದ್ದೇಶಿಸಿತ್ತು. ಆದರೆ, ಬೆಂಗಳೂರು ಅಂತರ ರಾಷ್ಟ್ರೀಯ ಮಟ್ಟದ ನಗರವಾಗಿದ್ದು, ಕ್ರಿಕೆಟ್ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಬರುತ್ತಾರೆ ಎಂಬ ಕಾರಣಕ್ಕೆ ಆಸನಗಳ ಸಂಖ್ಯೆಯನ್ನು 80 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಸ್ಟೇಡಿಯಂ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಗೃಹ ಮಂಡಳಿಯೇ ಭರಿಸಲಿದೆ. ನಿರ್ಮಾಣವಾದ ನಂತರ ಅದರಿಂದ ಬರುವ ಆದಾಯ ಮಂಡಳಿಗೆ ಹೋಗಲಿದೆ. ಹೀಗಾಗಿ ಮಂಡಳಿಯು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಲು ಅನುಕೂಲವಾಗಲಿದೆ. ಈಗಾಗಲೇ ವಿಸ್ತೃತವಾದ ಯೋಜನಾ ವರದಿ ಸಿದ್ಧಪಡಿಸಿ ಟೆಂಡರ್ ಕರೆಯಲಾಗಿದೆ. ಈ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿ ಶುರುವಾಗಲಿದೆ.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ನವಿಮುಂಬೈನಲ್ಲಿ 1 ಲಕ್ಷ ಆಸನ ಸಾಮರ್ಥ್ಯದ ಹೊಸ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಸಿದ್ಧತೆ ಮಾಡಿಕೊಂಡಿದೆ. ಒಂದು ವೇಳೆ ಅದು, ನಿರ್ಮಾಣವಾದರೆ, ಇಂಡ್ಲವಾಡಿಯ ಕ್ರೀಡಾಂಗಣ ದೇಶದ ಮೂರನೇ ಅತಿ ದೊಡ್ಡ ಮೈದಾನ ಆಗಲಿದೆ

ಎಲ್ಲ ಕ್ರೀಡಾಂಗಣಗಳನ್ನು ಪರಿಗಣಿಸಿದರೆ, ಗೃಹಮಂಡಳಿ ನಿರ್ಮಿಸುತ್ತಿರುವ ಕ್ರೀಡಾಂಗಣ ದೇಶದ ಮೂರನೇ ಅತಿ ದೊಡ್ಡ ಮೈದಾನವಾಗಲಿದೆ. ಕೋಲ್ಕತ್ತದಲ್ಲಿರುವ ಸಾಲ್ಟ್ ಲೇಕ್ ಸ್ಟೇಡಿಯಂ ಅಥವಾ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದ ಆಸನ ಸಾಮರ್ಥ್ಯ 85 ಸಾವಿರದಷ್ಟಿದೆ. ವಿವಿಧ ಕ್ರೀಡೆಗಳಿಗೆ ಬಳಸಬಹುದಾದ ಈ ಮೈದಾನದಲ್ಲಿ ಹೆಚ್ಚು ಫುಟ್‌ಬಾಲ್ ಪಂದ್ಯಗಳು ನಡೆಯುತ್ತವೆ

ಏನೆಲ್ಲ ಇರಲಿವೆ?

- ಆಟಗಾರರು, ತರಬೇತುದಾರರಿಗೆ ವಸತಿ
- ವೈದ್ಯಕೀಯ ಕೇಂದ್ರ
- ಕ್ರೀಡಾ ವಿಜ್ಞಾನ ಕೇಂದ್ರ
- ಫಿಟ್ನೆಸ್ ಸೆಂಟರ್
- ಪೌಷ್ಟಿಕಾಂಶ ಕೇಂದ್ರ
- ಫಿಸಿಯೋಥೆರಪಿ ಕೇಂದ್ರ
- ಹೈಡ್ರೊಥೆರಪಿ ಕೇಂದ್ರ
- ಈಜುಕೊಳ
- ಸಭಾಂಗಣ
- ಪ್ರದರ್ಶನ ಕೇಂದ್ರ
- ಕ್ರೀಡಾ ಮಳಿಗೆಗಳು
- ಮಾರಾಟ ಮಳಿಗೆಗಳು
- ಸಮಾವೇಶ ಸಭಾಂಗಣ
- ರೆಸ್ಟೋರೆಂಟ್

ಕ್ರೀಡಾಂಗಣದ ನೀಲನಕ್ಷೆ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

‘ಕಾಲೇಜು ಶುಲ್ಕ ಪಾವತಿಗೆ ನೆರವು’

‘ಪ್ರಜಾವಾಣಿ’ ಪತ್ರಿಕೆಯು ನೀಡುತ್ತಿರುವ ವಿದ್ಯಾರ್ಥಿವೇತನ ಆರ್ಥಿಕವಾಗಿ ಹಿಂದುಳಿದವರಿಗೆ ತುಂಬಾ ಪ್ರಯೋಜನಕಾರಿ ಆಗಿದೆ. ಪ್ರಸ್ತುತ ನಾನು ಬೆಳ್ತಂಗಡಿಯ ವಾಣಿ ಪಿಯು ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದು, ಪತ್ರಿಕೆ ನೀಡಿದ ವಿದ್ಯಾರ್ಥಿವೇತನ ಕಾಲೇಜಿನ ಶುಲ್ಕ ಕಟ್ಟಲು ಸಹಕಾರಿಯಾಯಿತು. ‘ಪ್ರಜಾವಾಣಿ’ ಪತ್ರಿಕೆಗೆ ನನ್ನ ಕೃತಜ್ಞತೆಗಳು.

–ಯಶಸ್ವಿ ಕೆ., ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ

‘ನೋಟ್‌ಬುಕ್, ಪಠ್ಯ ಪುಸ್ತಕ ಖರೀದಿ’

‘ಪ್ರಜಾವಾಣಿ’ ದಿನಪತ್ರಿಕೆಯು ನೀಡಿದ ಸ್ಕಾಲರ್‌ಶಿಪ್ ಹಣದಲ್ಲಿ ನೋಟ್‌ಬುಕ್, ಪಠ್ಯಪುಸ್ತಕ ಖರೀದಿಸಿದೆ. ಉಳಿದ ಹಣದಲ್ಲಿ ಕಾಲೇಜು ಶುಲ್ಕ ಪಾವತಿಸಿದೆ. ಪಿಯುಸಿ ಶಿಕ್ಷಣಕ್ಕೆ ಈ ನೆರವು ಸಹಾಯವಾಯಿತು. ವೈದ್ಯಳಾಗಬೇಕು ಎಂಬ ಆಸೆಯಿದೆ. ಭವಿಷ್ಯದ ದಿನಗಳಲ್ಲಿ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನಾನೂ ಸಹಾಯ ಮಾಡುವೆ.

–ಪೃಥ್ವಿ ಗುರುಸಿದ್ಧಪ್ಪ ಮಡಿವಾಳರ, ಹುಬ್ಬಳ್ಳಿ

ಕನಸು ನನಸಾಗಿದೆ



ಅಂತರರಾಷ್ಟ್ರೀಯ ಕ್ರೀಡಾಂಗಣ ಹಾಗೂ ಶಾಲೆ ನಿರ್ಮಾಣ ಮಾಡುವುದಾಗಿ ತಿಳಿಸಿದ ನಂತರ ರೈತರು ಜಮೀನು ನೀಡಲು ಒಪ್ಪಿದರು. ಬಹಳ ವರ್ಷಗಳಿಂದ ಈ ಭಾಗದ ಜನರು ಕಂಡಿದ್ದ ಕನಸು ಕಾಂಗ್ರೆಸ್ ಸರ್ಕಾರದಿಂದ ಈಗ ನನಸಾಗಿದೆ. ಸೋಮಣ್ಣ ವಸತಿ ಸಚಿವರಾಗಿದ್ದಾಗಲೂ ಯೋಜನೆ ಸಾಕಾರಗೊಳಿಸಲು ಪ್ರಯತ್ನಿಸಿದರು. ಆದರೆ ಆಗಲಿಲ್ಲ. ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಒತ್ತಾಸೆಯಿಂದಾಗಿ ಈಗ ಯೋಜನೆಯು ಸಾಕಾರಗೊಂಡಿದೆ

ಜಮೀರ್ ಅಹಮದ್ ಖಾನ್, ವಸತಿ ಸಚಿವ

ಮೊದಲ ಹಂತದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. 20 ದಿನಗಳ ಒಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಒಪ್ಪಿಗೆಗಾಗಿ ಸರ್ಕಾರಕ್ಕೆ ಕಳುಹಿಸಲಾಗುವುದು

ಕೆ.ಎ.ದಯಾನಂದ, ಆಯುಕ್ತ, ಕರ್ನಾಟಕ ಗೃಹಮಂಡಳಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ, ರಾಜ್ಯದಲ್ಲಿ ಬಾಂಗ್ಲಾದೇಶದವರು ನೆಲಸಿರುವ ಅರಣ್ಯ ಮತ್ತು ಸರ್ಕಾರಿ ಜಾಗವನ್ನು ತೆರವುಗೊಳಿಸುವ ಕೆಲಸ ನಡೆಯುತ್ತಿದೆ ಎಂದು ‘ಎಕ್ಸ್’ ಬಳಕೆದಾರರೊಬ್ಬರು ಪ್ರತಿಪಾದಿಸುತ್ತಾ ಒಬ್ಬ ಪುರುಷ ಮತ್ತು ಮಹಿಳೆಯರು ಅಳುತ್ತಿರುವ ವಿಡಿಯೊ ತುಣುಕೊಂದನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು ಮಾಹಿತಿ.

ವಿಡಿಯೊದ ಕೀ ಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್‌ನಲ್ಲಿ ಹಾಕಿ ಹುಡುಕಿದಾಗ, ಇದೇ ವಿಡಿಯೊವನ್ನು ಮೇ 20ರಂದು ಸೋಬರ್ ಕಾಂತಾ ಎಂಬ ಸುದ್ದಿ ಮಾಧ್ಯಮ ಪ್ರಕಟಿಸಿತ್ತು. ಬಾಂಗ್ಲಾದೇಶದ ಸುದ್ದಿ ಮಾಧ್ಯಮಗಳಾದ ಕಾಲೆರ್ ಕಾಂತೊ ಮತ್ತು ಡೇಲಿ ಸನ್ ಕೂಡ ಈ ಬಗ್ಗೆ ವರದಿ ಮಾಡಿವೆ. ಬಾಂಗ್ಲಾದೇಶದ ಮಿರ್‌ಪುರದಲ್ಲಿ ಕೊಳೆಗೇರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದ ವಿಡಿಯೊವಾಗಿದ್ದು, ಕೊಳೆಗೇರಿ ನಿವಾಸಿಗಳು ಮತ್ತು ಪೊಲೀಸರ ನಡುವೆ ಘರ್ಷಣೆ ನಡೆದಿರುವ ವಿವರಗಳೂ ವರದಿಯಲ್ಲಿದ್ದವು. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದರಲ್ಲಿ ಕಂಡು ಬಂದ ಅಂಗಡಿಯ ಹೆಸರು ಖಾನ್ ವಸ್ತ್ರ ವಿತಾನ್ ಎಂದು ಇತ್ತು. ಢಾಕಾದ ಮಿರ್‌ಪುರ ಎಂದೂ ಅದರಲ್ಲಿ ಬರೆದಿತ್ತು. ಗೂಗಲ್ ಮ್ಯಾಪ್‌ನಲ್ಲಿ ಅಂಗಡಿಯ ಹೆಸರು ಹಾಕಿ ಹುಡುಕಿದಾಗ, ಅದರ ಲೊಕೇಷನ್ ಪತ್ತೆಯಾಯಿತು. ಅದರಲ್ಲಿ ಉಲ್ಲೇಖಿಸಿರುವ ದೂರವಾಣಿ ಸಂಖ್ಯೆಯು ಅಂಗಡಿಯ ಫಲಕದಲ್ಲಿದ್ದ ಸಂಖ್ಯೆಯೇ ಆಗಿತ್ತು. ಬಾಂಗ್ಲಾದೇಶದ ವಿಡಿಯೊವನ್ನು ಪಶ್ಚಿಮ ಬಂಗಾಳದ ವಿಡಿಯೊ ಎಂದು ತಪ್ಪಾಗಿ ಹಂಚಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ಪ್ರಕಟಿಸಿದೆ.

ಸುಖವೆಂಬ ಭ್ರಮೆ

ನುಡಿ ಬೆಳಗು

ದೀಪಾ ಹಿರೇಗುತ್ತಿ

ಒಂದು ಕಾಡಿನಲ್ಲಿ ಬಹಳ ಹಂದಿಗಳಿರುತ್ತವೆ. ಅವನ್ನು ಹಿಡಿಯಬೇಕೆಂದು ಒಬ್ಬ ವ್ಯಕ್ತಿ ಪ್ರಯತ್ನಿಸುತ್ತಿರುತ್ತಾನೆ. ಆದರೆ ನೂರಾರು ಸಂಖ್ಯೆಯ ಅವುಗಳನ್ನು ಎದುರಿಸುವುದು ಕಷ್ಟ ಅನ್ನುವುದನ್ನು ತಿಳಿದುಕೊಂಡು ಬಂದೂಕನ್ನು ಬಿಟ್ಟು ಬೇರೆ ಯೋಜನೆ ಹಾಕಿಕೊಳ್ಳುತ್ತಾನೆ.

ಒಂದು ದಿನ ಕಾಡಿಗೆ ಹೋದವನು ಸುಮಾರು ಅರ್ಧ ಕ್ವಿಂಟಲ್‌ನಷ್ಟು ಮೆಕ್ಕೆಜೋಳವನ್ನು ಕಾಡಿನ ನಡುವೆ ರಾಶಿ ಹಾಕುತ್ತಾನೆ. ಯಾವುದೋ ಹೊಂಡವಿಲ್ಲ, ಬಲೆಯೂ ಇಲ್ಲ. ಹಸಿದ ಹಂದಿಗಳು ಪೊದೆಗಳಿಂದ, ಕಾಡಿನ ಮೂಲೆ ಮೂಲೆಗಳಿಂದ ನುಗ್ಗಿ ಬಂದು ಜೋಳವನ್ನು ತಿನ್ನಲು ಪ್ರಾರಂಭಿಸುತ್ತವೆ. ಹೊಟ್ಟೆ ತುಂಬಿದ ಮೇಲೆ ಗಾಬರಿಯಲ್ಲೇ ಓಡಿ ಹೋಗುತ್ತವೆ. ದೂರದಲ್ಲಿ ಅವುಗಳನ್ನು ನೋಡುತ್ತ ನಿಂತಿರುತ್ತಾನೆ ಆ ವ್ಯಕ್ತಿ. ಮಾರನೇ ದಿನ ಮತ್ತೆ ಅಷ್ಟೇ ಪ್ರಮಾಣದ ಜೋಳ ಬೀಳುತ್ತದೆ. ಮರುದಿನವೂ ಅಷ್ಟೇ. ನಾಲ್ಕನೇ ದಿನ ಆ ಜೋಳ ಬೀಳುವ ಜಾಗದಿಂದ ಸ್ವಲ್ಪ ದೂರದಲ್ಲಿ ಅರ್ಧ ಮೀಟರ್ ಎತ್ತರದ ಸಣ್ಣ ಗೋಡೆಯನ್ನು ಅರ್ಧ ವೃತ್ತಾಕಾರದಲ್ಲಿ ಕಟ್ಟಲಾಗುತ್ತದೆ. ವಾಪಾಸು ಹೋಗುವಾಗ ಹಂದಿಗಳು ಅದನ್ನು ನಿರ್ಲಕ್ಷಿಸಿ ಮುಂದೆ ಹೋಗುತ್ತವೆ. ಪ್ರತೀ ದಿನ ಒಂದೇ ಜಾಗದಲ್ಲಿ ಜೋಳ ಬಂದು ಬೀಳುವುದು ಮತ್ತು ಹಂದಿಗಳು ಅದನ್ನು ತಿನ್ನುವಾಗ ಗೋಡೆಯ ಎತ್ತರ ಮತ್ತು ಉದ್ದ ಹೆಚ್ಚುತ್ತ ಹೋಗುವುದು ನಡೆದೇ ಇರುತ್ತದೆ. ಹದಿನೈದನೇ ದಿನ ಅರ್ಧವೃತ್ತಾಕಾರದ ಗೋಡೆ ಸಂಪೂರ್ಣ ವೃತ್ತದ ರೂಪ ಪಡೆದುಕೊಳ್ಳುತ್ತದೆ. ಮಧ್ಯೆ ಒಂದು ಬಾಗಿಲಿನ ಜಾಗವನ್ನು ಬಿಟ್ಟು ಗೋಡೆ ಪೂರ್ತಿಗೊಳ್ಳುತ್ತದೆ. ಎತ್ತರವೂ ಈಗ ಅರ್ಧ ಅಡಿಯಿಂದ ಏರುತ್ತ ಹತ್ತು ಅಡಿ ದಾಟಿರುತ್ತದೆ.

ಮಾರನೇ ದಿನ ಆ ಜೋಳದ ರಾಶಿಯತ್ತ ಪ್ರವೇಶಿಸಲು ಸಣ್ಣ ದಾರಿ ಮಾತ್ರ ಇರುತ್ತದೆ. ಎಂಥವರಿಗೂ ಹೊರಗಡೆಯಿಂದ ನೋಡಿದರೆ ಇದರಲ್ಲೇನೋ ಮೋಸವಿದೆ ಎಂದು ಗೊತ್ತಾಗುವಂತಿರುತ್ತದೆ. ಹಂದಿಗಳಿಗೂ ಅರ್ಥವಾಗುತ್ತದೆ. ಆದರೆ ಮೈಕೈ ನೋಯಿಸಿಕೊಳ್ಳದೇ ಬಂದು ಬೀಳುವ ರಾಶಿ ರಾಶಿ ಜೋಳವನ್ನು ಮನಸೋಇಚ್ಛೆ ಮೇದ ಕಾರಣ ಆ ದಾರಿಯಲ್ಲಿಯೇ ಒಳಹೋಗಿ ತಿನ್ನಲು ಪ್ರಾರಂಭಿಸುತ್ತವೆ. ಏಕೆಂದರೆ ಅವುಗಳಿಗೆ ಕಾಣುತ್ತಿರುವುದು ಬಾಯಲ್ಲಿ ನೀರೂರಿಸುವ ಜೋಳವೊಂದೇ. ಹಂದಿಗಳು ಜೋಳ ತಿನ್ನಲು ಪ್ರಾರಂಭಿಸುತ್ತಿದ್ದಂತೆಯೇ ಆ ದಾರಿಯಲ್ಲಿ ದೊಡ್ಡ ಕಬ್ಬಿಣದ ಬಾಗಿಲನ್ನು ಕೂರಿಸಲಾಗುತ್ತದೆ. ಹಂದಿಗಳು ಈಗ ಜಪ್ಪಯ್ಯ ಅಂದರೂ ತಪ್ಪಿಸಿಕೊಳ್ಳುವ ಹಾಗಿಲ್ಲ. ಎದುರಿಗೆ ಸಿಕ್ಕ ದೊಡ್ಡ ಮರಗಳನ್ನೇ ಕಿತ್ತು ಬಿಸುಡುವ ತಾಕತ್ತಿರುವ ಹಂದಿಗಳು ಈಗ ತಪ್ಪಿಸಿಕೊಳ್ಳಲಾಗದೇ ಕೈದಿಗಳಾಗುತ್ತವೆ.

ಮೊಬೈಲ್, ಅಂತರ್ಜಾಲ, ಫೇಸ್‌ಬುಕ್, ಇನ್‌ಸ್ಟಾ, ಯೂಟ್ಯೂಬ್, ಕುರುಕಲು ತಿಂಡಿ–ಆಹಾರ, ಸೋಮಾರಿತನ, ತುರ್ತು ಕೆಲಸಗಳನ್ನು ಮುಂದೂಡುವುದು ಎಲ್ಲವೂ ನಮ್ಮನ್ನು ಬಂಧಿಗಳಾಗಿಸುತ್ತಿವೆ ಎಂಬ ಕಟುಸತ್ಯ ನಮಗೆ ಗೊತ್ತಿದೆ. ಕಂಫರ್ಟ್ ಝೋನ್ ಅನ್ನುವುದು ಅರಮನೆ ಅನ್ನಿಸಿದರೂ ಅದು ನಮ್ಮ ಪ್ರಗತಿಯನ್ನು ತಡೆಹಿಡಿಯುವ ಜಾಗ ಎನ್ನುವುದೂ ನಮಗೆ ಅರಿವಿದೆ. ಹಂದಿಗಳಿಗೆ ಒಳಗೆ ಹೋಗಲು ಪುಟ್ಟ ದಾರಿ ಮಾತ್ರ ಕಂಡರೂ ಅವು ಅದನ್ನು ಗಮನಿಸದೇ ಒಳಗೆ ಹೋದಂತೆ ನಾವೂ ಭಯಂಕರ ಜಾಲದೊಳಗೆ ಸಿಕ್ಕಿಹಾಕಿಕೊಳ್ಳುವ ಅರಿವಾದರೂ ವಾಪಸ್ ಬರಲು ಸಾಧ್ಯವಾಗುವುದಿಲ್ಲ. ಏಕೆಂದರೆ ನಮಗೆ ಆ ಸುಖದ ಭ್ರಮೆ ಅಭ್ಯಾಸವಾಗಿಬಿಟ್ಟಿದೆ.

ಇದು ವಿದ್ಯಾರ್ಥಿಗಳು, ಯುವಜನರು, ಮಧ್ಯವಯಸ್ಕರು, ನಿರುದ್ಯೋಗಿಗಳು, ಉದ್ಯೋಗಿಗಳು, ಮಹಿಳೆಯರು, ಪುರುಷರು ಎಲ್ಲರ ಸಮಸ್ಯೆಯೂ ಹೌದು. ಹಾಗಾದರೆ ಇದಕ್ಕೆ ಪರಿಹಾರ? ಈ ಕಥೆಯಲ್ಲಿರುವ ಹಂದಿಗಳ ಅಂತ್ಯವನ್ನು ಊಹಿಸಿಕೊಂಡು ಎಚ್ಚೆತ್ತುಕೊಳ್ಳುವುದು ಮತ್ತು ಕಷ್ಟವಾದರೂ ಗಟ್ಟಿ ಮನಸ್ಸು ಮಾಡಿ ನಾವೇ ನಿರ್ಮಿಸಿಕೊಂಡ ಬಂಧನದಿಂದ ಬಿಡಿಸಿಕೊಳ್ಳುವುದು. ಅಷ್ಟೇ. ❖

ಪದಬಂಧ 6414

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಾಪಿತನ ಹತ್ತಿರವಿರುವ ತಂದೆ (2)
3.ಹವಳವನ್ನು ಹೀಗೂ ಹೇಳುತ್ತಾರೆ (3)
5.ಏವೆಯನ್ನು ಮುಚ್ಚುವುದು (4)
6.ಮಿತಿ ಮೀರಿದ ಸಿಟ್ಟು (3)
7.ರಾಣಿ ಹಿಡಿದಿರುವ ಅಡ್ಡಣಿಗೆ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರದ ಸ್ವಾಮ್ಯ (5)
9.ಒಳ್ಳೆಯ ಅವಕಾಶ (3)
10.ಅರ್ಧ ಚಂದ್ರಾಕೃತಿಯ ರಚನೆ (3)
13.ಅವನ ಸಾವು ಈ ರೀತಿ ಬಂದಿದೆ (4)
14.ದುಂಡನೆಯ ಲೋಹದ ಪಾತ್ರೆ ತಲೆಯಲ್ಲಿದೆ (3)
15.ರಟ್ಟಾಗದಿರುವ ರಹಸ್ಯ (2)

ಮೇಲಿಂದ ಕೆಳಕ್ಕೆ

1.ಕೃಷ್ಣನಿಗೆ ಪ್ರಿಯವಾದ ಕೊಳಲು (4)
2.ದೀಪದ ಹುಳು ಇಲ್ಲಿದೆ (3)
4.ಮಣಿಸರ ಧರಿಸಿರುವ ಚಕ್ರವರ್ತಿನಿ (4)
5.ಯಾವ ಅಪರಾಧವನ್ನು ಮಾಡದಿರುವವನು (5)
7.ಗುಣವನ್ನು ಹೊಗಳುವುದು (5)
9.ಒಳ್ಳೆಯ ನಡತೆ (4)
11.ಗಡಿಯ ಹತ್ತಿರ ಹೇಳಿರುವ ಗಾದೆ (4)
12.ವರ ಹೇಳಿರುವ ಅನವಶ್ಯಕ ವಿವರಣೆ (3)



6413ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಾದಕತೆ 3.ನವಾಬ 5.ರಿವಾಜು 6.ಡಬ್ಬುಗಾತಿ 7.ಅತಿಕ್ರಮಪ್ರವೇಶ 11.ಪರಿಮಾಣ 12.ಸುಗುಣ 15.ಪತಂಗ 16.ಅನಿಕೇತ

ಮೇಲಿಂದ ಕೆಳಕ್ಕೆ:
1.ಮಾಮಿ 2.ಕದವಾ 4.ಬಬಿಂತಿಪ್ರ 5.ರಿಚ್ಚಅ 6.ಡಚಂಪ್ರ 8.ಕ್ರಮೇಣ 9.ಶರಣ 10.ಅಪರೂಪ 13.ಗುಮಾನಿ 14.ಜ್ಞಾತ

ಸುಡೊಕು 6797

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		4		5			9	3
			1		9	6		5
6		5		3				
2					4	1		9
	7	1		8			4	
4			9		2	3		7
	4		3		7		2	
						7	3	
1	3			2			6	

6796 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಮೇ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಏಕಾದಶಿ ಅಹೋರಾತ್ರ ನಕ್ಷತ್ರ : ಹಸ್ತ ಅಹೋರಾತ್ರ ಯೋಗ : ಸಿದ್ಧ ಗಂ. 27-11 ಕರಣ : ವಣಿಜ್ ಗಂ. 17-43, ವೃಷಭ ಮಾಸದ 11 ನೇ ದಿನ. ಮಳೆ ನಕ್ಷತ್ರ : ರೋಹಿಣಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-06 ಸೂರ್ಯಾಸ್ತ : 06-49, ಮುಸ್ಲಿಂ ದಿನಾಂಕ : 09 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 7, 11

ಮೇಷ: ಸತ್ಯದ ಮಾರ್ಗವು ಜೀವನದಲ್ಲಿ ಎದುರಾದ ಗೊಂದಲದಿಂದ ಹೊರಬರಲು ಅನುಕೂಲ ಮಾಡಲಿದೆ. ಹಿರಿಯರೊಡನೆ ವಾಗ್ವಾದ ಆಗದಂತೆ ಜಾಗ್ರತೆ ಮಾಡಿ. ಯಶಸ್ಸಿಗೆ ಅವರ ಆಶೀರ್ವಾದವು ಅಗತ್ಯವಾಗಿರುತ್ತದೆ.

ವೃಷಭ: ದೇಹಾರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ಸಲ್ಲ. ಸೌಂದರ್ಯವರ್ಧಕ ವಸ್ತುಗಳನ್ನು ಬಳಸಬೇಡಿ. ಅಲರ್ಜಿಯಾಗಬಹುದು. ರಾಸಾಯನಿಕ ಬಳಕೆ ವ್ಯತ್ಯಾಸದಿಂದ ರೈತರಿಗೆ ನಷ್ಟ ಸಂಭವಿಸುತ್ತದೆ.

ಮಿಥುನ: ಗುರಿ ಸಾಧಿಸಲು ಪ್ರಮುಖ ವ್ಯಕ್ತಿಗಳೊಂದಿಗೆ ಭೇಟಿ ಅನಿವಾರ್ಯ. ಕೆಲಸದಲ್ಲಿ ಸಣ್ಣ-ಪುಟ್ಟ ಬದಲಾವಣೆಗಳು ಎದುರಾಗಲಿವೆ. ದಾಂಪತ್ಯದಲ್ಲಿ ಚರ್ಚೆ, ವಾದಗಳಿಗೆ ಆಸ್ಪದ ನೀಡದಿರುವುದು ನೆಮ್ಮದಿಯನ್ನು ಕೊಡುತ್ತದೆ.

ಕರ್ಕಾಟಕ: ಕಿರುತೆರೆ ಮತ್ತು ಸಿನಿಮಾ ಕಲಾವಿದರಿಗೆ ಮಾನ್ಯತೆ ದೊರೆಯಲಿದೆ. ಆಹಾರ ವ್ಯತ್ಯಾಸದಿಂದ ಪಿತ್ತ ಸಂಬಂಧಿ ಅನಾರೋಗ್ಯಗಳು ಎದುರಾಗಲಿವೆ. ಅವಸರದ ತೀರ್ಮಾನ ಬೇಡ.

ಸಿಂಹ: ಬಟ್ಟೆ ವ್ಯಾಪಾರಿಗಳು ರೇಷ್ಮೆ ವಸ್ತ್ರಗಳ ಮಾರಾಟದಿಂದ ಲಾಭ ಪಡೆಯುವಿರಿ. ಅಧ್ಯಾಪಕ ವರ್ಗದವರಿಗೆ ವಿದ್ಯಾರ್ಥಿಗಳ ಮೇಲುಗೈಯಿಂದ ಸಂತೋಷ ಸಿಗಲಿದೆ. ಜಗನ್ಮಾತೆ ರಾಜರಾಜೇಶ್ವರಿಯನ್ನು ಪ್ರಾರ್ಥಿಸಿ.

ಕನ್ಯಾ: ಅಂಚೆ ವಿಭಾಗದ ಪರೀಕ್ಷೆಯನ್ನು ಬರೆದವರಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶ ದೊರೆತರೂ ಕುಟುಂಬದಿಂದ ದೂರವಾಗಬೇಕಾದ ಪರಿಸ್ಥಿತಿ ಎದುರಾಗುವುದು. ಬಣ್ಣ ಮತ್ತು ಸಿಮೆಂಟ್ ವ್ಯಾಪಾರಿಗಳಿಗೆ ಲಾಭ ಅಧಿಕ.

ತುಲಾ: ತೈಲ ಲೇಪನದಂಥ ಆಯ್ಕೆಯಿಂದ ಕಾಲು ನೋವು ಉಪಶಮನ ಆಗಲಿದೆ. ನೆರೆಹೊರೆಯವರೊಂದಿಗಿನ ಸಂಬಂಧಗಳು ಉತ್ತಮಗೊಳ್ಳಲಿವೆ. ಸ್ವ ಉದ್ಯೋಗಿಗಳಿಗೆ ಅವಕಾಶ ಲಭ್ಯ.

ವೃಶ್ಚಿಕ: ಸಾಹಿತ್ಯದಲ್ಲಿ ಅಭಿರುಚಿ ಹೆಚ್ಚುತ್ತದೆ. ಯಾಂತ್ರಿಕ ಬದುಕಿನಿಂದ ತುಸು ವಿರಾಮ ಪಡೆಯುವಿರಿ. ಪತಿಯ ಆರೋಗ್ಯದಲ್ಲಿ ಆರೈಕೆಯಿಂದ ಉನ್ನತಿ ಕಾಣಲಿದೆ. ಬದುಕಿನಲ್ಲಿ ಬದಲಾವಣೆ ಇರುವುದಿಲ್ಲ.

ಧನು: ಬದುಕಿನ ಉಳಿದ ದಿನಗಳನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸಿ. ಒಳಾಂಗಣ ವಿನ್ಯಾಸಗಾರರಿಗೆ ಹೆಚ್ಚಿನ ಬೇಡಿಕೆ ಬರಲಿದ್ದು, ಉಪಯೋಗಿಸಿಕೊಳ್ಳಿ.

ಮಕರ: ಮಾತಿನಲ್ಲಿ ಬಿಗು ಮತ್ತು ಗಾಂಭೀರ್ಯವನ್ನು ಇಟ್ಟುಕೊಳ್ಳುವುದರಿಂದ ಪ್ರತಿಷ್ಠೆ ಹೆಚ್ಚುತ್ತದೆ. ಸಜ್ಜನರ ಸಹವಾಸ ಮತ್ತು ಸನ್ಮಾರ್ಗದ ಬುದ್ಧಿಯನ್ನು ಕಾಪಾಡಿಕೊಳ್ಳುವುದು ಉತ್ತಮ.

ಕುಂಭ: ಬಾಳಸಂಗಾತಿಯ ಆಯ್ಕೆಯ ವಿಚಾರದಲ್ಲಿ ಸೌಂದರ್ಯಕ್ಕಿಂತ ಗುಣ, ನಡತೆಗೆ ಪ್ರಾಮುಖ್ಯ ನೀಡುವುದು ಉತ್ತಮ. ಪುರಾಣಗಳ ಪ್ರವಚನಗಳನ್ನು ಮಾಡುವವರಿಗೆ ಹೊಸ ಅವಕಾಶಗಳು ದೊರೆಯಲಿವೆ.

ಮೀನ: ಅಳವಡಿಸಿಕೊಂಡ ಹೊಸ ಯೋಜನೆಗಳಿಂದ ಉತ್ತಮ ಪ್ರಗತಿಯನ್ನು ಕಾಣಲಿದ್ದೀರಿ. ಹಿತಶತ್ರುಗಳಿಂದ ವಂಚನಾ ಪ್ರಸಂಗವಿದ್ದರು ಜಯ ಸಿಗುವುದು ಖಂಡಿತ.

ಗುಂಡಣ್ಣ

ಉತ್ತಮ ನಿದ್ರೆಯಿಂದ ತಪ್ಪಿಸಿಕೊಳ್ಳಬೇಡಿ

• ಡಾ. ಕುಶ್ವಂತ್ ಕೋಳಿಬೈಲು

ಪೌಷ್ಟಿಕಾಂಶವಿರುವ ಉತ್ತಮ ಆಹಾರ, ವ್ಯಾಯಾಮ ಮತ್ತು ಉತ್ತಮವಾದ ನಿದ್ರೆ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಬೇಕಾದ ಮೂರು ಆಧಾರಸ್ತಂಭಗಳು. ಈ ಮೂರರಲ್ಲಿ ಯಾವುದಾದರು ಒಂದು ಸಮರ್ಪಕವಾಗಿಲ್ಲದಿದ್ದರೂ ಆರೋಗ್ಯದಲ್ಲಿ ಏರುಪೇರು ಉಂಟಾಗಬಹುದು. ಇತ್ತೀಚಿನ ವರ್ಷಗಳಲ್ಲಿ ವೈಜ್ಞಾನಿಕ ಅರಿವು ಹೆಚ್ಚಾದಂತೆ ನಿದ್ರೆಯ ಪ್ರಾಮುಖ್ಯದ ಬಗ್ಗೆ ಹೆಚ್ಚು ಮಾಹಿತಿಗಳು ಹೊರಬಿದ್ದಿವೆ.

ವಿಶ್ವದರ್ಜೆಯ ಕ್ರೀಡಾಪಟುಗಳು ಕೂಡ ತಮ್ಮ ಪ್ರದರ್ಶನ ಉತ್ತಮಗೊಳ್ಳಲು ಉತ್ತಮವಾಗಿ ನಿದ್ರೆ ಮಾಡುವುದರತ್ತ ಕೊಡುತ್ತಿರುವ ಗಮನದಿಂದಾಗಿ ಉತ್ತಮವಾಗಿ ನಿದ್ರೆಮಾಡುವುದರ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿದೆ.

ನಮ್ಮ ಸಮಾಜದಲ್ಲಿ ಹೆಚ್ಚು ನಿದ್ರೆ ಮಾಡುವುದು ಸೋಮಾರಿತನದ ಪ್ರತೀಕವೆಂದು ಮೂದಲಿಸುವುದು ಮತ್ತು ಕಡಿಮೆ ನಿದ್ರೆ ಮಾಡುವುದನ್ನು ಕ್ರಿಯಾಶೀಲತೆಯ ಗುರುತೆಂದು ಬೆಂಬಲಿಸುವುದನ್ನು ನಾವು ಗಮನಿಸಿದ್ದೇವೆ. ಉತ್ತಮ ನಿದ್ರೆಯಿಲ್ಲದಿದ್ದರೆ ವ್ಯಾಯಾಮ ಮಾಡಿದರೂ ಅದರಿಂದ ಆರೋಗ್ಯ ಸುಧಾರಿಸದು ಎಂಬ ಅರಿವು ಹೆಚ್ಚಾದ ನಂತರ ವ್ಯಾಯಾಮದಷ್ಟೆ ಪ್ರಾಮುಖ್ಯವನ್ನು ನಿದ್ರೆಗೆ ಜನರು ಕೊಡುತ್ತಿದ್ದಾರೆ. ಬುದ್ಧಿವಂತಿಕೆಯೆ ಇರಲಿ ಅಥವಾ ದೈಹಿಕ ಕ್ಷಮತೆಯೆ ಇರಲಿ, ಯಾವುದೇ ಸ್ಪರ್ಧೆಯಲ್ಲಿ ಗೆಲ್ಲುವ ಸಂಭವವನ್ನು ಹೆಚ್ಚು ಮಾಡುವ ಕಾರಣಕ್ಕಾಗಿ 'Sleep is the most powerful drug' ಎಂದು ಹೇಳುವವರಿದ್ದಾರೆ.

ವಿವಿಧ ವಯಸ್ಸಿನವರಲ್ಲಿ ತಮ್ಮ ದೇಹದ ಅಗತ್ಯಕ್ಕೆ ತಕ್ಕಂತೆ ನಿದ್ರೆ ಬೇಕಾಗುತ್ತದೆ. ಚಿಕ್ಕ ಮಕ್ಕಳ ಮಿದುಳು ಬೆಳೆಯುತ್ತಿರುವ ಕಾರಣದಿಂದಾಗಿ ಅವರಲ್ಲಿ ಎಂಟರಿಂದ ಹತ್ತು ಗಂಟೆಗಳ ನಿದ್ರೆಯ ಅಗತ್ಯವಿರುತ್ತದೆ. ವಯಸ್ಕರಲ್ಲಿ ಸಾಧಾರಣವಾಗಿ ಎಂಟು ಗಂಟೆಗಳ ಉತ್ತಮ ಗುಣಮಟ್ಟದ ನಿದ್ರೆಯ ಅಗತ್ಯವಿರುತ್ತದೆ. ನಿದ್ರೆಯಲ್ಲಿ ವಿವಿಧ ಹಂತಗಳಿವೆ. ಎಲ್ಲಾ ಹಂತಗಳಿಗೂ ಅದರವೇ ಆದ ಪ್ರಾಮುಖ್ಯವಿದೆ. ನಿದ್ರೆಯ ಎಲ್ಲಾ ಹಂತಗಳನ್ನು ಪೂರ್ಣಗೊಳಿಸದಿದ್ದರೆ ನಿದ್ರೆಯು ಅಪೂರ್ಣವಾಗುತ್ತದೆ.

ತ್ವರಿತ ಕಣ್ಣಿನ ಚಲನೆಯಿರುವ (REM) ಗಾಢವಾದ ನಿದ್ರೆ ಮತ್ತು ಕಣ್ಣುಗಳ ತ್ವರಿತ ಚಲನೆಯಿಲ್ಲದ (Non REM) ನಿದ್ರೆಗಳೆಂಬ ಎರಡು ವಿಧದ ನಿದ್ರೆಯು ಒಂದರ ನಂತರ ಒಂದಾಗಿ ನಡೆಯುತ್ತದೆ. ತ್ವರಿತ ಕಣ್ಣಿನ ಚಲನೆಯಿಲ್ಲದ ನಿದ್ರೆಯು ದೇಹ ಮತ್ತು ಮಿದುಳಿನ ಪುನಃಶ್ಚೇತನದಲ್ಲಿ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಮುಖ್ಯವಾಗಿದೆ. ತ್ವರಿತ ಕಣ್ಣಿನ ಚಲನೆ ಇರುವ ನಿದ್ರೆಯು ಸ್ಮರಣಶಕ್ತಿಯ ಬಲವರ್ಧನೆ, ಕಲಿಕೆ ಮತ್ತು ಭಾವನಾತ್ಮಕ ನಿಯಂತ್ರಣವನ್ನು ಬೆಂಬಲಿಸುತ್ತದೆ. ನಿದ್ರೆಗೆ ಅಡ್ಡಿಯಾದಾಗ ಅಥವಾ ನಿದ್ರೆಯನ್ನು ಮೊಟಕುಗೊಳಿಸಿದಾಗ ದೇಹವು ವ್ಯತಿರಿಕ್ತವಾಗಿ ಸ್ಪಂದಿಸುತ್ತದೆ. ಇದು ಮುಂದೆ ನಿದ್ರಾಹೀನತೆಗೆ ಕಾರಣವಾಗುತ್ತದೆ. ನಿದ್ರಾಹೀನತೆಯು ಮನುಷ್ಯನ ಮನಃಸ್ಥಿತಿ ಮತ್ತು ಏಕಾಗ್ರತೆಯಿಂದ ಹಿಡಿದು ಹೃದಯದ ಆರೋಗ್ಯ ಮತ್ತು ರೋಗನಿರೋಧಕ ಪ್ರತಿಕ್ರಿಯೆಯವರೆಗೆ ವಿವಿಧ ಹಂತಗಳಲ್ಲಿ ಪರಿಣಾಮವನ್ನು ಬೀರುತ್ತದೆ. ಚೆನ್ನಾಗಿ ನಿದ್ರೆ ಮಾಡುವುದರಿಂದ ಮರುದಿನ ನೀವು ನಿಮ್ಮ ದೈನಂದಿನ ಚಟುವಟಿಕೆಗಳನ್ನು ಹೆಚ್ಚಿನ ಶಕ್ತಿ, ಜಾಗರೂಕತೆ ಮತ್ತು ಗಮನಹರಿಸಿ ಮಾಡಲು ಸಹಾಯವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ನಿದ್ರೆಯ ಕೊರತೆಯು ನಿಮ್ಮನ್ನು ಆಲಸ್ಯಗೊಳಿಸಬಹುದು ಅಥವಾ ಹಗಲಿನಲ್ಲಿ ಅರ್ಥವಿಲ್ಲದೆಯೇ ನಿದ್ರಿಸುವಂತೆ ಮಾಡಬಹುದು. ಹಗಲಿನ ನಿದ್ರೆಯು ಕೆಲಸದಲ್ಲಿ ಅಥವಾ ಶಾಲೆಯಲ್ಲಿ ಕಳಪೆ ಕಾರ್ಯಕ್ಷಮತೆಗೆ ಕಾರಣವಾಗಬಹುದು. ಇದು ವಾಹನ ಚಾಲನೆಯಲ್ಲಿ ಅಥವಾ ಇತರ ಕೆಲಸಗಳಲ್ಲಿ ಅಪಘಾತಗಳ ಸಂಭವವನ್ನು ಹೆಚ್ಚಿಸುತ್ತದೆ. ಸಾಕಷ್ಟು ನಿದ್ರೆ ಇಲ್ಲದಿದ್ದರೆ, ನೀವು ಕಿರಿಕಿರಿ, ಹತಾಶೆ, ಆತಂಕ ಅಥವಾ ದುಃಖವನ್ನು ಅನುಭವಿಸುವ ಸಾಧ್ಯತೆ ಹೆಚ್ಚು. ಸಾಕಷ್ಟು ನಿದ್ರೆ ಮಾಡದ ಜನರು ಮಾನಸಿಕ ತೊಂದರೆಯನ್ನು ಅನುಭವಿಸುವ ಹೆಚ್ಚಿನ ಅಪಾಯವಿರುತ್ತದೆ. ರಾತ್ರಿಯ ಉತ್ತಮ ನಿದ್ರೆಯ ಸಮಯದಲ್ಲಿ, ದೇಹದ ಸ್ನಾಯುಗಳು ಉತ್ತಮಗೊಳ್ಳುತ್ತವೆ. ಅಂಗಾಂಗಗಳು ಹಾನಿಗೊಂಡಿದ್ದರೆ ಸರಿಯಾಗುತ್ತವೆ. ಇದೇ ಸಮಯದಲ್ಲಿ ಜೀವಕೋಶಗಳ ಪುನರುತ್ಪಾದನೆ ಮತ್ತು ಹಾರ್ಮೋನುಗಳು ಉತ್ಪಾದನೆಯಾಗುತ್ತವೆ. ನಿದ್ರೆಯಲ್ಲಿ ಸಮಸ್ಯೆಗಳಾದಾಗ ಹಾರ್ಮೋನುಗಳಲ್ಲಿ ಏರುಪೇರು, ದೇಹದ ರಕ್ತದೊತ್ತಡ ಮತ್ತು ಸಕ್ಕರೆಯಲ್ಲಿ ಏರುಪೇರುಗಳಾಗುತ್ತವೆ.

ನಿದ್ರಾಹೀನತೆಗೆ ಹಲವಾರು ಕಾರಣಗಳಿವೆ. ಕೆಟ್ಟ ಜೀವನಶೈಲಿ, ಅತಿಯಾದ ಒತ್ತಡಗಳು, ಉಸಿರಾಟದ ಸಮಸ್ಯೆಯಿರುವ ಕಾಯಿಲೆಗಳು, ಹಾರ್ಮೋನುಗಳ ಏರುಪೇರು, ಕ್ಯಾನ್ಸರ್‌ನಂಥ ಕಾಯಿಲೆಗಳು ನೀಡುವ ಅತಿಯಾದ ನೋವು ಮತ್ತು ಕೆಲವು ಔಷಧಗಳೂ ನಿದ್ರಾಹೀನತೆಗೆ ಕಾರಣವಾಗಬಹುದು. ರಾತ್ರಿಪಾಳಿಯಲ್ಲಿ ಕೆಲಸ ಮಾಡುವವರು, ಸೈನಿಕರು, ಪೊಲೀಸ್ ಸಿಬ್ಬಂದಿ ಮತ್ತು ವೈದ್ಯಕೀಯ ಸಿಬ್ಬಂದಿಗಳಲ್ಲಿ ತಮ್ಮ ವೃತ್ತಿಯ ಅನಿವಾರ್ಯ ಕಾರಣಗಳಿಂದಾಗಿ ನಿದ್ರಾಹೀನತೆಯು ಕಾಡಬಹುದು.

ಉತ್ತಮವಾಗಿ ನಿದ್ರೆ ಮಾಡುವ ಕಲೆಯನ್ನು ಕರಗತ ಮಾಡಿಕೊಳ್ಳಲು ಕೆಲವು ಸರಳ ನಿಯಮಗಳನ್ನು ಪಾಲಿಸಬೇಕು. ಪ್ರತಿ ರಾತ್ರಿ ನಿಗದಿತ ಸಮಯದಲ್ಲಿ ನಿದ್ರೆಗೆ ಜಾರಲು ಪ್ರಯತ್ನವನ್ನು ಪಡಬೇಕು. ಕಾಫಿ ಮತ್ತು ಚಹಾ ಪಾನೀಯವನ್ನು ನಿದ್ರೆಗೆ ಜಾರುವ ಮುನ್ನ ಕನಿಷ್ಠ ನಾಲ್ಕು ಗಂಟೆಗೆ ಮೊದಲು ಸೇವಿಸಬಾರದು. ಮದ್ಯಪಾನವು ಕೂಡ ನಿದ್ರೆಯ ಗುಣಮಟ್ಟವನ್ನು ಕಳಪೆ ಮಾಡಬಹುದು.

ನಿದ್ರೆ ಹೋಗುವುದಕ್ಕಿಂತ ಮೊದಲು ವ್ಯಾಯಾಮ, ಕ್ರೀಡೆಗಳು ಮತ್ತು ಕಸರತ್ತು ಮಾಡುವುದರಿಂದ ನಿದ್ರೆಯ ಗುಣಮಟ್ಟವು ಕಡಿಮೆಯಾಗಬಹುದು. ವ್ಯಾಯಾಮಗಳನ್ನು ಬೆಳಗಿನ ವೇಳೆಯಲ್ಲಿ ಮಾಡುವುದರಿಂದ ಅದು ನಿದ್ರೆಗೆ ಸಹಾಯಕಾರಿಯಾಗುತ್ತದೆ. ಟಿ.ವಿ. ಮತ್ತು ಮೊಬೈಲನ್ನು ನಿದ್ರೆಗೆ ಹೋಗುವ ಒಂದು ಗಂಟೆಗೆ ಮೊದಲು ನೋಡುವುದನ್ನು ಬಿಡಬೇಕು. ಆಗ ನಿದ್ರೆಯನ್ನು ತರುವ ಹಾರ್ಮೋನ್ 'ಮೆಲಟೋನಿನ್' ಪ್ರಮಾಣವು ಹೆಚ್ಚಾಗುತ್ತದೆ. ಉತ್ತಮ ನಿದ್ರೆ ಮಾಡಲು ಈ ಹಾರ್ಮೋನಿನ ಪಾತ್ರವು ಪ್ರಮುಖವಾಗಿದೆ. ❖

ಆರೋಗ್ಯವಂತ ಸಮಾಜವನ್ನು ಕಟ್ಟುವ ಯೋಗ

• ಡಾ. ವೆಂಕಟಕೃಷ್ಣ ಕೆ.ವಿ.

ಇಂದಿನ ಕಾಲದಲ್ಲಿ ಯೋಗವು ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದ್ದರೂ, ಅದರ ಮೂಲಭೂತ ತತ್ತ್ವಗಳನ್ನು ಮತ್ತು ಗುರಿಗಳನ್ನು ಅನೇಕ ಬಾರಿ ಮರೆಯುತ್ತಿರುತ್ತೇವೆ. ಯೋಗವು ಕೇವಲ ದೇಹಾಭ್ಯಾಸ ಅಥವಾ ವ್ಯಾಯಾಮವಲ್ಲ; ಅದು ಆಂತರಿಕ ಶುದ್ಧಿ ಮತ್ತು ಚೈತನ್ಯವನ್ನು ಸಾಧಿಸುವ ಶ್ರೇಷ್ಠ ಮಾರ್ಗ.

ಈ ಹೊತ್ತಿನ ವೇಗದ ಜೀವನದಲ್ಲಿ ಒತ್ತಡ, ಆತಂಕ ಮತ್ತು ದೈಹಿಕ ಸಮಸ್ಯೆಗಳು ಹೆಚ್ಚುತ್ತಿವೆ. ಅನೇಕ ರೋಗಗಳು ನಮ್ಮ ಜೀವನಶೈಲಿಯಲ್ಲಿರುವ ತಪ್ಪು ಅಭ್ಯಾಸಗಳಿಂದಲೇ ಉಂಟಾಗುತ್ತಿವೆ. ಮಧುಮೇಹ, ರಕ್ತದೊತ್ತಡ, ಹೃದಯರೋಗಗಳನ್ನು 'ಜೀವನಶೈಲಿ ರೋಗಗಳು' ಎಂದು ಕರೆಯಲಾಗುತ್ತದೆ. ಈ ರೋಗಗಳು ಉಂಟಾಗುವ ಮುನ್ನವೇ ಅವುಗಳಿಗೆ ಕಾರಣವಾಗುವ ಅಪಾಯಕಾರಿ ಅಂಶಗಳನ್ನು ತಡೆಯುವುದೇ ಆದಿಮ ತಡೆಗಟ್ಟುವಿಕೆ (Primordial Prevention). ಮನಸ್ಸು ಮತ್ತು ದೇಹದ ಸಮತೋಲನವನ್ನು ಕಾಪಾಡುವ ಒಂದು ಪ್ರಾಚೀನ ಭಾರತೀಯ ವಿಧಾನವೇ ಯೋಗ. ಯೋಗವು ಜೀವನವನ್ನು ಆರೋಗ್ಯಕರವಾಗಿ, ಸಮತೋಲನದಿಂದ ನಡೆಸುವ ಒಂದು ಸಂಪೂರ್ಣ ಮಾರ್ಗವಾಗಿದೆ. ಸರಳವಾಗಿ ಹೇಳುವುದಾದರೆ, ರೋಗ ಬರುವುದನ್ನು ಮಾತ್ರವಲ್ಲ, ರೋಗಕ್ಕೆ ಕಾರಣವಾಗುವ ಅಭ್ಯಾಸಗಳು ಮತ್ತು ಪರಿಸ್ಥಿತಿಗಳು ಹುಟ್ಟದಂತೆ ನೋಡಿಕೊಳ್ಳುವುದೇ ಆದಿಮ ತಡೆಗಟ್ಟುವಿಕೆಯ ಉದ್ದೇಶ.

ಆದಿಮ ತಡೆಗಟ್ಟುವಿಕೆಯು ಆರೋಗ್ಯ ರಕ್ಷಣೆಯ ಮೊದಲ ಹಂತ. ಈ ಹಂತದಲ್ಲಿ ನಾವು ಮಕ್ಕಳಿಂದಲೇ ಆರೋಗ್ಯಕರ ಜೀವನಶೈಲಿಯನ್ನು ರೂಪಿಸಿದರೆ, ಮುಂದಿನ ದಿನಗಳಲ್ಲಿ ರೋಗಗಳ ಸಾಧ್ಯತೆಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು. ರೋಗ ಬಂದ ನಂತರ ಚಿಕಿತ್ಸೆಗಿಂತ, ರೋಗಕ್ಕೆ ಕಾರಣವಾಗುವ ಪರಿಸ್ಥಿತಿಗಳು ಹುಟ್ಟದಂತೆ ನೋಡಿಕೊಳ್ಳುವುದು ಹೆಚ್ಚು ಪರಿಣಾಮಕಾರಿ. ಕುಟುಂಬ, ಶಾಲೆ ಮತ್ತು ಸಮಾಜವು ಆರೋಗ್ಯಕರ ಅಭ್ಯಾಸಗಳನ್ನು ಬೆಳೆಸುವತ್ತ ಗಮನಹರಿಸಬೇಕು. ಇಂದಿನ ಮಕ್ಕಳಿಗೆ ಉತ್ತಮ ಜೀವನಶೈಲಿ ನೀಡಿದರೆ, ನಾಳೆಯ ಸಮಾಜ ಆರೋಗ್ಯಕರವಾಗಿರುತ್ತದೆ.

ಯೋಗವು ಆರೋಗ್ಯಕರ ಜೀವನಶೈಲಿಯನ್ನು ಬೆಳೆಸುವುದಕ್ಕೆ, ಸರಿಯಾದ ಆಹಾರ ಸಂಸ್ಕೃತಿಯನ್ನು ರೂಢಿಸಿಕೊಳ್ಳುವುದಕ್ಕೆ, ದೈಹಿಕ ಚಟುವಟಿಕೆಗೆ ಮತ್ತು ಮಾನಸಿಕ ಆರೋಗ್ಯದ ಬಗ್ಗೆಯೂ ಕಾಳಜಿವಹಿಸಿ ಸಾಮಾಜಿಕ ಜಾಗೃತಿ ಮೂಡಿಸಲೂ ಪರಿಣಾಮಕಾರಿ.

'ಯೋಗ' ಎಂಬ ಪದವು ಸಂಸ್ಕೃತದ 'ಯುಜ್' ಧಾತುವಿನಿಂದ ಬಂದಿದ್ದು, ಅದರ ಅರ್ಥ 'ಸಂಯೋಗ' ಅಥವಾ 'ಒಕ್ಕೂಟ' ಎಂದು ಎಲ್ಲೆಡೆ ಪ್ರಖ್ಯಾತವಾಗಿದ್ದರೂ ಪಾತಂಜಲ ಯೋಗಸೂತ್ರವು 'ಯುಜ್' ಎಂಬುದಕ್ಕೆ 'ಸಮಾಧಿ' ಎಂಬ ಅರ್ಥವನ್ನು ಕೊಡುತ್ತದೆ. ಸಮಾಧಿಯೆಂದರೆ ಸಮಾಧಾನದ ಸ್ಥಿತಿ. ಈ ಸಮಾಧಾನದ ಸ್ಥಿತಿಯು ಮಾನಸಿಕ ಸ್ಥಿರತೆಯನ್ನು ತೋರಿಸುತ್ತದೆ. ಸರಿಯಾದ ಮಾನಸಿಕ ಸ್ಥಿತಿಯು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕಾರಿ. ಆಗ ದೇಹ, ಮನಸ್ಸು ಮತ್ತು ಆತ್ಮಗಳೊಂದಾಗಿ ರೋಗ ಬಾರದಂತೆ ತಡೆಗಟ್ಟಿ ಆರೋಗ್ಯವನ್ನು ಹೊಂದಲು ಆದಿಮ ಹಂತದಿಂದಲೇ ಸಹಕಾರಿಯಾಗುತ್ತದೆ. ಇದೇ ಯೋಗದ ಮುಖ್ಯ ಉದ್ದೇಶ.

ಯೋಗದ ಮೂಲತತ್ತ್ವಗಳನ್ನು ವಿವರಿಸುವ ಮಹರ್ಷಿ ಪತಂಜಲಿಯು 'ಅಷ್ಟಾಂಗ ಯೋಗ' ಎಂಬ ಎಂಟು ಹಂತಗಳ ಮಾರ್ಗವನ್ನು ತಿಳಿಸಿದ್ದಾನೆ. ಇದು ಕೇವಲ ವ್ಯಾಯಾಮವಲ್ಲ, ಬದುಕನ್ನು ಸಮತೋಲನದಿಂದ ನಡೆಸುವ ಸಮಗ್ರ ವಿಧಾನವಾಗಿದೆ.

'ಅಷ್ಟ' ಎಂದರೆ ಎಂಟು, 'ಅಂಗ' ಎಂದರೆ ಭಾಗ. ಅಷ್ಟಾಂಗ ಯೋಗವು ಎಂಟು ಹಂತಗಳನ್ನು ಒಳಗೊಂಡಿದೆ. ಈ ಹಂತಗಳನ್ನು ಕ್ರಮಬದ್ಧವಾಗಿ ಅನುಸರಿಸಿದರೆ ದೇಹ, ಮನಸ್ಸು ಮತ್ತು ಆತ್ಮದ ಸಮತೋಲನ ಸಾಧ್ಯವಾಗುತ್ತದೆ. ಇದರಲ್ಲಿ ಯಮ, ನಿಯಮಗಳು ನಮ್ಮ ವರ್ತನೆಗೆ ಸಂಬಂಧಿಸಿದ್ದು ವೈಯಕ್ತಿಕ ಶುದ್ಧತೆ, ನೈತಿಕಹೊಣೆ ಮತ್ತು ಸಾಮಾಜಿಕ ಸೌಹಾರ್ದತೆಯನ್ನು ಬೆಳೆಸುವಲ್ಲಿ ಸಹಕಾರಿ. ಆದರೆ ಇಂದಿನ ದಿನದಲ್ಲಿ ಯೋಗವೆಂದರೆ ಕೇವಲ ಶಾರೀರಿಕ ತಿರುಚುವಿಕೆಯನ್ನು ಮಾತ್ರ ಪರಿಗಣಿಸುತ್ತಿರುವುದು ಯೋಗದ ಮೂಲತತ್ತ್ವಗಳಿಗೆ ಕುಠಾರಾಘಾತಕರವಾಗಿದೆ.

ವೈಯಕ್ತಿಕ ಶುದ್ಧತೆ, ನೈತಿಕಹೊಣೆ ಮತ್ತು ಸಾಮಾಜಿಕ ಸೌಹಾರ್ದತೆಯಿರದ ಮನುಷ್ಯ ಮಾನಸಿಕವಾಗಿ ಸ್ಥಿರವಾಗಿರಲು ಹೇಗೆ ಸಾಧ್ಯ? ಆದ್ದರಿಂದ ಯೋಗದ ಆರಂಭಿಕ ಹಂತಗಳು ಮುಂದಿನ ಅಂಗಗಳಷ್ಟೇ ಮುಖ್ಯವಾದವು. ಹಿಂದಿನ ತರಗತಿಯನ್ನು ಪಾಸಾಗದೇ ಮುಂದೆ ಹೋಗುವುದು ಎಷ್ಟರ ಮಟ್ಟಿಗೆ ಸಮಂಜಸ? ಆಸನ, ಪ್ರಾಣಾಯಾಮಗಳು ಶಾರೀರಿಕ ಸ್ಥಿರತೆ ಮತ್ತು ಉಸಿರಾಟದ ನಿಯಂತ್ರಣವನ್ನು ತಂದುಕೊಡುತ್ತವೆ. ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಹಲವು ರೀತಿಯ ಅಸನ, ಪ್ರಾಣಾಯಾಮಗಳು ಒತ್ತಡ, ಉದ್ವಿಗ್ನತೆ, ಖಿನ್ನತೆಗಳನ್ನು ನಿಯಂತ್ರಿಸಲು ಸಹಕಾರಿ.

ಮುಂದಿನ ಹಂತಗಳಾದ ಧಾರಣ, ಧ್ಯಾನ, ಸಮಾಧಿಗಳಿಗೆ ಅಂತರಂಗ ಯೋಗವೆಂದು ಕರೆಯುತ್ತಾರೆ. ಇದು ಸೂಕ್ಷ್ಮದಲ್ಲಿ ನಡೆಯುವ ಪ್ರಕ್ರಿಯೆಯಾದರೂ ಸ್ಥೂಲಶರೀರದ ಮೇಲೆ ಅತ್ಯಂತ ಹೆಚ್ಚಿನ ಪರಿಣಾಮ ಬೀರುತ್ತದೆ. ಇದರಲ್ಲಿ ಹೊರಗಿನ ವಿಷಯಗಳಿಂದ ಮನಸ್ಸನ್ನು ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಇದರಿಂದ ಆಂತರಿಕ ಶಾಂತಿ ಮತ್ತು ಸ್ಪಷ್ಟತೆ ದೊರೆಯುತ್ತದೆ. ಆಗ ನಿತ್ಯಾನಿತ್ಯ ವಿವೇಕದಿಂದ, ಸತ್ಯಾಸತ್ಯತೆಗಳನ್ನು ಅರಿತು, ಸಾಮಾಜಿಕವಾಗಿ ಸರಿಯಾಗಿ ನಡೆದುಕೊಳ್ಳುವಂತಹ ಬುದ್ಧಿಯುಂಟಾಗುತ್ತದೆ.

ಯೋಗಾಭ್ಯಾಸವನ್ನು ಸರಿಯಾದ ಮಾರ್ಗದರ್ಶನದಲ್ಲಿ ಆರಂಭಿಸುವುದು ಮುಖ್ಯ. ಆರಂಭದಲ್ಲಿ ಸರಳ ವಿಧಾನಗಳು, ಆಸನಗಳಿಂದ ಶುರುಮಾಡಿ, ನಿಧಾನವಾಗಿ ಕಠಿಣ ಹಂತದ ಆಸನಗಳಿಗೆ ಮುಂದುವರಿಯಬೇಕು. ಅತಿಯಾದ ಒತ್ತಡ ನೀಡದೇ, ದೇಹದ ಸಾಮರ್ಥ್ಯವನ್ನು ಗೌರವಿಸುವುದು ಮುಖ್ಯ.

ಯೋಗವು ದೇಹ, ಮನಸ್ಸು ಮತ್ತು ಆತ್ಮದ ಸಮತೋಲನವನ್ನು ಸಾಧಿಸುವ ಒಂದು ವಿಜ್ಞಾನ. ಇನ್ನೊಂದೆಡೆ ಆಯುರ್ವೇದವು ದೇಹದ ದೋಷಗಳ (ವಾತ, ಪಿತ್ತ, ಕಫ) ಸಮತೋಲನದ ಮೂಲಕ ಆರೋಗ್ಯವನ್ನು ಕಾಪಾಡುವ ಚಿಕಿತ್ಸಾ ವಿಧಾನವಾಗಿದೆ. ಈ ಎರಡೂ ಪರಸ್ಪರ ಪೂರಕವಾಗಿದ್ದು, ಒಟ್ಟಾಗಿ ಅನುಸರಿಸಿದಾಗ ಹೆಚ್ಚಿನ ಫಲಿತಾಂಶ ನೀಡುತ್ತವೆ.

ಆಯುರ್ವೇದದ ಪ್ರಕಾರ, ಆರೋಗ್ಯವು ಸಮದೋಷ (ಶರೀರದ ಕ್ರಿಯಾತ್ಮಕ ಘಟಕಗಳಾದ ವಾತ, ಪಿತ್ತ, ಕಫಗಳು), ಸಮಾಗ್ನಿ (ಜೀರ್ಣಕ್ರಿಯೆ ಮತ್ತು ಚಯಾಪಚಯಕ್ರಿಯೆಗಳು), ಸಮಧಾತು (ಶರೀರದ ರಚನಾತ್ಮಕ ಘಟಕಗಳು) ಮತ್ತು ಸಮಮಲ (ವಿಸರ್ಜಿಸಬೇಕಾದ ಅಂಶಗಳು) – ಇವುಗಳ ಸಮತೋಲನದಿಂದ ಉಂಟಾಗುತ್ತದೆ. ದೋಷಗಳ ಅಸಮತೋಲನವೇ ಅನೇಕ ರೋಗಗಳಿಗೆ ಕಾರಣವಾಗುತ್ತದೆ. ಯೋಗಾಭ್ಯಾಸವು ಈ ದೋಷಗಳನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ. ಉದಾಹರಣೆಗೆ, ವಾತದ ಅತಿಯಾದ ಚಲನೆಯನ್ನು ಯೋಗದ ನಿಧಾನವಾದ ಆಸನಗಳು ಮತ್ತು ಪ್ರಾಣಾಯಾಮಗಳು ನಿಯಂತ್ರಿಸುತ್ತವೆ. ಪಿತ್ತದ ಅತಿಯಾದ ಉಷ್ಣತೆಯನ್ನು ಶೀತಲ ಪ್ರಾಣಾಯಾಮಗಳು ಕಡಿಮೆ ಮಾಡುತ್ತವೆ. ಕಫದ ಜಡತ್ವವನ್ನು ಸಕ್ರಿಯ ಆಸನಗಳು ನಿವಾರಿಸುತ್ತವೆ.

ಒಟ್ಟಿನಲ್ಲಿ ಯೋಗ ಮತ್ತು ಆಯುರ್ವೇದಗಳು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಅತ್ಯಂತ ಸರಳ ಮತ್ತು ಪರಿಣಾಮಕಾರಿ ಆರೋಗ್ಯ ವಿಧಾನಗಳಾಗಿವೆ. ಆರೋಗ್ಯಕರ ದೇಹ ಮತ್ತು ಶಾಂತ ಮನಸ್ಸಿಗಾಗಿ ಇವುಗಳನ್ನು ದಿನಚರಿಯ ಭಾಗವನ್ನಾಗಿಸೋಣ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಅಭ್ಯಾಸ 2.2

1) ಈ ಕೆಳಗಿನ ವರ್ಗ ಬಹುಪದೋಕ್ತಿಗಳ ಶೂನ್ಯತೆಗಳನ್ನು ಕಂಡುಹಿಡಿಯಿರಿ ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ ದ ಸಹಗುಣಕ

(i) $x^2 - 2x - 8$ (ii) $4s^2 - 4s + 1$ (iii) $6x^2 - 3 - 7x$

(iv) $4u^2 + 8u$ (v) $t^2 - 15$ (vi) $3x^2 - x - 4$

ಪರಿಹಾರ:–(1) $x^2 - 4x + 2x - 8 = x(x-4) + 2(x-4)$
$= (x-4)(x+2)$

$P(x) = 0$
$(x-4)(x+2) = 0$
$(x-4) = 0 \Rightarrow x = 4$
$(x+2) = 0 \Rightarrow x = -2$

$x^2 - 4x + 2x - 8$ ರ ಶೂನ್ಯತೆಗಳು 4 ಮತ್ತು −2

ಶೂನ್ಯತೆಗಳ ಮೊತ್ತ $= 4 + (-2) = \frac{-(-2)}{+1}$

$= \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= 4\ (-2) = \frac{-8}{+1}$

$= \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

(ii) $4s^2 - 4s + 1$
$\Rightarrow 4s^2 - 2s - 2s + 1 = 2s(2s-1) - 1(2s-1) = (2s-1)(2s-1)$
ಆದ್ದರಿಂದ,
$4s^2 - 4s + 1$ ರ ಶೂನ್ಯತೆಗಳು $(1/2,\ 1/2)$
ಆದ್ದರಿಂದ ಶೂನ್ಯತೆಗಳ ಮೊತ್ತ $= (½) + (1/2) = 1 = -(-4)/4$
$= -(s$ ದ ಸಹಗುಣಕ$)/ s^2$ ದ ಸಹಗುಣಕ
ಶೂನ್ಯತೆಗಳ ಗುಣಲಬ್ಧ $= (1/2) \times (1/2) = 1/4$
$=$ (ಸ್ಥಿರಾಂಕ/ s^2 ದ ಸಹಗುಣಕ)

(iii) $6x^2 - 3 - 7x$
$\Rightarrow 6x^2 - 7x - 3 = 6x^2 - 9x + 2x - 3$
$= 3x(2x-3) + 1(2x-3)$
$= (3x+1)(2x-3)$
ಆದ್ದರಿಂದ,
$6x^2 - 3 - 7x$ ರ ಶೂನ್ಯತೆಗಳು $(-1/3,\ 3/2)$
ಆದ್ದರಿಂದ ಶೂನ್ಯತೆಗಳ ಮೊತ್ತ $= -(1/3) + (3/2) = (7/6)$
$= \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$
ಶೂನ್ಯತೆಗಳ ಗುಣಲಬ್ಧ $= -(1/3) \times (3/2) = -(3/6)$
$= \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

(iv) $4u^2 + 8u$ $\Rightarrow 4u(u+2)$
ಆದ್ದರಿಂದ, $4u^2 + 8u$ ರ ಶೂನ್ಯತೆಗಳು $(0, -2)$.
ಆದ್ದರಿಂದ ಶೂನ್ಯತೆಗಳ ಮೊತ್ತ $= 0 + (-2) = -2 = -(8/4)$
$= -(u$ ದ ಸಹಗುಣಕ$)/ u^2$ ದ ಸಹಗುಣಕ
ಶೂನ್ಯತೆಗಳ ಗುಣಲಬ್ಧ $= 0 \times -2 = 0 = 0/4$
$=$ (ಸ್ಥಿರಾಂಕ/ u^2 ದ ಸಹಗುಣಕ)

(v) $t^2 - 15$ $\Rightarrow t^2 = 15$ or $t = \pm\sqrt{15}$
ಆದ್ದರಿಂದ,
$t^2 - 15$ ರ ಶೂನ್ಯತೆಗಳು $(\sqrt{15}, -\sqrt{15})$
ಆದ್ದರಿಂದ ಶೂನ್ಯತೆಗಳ ಮೊತ್ತ $= \sqrt{15} + (-\sqrt{15}) = 0 = -(0)/1$
$= -(t$ ದ ಸಹಗುಣಕ$)/ t^2$ ದ ಸಹಗುಣಕ$)$
ಶೂನ್ಯತೆಗಳ ಗುಣಲಬ್ಧ $= \sqrt{15} \times (-\sqrt{15}) = -15 = -15/1$
$=$ (ಸ್ಥಿರಾಂಕ/ t^2 ದ ಸಹಗುಣಕ)

(vi) $3x^2 - x - 4$
$\Rightarrow 3x^2 - 4x + 3x - 4 = x(3x-4) + 1(3x-4) = (3x-4)(x+1)$
ಆದ್ದರಿಂದ, $3x^2 - x - 4$ ರ ಶೂನ್ಯತೆಗಳು $(4/3, -1)$
ಆದ್ದರಿಂದ ಶೂನ್ಯತೆಗಳ ಮೊತ್ತ $= (4/3) + (-1) = (1/3) = -(-1/3)$
$= \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$
ಶೂನ್ಯತೆಗಳ ಗುಣಲಬ್ಧ $= (4/3) \times (-1) = (-4/3)$
$= \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

2. ಈ ಕೆಳಗಿನವುಗಳನ್ನು ಕ್ರಮವಾಗಿ ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧವನ್ನಾಗಿ ಹೊಂದಿರುವ ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

(i) $\frac{1}{4}, -1$ (ii) $\sqrt{2}, \frac{1}{3}$ (iii) $0, \sqrt{5}$

(iv) $1, 1$ (v) $-\frac{1}{4}, \frac{1}{4}$ (vi) $4, 1$

i) 1/4 , -1
ಪರಿಹಾರ:– ಶೂನ್ಯತೆಗಳ ಮೊತ್ತ $= \alpha + \beta$
ಶೂನ್ಯತೆಗಳ ಗುಣಲಬ್ದ $= \alpha\beta$
∴ ಶೂನ್ಯತೆಗಳ ಮೊತ್ತ $= \alpha + \beta = 1/4$
ಶೂನ್ಯತೆಗಳ ಗುಣಲಬ್ದ $= \alpha\beta = -1$
∴ α ಮತ್ತು βಗಳು $P(x)$ ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ $P(x)$ಅನ್ನು ಹೀಗೆ ಬರೆಯಬಹುದು
$x^2 - (\alpha+\beta)x + \alpha\beta = 0$
$x^2 - (1/4)x + (-1) = 0$
$4x^2 - x - 4 = 0$
ಹೀಗಾಗಿ $4x^2 - x - 4$ ಇದು ವರ್ಗ ಬಹುಪದೋಕ್ತಿಯಾಗಿದೆ.

(ii) $\sqrt{2}$, 1/3
ಪರಿಹಾರ:– ಶೂನ್ಯತೆಗಳ ಮೊತ್ತ $= = \alpha + \beta = \sqrt{2}$
ಶೂನ್ಯತೆಗಳ ಗುಣಲಬ್ದ $= = \alpha\beta = 1/3$
∴ α ಮತ್ತು βಗಳು $P(x)$ ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ $P(x)$ಅನ್ನು ಹೀಗೆ ಬರೆಯಬಹುದು
$x^2 - (\alpha+\beta)x + \alpha\beta = 0$
$x^2 - (\sqrt{2})x + (1/3) = 0$
$3x^2 - 3\sqrt{2}x + 1 = 0$
ಹೀಗಾಗಿ $3x^2 - 3\sqrt{2}x + 1$ ಇದು ವರ್ಗ ಬಹುಪದೋಕ್ತಿಯಾಗಿದೆ.

(iii) 0, $\sqrt{5}$
ಪರಿಹಾರ:– ಶೂನ್ಯತೆಗಳ ಮೊತ್ತ $= = \alpha + \beta = 0$
ಶೂನ್ಯತೆಗಳ ಗುಣಲಬ್ದ $= = \alpha\beta = \sqrt{5}$
∴ α ಮತ್ತು βಗಳು $P(x)$ ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ $P(x)$ಅನ್ನು ಹೀಗೆ ಬರೆಯಬಹುದು
$x^2 - (\alpha+\beta)x + \alpha\beta = 0$
$x^2 - (0)x + \sqrt{5} = 0$
ಹೀಗಾಗಿ, $x^2 + \sqrt{5}$ ಇದು ವರ್ಗ ಬಹುಪದೋಕ್ತಿಯಾಗಿದೆ.

(iv) 1, 1
ಪರಿಹಾರ:– ಶೂನ್ಯತೆಗಳ ಮೊತ್ತ $= = \alpha + \beta = 1$
ಶೂನ್ಯತೆಗಳ ಗುಣಲಬ್ದ $= = \alpha\beta = 1$ (ಮುಂದುವರಿಯುವುದು)

PHYSICS

Chapter – 1

ELECTRIC CHARGES AND FIELDS

6. A point positive charge is brought near an isolated conducting sphere as in the figures given below. The electric field is best given by

(...Contd)



a) Fig (i) b) Fig (ii)
c) Fig (iii) d) Fig (iv)

Ans:- (a),

7 **The electric flux through the surface**



a) in fig. (iv) is the largest.
b) in fig. (iii) is the least.
c) in fig. (ii) is same as fig. (iii) but is smaller than fig. (iv)
d) is the same for all the figures.

Ans:- (d),

8. A point charge +q, is placed at a distance d from an isolated conducting plane. The field at a point p on the other side of the plane is

a) directed perpendicular to the plane and away from the plane.
b) directed perpendicular to the plane but towards the plane.
c) directed radially away from the point charge.
d) directed radially towards the point charge.

Ans:- (a)

9. The fig given shows electric field lines in which an electric dipole p is placed. Which of the following statements is correct?



a) The dipole will not experience force.
b) The dipole will experience a force towards right.
c) The dipole will experience a force towards left.
d) The dipole will experience a force upwards.

Ans:- C

10. A hemisphere is uniformly charged positively. The electric field at a point on a diameter away from the centre is directed -

a) perpendicular to the diameter
b) parallel to the diameter
c) at an angle tilted towards the diameter
d) at an angle tilted away from the diameter.

Ans:- a

Problems

1. A liquid drop having 6 excess electrons is kept stationary under a uniform electric field of 25.5 kVm^{-1}. The density of liquid is 1.26 x 10^3 kgm^{-3}. Find the radius of the drop.

Soln:- (a) When liquid drop is held stationary, net force acting on it is zero.

Forces acting on the drop –
(i) Weight of the drop vertically downward and
(ii) Force due to the electric field (F = qE) vertically upward.

Weight of drop, W = mg

But $m = \left(\frac{4}{3}\pi r^3\right)\rho$,

where $\left(\frac{4}{3}\pi r^3\right)$ is the volume,

ρ is the density of the liquid and r is the radius of drop

$\therefore\ W = \left(\frac{4}{3}\pi r^3\right)\rho g$

And electric force, $F = qE = 6e \times E$

(b) Since the drop is stationary, so
$W - F = 0$ (or) $W = F$

(or) $\left(\frac{4}{3}\pi r^3\right)\rho g = 6eE$

(or) $r^3 = \frac{3 \times 6eE}{4\pi\rho g}$

Here, $e = 1.6 \times 10^{-19}$ C
$E = 25.5 \times 10^3\ Vm^{-1}$
$\rho = 1.26 \times 10^3\ kg\ m^{-3}$
$g = 9.8\ ms^{-2}$

$\therefore\ r^3 = \frac{3 \times 6 \times 1.6 \times 10^{-19} \times 25.5 \times 10^3}{4 \times 3.142 \times 1.26 \times 10^3 \times 1.26 \times 10^3}$
$= 0.0789 \times 10^{-18}$

$\therefore$ Radius of drop, $r = (0.0789 \times 10^{-18})^{1/3}$
$= 4.3 \times 10^{-7}$ m

ಮೇ 28ರಿಂದ ನಾಮನಿರ್ದೇಶನಗಳು ಪ್ರಕಟ

ಮನಸ್ವಿ, ಧನುಷ್

ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡ 'ಟಗರುಪಲ್ಯ' ಉಮೇಶ್

ನಾಗಭೂಷಣ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ 'ಟಗರುಪಲ್ಯ' ಸಿನಿಮಾದ ನಿರ್ದೇಶಕ ಉಮೇಶ್ ಕೆ.ಕೃಪ ನಿರ್ದೇಶನದ ಎರಡನೇ ಚಿತ್ರ ಇತ್ತೀಚೆಗೆ ಸೆಟ್ಟೇರಿದೆ.

ಆಕಾಂಕ್ಷ ಪ್ರೊಡಕ್ಷನ್ ಲಾಂಛನದಲ್ಲಿ ನಾಗೇಶ್ ವಾಸ್ಕರ್ ಅವರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಚಿತ್ರಕ್ಕೆ ಸದ್ಯ 'ಪ್ರೊಡಕ್ಷನ್ ನಂ 2' ಎಂಬ ಶೀರ್ಷಿಕೆ ಇಡಲಾಗಿದೆ.

'ಇದು ನನ್ನ ನಿರ್ದೇಶನದ ಎರಡನೇ ಸಿನಿಮಾ' ಎಂದು ಮಾತು ಆರಂಭಿಸಿದ ಉಮೇಶ್, 'ಟಗರುಪಲ್ಯ ಚಿತ್ರಕ್ಕೆ ಸಿಕ್ಕ ಪ್ರೀತಿ, ಪ್ರೋತ್ಸಾಹಕ್ಕೆ ಧನ್ಯವಾದ. ಈ ಹೊಸ ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ, ಪಳನಿ ಡಿ ಸೇನಾಪತಿ ಸಂಗೀತ ನಿರ್ದೇಶನ, ಮಧು ತುಂಬಕೆರೆ ಸಂಕಲನ, ಅರ್ಜುನ್ ರಾಜ್ ಸಾಹಸ ನಿರ್ದೇಶನ ಹಾಗೂ ಎ.ಸತೀಶ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿರಲಿದೆ' ಎಂದರು.

'ಈ ಚಿತ್ರಕ್ಕೆ ಕಥೆಯೇ ನಾಯಕ. ನನ್ನ ಹಿಂದಿನ ಚಿತ್ರದಂತೆ ಈ ಚಿತ್ರದಲ್ಲೂ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇರಲಿದೆ. 'ಪುಟ್ಟಕ್ಕನ ಮಕ್ಕಳು' ಧಾರಾವಾಹಿಯ 'ಕಂಠಿ' ಪಾತ್ರದ ಮೂಲಕ ಪರಿಚಿತರಾಗಿರುವ ಧನುಷ್ ಹಾಗೂ ಕೆಲವು ಧಾರಾವಾಹಿ ಹಾಗೂ ಚಲನಚಿತ್ರಗಳಲ್ಲಿ ನಟಿಸಿರುವ ಮನಸ್ವಿ ಈ ಸಿನಿಮಾದ ಮುಖ್ಯಭೂಮಿಕೆಯಲ್ಲಿದ್ದಾರೆ. ಉಳಿದ ಕಲಾವಿದರ ಆಯ್ಕೆ ನಡೆಯುತ್ತಿದೆ.

'ಇದೊಂದು ನಾಡಿನ ಕಥೆ. ಪ್ರೀತಿ, ಹಾಸ್ಯ, ಭಾವನಾತ್ಮಕ ದೃಶ್ಯಗಳು ಹೀಗೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳಿರುವ ಮನರಂಜನೆಯೇ ಪ್ರಧಾನವಾದ ಕೌಟುಂಬಿಕ ಚಿತ್ರವಿದು. ಈ ಚಿತ್ರದಲ್ಲಿ ಮಳೆ ಮುಖ್ಯ ಪಾತ್ರವಹಿಸುತ್ತದೆ. ಹೀಗಾಗಿ ಚಿತ್ರೀಕರಣಕ್ಕೆ ಮಳೆಗಾಲಕ್ಕಾಗಿ ಕಾಯುತ್ತಿದ್ದೆವು. ಮುಂದಿನ ವಾರದಿಂದ ಚಿತ್ರೀಕರಣ ಆರಂಭವಾಗಲಿದೆ. ತೀರ್ಥಹಳ್ಳಿ, ಆಗುಂಬೆ, ಕಾರ್ಕಳ, ಚಿಕ್ಕಮಗಳೂರು ಮುಂತಾದ ಕಡೆ ಮೊದಲ ಹಂತದ ಚಿತ್ರೀಕರಣ ನಡೆಯಲಿದೆ' ಎಂದರು ಉಮೇಶ್.

ಜೂನ್ 19ಕ್ಕೆ ಸಿನಿ ಸಮ್ಮಾನ

ಚಂದನವನದ ಪ್ರತಿಭೆಗಳನ್ನು ಗುರುತಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ಸಮಾರಂಭವು ಜೂನ್ 19ರಂದು ನಡೆಯಲಿದೆ. ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡವರ ಹೆಸರುಗಳು ಹಾಗೂ ಸಿನಿಮಾಗಳ ವಿವರಗಳು ಮೇ 28ರಿಂದ ಪ್ರಕಟವಾಗಲಿದೆ.

ಒಟ್ಟು 27 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ. ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕೂ ಅಧಿಕ ಸಿನಿಮಾಗಳು ಈ ವರ್ಷದ ಪ್ರಶಸ್ತಿ ಸ್ಪರ್ಧೆಯಲ್ಲಿವೆ. 'ಸಿನಿ ಸಮ್ಮಾನ'ದ 21 ತಾಂತ್ರಿಕ ತೀರ್ಪುಗಾರರು ಈ ಸಿನಿಮಾಗಳನ್ನು ವೀಕ್ಷಿಸಿ ನಾಮನಿರ್ದೇಶನಗಳನ್ನು ಸಿದ್ಧಪಡಿಸಿದ್ದಾರೆ. ಈ ಪಟ್ಟಿಯು ಇದೀಗ 'ಸಿನಿ ಸಮ್ಮಾನ'ದ ಮುಖ್ಯತೀರ್ಪುಗಾರರ ಕೈಸೇರಿದ್ದು, ಶೀಘ್ರದಲ್ಲೇ ಅಂತಿಮ ಮುದ್ರೆ ಬೀಳಲಿದೆ. ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ.

ನವ ನಿರ್ದೇಶಕರಿಗೆ ಪ್ರಶಸ್ತಿಯ ಪ್ರೋತ್ಸಾಹ

ತಮ್ಮ ಚೊಚ್ಚಲ ಸಿನಿಮಾದಲ್ಲೇ ಭಿನ್ನವಾದ ಕಥೆ, ನಿರೂಪಣೆ ಮೂಲಕ ಪ್ರೇಕ್ಷಕರನ್ನು ತಲುಪಿದ ನಿರ್ದೇಶಕರನ್ನು ಗುರುತಿಸುವುದೂ 'ಪ್ರಜಾವಾಣಿ ಸಿನಿ ಸಮ್ಮಾನ'ದ ಉದ್ದೇಶಗಳಲ್ಲಿ ಒಂದು. 2023ರಲ್ಲಿ ನಡೆದ ಮೊದಲ ಆವೃತ್ತಿಯಲ್ಲಿ '777 ಚಾರ್ಲಿ' ಸಿನಿಮಾಗಾಗಿ ನಿರ್ದೇಶಕ ಕಿರಣ್‌ರಾಜ್, 2024ರ ಎರಡನೇ ಆವೃತ್ತಿಯಲ್ಲಿ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾಗಾಗಿ ನಿತಿನ್ ಕೃಷ್ಣಮೂರ್ತಿ ಹಾಗೂ 2025ರ ಮೂರನೇ ಆವೃತ್ತಿಯಲ್ಲಿ 'ಬ್ಲಿಂಕ್' ಸಿನಿಮಾಗಾಗಿ ಶ್ರೀನಿಧಿ ಬೆಂಗಳೂರು ಈ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದರು. ನಾಲ್ಕನೇ ಆವೃತ್ತಿಯಲ್ಲೂ ಈ ಪ್ರಶಸ್ತಿಗೆ ಹತ್ತಾರು ನಿರ್ದೇಶಕರ ನಡುವೆ ಪೈಪೋಟಿಯಾಗುವುದು ಖಚಿತವಾಗಿದೆ.

ಕಿರಣ್‌ರಾಜ್ | ನಿತಿನ್ ಕೃಷ್ಣಮೂರ್ತಿ | ಶ್ರೀನಿಧಿ ಬೆಂಗಳೂರು

ದೇವಿ ಮಹಾತ್ಮೆ ಆಡಿಯೊ ಹಕ್ಕು ಪಡೆದ ಹೊಂಬಾಳೆ ಮ್ಯೂಸಿಕ್

ನಾಗರಾಜ್ ಸೋಮಯಾಜಿ ನಿರ್ದೇಶನದ 'ದೇವಿ ಮಹಾತ್ಮೆ' ಸಿನಿಮಾದ ಆಡಿಯೊ ಹಕ್ಕುಗಳನ್ನು ಹೊಂಬಾಳೆ ಮ್ಯೂಸಿಕ್ ಖರೀದಿಸಿದೆ.

'ಕೆ.ಜಿ.ಎಫ್' ಸರಣಿ, 'ಕಾಂತಾರ' ಮುಂತಾದ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಹೊಂಬಾಳೆ ಫಿಲ್ಮ್ಸ್ ಕೆಲ ವರ್ಷಗಳ ಹಿಂದೆ ಸಿನಿಮಾ ವಿತರಣೆಗೆ ಇಳಿದಿತ್ತು. ಇದೀಗ ಹೊಂಬಾಳೆ ಮ್ಯೂಸಿಕ್ ಮುಖಾಂತರ ಇತರರ ಸಿನಿಮಾಗಳ ಆಡಿಯೊಗಳನ್ನು ಖರೀದಿಸಲು ಹೊಂಬಾಳೆ ಆರಂಭಿಸಿದೆ. 'ದೇವಿ ಮಹಾತ್ಮೆ' ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ. 'ಮಯೂರದ ಪ್ರಶ್ನೆ' ಸಿನಿಮಾ ಬಳಿಕ ನಾಗರಾಜ್ ಅವರ ಸಾರಥ್ಯದಲ್ಲಿ ಮೂಡಿಬರುತ್ತಿರುವ ಸಿನಿಮಾ ಇದಾಗಿದೆ. ಕಾಮಿಡಿ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ನಾಗರಾಜ್ ಸೋಮಯಾಜಿ ಅವರೇ ಚಿತ್ರಕಥೆ ಬರೆದಿದ್ದಾರೆ. ಇದಕ್ಕೆ ಅರವಿಂದ್ ಕುಪ್ಳೀಕರ್, ಭಾಸ್ಕರ್ ಬಂಗೇರ, ಗುರು ಅರ್ಯಾ ಹಾಗೂ ವಾದಿರಾಜ ಶೆಟ್ಟಿ ಜೊತೆಯಾಗಿದ್ದಾರೆ.

ಯುನಿವ ಸ್ಟುಡಿಯೊ ಬ್ಯಾನರ್‌ನಡಿ ವಿದ್ಯಾ ಗಾಂಧಿರಾಜನ್ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ ಹಾಗೂ ಲಿಖಿತ್ ಪ್ರಸಾದ್ ಕೆ.ಶೆಟ್ಟಿ ಸಂಗೀತ ನಿರ್ದೇಶನ, ಉಜ್ವಲ್ ಚಂದ್ರ ಸಂಕಲನ 'ದೇವಿ ಮಹಾತ್ಮೆ' ಚಿತ್ರಕ್ಕಿದೆ.

ಹೊಂಬಾಳೆಯ ಚಲುವೇಗೌಡ ಅವರೊಂದಿಗೆ ಚಿತ್ರತಂಡ

'ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ದೋಷ'

ಹಸ್ತಾಕ್ಷರ ಹೊಂದಿಕೆ ಆಗುತ್ತಿಲ್ಲ: ವಿದ್ಯಾರ್ಥಿಗಳ ಆರೋಪ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು ಅಪ್‌ಲೋಡ್ ಮಾಡಿರುವ ಸ್ಕ್ಯಾನ್ ಮಾಡಿರುವ ಉತ್ತರ ಪತ್ರಿಕೆಗಳು ತಮ್ಮ ಹಸ್ತಾಕ್ಷರದೊಂದಿಗೆ ಹೊಂದಿಕೆಯಾಗುತ್ತಿಲ್ಲ ಎಂದು 12ನೇ ತರಗತಿಯ ಹಲವು ವಿದ್ಯಾರ್ಥಿಗಳು ಆರೋಪ ಮಾಡಿದ್ದಾರೆ.

ಸಿಬಿಎಸ್‌ಇ ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ದೋಷ ಕಂಡುಬಂದಿರುವ ಮಧ್ಯೆಯೇ ಮತ್ತೊಂದು ಆರೋಪ ಕೇಳಿಬಂದಿದೆ. ಇದಕ್ಕೆ ಸಂಬಂಧಿಸಿದಂತೆ ಸಿಬಿಎಸ್‌ಇ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ದೆಹಲಿಯ ವಿದ್ಯಾರ್ಥಿ ವೇದಾಂತ್ ಎಂಬುವವರು, 'ಮರು ಮೌಲ್ಯಮಾಪನ ಪ್ರಕ್ರಿಯೆಯ ಭಾಗವಾಗಿ ಅಪ್‌ಲೋಡ್ ಮಾಡಲಾಗಿರುವ ಉತ್ತರ ಪತ್ರಿಕೆಯು ನನ್ನದಲ್ಲ. ಅದರಲ್ಲಿನ ಹಸ್ತಾಕ್ಷರಕ್ಕೂ ನನ್ನ ಹಸ್ತಾಕ್ಷರಕ್ಕೂ ಹೊಂದಿಕೆಯಾಗುತ್ತಿಲ್ಲ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

'ಅನಿರೀಕ್ಷಿತವಾಗಿ ಕಡಿಮೆ ಅಂಕ ಬಂದಿದ್ದ ಕಾರಣ ಉತ್ತರ ಪತ್ರಿಕೆ ಪ್ರತಿಗಾಗಿ ಅರ್ಜಿ ಸಲ್ಲಿಸಿದ್ದೆ. ಸೋಮವಾರ ಉತ್ತರ ಪತ್ರಿಕೆ ಪ್ರತಿಯನ್ನು ಪ್ರಕಟಿಸಲಾಗಿದೆ' ಎಂದು ವಿದ್ಯಾರ್ಥಿ ಬರೆದುಕೊಂಡಿದ್ದಾರೆ.

ವಿದ್ಯಾರ್ಥಿನಿ ಸಂಜನಾ ಅವರೂ, 'ರಸಾಯನ ವಿಜ್ಞಾನದ ಉತ್ತರ ಪತ್ರಿಕೆ ಪ್ರತಿಯಲ್ಲಿನ ಹಸ್ತಾಕ್ಷರ ನನ್ನ ಹಸ್ತಾಕ್ಷರದೊಂದಿಗೆ ತಾಳೆಯಾಗುತ್ತಿಲ್ಲ. 70 ಅಂಕಗಳಿಗೆ 11 ಅಂಕ ಪಡೆದಿರುವುದನ್ನು ಕಂಡು ಆಘಾತಗೊಂಡೆ' ಎಂದು ಹೇಳಿದ್ದಾರೆ. 'ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ನನ್ನ ವೈಯಕ್ತಿಕ ಮಾಹಿತಿ ಇದೆ. ಆದರೆ ನಂತರ ಪುಟದಲ್ಲಿನ ಹಸ್ತಾಕ್ಷರ ಹೊಂದಿಕೆಯಾಗುತ್ತಿಲ್ಲ' ಎಂದು ದೂರಿದ್ದಾರೆ. ಮತ್ತಷ್ಟು ವಿದ್ಯಾರ್ಥಿಗಳು ಇಂಥದ್ದೇ ಆರೋಪ ಮಾಡಿದ್ದಾರೆ.

ಹಣಕ್ಕಾಗಿ ಪ್ರಶ್ನೆಗಳನ್ನು ಮಾರಿದ್ದ ಪ್ರಾಂಶುಪಾಲೆ

ಪುಣೆ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ನೀಟ್- ಯುಜಿ 2026 ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿತರಾಗಿರುವ ಪುಣೆಯ ಶಾಲೆಯೊಂದರ ಪ್ರಾಂಶುಪಾಲರು, ಹಣ ಪಡೆದು ಪ್ರಶ್ನೆಗಳನ್ನು ವಿದ್ಯಾರ್ಥಿಗಳ ಜೊತೆ ಹಂಚಿಕೊಂಡಿರುವುದಾಗಿ ತಿಳಿಸಿದ್ದಾರೆ ಎಂದು ಕೇಂದ್ರಿಯ ತನಿಖಾ ಸಂಸ್ಥೆ (ಸಿಬಿಐ) ನ್ಯಾಯಾಲಯಕ್ಕೆ ತಿಳಿಸಿದೆ.

ಪ್ರಕರಣದಲ್ಲಿ ಬಂಧಿತರಾಗಿರುವ ಪ್ರಾಂಶುಪಾಲೆ ಮನೀಷಾ ಸಂಜಯ್ ಹವಾಲ್ದಾರ್ ಅವರನ್ನು ಹೆಚ್ಚಿನ ವಿಚಾರಣೆಗೆ ತಮ್ಮ ವಶಕ್ಕೆ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದ ವೇಳೆ ಸಿಬಿಐ ಈ ವಿಷಯ ತಿಳಿಸಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಕಳೆದ ಶುಕ್ರವಾರ ಮನೀಷಾ ಅವರನ್ನು ಸಿಬಿಐ ಬಂಧಿಸಿತ್ತು. ಭೌತಶಾಸ್ತ್ರ ವಿಷಯದ ಪ್ರಶ್ನೆಗಳನ್ನು ನೀಡುವುದಕ್ಕಾಗಿಯೇ ಪ್ರತಿ ವಿದ್ಯಾರ್ಥಿಯಿಂದ ₹20 ಸಾವಿರದಿಂದ ₹25 ಸಾವಿರ ಹಣ ಪಡೆದಿದ್ದರು. ಹಣದ ವ್ಯವಹಾರದ ಕುರಿತು ವಾಟ್ಸ್‌ಆ್ಯಪ್‌ನಲ್ಲಿ ಮಾಹಿತಿ ವಿನಿಮಯ ಮಾಡಿಕೊಂಡಿದ್ದು, ಪ್ರಕರಣ ಬೆಳಕಿಗೆ ಬಂದ ನಂತರ ಅವುಗಳ ಮಾಹಿತಿಗಳನ್ನು ಅಳಿಸಿಹಾಕಿದ್ದರು. ಆ ಮಾಹಿತಿ ಪಡೆಯಲು ಅಧಿಕಾರಿಗಳು ಪ್ರಯತ್ನ ಮುಂದುವರಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ, ಜೈಪುರ, ಗುರುಗ್ರಾಮ, ನಾಸಿಕ್, ಪುಣೆ. ಲಾತೂರ್, ಅಹಿಲ್ಯಾನಗರ ಸೇರಿದಂತೆ ದೇಶದ ವಿವಿಧೆಡೆ 11 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ.

ಮಂತ್ರಿ ಪ್ರಧಾನ್ ರಾಜೀನಾಮೆ ನೀಡಲಿ, ಪ್ರಧಾನ ಮಂತ್ರಿ ಉತ್ತರಿಸಲಿ: ಕಾಂಗ್ರೆಸ್

ನವದೆಹಲಿ (ಪಿಟಿಐ): 'ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕು' ಎಂದು ಕಾಂಗ್ರೆಸ್ ಸೋಮವಾರ ಆಗ್ರಹಿಸಿದೆ.

'ಶಿಕ್ಷಣ ಸಚಿವಾಲಯದಿಂದ ಹಲವು ಪ್ರಮಾದಗಳಾಗಿದ್ದರೂ ಪ್ರಧಾನ್ ಅವರನ್ನೇ ಮುಂದುವರಿಸುತ್ತಿರುವುದರ ಕುರಿತಂತೆ ಪ್ರಧಾನಿಯು ಜನರಿಗೆ ಉತ್ತರ ಕೊಡಬೇಕು' ಎಂದು ಒತ್ತಾಯಿಸಿದೆ.

ಸಿಬಿಎಸ್‌ಇಯ 12ನೇ ತರಗತಿ ಫಲಿತಾಂಶ ಪ್ರಕಟಗೊಂಡ ಬಳಿಕ ಮರು ಮೌಲ್ಯಮಾಪನ ಮತ್ತು ಅಂಕಗಳ ಪರಿಶೀಲನೆ ಪೋರ್ಟಲ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿರುವುದಕ್ಕೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದೆ.

ತಾಂತ್ರಿಕ ದೋಷ ಪರಿಹಾರಕ್ಕಾಗಿ ಸಿಬಿಎಸ್‌ಇಯು ಐಐಟಿ- ಮದ್ರಾಸ್ ಹಾಗೂ ಐಐಟಿ ಕಾನ್ಪುರದ ತಜ್ಞರನ್ನು ನೇಮಿಸಿಕೊಂಡ ಬೆನ್ನಿಗೆ ಕಿಡಿಕಾರಿದೆ.

ಸಿಬಿಎಸ್‌ಇಯು 12ನೇ ತರಗತಿ ಪರೀಕ್ಷೆಗಳಿಗೆ ಆನ್ ಸ್ಕ್ರೀನ್ ಮಾರ್ಕಿಂಗ್ (ಒಎಸ್‌ಎಂ, ಡಿಜಿಟಲ್ ಮೌಲ್ಯಮಾಪನ) ವ್ಯವಸ್ಥೆ ಪರಿಚಯಿಸಿದ್ದು, ಇದು ದೇಶದಾದ್ಯಂತ ಲಕ್ಷಾಂತರ ಮಕ್ಕಳ ಶೈಕ್ಷಣಿಕ ಭವಿಷ್ಯವನ್ನು ಅಸ್ತವ್ಯಸ್ತಗೊಳಿಸಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನೂತನ ಡಿಜಿಟಲ್ ಪದ್ಧತಿಯಿಂದ 12ನೇ ತರಗತಿಯ ಒಟ್ಟಾರೆ ಉತ್ತೀರ್ಣ ಪ್ರಮಾಣವು ಹಿಂದೆಂದೂ ಇಲ್ಲದ ರೀತಿಯಲ್ಲಿ ಶೇ 88ರಿಂದ ಶೇ 85ಕ್ಕೆ (ಶೇ 3ರಷ್ಟು) ಕುಸಿದಿದೆ. ವಿದ್ಯಾರ್ಥಿಗಳಿಗೆ ದೊರೆತಿರುವ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಗಳು ಅಸ್ಪಷ್ಟವಾಗಿವೆ. ಅಂಕಗಳ ಎಣಿಕೆಯಲ್ಲೂ ತಪ್ಪಾಗಿದೆ. ಒಬ್ಬರ ಉತ್ತರ ಪತ್ರಿಕೆಯನ್ನು ಮತ್ತೊಬ್ಬರ ಹೆಸರಿಗೆ ಲಿಂಕ್ ಮಾಡಲಾಗಿದೆ. ಮರುಮೌಲ್ಯಮಾಪನಕ್ಕೆ ದುಬಾರಿ ಶುಲ್ಕ ವಿಧಿಸಲಾಗಿದೆ' ಎಂದು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

ಸಿಯುಇಟಿ–ಯುಜಿ ಪರೀಕ್ಷೆ ಮುಂದೂಡಿಕೆ

ನವದೆಹಲಿ (ಪಿಟಿಐ): ಬಕ್ರೀದ್ ಹಬ್ಬದ ರಜಾ ದಿನ ಬದಲಾಗಿರುವ ಕಾರಣ, ಮೇ 28ರಂದು ನಡೆಯಬೇಕಿದ್ದ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಯುಇಟಿ–ಯುಜಿ) 2026 ಅನ್ನು ಮುಂದೂಡಲಾಗಿದೆ.

ಈ ಬಗ್ಗೆ ಪ್ರಕಟಣೆ ನೀಡಿರುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ), 'ಪರಿಷ್ಕೃತ ದಿನಾಂಕವನ್ನು ಘೋಷಿಸಲಾಗುವುದು' ಎಂದು ತಿಳಿಸಿದೆ. 'ಬಕ್ರೀದ್ ಹಬ್ಬದ ಪ್ರಯುಕ್ತ ನೀಡಲಾಗುವ ರಜಾ ದಿನವನ್ನು ಪರಿಷ್ಕರಿಸಿ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಅಧಿಸೂಚನೆ ಹೊರಡಿಸಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದಿದೆ.

ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ ಗಮನಿಸಬೇಕು, ಮಾಹಿತಿ ಬೇಕಾದಲ್ಲಿ ಸಹಾಯವಾಣಿಯನ್ನು ಸಂಪರ್ಕಿಸುವಂತೆ ಎನ್‌ಟಿಎ ಸಲಹೆ ನೀಡಿದೆ.

ಸಿಜೆಪಿ: ತುರ್ತು ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಜೊತೆ ನಕಲಿ ವಕೀಲರು ಮತ್ತು ಕಾರ್ಯಕರ್ತರು ನಂಟು ಹೊಂದಿದ್ದಾರೆ ಎಂಬ ಆರೋಪಗಳ ಬಗ್ಗೆ ತನಿಖೆಗೆ ಆದೇಶಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

'ಈ ವಿಚಾರವನ್ನು ಭಾವನಾತ್ಮಕವಾಗಿ ಪರಿಗಣಿಸಬೇಡಿ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ವಕೀಲರಾದ ಎನ್.ಕೆ. ಗೋಸ್ವಾಮಿ ಅವರಿಗೆ ಸೂಚಿಸಿದೆ.

ನಕಲಿ ಕಾನೂನು ಪದವಿ ವಿಚಾರವಾಗಿ ಸಿಬಿಐ ತನಿಖೆ ನಡೆಸಬೇಕೆಂದು ಒತ್ತಾಯಿಸಿದ ಮತ್ತೊಬ್ಬ ವಕೀಲರು, 'ನ್ಯಾಯಾಲಯದ ವಿಚಾರಗಳು ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗಬಾರದು' ಎಂದು ಹೇಳಿದರು.

'ಮುಖ್ಯ ನ್ಯಾಯಮೂರ್ತಿಯವರ ಸ್ಪಷ್ಟನೆಯ ಹೊರತಾಗಿಯೂ, ವಿಕೃತ ಮತ್ತು ದುರುದ್ದೇಶಪೂರಿತ ಹೇಳಿಕೆಗಳನ್ನು ನೀಡುವುದು ಮುಂದುವರಿದಿದೆ' ಎಂದು ಗೋಸ್ವಾಮಿ ನ್ಯಾಯಾಲಯಕ್ಕೆ ತಿಳಿಸಿದರು.

'ಈ ಅರ್ಜಿ ವಿಚಾರಣೆಗೆ ಅಂಥ ತುರ್ತು ಏನಿಲ್ಲ. ನಾವು ಪರಿಶೀಲಿಸುತ್ತೇವೆ' ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ತಿಳಿಸಿದರು.

ನ್ಯಾಯಾಲಯದ ವಿಚಾರಣೆ ಸಂದರ್ಭ ಮಾಡಲಾದ ಮೌಖಿಕ ಅವಲೋಕನಗಳನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮತ್ತು ನಕಲಿ ಪದವಿ ಪಡೆದಿರುವವರು ವಕೀಲಿ ವೃತ್ತಿಯನ್ನು ಮಾಡುತ್ತಿದ್ದಾರೆ ಎಂಬ ಆರೋಪಗಳ ಬಗ್ಗೆ ತನಿಖೆ ಮಾಡುವಂತೆಯೂ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ನಿಷ್ಪಕ್ಷಪಾತ ತನಿಖೆ: 'ಸುಪ್ರೀಂ'

ಟ್ವಿಶಾ ಸಾವು: 'ಮಾಧ್ಯಮಗಳ ಸಂಕಥನದಿಂದ ನೋವು'

ನವದೆಹಲಿ/ಭೋಪಾಲ್/ ಜಬಲಪುರ (ಪಿಟಿಐ): ನಟಿ ಟ್ವಿಶಾ ಶರ್ಮಾ ಸಾವಿನ ಪ್ರಕರಣದಲ್ಲಿ ಆರೋಪಿಗಳನ್ನು ನ್ಯಾಯಾಲಯ ರಕ್ಷಿಸುತ್ತಿದೆ ಎಂಬ ಮಾಧ್ಯಮಗಳ ಸಂಕಥನದಿಂದ ನೋವು ಉಂಟಾಗಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಈ ಪ್ರಕರಣದಲ್ಲಿ ಸಿಬಿಐನಿಂದ ನ್ಯಾಯಯುತ, ಸ್ವತಂತ್ರ ಮತ್ತು ನಿಷ್ಪಕ್ಷಪಾತ ತನಿಖೆಯನ್ನು ಖಚಿತಪಡಿಸುವುದಾಗಿ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರಿದ್ದ ಪೀಠವು, 'ಈ ಪ್ರಕರಣದ ಬೆಳವಣಿಗೆಗಳ ಬಗ್ಗೆ ವರದಿ ಮಾಡುವಾಗ ಮಾಧ್ಯಮಗಳು ಸಂಯಮ ಕಾಯ್ದುಕೊಳ್ಳಬೇಕು. ಮಾಧ್ಯಮಗಳಲ್ಲಿ ಬಂದ ಕೆಲ ವರದಿಗಳಿಂದ ನಮಗೆ ನೋವಾಗಿದೆ. ಮಾಧ್ಯಮ ಸ್ನೇಹಿತರು ಸಂತ್ರಸ್ತ ಕುಟುಂಬ ಅಥವಾ ಇತರ ಕುಟುಂಬದವರ ಹೇಳಿಕೆ ಕೇಳಬಾರದು' ಎಂದು ಸಲಹೆ ನೀಡಿದೆ.

'ಸಂತ್ರಸ್ತರು ಮತ್ತು ಆರೋಪಿಯ ಕುಟುಂಬಸ್ಥರು ಸಾರ್ವಜನಿಕವಾಗಿ ಅಥವಾ ಮಾಧ್ಯಮಗಳ ಮುಂದೆ ಹೇಳಿಕೆ ನೀಡುವ ಬದಲು, ತನಿಖಾ ಸಂಸ್ಥೆಯ ಮುಂದೆ ತಮ್ಮ ಹೇಳಿಕೆಗಳನ್ನು ದಾಖಲಿಸಬೇಕು. ತನಿಖೆ ಮೇಲೆ ಯಾವುದೇ ಪೂರ್ವಗ್ರಹ ಅಥವಾ ಪರಿಣಾಮ ಬೀರದಂತೆ ನೋಡಿಕೊಳ್ಳಬಹುದು' ಎಂದು ಹೇಳಿದೆ.

'ಈ ಪ್ರಕರಣದ ತನಿಖೆಯನ್ನು ವಹಿಸಿಕೊಳ್ಳಲು ಸಿಬಿಐ ಸಜ್ಜಾಗಿದೆ. ಒಂದು ತಂಡವನ್ನು ಭೋಪಾಲ್‌ಗೆ ಈಗಾಗಲೇ ಕಳುಹಿಸಲಾಗಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠದ ಗಮನಕ್ಕೆ ತಂದರು.

ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ನಾಳೆ: ಟ್ವಿಶಾ ಶರ್ಮಾ ಸಾವು ಪ್ರಕರಣ ಸಂಬಂಧ ನಿವೃತ್ತ ನ್ಯಾಯಾಧೀಶರಾದ ಗಿರಿಬಾಲಾ ಸಿಂಗ್ ಅವರಿಗೆ ನೀಡಿರುವ ನಿರೀಕ್ಷಣಾ ಜಾಮೀನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಮಧ್ಯಪ್ರದೇಶದ ಹೈಕೋರ್ಟ್ ಮೇ 27ಕ್ಕೆ ಮುಂದೂಡಿದೆ. ನ್ಯಾಯಮೂರ್ತಿ ದೇವನಾರಾಯಣ್ ಮಿಶ್ರಾ ಅವರ ಪೀಠ ಸೋಮವಾರ ವಿಚಾರಣೆ ನಡೆಸಿತು.

'ವಿಚ್ಛೇದನ ಪಡೆಯುವುದು ವಾಸಿ'

'ಇಂತಹ ದುರದೃಷ್ಟಕರ ಘಟನೆಯನ್ನು ಎದುರಿಸುವುದಕ್ಕಿಂತ, ಒಬ್ಬ ಮಗಳು ವಿಚ್ಛೇದನ ಪಡೆದು ಬದುಕುವುದು ಎಷ್ಟೋ ಮೇಲು ಎಂಬುದನ್ನು ಈ ಪ್ರಕರಣವು ಎಲ್ಲ ಪೋಷಕರಿಗೆ ತಿಳಿಸುವ ಒಂದು ಸಂದೇಶವಾಗಿದೆ' ಎಂದು ತುಷಾರ್ ಮೆಹ್ತಾ ಹೇಳಿದರು.

ಟ್ವಿಶಾ ಪತಿ, ಅತ್ತೆಯ ತೀವ್ರ ವಿಚಾರಣೆ

ಟ್ವಿಶಾ ಅವರ ಪತಿ ಸಮರ್ಥ್ ಸಿಂಗ್ ಹಾಗೂ ಅತ್ತೆ ಗಿರಿಬಾಲಾ ಸಿಂಗ್ ಅವರನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

'ಇಬ್ಬರು ಆರೋಪಿಗಳು ನೀಡಿರುವ ಮಾಹಿತಿಯನ್ನು ಪರಿಶೀಲಿಸಲಾಗುತ್ತಿದೆ. ಸದ್ಯಕ್ಕೆ ಈ ಪ್ರಕರಣ ಆತ್ಮಹತ್ಯೆಯಂತೆ ಕಾಣುತ್ತಿದೆ. ಆದರೆ, ತನಿಖೆ ಮುಂದುವರಿದಿದ್ದು, ಈ ಹಂತದಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಸಂಚಾರ ಇಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್, 2ನೇ ಮಹಡಿ, 9ನೇ ಮುಖ್ಯ ರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು –560011

ನಂ. ಕಾಅ/ಸಂ&ಮೊ ಸೆಲ್/ಬೆಂದನಪಾ/ಟೆಂಡರ್/06/2026–27/ತಿದ್ದುಪಡಿ–1 ದಿನಾಂಕ : 25.05.2026

ತಿದ್ದುಪಡಿ–1

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾಮಗಾರಿಯ ಹೆಸರು: ಬೆಂಗಳೂರು ದಕ್ಷಿಣ ನಗರ ಪಾಲಿಕೆಗೆ ಸಿವಿಲ್ ಇಂಜಿನಿಯರ್‌ಗಳು/ಡಿಪ್ಲೊಮಾ ಪದವಿ ಪಡೆದ ಸಿವಿಲ್ ಇಂಜಿನಿಯರ್‌ಗಳೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಂಪನ್ಮೂಲ ವ್ಯಕ್ತಿಯನ್ನು ಪೂರೈಸುವುದು.

ಉಲ್ಲೇಖ: Tender Notification No: EE/TE&M Cell/BSCC/TEND/06/2026-27, Date: 16.05.2026 ಈ ಕೆಳಕಂಡ ಜಾಹೀರಾತು ನೀಡುವುದರ ಜೊತೆಗೆ ಮೇಲಿನ ಟೆಂಡರ್ ಕಾಮಗಾರಿಗೆ ಈ ಕೆಳಗಿನ ತಿದ್ದುಪಡಿಯನ್ನು ನೀಡಲಾಗಿದೆ.

ಓದಿಕೊಳ್ಳುವುದು : (1) ಟೆಂಡರ್ ದಾಖಲೆಯನ್ನು ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಬಹುದು : **26.05.2026 ರಿಂದ** (2) ಬಿಡ್ ಪೂರ್ವ ಸಭೆ : **30.05.2026 ರಂದು ಮಧ್ಯಾಹ್ನ 03:00 ಗಂಟೆಗೆ** (3) ಟೆಂಡರ್‌ಗಳ ಬಗ್ಗೆ ವಿಚಾರಣೆಗಾಗಿ ಕೊನೆಯ ದಿನಾಂಕ ಮತ್ತು ಸಮಯ : **30.05.2026 ರಂದು ಸಂಜೆ 04:00 ಗಂಟೆಯವರೆಗೆ** (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **10.06.2026 ರಿಂದ ಸಂಜೆ 4:00 ರವರೆಗೆ** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ : **11.06.2026 ರಿಂದ ಸಂಜೆ 4:30 ರವರೆಗೆ** (6) ಆರ್ಥಿಕ ಬಿಡ್ ತೆರೆಯುವಿಕೆ (ಸಾಧ್ಯವಾದರೆ) : **12.06.2026 ರಂದು ಸಂಜೆ 4:30 ಕ್ಕೆ.**

ಉಳಿದಂತೆ ಷರತ್ತು ಮತ್ತು ನಿಯಮಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ಸಂಚಾರ ಇಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್, ಬೆಂದನಪಾ

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–23113584 ಇ–ಮೇಲ್:pdrch-hfws@karnataka.gov.in

ಸಂ: DD/NCD/06/2025-26 (Part-A) (e-1778672) ದಿನಾಂಕ: 25.05.2026

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸೇವಾ ಟೆಂಡರ್ ಅಧಿಸೂಚನೆ

"For Selection of service provider for setting up a time bound system (ECG and its Transmission, Interpretation & Tele - Reporting) for diagnosis of patients with ST-Elevation Myocardial Infarction (STEMI) in Karnataka, under NHM"

Ref No.:NHM/2025-26/SE0039/CALL-2, Dt:25/05/2026

ಕರ್ನಾಟಕ ರಾಜ್ಯದ ರಾಷ್ಟ್ರೀಯ ಆರೋಗ್ಯ ಅಭಿಯಾನ (NHM)ವು **"ST-Elevation Myocardial Infarction (STEMI) ರೋಗ ಲಕ್ಷಣಗಳ ನಿರ್ಣಯಕ್ಕಾಗಿ ಸಮಯಬದ್ಧ ವ್ಯವಸ್ಥೆ (ECG ಹಾಗೂ ಅದರ ಪ್ರಸರಣ, ವಿವರಣೆ ಮತ್ತು ಟೆಲಿ–ರಿಪೋರ್ಟ್) ಸ್ಥಾಪನೆಗೆ ಸೇವಾ ಪೂರೈಕೆದಾರರ ಆಯ್ಕೆ'** ಕುರಿತು ಅರ್ಹ ಹಾಗೂ ಅರ್ಹತಾ ಮಾನದಂಡಗಳನ್ನು ಪೂರೈಸುವ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಅರ್ಹತಾ ಮಾನದಂಡಗಳು, ಕಾರ್ಯವ್ಯಾಪ್ತಿ, ನಿಯಮಗಳು ಹಾಗೂ ಷರತ್ತುಗಳು ಕರ್ನಾಟಕ ಸರ್ಕಾರದ ಅಧಿಕೃತ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(www.kppp.karnataka.gov.in)** ನಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್‌ದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಲಾದ ವೇಳಾಪಟ್ಟಿಯಂತೆ ಭಾಗವಹಿಸಲು ವಿನಂತಿಸಲಾಗಿದೆ.

ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **25.05.2026** ರಿಂದ ಡೌನ್‌ಲೋಡ್ ಮಾಡಬಹುದು. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 10.06.2026 ಸಂಜೆ 05.30 ಗಂಟೆಯವರೆಗೆ** ಇರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಚೇರಿ ಸಮಯದಲ್ಲಿ **(ಬೆಳಿಗೆ 11:00 ಗಂಟೆಯಿಂದ ಸಂಜೆ 05:30 ಗಂಟೆಯವರೆಗೆ)** ಸಹಿ ಮಾಡಿರುವ ಅಧಿಕಾರಿಯ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
DIPR/CP/812/SA/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು.
E-Mail : apmcsindhanur@gmail.com ಜಿಲ್ಲಾ: ರಾಯಚೂರು 08535–220071, 220256

ಸಂಖ್ಯೆ:ಕೃಉಮಾಸ/ಸಿಂ/ಭದ್ರತಾ–ಸ್ವಚ್ಛತಾ/ 58 /2026–27 ದಿನಾಂಕ:20–05–2026.

ಟೆಂಡರ್ ಪ್ರಕಟಣೆ

ಸಿಂಧನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ 2026–27ನೇ ಸಾಲಿನ ಸಮಿತಿಯ ಆಸ್ತಿ ಸಂರಕ್ಷಣೆಗಾಗಿ ಭದ್ರತಾ ಏಜೆನ್ಸಿಯವರಿಂದ ಭದ್ರತಾ ಸೇವೆಯನ್ನು ಹಾಗೂ ಮಾರುಕಟ್ಟೆ ಪ್ರಾಂಗಣಗಳ ಸ್ವಚ್ಛತಾ ಸೇವೆಗಾಗಿ ಅಗತ್ಯಕ್ಕೆ ತಕ್ಕಂತೆ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಭದ್ರತಾ ನಿರ್ವಹಣೆ:– ಇಎಂಡಿ ಮೊತ್ತ ರೂ. 2.00ಲಕ್ಷ Indent Number: APMC / 2026-27 / SE0843. 2) ಸ್ವಚ್ಛತಾ ನಿರ್ವಹಣೆ:– ಇಎಂಡಿ ಮೊತ್ತ ರೂ. 1.00ಲಕ್ಷ Indent Number: APMC / 2026-27 / SE0844.

ಟೆಂಡರ್ ಸಲ್ಲಿಸುವ ಕೊನೆಯ ದಿ:08–06–2026 ರ ಸಾಯಂಕಾಲ 4.30ರ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿ:11–06–2026ರ ಪೂರ್ವಾಹ್ನ 11.00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿ:16–06–2026ರ ಪೂರ್ವಾಹ್ನ 11.00 ಗಂಟೆಗೆ ಸಮಿತಿಯ ಆಡಳಿತ ಕಛೇರಿಯಲ್ಲಿ ತೆರೆಯಲಾಗುವುದು.

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಅಥವಾ http://kppp.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸೂಚನೆ:– ಕಾರಣಾಂತರಗಳಿಂದ ನಿಗದಿಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕೆ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.ಸಿಂಧನೂರು. DIP/RCR/88KSMCA/90/2026-27 ಸಹಿ/– ಅಧ್ಯಕ್ಷರು ಕೃ.ಉ.ಮಾ.ಸ.ಸಿಂಧನೂರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಾರ್ಯಾಲಯ, ಕೃಭಾಜನಿನಿ ಎಸ್.ಬಿ.ಸಿ ಪಾ&ಪೋ ವಿಭಾಗ, ಭೀಮರಾಯನಗುಡಿ–585287 ತಾ: ಶಹಾಪೂರ ಜಿ: ಯದಗಿರಿ. email:kbjnleesbc@gmail.com

ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎನ್.ಡಿ/ಯೋಶಾ/2026–27/108 ದಿನಾಂಕ:–21.05.2025

ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿದಾರರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಿವಿಲ್ ಒಂದನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ "" ಈ ಕೆಳಗೆ ಪಟ್ಟಿ ಮಾಡಿರುವ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಅಹ್ವಾನಿಸಲಾಗಿದೆ

SLNo.	Name of work
01	Balance CC Lining Work And Extension Work Of Dy-5A Of SBC From Ch:2.00 To 3.950 Km And Balance CC Lining Work From Ch:0.00 Km To 4.650 Km Of Lat-1 Of Dy-8A Of SBC.(Indent no. KBJNL/2025-26/ IW/ WORK_INDENT2784)
02	Modernization of Lateral No.9/2 from km 0.00 to 6.00 km of Dy-2 of SBC Including Structures.(Indent no. KBJNL/2025-26/IW/WORK_INDENT2785)

1) **ಕಾಮಗಾರಿಗಳ ಅಂದಾಜು ಪತ್ರಿಕೆಯ ಸಂಖ್ಯೆ: (1)** KBJNL/2025-26/ W/WORK_INDENT2784 **(2)** KBJNL/2025-26/IW/WORK_INDENT2785 **2) ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ:** 22.05.2026 ರಿಂದ01.06.2026 ಸಂಜೆ 5.00 ಗಂಟೆಯವರೆಗೆ **3) ಟೆಂಡರ್ ಕುರಿತು ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 25.05.2026 ರಂದು ಸಂಜೆ 5.30 ಗಂಟೆಯವರೆಗೆ **4)ಪ್ರೀ–ಬಿಡ್ ಸಭೆ ಜರುಗುವ ದಿನಾಂಕ:** 26.05.2026 ರಂದು ಬೆಳಗ್ಗೆ 11.00ಗಂಟೆಗೆ **5) ಟೆಂಡರ್‌ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:** 01.06.2026 ರಂದು ಸಂಜೆ 5.00 ಗಂಟೆಯ ವರೆಗೆ **6) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:** 02.06.2026 ರಂದು ಬೆಳಗ್ಗೆ 5.30 ಗಂಟೆಗೆ **7) ಆರ್ಥಿಕ ಬಿಡ್‌ತೆರೆಯುವ ದಿನಾಂಕ:**06.06.2026 ರಂದು ಬೆಳಗ್ಗೆ 11.00ಗಂಟೆಗೆ(ತಾತ್ಕಾಲಿಕ)

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ&ಪೋ,ವಿಭಾಗ
ಭಿಮರಾಯನಗಯಡಿ
ವಾ.ಸಾ.ಸಂ.ಇ/ಯಾದಗಿರ/87/ಕೆ.ಎಸ್.ಎಂ.ಸಿ.&ಎ/2026–27

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,719
ಇಂದಿನ ಅಂತ್ಯ:	24,031
ದಿನದ ಗರಿಷ್ಠ:	24,054
	312

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹615
12 ಕ್ಕೆ	₹86
ಮೈಸೂರು: 100 ಕ್ಕೆ	₹625

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹247
ಆರ್‌ಎಸ್‌ಎಸ್-5	₹238
ಗುಡ್ ಲಾಟ್	₹205

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹235-669
ದ್ವಿತಳಿ (ಬಿ.ವಿ)	₹420-860

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1640 (1650)
ಸೋಯಾ (ರಿಫೈನ್ಡ್)	₹1510 (1515)
ಸೂರ್ಯಕಾಂತಿ (ರಿಫೈನ್ಡ್)	₹1660 (1655)
ಪಾಮೋಲಿನ್	₹1495 (1500)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹30500-32000
ಬಂಟ್ವಾಳ	₹13000-15000
ತುಮಕೂರು	₹6800-18500
ತುರುವೇಕೆರೆ	₹30000-30300

ಕೇಬಲ್ ಕಾರಿನಲ್ಲಿ ಸಮಸ್ಯೆ ಪ್ರವಾಸಿಗರ ಪರದಾಟ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗ್‌ನಲ್ಲಿ ಕೇಬಲ್ ಕಾರಿನಲ್ಲಿ ಸೋಮವಾರ ತಾಂತ್ರಿಕ ಸಮಸ್ಯೆಯಾಗಿ, 65 ಕ್ಯಾಬಿನ್‌ಗಳಲ್ಲಿದ್ದ ಸುಮಾರು 300 ಪ್ರವಾಸಿಗರು ಸಿಲುಕಿ ಕೊಂಡಿದ್ದರು.

ಕಾರ್ಯಾಚರಣೆಯ ಮೊದಲ ಐದು ಗಂಟೆಯಲ್ಲಿ 179 ಪ್ರವಾಸಿಗರನ್ನು ಸುರಕ್ಷಿತವಾಗಿ ರಕ್ಷಿಸಲಾಯಿತು. ಕ್ಯಾಬಿನ್‌ಗಳು ನೆಲದಿಂದ ಸುಮಾರು 500 ಅಡಿ ಎತ್ತರದಲ್ಲಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆಯಿಂದಾಗಿ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಯಾವುದೇ ಸಾವುನೋವುಗಳು ವರದಿಯಾಗಿಲ್ಲ. ಇತರರನ್ನು ರಕ್ಷಿಸುವ ಕಾರ್ಯ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಮುಂಬೈ ಧಾರಣೆ (ಶೇಂಗಾ)

25-05-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1660)
ಒಂದು ವಾರದ ಡೆಲಿವರಿ	1645 (1655)
ಪಾಮ್ ವಾರದ ಡೆಲಿವರಿ	1493 (1498)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1555)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,58,000 (1,57,700)
ಬೆಳ್ಳಿ ಕೆ.ಜಿಗೆ	2,70,000 (2,66,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಜ್ಯ ಸರ್ಕಾರದ 'ದ್ವೇಷ ಭಾಷಣ ತಡೆ ಮಸೂದೆ'ಗೆ ಕೇಂದ್ರ ಗೃಹ ಇಲಾಖೆಯ ಆಕ್ಷೇಪ ಸರಿಯೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್: 1,073 ಅಂಶ ಜಿಗಿತ

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 5.52ರಷ್ಟು ಇಳಿಕೆ



ಮುಂಬೈ (ಪಿಟಿಐ): ಕಚ್ಚಾ ತೈಲ ದರ ಇಳಿಕೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿನ ಷೇರುಪೇಟೆಗಳು ಸಕಾರಾತ್ಮಕ ವಹಿವಾಟು ಕಂಡಿರುವುದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,073 ಅಂಶ (ಶೇ 1.42ರಷ್ಟು) ಹೆಚ್ಚಳವಾಗಿ, 76,488ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ 1,143 ಅಂಶ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 312 ಅಂಶ (ಶೇ 1.32ರಷ್ಟು) ಏರಿಕೆಯಾಗಿ 24,031ಕ್ಕೆ ಅಂತ್ಯಗೊಂಡಿದೆ.

ಬಜಾಜ್ ಫೈನಾನ್ಸ್, ಲಾರ್ಸೆನ್ ಆ್ಯಂಡ್ ಟೊಬ್ರೊ, ಎಚ್‌ಡಿಎಫ್‌ಸಿ ಬ್ಯಾಂಕ್, ಎಟರ್ನಲ್, ಬಜಾಜ್ ಫಿನ್‌ಸರ್ವ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಇನ್ಫೊಸಿಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಸನ್ ಫಾರ್ಮಾ ಮತ್ತು ಹಿಂದೂಸ್ತಾನ್ ಯೂನಿಲಿವರ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 5.52ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರಲ್ ದರವು 97.82 ಡಾಲರ್ ಆಗಿದೆ.

'ಪಶ್ಚಿಮ ಏಷ್ಯಾದ ಸಂಘರ್ಷ ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ಒಪ್ಪಂದಕ್ಕೆ ಮುಂದಾಗಿವೆ. ಇದು ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದ ಮಾರುಕಟ್ಟೆಯಲ್ಲಿ ಜಪಾನ್ ಮತ್ತು ಶಾಂಘೈ ಸಕಾರಾತ್ಮಕ ವಹಿವಾಟು ನಡೆಸಿವೆ.

ಖಾಸಗಿ ವಲಯದ ಪ್ರಮುಖ ಬ್ಯಾಂಕಿಂಗ್ ಕಂಪನಿಗಳು ಮಾರ್ಚ್ ತ್ರೈಮಾಸಿಕದಲ್ಲಿ ಉತ್ತಮ ಗಳಿಕೆ ಕಂಡಿವೆ. ಡಾಲರ್ ವಿರುದ್ಧ ರೂಪಾಯಿ ಮತ್ತಷ್ಟು ಬಲಗೊಂಡಿರುವುದು ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಅಜಿತ್ ಮಿಶ್ರಾ ಹೇಳಿದ್ದಾರೆ.

ತೈಲ ಕಂಪನಿಗಳ ಷೇರಿನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಕಚ್ಚಾ ತೈಲದ ದರ ಇಳಿಕೆ ಮತ್ತು ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿನ ಹೆಚ್ಚಳದಿಂದ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ಷೇರಿನ ಮೌಲ್ಯವು ಶೇ 4.3ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹308.25ಕ್ಕೆ ತಲುಪಿದೆ.

ಹಿಂದೂಸ್ತಾನ್ ಪೆಟ್ರೋಲಿಯಂ (ಎಚ್‌ಪಿಸಿಎಲ್) ಷೇರಿನ ಮೌಲ್ಯ ಶೇ 3.52 ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿ) ಷೇರಿನ ಮೌಲ್ಯ ಶೇ 3.15ರಷ್ಟು ಹೆಚ್ಚಳವಾಗಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹403.40 ಮತ್ತು ₹143.90ಕ್ಕೆ ಏರಿಕೆ ಆಗಿದೆ.

ರೂಪಾಯಿ ಮೌಲ್ಯವು 34 ಪೈಸೆ ಹೆಚ್ಚಳ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 34 ಪೈಸೆ ಏರಿಕೆ ಆಗಿದ್ದು, ವಹಿವಾಟಿನ ಅಂತ್ಯಕ್ಕೆ 95.26ಕ್ಕೆ ತಲುಪಿದೆ.

ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದ ಆಗುವ ನಿರೀಕ್ಷೆಯು ರೂಪಾಯಿ ಮೌಲ್ಯ ಏರಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ರೂಪಾಯಿ ಮೌಲ್ಯ ಸದೃಢತೆಗೆ ಏನೆಲ್ಲಾ ಅಗತ್ಯ ಇದೆಯೋ ಅದನ್ನು ಮಾಡಲಾಗುವುದು ಎಂದು ಹೇಳಿರುವುದು ಸಹ ರೂಪಾಯಿ ಮೌಲ್ಯ ಹೆಚ್ಚಳಕ್ಕೆ ಕಾರಣವಾಯಿತು ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಲ್ಯಾಟಿನ್ ಅಮೆರಿಕ, ಆಫ್ರಿಕಾದಿಂದ ಭಾರತ ಕಚ್ಚಾ ತೈಲ ಆಮದು

ನವದೆಹಲಿ: ಪಶ್ಚಿಮ ಏಷ್ಯಾದ ಸಂಘರ್ಷದಿಂದ ಹೊರ್ಮುಜ್ ಜಲಸಂಧಿಯಲ್ಲಿ ಸರಕುಗಳ ಸಾಗಣೆಗೆ ಉಂಟಾದ ನಿರ್ಬಂಧದಿಂದ ದೇಶದ ತೈಲ ಸಂಸ್ಕರಣಾ ಕಂಪನಿಗಳು ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲು ಮುಂದಾಗಿವೆ.

ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ದೇಶದ ತೈಲ ಸಂಸ್ಕರಣಾ ಕಂಪನಿಗಳು ತೈಲ ಕೊರತೆಯನ್ನು ಸರಿದೂಗಿಸಲು, ವೆನೆಜುವೆಲಾ, ಬ್ರೆಜಿಲ್, ಅಂಗೋಲಾ ಮತ್ತು ನೈಜೀರಿಯಾದಿಂದ ತೈಲ ಆಮದನ್ನು ಹೆಚ್ಚಳ ಮಾಡಿವೆ. ಜೊತೆಗೆ ರಷ್ಯಾದಿಂದ ತೈಲ ಖರೀದಿಯನ್ನು ಮುಂದುವರಿಸಿವೆ ಎಂದು ಕೆಪ್ಲರ್ ದತ್ತಾಂಶ ತಿಳಿಸಿದೆ.

ಮೇ ತಿಂಗಳಿನಲ್ಲಿ ರಷ್ಯಾದಿಂದ ಪ್ರತಿ ದಿನ 19 ಲಕ್ಷ ಬ್ಯಾರಲ್ ಮತ್ತು ಇರಾಕ್‌ನಿಂದ 41 ಸಾವಿರ ಬ್ಯಾರಲ್ ಕಚ್ಚಾ ತೈಲ ಪಡೆಯಲಿದೆ. ಏಪ್ರಿಲ್‌ನಲ್ಲಿ ದಿನಕ್ಕೆ 45.7 ಲಕ್ಷ ಬ್ಯಾರಲ್ ತೈಲವನ್ನು ಆಮದು ಮಾಡಿಕೊಳ್ಳಲಾಗಿತ್ತು.

ಯುಎಇನಿಂದ ಮಾರ್ಚ್‌ನಲ್ಲಿ ಪ್ರತಿ ದಿನ 2.30 ಲಕ್ಷ ಬ್ಯಾರಲ್ ಅನ್ನು ಆಮದು ಮಾಡಿಕೊಳ್ಳಲಾಗಿತ್ತು. ಇದು ಏಪ್ರಿಲ್‌ನಲ್ಲಿ 6.69 ಲಕ್ಷ ಬ್ಯಾರಲ್‌ಗೆ ಏರಿಕೆಯಾಗಿದೆ. ಒಪೆಕ್ ರಾಷ್ಟ್ರಗಳಿಂದ ಆಮದು ಶೇ 30ರಿಂದ ಶೇ 45ಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ. ಭಾರತಕ್ಕೆ ಕಚ್ಚಾ ತೈಲ ಪೂರೈಸುವಲ್ಲಿ ರಷ್ಯಾ ಅಗ್ರಸ್ಥಾನದಲ್ಲಿ ಮುಂದುವರಿದಿದ್ದು, ಯುಎಇ ಮತ್ತು ಸೌದಿ ಅರೇಬಿಯಾ ನಂತರದ ಸ್ಥಾನದಲ್ಲಿವೆ. ಬ್ರೆಜಿಲ್ ನಾಲ್ಕನೇ ಅತಿದೊಡ್ಡ ಪೂರೈಕೆದಾರ ರಾಗಿದ್ದರೆ, ವೆನೆಜುವೆಲಾ ಐದನೇ ಸ್ಥಾನದಲ್ಲಿದೆ.



ಇಂಧನ ದರ ಏರಿಕೆ: ಕಂಪನಿಗಳ ಮೇಲೆ ಪರಿಣಾಮ– ಮೂಡೀಸ್

ನವದೆಹಲಿ (ಪಿಟಿಐ): ಹೆಚ್ಚುತ್ತಿರುವ ಇಂಧನ ದರವು ದೇಶದ ಕಂಪನಿಗಳ ಅಲ್ಪಾವಧಿಯ ಸಾಲದ ಮೇಲೆ ಪರಿಣಾಮ ಬೀರಲಿದೆ ಎಂದು ಜಾಗತಿಕ ರೇಟಿಂಗ್ ಸಂಸ್ಥೆ ಮೂಡೀಸ್ ಸೋಮವಾರ ತಿಳಿಸಿದೆ.

ಪ್ರಸ್ತುತ ದೇಶದ ಕಂಪನಿಗಳ ಹಣಕಾಸು ಸ್ಥಿತಿ ಉತ್ತಮವಾಗಿದ್ದು, ಬಾಹ್ಯ ಆಘಾತಗಳನ್ನು ತಾಳಿಕೊಳ್ಳುವ ಸ್ಥಿತಿಯಲ್ಲಿವೆ. ನಿರಂತರವಾಗಿ ಇಂಧನ ದರ ಏರಿಕೆ ಮತ್ತು ಪ್ರಮುಖ ಕೈಗಾರಿಕೆಗಳಲ್ಲಿ ರಚನಾತ್ಮಕ ಬದಲಾವಣೆಯು ಮುಂದಿನ ದಿನಗಳಲ್ಲಿ ಕಂಪನಿಗಳ ಗಳಿಕೆ ಮತ್ತು ಸಾಲದ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳು ಮತ್ತು ರಿಟೇಲ್ ಇಂಧನ ಮಾರಾಟಗಾರರು ಹೆಚ್ಚುತ್ತಿರುವ ತೈಲ ದರದಿಂದ ಲಾಭದಲ್ಲಿ ಇಳಿಕೆ ಕಾಣುತ್ತಿವೆ. ಇಂಧನ ಕೇಂದ್ರಿತ ವಲಯಗಳಾದ ಸಿಮೆಂಟ್, ರಾಸಾಯನಿಕ, ರಸಗೊಬ್ಬರ, ವಿಮಾನಯಾನ ಕ್ಷೇತ್ರವು ಹೆಚ್ಚುತ್ತಿರುವ ವೆಚ್ಚದ ಹೊರೆಗಳನ್ನು ಎದುರಿಸುತ್ತಿವೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿಕಾಸ್ ಹಲನ್ ಹೇಳಿದ್ದಾರೆ.

ಶೇ 2ರಷ್ಟು ಲಾಭ ಇಳಿಕೆ: ಪಶ್ಚಿಮ ಏಷ್ಯಾದ ಸಂಘರ್ಷದಿಂದ ಉಂಟಾಗಿರುವ ಪೂರೈಕೆ ಸರಪಳಿಯಲ್ಲಿನ ಅಡಚಣೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಕಂಪನಿಗಳ ಲಾಭದಲ್ಲಿ ಶೇ 2ರಷ್ಟು (200 ಮೂಲಾಂಶ) ಇಳಿಕೆ ಆಗಬಹುದು. ಆದರೆ, ಕಂಪನಿಗಳ ಬ್ಯಾಲೆನ್ಸ್‌ಶೀಟ್ ಉತ್ತಮವಾಗಿರುವುದರಿಂದ ಇದನ್ನು ತಾಳಿಕೊಳ್ಳಬಲ್ಲವು ಎಂದು ಕ್ರಿಸಿಲ್ ವರದಿ ಹೇಳಿದೆ.

ಅಡಿಕೆ ಧಾರಣೆ

ಕುಮಟಾ		ಸಾಗರ		ಶಿರಸಿ	
ಚಿಪ್ಪು	27089-32999	ಬಿಳಿಗೋಟು	10129-35671	ಬೆಟ್ಟೆ	35199-49169
ಕೋಕ	16029-33199	ಚಾಲಿ	31129-40899	ಬಿಳಿಗೋಟು	23000-36599
ಫ್ಯಾಕ್ಟರಿ	13069-27211	ಕೋಕ	10129-36599	ಚಾಲಿ	42066-46639
ಹಳೆಚಾಲಿ	38010-47998	ಕೆಂಪುಗೋಟು	32999-39190	ಕೆಂಪುಗೋಟು	24500-36000
ಹೊಸಚಾಲಿ	37199-45899	ರಾಶಿ	35599-61570	ರಾಶಿ	49499-52989
ಪುತ್ತೂರು		ಸಿಪ್ಪೆಗೋಟು	7299-21717	**ಯಲ್ಲಾಪುರ**	
ಕೋಕ	20000-33500	**ಸಿದ್ದಾಪುರ**		ಬಿಳಿಗೋಟು	16122-36099
ಹೊಸತು	30000-45000	ಬಿಳಿಗೋಟು	26599-36099	ಚಾಲಿ	36719-46099
ಶಿವಮೊಗ್ಗ		ಚಾಲಿ	38099-46039	ಕೋಕ	18909-33972
ಸರಕು	63900-83099	ಕೋಕ	22699-32069	ಕೆಂಪುಗೋಟು	21089-37081
ಬೆಟ್ಟೆ	54199-61009	ಕೆಂಪುಗೋಟು	29100-37299	ರಾಶಿ	50109-55899
ರಾಶಿ	44869-53759	ರಾಶಿ	47679-52409	ತಟ್ಟಿಬೆಟ್ಟೆ	37500-49069
ಗೊರಬಲು	19005-40869	ತಟ್ಟಿಬೆಟ್ಟೆ	38219-46519		

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

21ನೇ ವರ್ಷದ ಚಿರಸ್ಮರಣೆ



ಶ್ರೀ ಟಿ. ಅಣ್ಣಯಪ್ಪ
ಮಾ|| ತಾ|| ಪಂ|| ಸದಸ್ಯರು, ಮಾರಗೊಂಡಹಳ್ಳಿ
ನೀವು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯುತ್ತಿದ್ದೇವೆ. ಸದಾ ನಿಮ್ಮ ಆಶೀರ್ವಾದ ನಮಗಿರಲಿ.
ಶ್ರೀಮತಿ ದೊಡ್ಡ ಅಮ್ಮಯ್ಯಮ್ಮ ಮತ್ತು ಮಕ್ಕಳು
ಎ. ಶ್ರೀನಿವಾಸಮೂರ್ತಿ– 9880427590

ಶ್ರದ್ಧಾಂಜಲಿ

ಶ್ರೀಮತಿ ಸುಧಾ ಕೃಷ್ಣಸ್ವಾಮಿ
02/05/1941 - 25/05/2026
ಸಂಸ್ಥಾಪಕ ಸದಸ್ಯರು ಹಾಗೂ ಉಪಾಧ್ಯಕ್ಷರು, ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘ
ಉಪಾಧ್ಯಕ್ಷರು, ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘ (2011-12 to 2015-16)
ದಿನಾಂಕ: 26–05–2026 ಮಂಗಳವಾರ ಮಧ್ಯಾಹ್ನ 1 ಗಂಟೆಯವರೆಗೆ ಅಂತಿಮದರ್ಶನಕ್ಕಾಗಿ ಅವರ ಮನೆಯಲ್ಲಿ ವ್ಯವಸ್ಥೆ ಮಾಡಲಾಗಿದೆ.
ನಿವಾಸದ ಸ್ಥಳ:
https://maps.app.goo.gl/DiHTeofE8SW7D9NeA
ಅಂತ್ಯಕ್ರಿಯೆಯು ದಿ: 26–05–2026ರ ಮಧ್ಯಾಹ್ನ 1:30 ರಿಂದ 2:30 ರವರೆಗೆ ವಿಲ್ಸನ್ ಗಾರ್ಡನ್‌ನ ಚಿತಾಗಾರದಲ್ಲಿ ನಡೆಯಲಿದೆ.
ಇಂತಿ ದುಃಖತಪ್ತರು: ಕುಟುಂಬದವರು

ಹಜ್ ಯಾತ್ರೆ: 15 ಲಕ್ಷ ಯಾತ್ರಾರ್ಥಿಗಳ ಭೇಟಿ

ಪ್ರಾದೇಶಿಕ ಉದ್ವಿಗ್ನತೆ, ಅನಿಶ್ಚಿತತೆ ನಡುವೆ ಮೆಕ್ಕಾಕ್ಕೆ ಬರುತ್ತಿದ್ದಾರೆ ಯಾತ್ರಿಕರು

ಮೆಕ್ಕಾ (ಎಪಿ): ವಾರ್ಷಿಕ ಹಜ್ ಯಾತ್ರೆ ಸೋಮವಾರದಿಂದ ಆರಂಭವಾಗಿದ್ದು, 15 ಲಕ್ಷಕ್ಕೂ ಹೆಚ್ಚಿನ ಯಾತ್ರಿಕರು ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದ ಕದನ ವಿರಾಮ, ಪ್ರಾದೇಶಿಕ ಉದ್ವಿಗ್ನತೆ ಹಾಗೂ ಅನಿಶ್ಚಿತತೆ ನಡುವೆಯೂ ಯಾತ್ರಾರ್ಥಿಗಳು ಹಜ್ ಯಾತ್ರೆ ಕೈಗೊಂಡಿದ್ದಾರೆ.

ಮೊದಲ ದಿನ ಅನೇಕ ಯಾತ್ರಿಕರು ಮೆಕ್ಕಾ ಸಮೀಪದ ಮರುಭೂಮಿಯಲ್ಲಿರುವ ವಿಶಾಲವಾದ ಡೇರೆಗಳಲ್ಲಿ ಒಟ್ಟುಗೂಡಿದರು. ಇದಕ್ಕೂ ಮುನ್ನ, ಗ್ರ್ಯಾಂಡ್ ಮಸೀದಿ ಸಂಕೀರ್ಣದಲ್ಲಿರುವ ಮುಸ್ಲಿಮರ ಪವಿತ್ರ 'ಕಾಬಾ'ವನ್ನು ಒಂದು ಸುತ್ತು ಬಂದು ಪ್ರಾರ್ಥನೆ ಸಲ್ಲಿಸಿದರು.

ಬಿಸಿಲ ಬೇಗೆಯಿಂದ ಬಸವಳಿಯುತ್ತಿರುವ ಯಾತ್ರಿಕರು ಛತ್ರಿಗಳು ಹಾಗೂ ಬ್ಯಾಟರಿ ಚಾಲಿತ ಸಣ್ಣ ಫ್ಯಾನ್‌ಗಳ ಮೊರೆ ಹೋಗಿದ್ದಾರೆ. ಭಕ್ತರಿಗೆ ಸ್ವಯಂ ಸೇವಕರು ನೀರಿನ ಬಾಟಲಿಗಳನ್ನು ವಿತರಿಸುತ್ತಿದ್ದಾರೆ. ಇದಲ್ಲದೆ, ದೊಡ್ಡ ಗಾತ್ರದ ಫ್ಯಾನ್‌ಗಳ ಮೂಲಕ ನೀರಿನ ಹನಿಗಳ ಸಿಂಪಡಣೆ ಮಾಡಲಾಗುತ್ತಿದೆ.

'ಯಾತ್ರಿಕರಿಗೆ ಹಜ್ ಅತ್ಯಂತ ಭಾವನಾತ್ಮಕ ಆಧ್ಯಾತ್ಮಿಕ ಅನುಭವವಾಗಿದೆ. ಯಾತ್ರಿಕರು ಹಜ್ ಧಾರ್ಮಿಕ ವಿಧಿವಿಧಾನಗಳನ್ನು ಹಲವಾರು ದಿನಗಳ ಕಾಲ ನಿರ್ವಹಿಸುತ್ತಾರೆ' ಎಂದು ಹಜ್ ಪಾಸ್‌ಪೋರ್ಟ್ ಪಡೆಗಳ ಕಮಾಂಡರ್ ಸಲೇಹ್ ಬಿನ್ ಸಾದ್ ಅಲ್–ಮುರಬ್ಬಾ ತಿಳಿಸಿದ್ದಾರೆ.

'ಇಸ್ಲಾಂ ಧರ್ಮದ ಪ್ರತಿಯೊಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಹಜ್ ಯಾತ್ರೆ ಕೈಗೊಳ್ಳಬೇಕಾಗುತ್ತದೆ. ದೈಹಿಕ ಹಾಗೂ ಆರ್ಥಿಕವಾಗಿ ಶಕ್ತರಾಗಿರುವವರು ಯಾತ್ರೆ ಕೈಗೊಳ್ಳಬೇಕು. ಅಂತಹ ಅವಕಾಶ ನನಗೆ ಸಿಕ್ಕಿದೆ' ಎಂದು ಈಜಿಪ್ಟ್‌ನ ಯಾತ್ರಿಕ ಸಾಮ್ಯಾ ಅಬ್ದುಲ್ ಮೊನ್ನೆಮ್ ಸಂತಸ ವ್ಯಕ್ತಪಡಿಸಿದ್ದಾರೆ.

ಗ್ರ್ಯಾಂಡ್ ಮಸೀದಿ ಸಂಕೀರ್ಣದಲ್ಲಿರುವ ಪವಿತ್ರ 'ಕಾಬಾ'ದಲ್ಲಿ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಮರು –ಎಎಫ್‌ಪಿ ಚಿತ್ರ

'78 ದಿನಕ್ಕೆ ಬೇಕಾಗುವಷ್ಟು ಕಚ್ಚಾತೈಲ ದಾಸ್ತಾನು'

ನವದೆಹಲಿ: ಭಾರತದಲ್ಲಿ 78 ದಿನಗಳಿಗೆ ಬೇಕಾಗುವಷ್ಟು ಕಚ್ಚಾತೈಲ ದಾಸ್ತಾನು ಹೊಂದಿದೆ ಎಂದು ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಸಂಸದೀಯ ಸಮಿತಿಗೆ ಮಾಹಿತಿ ನೀಡಿದ್ದಾರೆ.

ದೇಶದ ಹಲವು ಭಾಗಗಳಲ್ಲಿ ಪೆಟ್ರೋಲ್ ಖರೀದಿಗಾಗಿ ಉದ್ದನೆಯ ಸರತಿ ಸಾಲು ನಿಲ್ಲುತ್ತಿರುವ ಕುರಿತು ವಿರೋಧ ಪಕ್ಷಗಳು ಎತ್ತಿರುವ ಪ್ರಶ್ನೆ ಬೆನ್ನಲ್ಲೇ ಈ ಸ್ಪಷ್ಟನೆ ಹೊರಬಿದ್ದಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಭಾರತದ ಕಡಲು ವ್ಯಾಪಾರ, ಹಡಗು ಮೂಲಸೌಕರ್ಯ, ನಾವಿಕರ ಸುರಕ್ಷತೆ ಕುರಿತಂತೆ ಸಂಸತ್‌ನ ಸ್ಥಾಯಿ ಸಮಿತಿ (ಸಾರಿಗೆ, ಪ್ರವಾಸೋದ್ಯಮ ಹಾಗೂ ಸಾಂಸ್ಕೃತಿಕ) ಪೆಟ್ರೋಲಿಯಂ, ರಾಸಾಯನಿಕ ಇಲಾಖೆಯ ಅಧಿಕಾರಿಗಳು ವಿಸ್ತೃತ ವರದಿ ನೀಡಿದರು. 'ಹೊರ್ಮುಜ್ ಜಲಸಂಧಿ ಮುಚ್ಚಿರುವ ಕಾರಣ ಭಾರತದ 13 ಹಡಗುಗಳು ಇನ್ನೂ ಕೂಡ ಅಲ್ಲಿಯೇ ಸಿಲುಕಿವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಡಿ ತೊರೆದ ದೇಬಾಶೀಷ್ ಬಿಜೆಪಿಯತ್ತ

ಭುವನೇಶ್ವರ (ಪಿಟಿಐ): ಒಡಿಶಾದ ಬಿಜು ಜನತಾದಳ ಮುಖಂಡ ದೇಬಾಶೀಷ್ ಸಾಮಂತರಾಯ್ ಅವರು ರಾಜ್ಯಸಭೆ ಸ್ಥಾನ ಮತ್ತು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಸೋಮವಾರ ರಾಜೀನಾಮೆ ಸಲ್ಲಿಸಿದ್ದಾರೆ.

'ಪಕ್ಷದಲ್ಲಿ ನನ್ನನ್ನು ವ್ಯವಸ್ಥಿತವಾಗಿ ಕಡೆಗಣಿಸಿದರು. ಪಕ್ಷವು ಬಿಜು ಪಟ್ನಾಯಕ್ ಅವರ ಸಿದ್ಧಾಂತ ಮತ್ತು ತತ್ವಗಳಿಂದ ದೂರ ಸಾಗುತ್ತಿದೆ' ಎಂದು ದೇಬಾಶೀಷ್ ಸಾಮಂತರಾಯ್ ಅವರು ಆರೋಪ ಮಾಡಿದ್ದಾರೆ.

ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ ರಾಜ್ಯಸಭೆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವುದಾಗಿ ಅವರು ತಿಳಿಸಿದ್ದಾರೆ. ಇದರಿಂದಾಗಿ ರಾಜ್ಯಸಭೆಯಲ್ಲಿ ಬಿಜೆಡಿ ಬಲ ಐದಕ್ಕೆ ಕುಸಿಯಲಿದೆ.

ಬಿಜೆಡಿ ಮುಖ್ಯಸ್ಥ ನವೀನ್ ಪಟ್ನಾಯಕ್ ಅವರ ಬಹುಕಾಲದ ಆಪ್ತರಾಗಿದ್ದ ದೇಬಾಶೀಷ್, ಬಿಜೆಪಿ ಸೇರುವುದಾಗಿ ಹೇಳಿದ್ದಾರೆ. ಈಗಾಗಲೇ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಮತ್ತು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಮನ್‌ಮೋಹನ್ ಸಮಾಲ್ ದೆಹಲಿಯಲ್ಲಿದ್ದಾರೆ.

ದೇಬಾಶೀಷ್ ಅವರು 2009 ಮತ್ತು 2014ರಲ್ಲಿ ಬಿಜೆಡಿಯ ಶಾಸಕರೂ ಆಗಿದ್ದರು. ಅನಂತರ ರಾಜ್ಯಸಭೆಗೆ ಪಟ್ನಾಯಕ್ ನಾಮಕರಣ ಮಾಡಿದ್ದರು. ಒಂದು ತಿಂಗಳ ಹಿಂದೆ ಬಿಜೆಡಿಯ ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಸುಜೀತ್ ಕುಮಾರ್ ಮತ್ತು ಮಮತಾ ಮಹಾಂತ ಅನಂತರ ಬಿಜೆಪಿ ಸೇರಿ ರಾಜ್ಯಸಭೆ ಪ್ರವೇಶಿಸಿದ್ದರು. ಇದೀಗ ದೇಬಾಶೀಷ್ ಅದೇ ದಾರಿ ಹಿಡಿದಿದ್ದಾರೆ. 'ಬಿಜೆಡಿಯ 2024ರ ಚುನಾವಣಾ ಸೋಲಿಗೆ ಮಾಜಿ ಅಧಿಕಾರಿ, ರಾಜಕಾರಣಿ ವಿ.ಕೆ. ಪಾಂಡಿಯನ್ ಕಾರಣ. ರಾಜಕೀಯ ಸನ್ಯಾಸ ಘೋಷಿಸಿದ್ದರೂ ಪಕ್ಷದ ಮೇಲೆ ಪಾಂಡಿಯನ್ ಹಿಡಿತ ಇನ್ನೂ ಇದೆ' ಎಂದು ಸಾಮಂತರಾಯ್ ಆರೋಪಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಮತ್ತೆ ತುಟ್ಟಿ

ಒಂದನೇ ಪುಟದಿಂದ...

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸಲು ಇರಾನ್–ಅಮೆರಿಕ ಒಪ್ಪಂದಕ್ಕೆ ಬರುವ ಸಾಧ್ಯತೆ ಹೆಚ್ಚಿರುವುದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗಿರುವುದರ ನಡುವೆಯೇ, ಈ ಏರಿಕೆ ಕಂಡುಬಂದಿದೆ. ಹೊರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಅಮೆರಿಕ ಮತ್ತು ಇರಾನ್ ತಾತ್ವಿಕವಾಗಿ ಒಪ್ಪಿಕೊಂಡ ಬಳಿಕ ಬ್ರೆಂಟ್ ಕಚ್ಚಾ ತೈಲ ದರ ಶೇ 5ರಷ್ಟು ಇಳಿಕೆಯಾಗಿದೆ.

ಖಾಸಗಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಈ ಹಿಂದೆಯೇ ಇಂಧನ ಬೆಲೆ ಹೆಚ್ಚಿಸಿವೆ. ನಯಾರಾ ಎನರ್ಜಿ ಮಾರ್ಚ್‌ನಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಕ್ರಮವಾಗಿ ಲೀಟರಿಗೆ ₹5 ಹಾಗೂ ₹3 ಹೆಚ್ಚಿಸಿದೆ. ಶೆಲ್ ಕಂಪನಿ ಏಪ್ರಿಲ್‌ನಲ್ಲಿ ಪೆಟ್ರೋಲ್ ಬೆಲೆಯನ್ನು ಲೀಟರಿಗೆ ₹7.41 ಹಾಗೂ ಡೀಸೆಲ್ ಬೆಲೆಯನ್ನು ಲೀಟರಿಗೆ ₹25 ಏರಿಕೆ ಮಾಡಿದೆ.

ಖಾಸಗಿ ವಲಯದ ಜಿಯೊ–ಬಿಪಿ ತನ್ನಲ್ಲಿ ಮಾರಾಟವಾಗುವ ಇಂಧನ ಬೆಲೆಯನ್ನು ಸರ್ಕಾರಿ ಕಂಪನಿಗಳ ಬೆಲೆ ಹೆಚ್ಚಳಕ್ಕೆ ಅನುಗುಣವಾಗಿಯೇ ಏರಿಕೆ ಮಾಡಿದೆ.

'ನಷ್ಟ ₹600 ಕೋಟಿಗೆ ಇಳಿಕೆ'

ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಹೆಚ್ಚಿಸಿದ ನಂತರ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳ ನಿತ್ಯದ ನಷ್ಟದ ಮೊತ್ತವು ₹600 ಕೋಟಿಗೆ ಇಳಿಕೆ ಆಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ. ದರ ಏರಿಕೆಯ (ಮೇ 15ಕ್ಕೂ ಮುನ್ನ) ಮೊದಲು ಕಂಪನಿಗಳು ನಿತ್ಯ ₹1,000 ಕೋಟಿ ನಷ್ಟ ಅನುಭವಿಸುತ್ತಿದ್ದವು.

> ಕಾಂಗ್ರೆಸ್ ನಾಯಕನದ್ದು ಅಪಕ್ವ, ಮೂರ್ಖತನದ ಹೇಳಿಕೆ. ರಾಹುಲ್ ಅವರೇ, ಇಂತಹ ಹೇಳಿಕೆಗಳ ಮೂಲಕ ಅರಾಜಕತೆ ಹರಡುವುದು ನಿಮ್ಮ ಉದ್ದೇಶವಾಗಿದ್ದರೆ, ನಾವು ಭಾರತವನ್ನು ಬಲಿಷ್ಠಗೊಳಿಸುವ ಸಂಕಲ್ಪ ಮಾಡಿದ್ದೇವೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತವು ಈ ಜಾಗತಿಕ ಸವಾಲನ್ನು ಪರಿಣಾಮಕಾರಿ ಯಾಗಿ ಎದುರಿಸುತ್ತಿದೆ. ದೇಶದ ಆರ್ಥಿಕತೆಯು ಸದೃಢವಾಗಿದ್ದು, ಜನರು ಮೋದಿ ಸರ್ಕಾರವನ್ನು ಬೆಂಬಲಿಸುತ್ತಿದ್ದಾರೆ
>
> **ಗೌರವ್ ಭಾಟಿಯಾ,** ಬಿಜೆಪಿ ರಾಷ್ಟ್ರೀಯ ವಕ್ತಾರ

ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಫೆಬ್ರುವರಿಯಲ್ಲಿ ಇರಾನ್ ಮೇಲೆ ದಾಳಿ ನಡೆಸಿದ ಬಳಿಕ ಹೊರ್ಮುಜ್ ಜಲಸಂಧಿಯ ಮೂಲಕ ತೈಲ ಸಾಗಾಟಕ್ಕೆ ಅಡ್ಡಿಯಾಗಿದೆ. ಅಲ್ಲಿಂದ ಈಚೆಗೆ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇಕಡಾ 50ಕ್ಕಿಂತ ಏರಿಕೆಯಾಗಿದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ, ಕಲಬುರಗಿ–585102 (ಕರ್ನಾಟಕ ರಾಜ್ಯ)
Website: https://kkrtc.karnataka.gov.in
ಸಂಖ್ಯೆ: ಕಕಸಾ/ಕೇಕ/ಸಿಬ್ಬಂದಿ/ನೇಮಕ/ನೇ–1/ಕ–461/361 /2026–27 ದಿನಾಂಕ:23.05.2026

:: ಪ್ರಕಟಣೆ ::

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ: 08.10.2025 ರಂದು ಸಂಖ್ಯೆ: ಇಡಿ/ಕೆಇಎ/ ಆಡಳಿತ/ ಸಿ.ಆರ್.05/2025 (ಕಲ್ಯಾಣ–ಕರ್ನಾಟಕ) ಮತ್ತು ಇಡಿ/ಕೆಇಎ/ಆಡಳಿತ/ಸಿ.ಆರ್.04/2025 (ಆರ್‌ಪಿಸಿ) ಗಳನ್ವಯ ಅಧಿಸೂಚಿಸಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ **ನಿರ್ವಾಹಕ ಮತ್ತು ಸಹಾಯಕ ಲೆಕ್ಕಿಗ** ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಮುಂದಿನ ಭಾಗವಾಗಿ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಕಕರಸಾ ನಿಗಮದ ವೆಬ್ ವಿಳಾಸ **kkrtc.karnataka.gov.in** ನಲ್ಲಿ ಪ್ರಕಟಿಸಲಾಗಿದೆ.

ಸದರಿ ಪಟ್ಟಿಗೆ ಪೂರಕ ದಾಖಲಾತಿಗಳೊಂದಿಗೆ ಆಕ್ಷೇಪಣೆಗಳನ್ನು Online ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ದಿನಾಂಕ: **31.05.2026 ರಂದು ಸಂಜೆ 05:30 ರವರೆಗೆ** ಅವಕಾಶ ಕಲ್ಪಿಸಲಾಗಿದೆ. ನಿಗದಿತ ದಿನಾಂಕದ ನಂತರ ಸ್ವೀಕರಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಮೇಲಿನ ವೆಬ್ ವಿಳಾಸಕ್ಕೆ ಭೇಟಿ ನೀಡುವುದು. ಸಹಾಯವಾಣಿ ಸಂಖ್ಯೆ 6366374977 (ಕಛೇರಿ ವೇಳೆಯಲ್ಲಿ ಮಾತ್ರ).

ಸಹಿ/–
ಅಧ್ಯಕ್ಷರು, ಆಯ್ಕೆ ಸಮಿತಿ
ವಾ.ಸಾ.ಸಂ.ಇ/ಕಲಬುರಗಿ/163/ಕೆ.ಎಸ್.ಎಂ.ಸಿ.&ಎ/2026–27

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕೂಡ್ಲಿಗಿ–583135.
ಸಂ.ಪ.ಪಂ.ಕೂ /ಕಾಮಗಾರಿ/ತಾಂತ್ರಿಕ/ಟೆಂಡರ್/ಸಿ.ಆರ್.02/2026–27 ದಿನಾಂಕ : 25.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೂಡ್ಲಿಗಿ ಪಟ್ಟಣ ಪಂಚಾಯಿತಿಯ 2026–27ನೇ ಸಾಲಿನ ಎಸ್‌ಎಫ್‌ಸಿ & ಎಸ್‌ಎಫ್‌ಸಿ(ಕುಡಿಯುವ ನೀರು)& 2025–26ನೇ ಸಾಲಿನ ಎಸ್‌ಎಫ್‌ಸಿ ಉಳಿತಾಯ ಅನುದಾನದಡಿಯಲಿ ಮಂಜೂರಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಕೆ.ಡಬ್ಲ್ಯೂ–01 ರ ನಮೂನೆಯಲ್ಲಿ ಒಟ್ಟು 7 ಕಾಮಗಾರಿಗಳಿಗೆ ಒಟ್ಟು ಟೆಂಡರ್ ಮೊತ್ತ ರೂ 19.51 ಲಕ್ಷ (ಅತಿ ಕಡಿಮೆ ಅಂದಾಜು ಮೊತ್ತ ರೂ 1.12ಲಕ್ಷಗಳು ಹಾಗೂ ಅತಿ ಹೆಚ್ಚು ಅಂದಾಜು ಮೊತ್ತ ರೂ 4.92ಲಕ್ಷ)ಗಳಿಗೆ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿಪಿ) ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ, ಆಸಕ್ತ ಅರ್ಹ ಗುತ್ತಿಗೆದಾರರು/ಏಜೆನ್ಸಿದಾರರು ಟೆಂಡರ್ ಸಲ್ಲಿಸಬಹುದಾಗಿದೆ.

ಷರತ್ತುಗಳು :– ಮೇಲಿನ ಕಾಮಗಾರಿಗಳಿಗೆ ದಿನಾಂಕ 04.06.2026 ರಂದು 16.30 ಗಂಟೆವರೆಗೆ ಅಥವಾ ಯಾರೂ ಟೆಂಡರ್ ಸಲ್ಲಿಸದೇ ಇದ್ದಲಿ 05.06.2026 ರಂದು 16.30 ಗಂಟೆಯೊಳಗಾಗಿ ಟೆಂಡರ್ ಸಲ್ಲಿಸ ಬಹುದಾಗಿರುತ್ತದೆ, ಸದರಿ ಟೆಂಡರಗಳ ಬಿಡ್‌ನ್ನು ದಿನಾಂಕ :05.06.2026 ರಂದು 17.00 ಗಂಟೆಗೆ ಅಥವಾ ಮುಂದೆ ತಿಳಿಸುವ ದಿನಾಂಕದಂದು ತೆರೆಯಲಾಗುವುದು,ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಟೆಂಡರ್ ದಾಖಲಾತಿಗಳಿಗಾಗಿ & ಷರತ್ತುಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿಪಿ) ನಲ್ಲಿ ನೋಡಬಹುದಾಗಿರುತ್ತದೆ, **https://kppp.karnataka.gov.in** / ವೆಬ್‌ಸೈಟನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕಿರಿಯ ಅಭಿಯಂತರರನ್ನು ಸಂಪರ್ಕಿಸಬಹುದು.

ಇಂಡೆಂಟ್‌ಗಳ ವಿವರ		
DMA/2026-27/WS/WORK_INDENT58554(CAT-IIA)	DMA/2026-27/OW/WORK_INDENT58555(STCat)	DMA/2026-27/OW/WORK_INDENT58556
DMA/2026-27/OW/WORK_INDENT58557	DMA/2026-27/WS/WORK_INDENT58558	DMA/2026-27/EL/WORK_INDENT58830
DMA/2026-27/BD/WORK_INDENT58829		

ಸಹಿ/– **ಶ್ರೀ ಹೆಚ್ ದಾದಾಪೀರ್** ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಕೂಡ್ಲಿಗಿ
ಸಹಿ/– **ಕುಮಾರಿ ನೇತ್ರಾವತಿ ಕೆ ವಿ** ಆಡಳಿತಾಧಿಕಾರಿಗಳು, ಪಟ್ಟಣಪಂಚಾಯಿತಿ, ಕೂಡ್ಲಿಗಿ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
Part-Time Jobs
ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

ಪ್ರವಾಸ
Travel
ಶ್ರೀಮಹದೇಶ್ವರ ಟೂರ್ಸ್ & ಟ್ರಾವೆಲ್ಸ್ 10 ದಿನಗಳ ಅಮರನಾಥ ಯಾತ್ರೆ, 14 ದಿನಗಳ ಚಾರ್ಧಾಮ್ ಯಾತ್ರೆ. ಸಂಪರ್ಕಿಸಿ: 9611801143/ 9742810701.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮುಟ್ಟುಗೋಲು ಹಾಕಿಕೊಂಡಿರುವ ₹1.14 ಲಕ್ಷ ಕೋಟಿಗೆ ಇರಾನ್ ಒತ್ತಾಯ

'ನಮ್ಮ ಹಣ ಬಿಡುಗಡೆ ಮಾಡಿ'

ಟೆಹರಾನ್, ನವದೆಹಲಿ (ಎಎಫ್‌ಪಿ/ಪಿಟಿಐ): 'ಯುದ್ಧ ಅಂತ್ಯಗೊಳಿಸಲು ಅಮೆರಿಕದೊಂದಿಗೆ ಮಾತುಕತೆ ಮುಂದುವರಿಯಬೇಕು ಎಂದಾದರೆ, ಕತಾರ್‌ನಲ್ಲಿ ಇರಿಸಲಾಗಿರುವ ಮುಟ್ಟುಗೋಲು ಹಾಕಿಕೊಂಡಿರುವ ನಮ್ಮ 12 ಬಿಲಿಯನ್ ಡಾಲರ್ (ಸುಮಾರು ₹1.14 ಲಕ್ಷ ಕೋಟಿ) ಅನ್ನು ತಕ್ಷಣವೇ ಬಿಡುಗಡೆ ಮಾಡಬೇಕು' ಎಂದು ಇರಾನ್ ಹೇಳಿದೆ.

ಇರಾನ್‌ನ ತಸ್ನಿಮ್ ಸುದ್ದಿ ಸಂಸ್ಥೆ ಈ ಬಗ್ಗೆ ವರದಿ ಮಾಡಿದೆ. ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್, ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ಇರಾನ್‌ನ ಕೇಂದ್ರೀಯ ಬ್ಯಾಂಕ್‌ನ ಗವರ್ನರ್ ಸೇರಿದ ನಿಯೋಗವು ಸೋಮವಾರ ದೋಹಾ ತಲುಪಿದೆ.

'ಮಾತುಕತೆ ಆರಂಭಿಸಲು ಇದು ಮೊದಲ ಹಂತವಾಗಲಿದೆ. ಹಣ ಬಿಡುಗಡೆಯಾಗುವುದು ಮಾತ್ರವಲ್ಲ, ಆ ಹಣವು ನಮಗೆ ತಲುಪಬೇಕು. ಹಣ ಬಿಡುಗಡೆ ಮಾತ್ರವೇ ಒಪ್ಪಂದಕ್ಕೆ ಬರಲು ನಾವು ಮುಂದಿಡುತ್ತಿರುವ ಷರತ್ತು ಅಲ್ಲ. ಇದೊಂದು ಭಾಗವಷ್ಟೆ ಎಂದು ಇರಾನ್ ಮೂಲಗಳು ಹೇಳಿವೆ' ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.

'ಮುಟ್ಟುಗೋಲು ಹಾಕಿಕೊಂಡಿರುವ ಇರಾನ್‌ನ ಹಣ ಬಿಡುಗಡೆ ಮತ್ತು ಇರಾನ್‌ನ ಬಂದರುಗಳಿಗೆ ಹಾಕಿರುವ ದಿಗ್ಬಂಧನವನ್ನು ತೆರವು ಮಾಡಲಾಗುವುದು. ಇದಕ್ಕೆ ಪ್ರತಿಯಾಗಿ ಹೊರ್ಮುಜ್ ಜಲಸಂಧಿಗೆ ಇರಾನ್ ವಿಧಿಸಿರುವ ದಿಗ್ಬಂಧನವನ್ನು ತೆರವು ಮಾಡಬೇಕು ಎಂದು ಅಮೆರಿಕ ಹೇಳಿದೆ' ಎಂದು 'ಫಾರ್ಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

> **ಒಂದೋ ಉತ್ತಮ ಒಪ್ಪಂದಕ್ಕೆ ಬರುತ್ತೇವೆ ಇಲ್ಲವೇ ಬೇರೆ ಮಾರ್ಗದ ಮೂಲಕ ಒಪ್ಪಂದಕ್ಕೆ ಬರುತ್ತೇವೆ. ನಾವು ಉತ್ತಮ ಒಪ್ಪಂದ ಆಗಲಿ ಎಂದು ಬಯಸುತ್ತೇವೆ**
>
> **ಮಾರ್ಕೊ ರುಬಿಯೊ,** ಅಮೆರಿಕದ ವಿದೇಶಾಂಗ ಕಾರ್ಯದರ್ಶಿ

'ಅಬ್ರಹಾಂ ಒಪ್ಪಂದಕ್ಕೆ ಇರಾನ್‌ನಿಂದ ಸಹಿ ಹಾಕಿಸಿ'

'ಪಶ್ಚಿಮ ಏಷ್ಯಾದಲ್ಲಿನ ಎಲ್ಲ ಮುಸ್ಲಿಂ ದೇಶಗಳು ಸೇರಿ ಇತರೆ ಮುಸ್ಲಿಂ ದೇಶಗಳು ಇಸ್ರೇಲ್‌ನೊಂದಿಗೆ ಉತ್ತಮ ಬಾಂಧವ್ಯ ಹೊಂದಬೇಕು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗ್ರಹಿಸಿದ್ದಾರೆ. 'ಇದು ಇರಾನ್‌ನೊಂದಿಗಿನ ಶಾಂತಿ ಒಪ್ಪಂದದ ಭಾಗ' ಎಂದೂ ಹೇಳಿದ್ದಾರೆ.

'ಅಬ್ರಹಾಂ ಒಪ್ಪಂದ'ಕ್ಕೆ ಕಡ್ಡಾಯವಾಗಿ ಸಹಿ ಹಾಕುವಂತೆ ಸೌದಿ ಅರೇಬಿಯಾ, ಕತಾರ್, ಪಾಕಿಸ್ತಾನ, ಟರ್ಕಿ, ಈಜಿಪ್ಟ್, ಜೋರ್ಡನ್ ದೇಶಗಳಿಗೆ ಟ್ರಂಪ್ ಸೂಚನೆ ನೀಡಿದ್ದಾರೆ. ಈ ದೇಶಗಳೊಂದಿಗೆ ಶನಿವಾರ ಮಾತುಕತೆ ನಡೆಸಿದ್ದಾಗಿ ಟ್ರಂಪ್ ಅವರು ಪೋಸ್ಟ್ ಹಂಚಿಕೊಂಡಿದ್ದಾರೆ.

'ಸೌದಿ ಅರೇಬಿಯಾ ಮತ್ತು ಕತಾರ್ ತಕ್ಷಣದಲ್ಲಿಯೇ ಸಹಿ ಹಾಕಬೇಕು. ಇತರೆ ದೇಶಗಳು ಇವುಗಳನ್ನು ಹಿಂಬಾಲಿಸಲಿವೆ. ಸಹಿ ಹಾಕಲಿಲ್ಲ ಎಂದಾದರೆ, ಇದು ಅವುಗಳ ಕೆಟ್ಟ ಉದ್ದೇಶವನ್ನು ತೋರಿಸುತ್ತದೆ. ಈ ಒಪ್ಪಂದಕ್ಕೆ ಸಹಿ ಹಾಕಲು ಇರಾನ್‌ಗೆ ಯಾವ ದೇಶ ಮನವೊಲಿಸುತ್ತದೆಯೊ ಆ ದೇಶವನ್ನು ಗೌರವಿಸಲಾಗುವುದು' ಎಂದು ಬರೆದುಕೊಂಡಿದ್ದಾರೆ.

ಏನಿದು ಅಬ್ರಹಾಂ ಒಪ್ಪಂದ?

ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲಸುವಂತೆ ಮಾಡಲು 2020ರಲ್ಲಿ ಡೊನಾಲ್ಡ್ ಟ್ರಂಪ್ ಅವರು 'ಅಬ್ರಹಾಂ ಒಪ್ಪಂದ'ವನ್ನು ರಚಿಸಿದ್ದರು. ಯುಎಇ, ಬಹರೇನ್, ಸುಡಾನ್, ಮೊರಕ್ಕೊ ಮತ್ತು ಕಜಾಕಸ್ತಾನವು ಇಸ್ರೇಲ್‌ನೊಂದಿಗೆ ಈ ಒಪ್ಪಂದ ಮಾಡಿಕೊಂಡಿವೆ.

ಧಾರ್ಮಿಕ, ಸಾಂಸ್ಕೃತಿಕವಾಗಿ ಪಶ್ಚಿಮ ಏಷ್ಯಾದಲ್ಲಿನ ದೇಶಗಳು ಭಿನ್ನವಾಗಿದೆ. ಇದರಿಂದಾಗಿ ಈ ದೇಶಗಳ ಮಧ್ಯೆ ಸಂಘರ್ಷ, ವೈರತ್ವ ಇದೆ. ಇದನ್ನು ಕೊನೆಗಾಣಿಸಿ ರಾಜತಾಂತ್ರಿಕ ಸಂಬಂಧ ವೃದ್ಧಿಯಾಗಿಸಲು ಟ್ರಂಪ್ ಅವರು ಒಪ್ಪಂದ ರಚಿಸಿದ್ದರು.

ಅಬ್ರಹಾಂ ಅವರನ್ನು ಜುಡಾಯಿಸಂ, ಇಸ್ಲಾಂ ಮತ್ತು ಕ್ರೈಸ್ತ ಧರ್ಮದವರು ತಮ್ಮ ಧರ್ಮಗುರು/ಪ್ರವಾದಿ ಎಂದು ನಂಬಿದ್ದಾರೆ. ಈ ಕಾರಣದಿಂದ ಈ ಒಪ್ಪಂದಕ್ಕೆ 'ಅಬ್ರಹಾಂ ಒಪ್ಪಂದ' ಎಂದು ಹೆಸರಿಡಲಾಗಿದೆ.

ಆರ್‌ಸಿಬಿಗೆ ಟೈಟನ್ಸ್ ಬೌಲಿಂಗ್ ಸವಾಲು

ಧರ್ಮಶಾಲಾದಲ್ಲಿ ಮೊದಲ ಕ್ವಾಲಿಫಯರ್ ಪಂದ್ಯ ಇಂದು: ಸತತ ಎರಡನೇ ಬಾರಿ ಫೈನಲ್ ಪ್ರವೇಶದತ್ತ ರಜತ್ ಪಾಟೀದಾರ್ ಪಡೆ ಚಿತ್ತ

ಪ್ರಜಾವಾಣಿ ವಾರ್ತೆ

ಧರ್ಮಶಾಲಾ: ಇಲ್ಲಿನ ರಮಣೀಯ ಕ್ರೀಡಾಂಗಣದ ಸುತ್ತಲಿನ ಹಿಮಾಲಯದ ಪರ್ವತಶ್ರೇಣಿಯ ಮೇಲೆ ಸೂರ್ಯನ ಕಿರಣಗಳು ಬಿದ್ದಾಗಲೆಲ್ಲ ಅದು ಹೊಂಬಣ್ಣದಿಂದ ಹೊಳೆಯುತ್ತದೆ. ಅಂತಹದ್ದೇ ಬಣ್ಣದ ಟ್ರೋಫಿಯನ್ನು ಎತ್ತಿಹಿಡಿಯುವ ಮೊದಲ ಹೆಜ್ಜೆಯಾಗಿ ಮಂಗಳವಾರ ಇಲ್ಲಿ ನಡೆಯಲಿರುವ ಕ್ವಾಲಿಫಯರ್–1ರಲ್ಲಿ ಗೆದ್ದು ಫೈನಲ್ ತಲುಪಲು ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಗುಜರಾತ್ ಟೈಟನ್ಸ್ ತಂಡಗಳು ಹವಣಿಸುತ್ತಿವೆ.

ಆರ್‌ಸಿಬಿ, ಟೈಟನ್ಸ್– ಈ ಎರಡೂ ತಂಡಗಳು ಅಗ್ರಸರದಿಯಲ್ಲಿ ಬಲಿಷ್ಠ ಬ್ಯಾಟಿಂಗ್, ಆಕ್ರಮಣಕಾರಿ ಬೌಲಿಂಗ್, ಒತ್ತಡದ ಸನ್ನಿವೇಶದಲ್ಲಿ ಸಂಯಮದಿಂದ ಆಡಿ ಪಂದ್ಯದ ಗತಿಯನ್ನು ಬದಲಾಯಿಸುವ ಛಾತಿ, ತಂತ್ರಗಾರಿಕೆಯನ್ನು ತೋರಿವೆ. ಅಂಕಪಟ್ಟಿಯಲ್ಲಿ ಅಗ್ರ ಎರಡು ಸ್ಥಾನಗಳನ್ನು (ತಲಾ 18 ಪಾಯಿಂಟ್ಸ್) ಪಡೆದಿವೆ. ಇದರಿಂದಾಗಿ ಈ ತಂಡಗಳಿಗೆ ಫೈನಲ್ ತಲುಪಲು ಎರಡು ಯತ್ನದ ಅವಕಾಶವೂ ದೊರೆತಿದೆ.

ಹಾಲಿ ಚಾಂಪಿಯನ್, ರಜತ್ ಪಾಟೀದಾರ್ ನೇತೃತ್ವದ ರಾಯಲ್ ಚಾಲೆಂಜರ್ಸ್ ತಂಡವು ಆರಂಭದಿಂದಲೇ ದೃಢಚಿತ್ತದಿಂದ ಆಡಿತು. ಹೋದ ವರ್ಷದ ಜೂನ್ 3ರಂದು ಹೊನಲು ಬೆಳಕಿನಲ್ಲಿ ಪ್ರಶಸ್ತಿ ಗೆಲ್ಲುವ ಹಾದಿಯಲ್ಲಿ ಅಭಿಮಾನಿಗಳಿಗೆ ಉಣಬಡಿಸಿದ ಆಟವನ್ನು ಈ ವರ್ಷವೂ ಮುಂದುವರಿಸಿತು.

ತಮ್ಮ ಉತ್ತುಂಗದ ದಿನಗಳಲ್ಲಿ ಆಡುತ್ತಿದ್ದ ರೀತಿಯಲ್ಲೇ ಬ್ಯಾಟಿಂಗ್ ಮಾಡುತ್ತಿರುವ, ಮಿಂಚಿನ ಓಟ, ಚುರುಕಿನ ಫೀಲ್ಡಿಂಗ್‌ನಿಂದ ಯುವ ಆಟಗಾರರಿಗೆ ಮಾದರಿಯಾಗಿರುವ ವಿರಾಟ್ ಕೊಹ್ಲಿ ಅವರು ತಂಡದ ಪರ ಹೆಚ್ಚು ರನ್ (557) ಕಲೆಹಾಕಿದ್ದಾರೆ. ಇದರಲ್ಲಿ 1 ಶತಕ, 4 ಅರ್ಧಶತಕಗಳಿವೆ. 37 ವರ್ಷ ವಯಸ್ಸಿನ ಕೊಹ್ಲಿ ಆಕ್ರಮಣ ಮತ್ತು ಸಂಯಮದ ಹದವಾದ ಮಿಶ್ರಣದಂತಿದ್ದಾರೆ. ತಂಡಕ್ಕೆ ಉತ್ತಮ ಬುನಾದಿ ಹಾಕುತ್ತಿದ್ದಾರೆ. 'ಚೇಸಿಂಗ್ ಮಾಸ್ಟರ್' ಖ್ಯಾತಿಗೆ ತಕ್ಕಂತೆ ಆಡಿದ್ದಾರೆ.

ಗುಜರಾತ್ ಟೈಟನ್ಸ್ ತಂಡದ ಬ್ಯಾಟರ್ ಸಾಯಿ ಸುದರ್ಶನ್ ಪಿಟಿಐ ಚಿತ್ರ

ಕಗಿಸೊ ರಬಾಡ

ರಶೀದ್ ಖಾನ್

ಫಿಲ್ ಸಾಲ್ಟ್ ಬೆರಳಿನ ಗಾಯದಿಂದ ಪೂರ್ಣವಾಗಿ ಗುಣಮುಖರಾಗದ ಕಾರಣ ಆಡುವ 11ರ ತಂಡದಲ್ಲಿ ಸ್ಥಾನ ಪಡೆಯುವುದು ಅನುಮಾನ. ಹೀಗಾಗಿ ವೆಂಕಟೇಶ ಅಯ್ಯರ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಕೇಳಿದ ಪ್ರಶ್ನೆಗೆ ರಜತ್ ನೇರವಾಗಿ ಏನೂ ಹೇಳಲಿಲ್ಲ. ಆಡುವ 11ರ ತಂಡವನ್ನು ಇನ್ನೂ ಅಂತಿಮಗೊಳಿಸಿಲ್ಲ ಎಂದರು.

ಮಧ್ಯಮ ಕ್ರಮಾಂಕದಲ್ಲಿ ದೇವದತ್ತ ಪಡಿಕ್ಕಲ್ (433), ರಜತ್ ಪಾಟೀದಾರ್ (393) ಅವರೂ ಉಪಯುಕ್ತ ಕೊಡುಗೆ ನೀಡಿದ್ದಾರೆ. ನೀಳಕಾಯದ ಟಿಮ್ ಡೇವಿಡ್ ಫಿನಿಷರ್ ಆಗಿ ಆಟದ ಮಟ್ಟ ಎತ್ತರಿಸಿದ್ದಾರೆ. ಅಪರೂಪಕ್ಕೆ ಅಗ್ರ ಕ್ರಮಾಂಕ ವಿಫಲವಾದಾಗ ಕೃಣಾಲ್ ಪಾಂಡ್ಯ ನೆರವಿಗೆ ಬಂದಿದ್ದಾರೆ. ಅಷ್ಟೇ ಅಲ್ಲ, ಮುಂಬೈ ಇಂಡಿಯನ್ಸ್ ವಿರುದ್ಧ ಅಂತಿಮ ಓವರಿನಲ್ಲಿ ಭುವನೇಶ್ವರ್ ಕುಮಾರ್ ಹೊಡೆದ ಸಿಕ್ಸರ್ ಮರೆಯುವಂತಿಲ್ಲ.

ವಾಸ್ತವದಲ್ಲಿ, 36 ವರ್ಷ ವಯಸ್ಸಿನ ಭುವನೇಶ್ವರ್ ಅವರು ಈ ಋತುವಿನಲ್ಲಿ 24 ವಿಕೆಟ್‌ಗಳನ್ನು ಕಬಳಿಸಿ ಆರ್‌ಸಿಬಿಯ 'ಅತಿ ಮೌಲ್ಯಯುತ ಆಟಗಾರ' ಎನಿಸಿದ್ದಾರೆ. ಎದುರಾಳಿ ತಂಡಗಳ ಅಗ್ರಕ್ರಮಾಂಕಕ್ಕೆ ಸಿಂಹಸ್ವಪ್ನವಾಗಿದ್ದಾರೆ. ಸರಳ ಆದರೆ ಪರಿಣಾಮಕಾರಿ ದಾಳಿಯಿಂದ ಬ್ಯಾಟರ್‌ಗಳನ್ನು ಕಂಗೆಡಿಸಿದ್ದಾರೆ. ಅವರಿಗೆ ಜೋಶ್ ಹೇಜಲ್‌ವುಡ್ ಉತ್ತಮ ಬೆಂಬಲ ನೀಡಿದ್ದಾರೆ. ಪವರ್‌ಪ್ಲೇ ಅವಧಿಯಲ್ಲಿ ಇವರಿಬ್ಬರು ಎದುರಾಳಿಗಳನ್ನು ಕಟ್ಟಿಹಾಕಿದ್ದಾರೆ. ಅನುಭವಿ ಸ್ಪಿನ್ನರ್ ಕೃಣಾಲ್ ಪಾಂಡ್ಯ ದಾಳಿಗೆ ಬಲ ನೀಡಿದ್ದಾರೆ. ಈ ಹಿಂದಿನ ವರ್ಷಗಳಲ್ಲಿ ಬೌಲಿಂಗ್ ವಿಭಾಗ ಆರ್‌ಸಿಬಿಯ ದೌರ್ಬಲ್ಯವಾಗಿತ್ತು.

ಕಡೆಗಣಿಸಲಾಗದ ಟೈಟನ್ಸ್: ಟೈಟನ್ಸ್ ಸಹ ಇಂಥದ್ದೇ ಬಲ ಹೊಂದಿದೆ. ಅಗ್ರ ಸರದಿಯಲ್ಲಿ ಸಾಯಿ ಸುದರ್ಶನ್ ಅವರ ಅಮೋಘ ಆಟ ಈ ಋತುವಿನಲ್ಲೂ ಮುಂದುವರಿದಿದೆ. ಅವರು 638 ರನ್ ಕಲೆಹಾಕಿದರೆ, ಅವರ ಜೊತೆ ಇನಿಂಗ್ಸ್ ಆರಂಭಿಸುತ್ತಿರುವ ನಾಯಕ ಶುಭಮನ್ ಗಿಲ್ (616) ಕಾಣಿಕೆ ಕಮ್ಮಿಯೇನಿಲ್ಲ. ಆರಂಭದಲ್ಲಿ ಸ್ವಲ್ಪ ನಿಧಾನ ಎನಿಸಿದರೂ ನಂತರ ಆಕ್ರಮಣಕಾರಿಯಾಗಿ ಆಡಿ ರನ್‌ವೇಗ ಹೆಚ್ಚಿಸಬಲ್ಲರು. ಮೂರನೇ ಕ್ರಮಾಂಕದಲ್ಲಿ ಜೋಸ್ ಬಟ್ಲರ್ ಅವರೂ ಬೀಸಾಟವಾಡಬಲ್ಲ ಸಾಮರ್ಥ್ಯ ಹೊಂದಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಟೈಟನ್ಸ್ ತಂಡದ ಬತ್ತಳಿಕೆಯಲ್ಲಿರುವ ಅಸ್ತ್ರಗಳು ಹೆಚ್ಚು ಪರಿಣಾಮಕಾರಿಯಾಗಿವೆ. ಕಗಿಸೊ ರಬಾಡ (24 ವಿಕೆಟ್), ಮೊಹಮ್ಮದ್ ಸಿರಾಜ್ (17) ಮತ್ತು ಪ್ರಸಿದ್ಧ ಕೃಷ್ಣ (14) ಅವರು ಛಾಪು ಮೂಡಿಸಿದ್ದಾರೆ. ಅನುಭವಿ ಸ್ಪಿನ್ನರ್ ರಶೀದ್ ಖಾನ್ (19) ತಡವಾಗಿ ಮೋಡಿ ಕಂಡುಕೊಂಡಿದ್ದಾರೆ. 'ಫಾರ್ಮ್ ಅಲ್ಪಕಾಲದ್ದು, 'ಕ್ಲಾಸ್' ದೀರ್ಘಕಾಲದ್ದು' ಎಂಬುದಕ್ಕೆ ಅನ್ವರ್ಥವಾಗಿದ್ದಾರೆ. ಜೇಸನ್ ಹೋಲ್ಡರ್ ಎರಡೂ ವಿಭಾಗಗಳಲ್ಲಿ ಉಪಯುಕ್ತ ಆಟಗಾರ. ಆದರೆ ಮಧ್ಯಮ ಮತ್ತು ಕೆಳ ಕ್ರಮಾಂಕದ ಬ್ಯಾಟರ್‌ಗಳ ಲಯ ಸ್ಥಿರವಾಗಿಲ್ಲ. ಅಗ್ರಸರದಿ ಕೈಕೊಟ್ಟಲ್ಲಿ ತಂಡ ತೊಂದರೆಗೆ ಸಿಲುಕಿದ ನಿದರ್ಶನಗಳಿವೆ. ಇದೇ ಅಂಶವನ್ನು ಆರ್‌ಸಿಬಿ ಬಂಡವಾಳ ಮಾಡಿಕೊಳ್ಳಲು ಹೊರಟಿದೆ.

ಎಚ್‌ಪಿಸಿಎ ಕ್ರೀಡಾಂಗಣವು ಈ ಋತುವಿನಲ್ಲಿ ಬ್ಯಾಟರ್‌ಗಳ ಪಾಲಿಗೆ ಸ್ವರ್ಗವಾಗಿದೆ. ಆರು ಪಂದ್ಯಗಳ ಪೈಕಿ ಐದು ಬಾರಿ ತಂಡಗಳು 200ಕ್ಕಿಂತ ಹೆಚ್ಚು ಮೊತ್ತ ದಾಖಲಿಸಿವೆ. ಕನಿಷ್ಠ ಮೊತ್ತ 8 ವಿಕೆಟ್‌ಗೆ 199. ಹೀಗಾಗಿ ಮಂಗಳವಾರದ ಪಂದ್ಯದಲ್ಲಿಯೂ ರನ್‌ಹೊಳೆ ಹರಿಯುವ ನಿರೀಕ್ಷೆಯಿದೆ.

ಮುಖ್ಯಾಂಶಗಳು

- ಗೆದ್ದ ತಂಡ ನೇರವಾಗಿ ಫೈನಲ್‌ಗೆ ಪ್ರವೇಶ
- ಸೋತ ತಂಡ ಎರಡನೇ ಕ್ವಾಲಿಫಯರ್‌ನಲ್ಲಿ ಮತ್ತೊಂದು ಅವಕಾಶ

ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್

ದೇವದತ್ತ ಪಡಿಕ್ಕಲ್

ಭುವನೇಶ್ವರ್ ಕುಮಾರ್

ಅತಿ ಹೆಚ್ಚು ರನ್ ಗಳಿಸಿದವರು (ಉಭಯ ತಂಡಗಳ ಬ್ಯಾಟರ್‌ಗಳು)

ಬ್ಯಾಟರ್	ತಂಡ	ಪಂದ್ಯ	ರನ್	ಗರಿಷ್ಠ	ಸರಾಸರಿ
ಸಾಯಿ ಸುದರ್ಶನ್	ಜಿಟಿ	14	638	100	49.07
ಶುಭಮನ್ ಗಿಲ್	ಜಿಟಿ	14	616	86	47.38
ವಿರಾಟ್ ಕೊಹ್ಲಿ	ಆರ್‌ಸಿಬಿ	14	557	105*	50.63
ದೇವದತ್ತ ಪಡಿಕ್ಕಲ್	ಆರ್‌ಸಿಬಿ	14	433	61	36.08

ಅತಿ ಹೆಚ್ಚು ವಿಕೆಟ್ ಗಳಿಸಿದವರು (ಉಭಯ ತಂಡಗಳ ಬೌಲರ್‌ಗಳು)

ಬೌಲರ್	ತಂಡ	ಪಂದ್ಯ	ವಿಕೆಟ್	ಶ್ರೇಷ್ಠ	ಸರಾಸರಿ
ಭುವನೇಶ್ವರ್ ಕುಮಾರ್	ಆರ್‌ಸಿಬಿ	14	24	23ಕ್ಕೆ 4	18.50
ಕಗಿಸೊ ರಬಾಡ	ಜಿಟಿ	14	24	25ಕ್ಕೆ 3	20.54
ರಶೀದ್ ಖಾನ್	ಜಿಟಿ	14	19	33ಕ್ಕೆ4	21.94
ರಸಿಕ್ ಸಲಾಂ	ಆರ್‌ಸಿಬಿ	10	14	24ಕ್ಕೆ4	25.28

ಕೌರ್‌ಗೆ ಪದ್ಮ ಗೌರವ

ಪಿಟಿಐ ಚಿತ್ರ:

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿಶ್ವಕಪ್ ವಿಜೇತ ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಸೋಮವಾರ ಪ್ರದಾನ ಮಾಡಿದರು

ಚಿನ್ನ ಗೆದ್ದ ಯಶಸ್‌ಗೆ ತಪ್ಪಿದ ದಾಖಲೆ

ಬೆಂಗಳೂರು: ರಾಂಚಿಯಲ್ಲಿ ನಡೆಯುತ್ತಿರುವ ಫೆಡರೇಷನ್ ಕಪ್ ರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟದಲ್ಲಿ 400 ಮೀ. ಹರ್ಡಲ್ಸ್ ಓಟದಲ್ಲಿ ಕಾಮನ್‌ವೆಲ್ತ್ ಕ್ರೀಡೆಗಳಿಗೆ ನಿಗದಿಪಡಿಸಿದ್ದ ಅರ್ಹತಾ ಮಟ್ಟವನ್ನು ಭಾನುವಾರವಷ್ಟೇ ಮೀರಿದ್ದ ಕರ್ನಾಟಕದ ಪಿ.ಯಶಸ್, ಸೋಮವಾರ ಈ ಓಟವನ್ನು 49 ಸೆಕೆಂಡುಗಳಲ್ಲಿ ಪೂರೈಸಿ ಗಮನ ಸೆಳೆದರು.

ಇದು ದೇಶದಲ್ಲಿ ಸಕ್ರಿಯವಾಗಿರುವ ಓಟಗಾರನೊಬ್ಬ ದಾಖಲಿಸಿದ ಅತಿ ವೇಗದ ಅವಧಿ ಎನಿಸಿತು. ಧರುನ್ ಅಯ್ಯಾಸಾಮಿ 2019ರಲ್ಲಿ 48.80 ಸೆ.ಗಳಲ್ಲಿ ಓಡಿದ್ದು ದೀರ್ಘ ಕಾಲದಿಂದ ರಾಷ್ಟ್ರೀಯ ದಾಖಲೆಯಾಗಿ ಉಳಿದಿದೆ. ಯಶಸ್, ತಮ್ಮ ದೀರ್ಘ ಕಾಲದ ಎದುರಾಳಿ, ತಮಿಳುನಾಡಿನ ಸಂತೋಷ್ ಕುಮಾರ್ ಟಿ (49.06 ಸೆ) ಅವರನ್ನು ಹಿಂದೆಹಾಕಿದರು. ಈಗ ಇಬ್ಬರೂ ಕಾಮನ್‌ವೆಲ್ತ್ ಕೂಟದ ಅರ್ಹತಾ ಮಟ್ಟ (50.5 ಸೆ.) ತಲುಪಿದಂತಾಗಿದೆ. ಕರ್ನಾಟಕದ ಶಿವಾಜಿ ಪರಶುರಾಮ್ ಅವರು 5000 ಮೀ. ಓಟವನ್ನು 14ನಿ.14.43 ಸೆ.ಗಳಲ್ಲಿ ಪೂರೈಸಿ ಚಿನ್ನ ಗೆದ್ದರು.

ಮಹಿಳೆಯರ 400 ಮೀ. ಹರ್ಡಲ್ಸ್ ಓಟದಲ್ಲಿ ಸಿಂಚಲ್ ಕಾವೇರಮ್ಮ (57.77 ಸೆ.) ಬೆಳ್ಳಿ ಪದಕ ಗೆದ್ದರು. ರಾಷ್ಟ್ರೀಯ ದಾಖಲೆ ಹೊಂದಿರುವ ತಮಿಳುನಾಡಿನ ವಿದ್ಯಾ ರಾಮರಾಜ್ (56.61 ಸೆ.) ಅಗ್ರಸ್ಥಾನ ಪಡೆದರು. ಕಾಮನ್‌ವೆಲ್ತ್ ಕ್ರೀಡೆಗಳಿಗೆ 54.67 ಸೆ.ಗಳ ಅರ್ಹತಾ ಮಟ್ಟ ನಿಗದಿಪಡಿಸಲಾಗಿತ್ತು.

ಹೈಜಂಪ್‌ನಲ್ಲಿ, ಜೆಎಸ್‌ಡಬ್ಲ್ಯು ತಂಡವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ಅಭಿನಯಾ ಎಸ್.ಶೆಟ್ಟಿ 1.73 ಮೀ. ಎತ್ತರ ಜಿಗಿದು ಕಂಚಿನ ಪದಕ ಗೆದ್ದರು. ಉತ್ತರ ಪ್ರದೇಶದ ಖ್ಯಾತಿ ಮಾಥುರ್ (1.82 ಮೀ.) ಚಿನ್ನ ಗೆದ್ದರು.

ಅಗ್ರ ಟ್ರಿಪಲ್ ಜಂಪರ್ ಪ್ರವೀಣ್ ಚಿತ್ರವೇಲ್ (ತಮಿಳುನಾಡು) 17.08 ಮೀ. ದೂರ ಜಿಗಿದು ಸಿಡಬ್ಲ್ಯುಜಿ ಮಟ್ಟ ದಾಟಿದರು.

ತೂರ್‌ಗೆ ಹಿನ್ನಡೆ: ಶಾಟ್‌ಪಟ್‌ನಲ್ಲಿ ಮಧ್ಯಪ್ರದೇಶದ ಸಮರದೀಪ್ ಸಿಂಗ್ ಗಿಲ್ ಅವರು, ಎರಡು ಬಾರಿಯ ಏಷ್ಯನ್ ಗೇಮ್ಸ್ ಚಾಂಪಿಯನ್ ತಜಿಂದರ್ ಪಾಲ್ ತೂರ್ ಅವರನ್ನು ಹಿಂದೆಹಾಕಿ ಕಾಮನ್‌ವೆಲ್ತ್ ಗೇಮ್ಸ್ ಟಿಕೆಟ್ ಪಡೆದರು. ಸಮರದೀಪ್ ಅವರು ಗುಂಡನ್ನು 20.46 ಮೀ. ದೂರ ಒಗೆದರು. ಫೇವರಿಟ್ ಆಗಿದ್ದ ತಜಿಂದರ್ ಪಾಲ್ 20.07 ಮೀ. ದೂರ ಎಸೆದರು. ಕಾಮನ್‌ವೆಲ್ತ್ ಗೇಮ್ಸ್ ಅರ್ಹತಾ ಮಟ್ಟ 20.36 ಮೀ.ಗಳಾಗಿತ್ತು.

'ಟೀಕೆಗಳಲ್ಲಿ ತಪ್ಪೇನಿಲ್ಲ, ಚೆನ್ನಾಗಿ ಆಡಿಲ್ಲ'

ಓಸ್ಲೊ (ಪಿಟಿಐ): 'ಒಂದೂವರೆ ವರ್ಷದಿಂದ ನನ್ನ ಆಟದ ಮಟ್ಟ (ಫಾರ್ಮ್) ಉತ್ತಮವಾಗಿಲ್ಲದ ಕಾರಣ ಈ ಬಗ್ಗೆ ಕೇಳಿಬರುತ್ತಿರುವ ಟೀಕೆಗಳಲ್ಲಿ ತಪ್ಪೇನೂ ಇಲ್ಲ' ಎಂದು ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಹೇಳಿದ್ದಾರೆ.

ನಾರ್ವೆ ಓಪನ್ ಟೂರ್ನಿಯಲ್ಲಿ ಆಡಲು ಭಾರತದ ಸ್ಟಾರ್ ಆಟಗಾರ ಇಲ್ಲಿಗೆ ಬಂದಿದ್ದಾರೆ. ಈ ವರ್ಷದ ಕೊನೆಯಲ್ಲಿ ವಿಶ್ವ ಚಾಂಪಿಯನ್ ಪಟ್ಟ ಉಳಿಸಿಕೊಳ್ಳಲು ಚಾಲೆಂಜರ್ ಜಾವೊಖಿರ್ ಸಿಂದರೋವ್ ಅವರನ್ನು ಎದುರಿಸಲಿರುವ ಗುಕೇಶ್, ಅದಕ್ಕೆ ಪೂರ್ವಭಾವಿಯಾಗಿ ಈ ಟೂರ್ನಿಯಲ್ಲಿ ಉತ್ತಮ ಫಲಿತಾಂಶ ಪಡೆಯಲು ತವಕದಲ್ಲಿದ್ದಾರೆ. ಇದೇ ತಿಂಗಳ 29ರಂದು ಗುಕೇಶ್ 20ನೇ ವರ್ಷಕ್ಕೆ ಕಾಲಿಡಲಿದ್ದಾರೆ.

'ಹೆಚ್ಚಿನ ಟೀಕೆಗಳನ್ನು (ಮಾಜಿ ದಿಗ್ಗಜ ಆಟಗಾರರು ಮಾಡಿರುವ) ನಾನು ಗಮನಿಸಿಲ್ಲ. ಆದರೆ ನಾನು ಕೆಲವನ್ನು ಕೇಳಿದ್ದೇನೆ. ಅವುಗಳಲ್ಲೇನೂ ತಪ್ಪಿಲ್ಲ' ಎಂದು ಗುಕೇಶ್ ಭಾನುವಾರ ತಿಳಿಸಿದ್ದಾರೆ.

'18 ತಿಂಗಳಿಂದ ನಾನು ಉತ್ತಮವಾಗಿ ಆಡಿಲ್ಲ. ನನ್ನ ಪ್ರದರ್ಶನವು ನಿರೀಕ್ಷೆಗಿಂತ ಕೆಳಮಟ್ಟದಲ್ಲಿದೆ. ಟೀಕಾಕಾರರಿಗೆ ಏನನಿಸುತ್ತಿದೆಯೋ ಅದನ್ನು ಹೇಳುವ ಹಕ್ಕಿದೆ. ಉತ್ತಮವಾಗಿ ಆಡಬೇಕಾದ ಹಕ್ಕು ನನ್ನದು' ಎಂದು ಅವರು ಹೇಳಿದರು. ಅವರ ಟೀಕಾಕಾರರಲ್ಲಿ ಒಬ್ಬರಾದ ಮಾಜಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಈ ವೇಳೆ ಅವರ ಪಕ್ಕದಲ್ಲೇ ಆಸೀನರಾಗಿದ್ದರು.

ಕಾರ್ಲ್‌ಸನ್ ಅವರು ತಮ್ಮ ತವರಿನಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯಲ್ಲಿ ಎಂಟನೇ ಬಾರಿ ಪ್ರಶಸ್ತಿ ಗೆಲ್ಲಲು ಯತ್ನಿಸಲಿದ್ದಾರೆ.

ಈ ವರ್ಷ ಗುಕೇಶ್ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ 10ನೇ ಸ್ಥಾನ ಗಳಿಸಿದ್ದರು. ಪ್ರಾಗ್ ಇಂಟರ್‌ನ್ಯಾಷನಲ್ ಚೆಸ್ ಫೆಸ್ಟಿವಲ್‌ನಲ್ಲಿ 9ನೇ ಮತ್ತು ಈ ತಿಂಗಳು (ಮೇ 3 ರಿಂದ 10) ನಡೆದ ಸೂಪರ್ ಬೆಟ್ ರ್‍ಯಾಪಿಡ್ ಮತ್ತು ಬ್ಲಿಟ್ಝ್ ಟೂರ್ನಿಯಲ್ಲಿ ಆರನೇ ಸ್ಥಾನ ಪಡೆದಿದ್ದರು.

ಗ್ರ್ಯಾಂಡ್ ಚೆಸ್ ಟೂರ್‌ನ ಎಲ್ಲಾ 'ಕ್ಲಾಸಿಕಲ್' ಟೂರ್ನಿಗಳಿಂದ ಅವರು ಹಿಂದೆಸರಿದಿದ್ದಾರೆ. ನಾರ್ವೆ ಚೆಸ್ ಟೂರ್ನಿಯ ನಂತರ ಅವರು ಚೆಸ್ ಒಲಿಂಪಿಯಾಡ್‌ನಲ್ಲಿ ಆಡಲಿದ್ದಾರೆ. ಆ ಬಳಿಕ ಸಿಂದರೋವ್ ವಿರುದ್ಧ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಆಡಲಿದ್ದಾರೆ.

ಹೆಡ್, ಪತ್ನಿಗೆ ಆನ್‌ಲೈನ್ ನಿಂದನೆ

ಸಿಡ್ನಿ (ಪಿಟಿಐ): ಐಪಿಎಲ್ ಪಂದ್ಯದ ವೇಳೆ ವಿರಾಟ್ ಕೊಹ್ಲಿ ಜೊತೆ ತಮ್ಮ ಪತಿ ವಾಗ್ವಾದದಲ್ಲಿ ತೊಡಗಿದ್ದ ನಂತರ ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ನಿಂದನಾತ್ಮಕ ಪ್ರತಿಕ್ರಿಯೆಗಳು ಬರುತ್ತಿವೆ ಎಂದು ಟ್ರಾವಿಸ್ ಹೆಡ್ ಪತ್ನಿ ಜೆಸಿಕಾ ಅವರು ಸೋಮವಾರ ದೂರಿದ್ದಾರೆ.



ಟ್ರಾವಿಸ್ ಹೆಡ್

ಹೋದ ಶುಕ್ರವಾರ ಹೈದರಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡ 55 ರನ್‌ಗಳಿಂದ ಆರ್‌ಸಿಬಿ ತಂಡವನ್ನು ಸೋಲಿಸಿತ್ತು. ಆ ಪಂದ್ಯದ ವೇಳೆ ಕೊಹ್ಲಿ ಜೊತೆ ಆಕ್ರಮಣಕಾರಿ ಬ್ಯಾಟರ್ ಹೆಡ್ ವಾಕ್ಸಮರದಲ್ಲಿ ತೊಡಗಿದ್ದರು.

ಪಂದ್ಯಾನಂತರ ಸಾಂಪ್ರದಾಯಿಕ ಹಸ್ತಲಾಘವದ ವೇಳೆ ಹೆಡ್ ಅವರು ಕೈಚಾಚಿದರೂ, ಅವರತ್ತ ನೋಡದೇ ಕೊಹ್ಲಿ ಮುಂದೆಹೋಗಿದ್ದರು. ಆದರೆ ಇತರ ಆಟಗಾರರಿಗೆ ಹಸ್ತಲಾಘವ ನೀಡಿದ್ದರು.

ಈ ಪ್ರಕರಣದ ಬಳಿಕ ತಮ್ಮ ಮತ್ತು ಹೆಡ್ ಅವರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಸಾಕಷ್ಟು ನಿಂದನೆಗಳು ಬರುತ್ತಿವೆ ಎಂದು ಎಂದು ಜೆಸಿಕಾ ಬೇಸರ ವ್ಯಕ್ತಪಡಿಸಿದ್ದಾರೆ. 'ನಮಗೆ ತೊಂದರೆಯಿಲ್ಲ. ಆದರೆ ನನ್ನ ಸ್ನೇಹಿತೆಯರು, ಕುಟುಂಬದ ವಿರುದ್ಧವೂ ನಿಂದನಾತ್ಮಕ ಬರಹಗಳ ದಾಳಿ ನಡೆಸಲಾಗಿದೆ' ಎಂದು ಅವರು 'ಅಡಿಲೇಡ್ ಅಡ್ವರ್ಟೈಸರ್'ಗೆ ತಿಳಿಸಿದ್ದಾರೆ.

ಫ್ರೆಂಚ್ ಓಪನ್ ಟೆನಿಸ್: ಟೇಲರ್‌ಗೆ ನಿಶೇಶ್ ಆಘಾತ, ವಾವ್ರಿಂಕಾಗೆ ನಿರಾಸೆ

ಶ್ವಾಂಟೆಕ್, ಜೊಕೊವಿಚ್ ಶುಭಾರಂಭ

ಪ್ಯಾರಿಸ್ (ಎಪಿ): ನಾಲ್ಕು ಬಾರಿಯ ಚಾಂಪಿಯನ್ ಇಗಾ ಶ್ವಾಂಟೆಕ್ ಅವರು ಸೋಮವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಸರ್ಬಿಯಾದ ದಿಗ್ಗಜ ಆಟಗಾರ ನೊವಾಕ್ ಜೊಕೊವಿಚ್ ಅವರು ನಾಲ್ಕು ಸೆಟ್‌ಗಳ ಹೋರಾಟದಲ್ಲಿ ಫ್ರಾನ್ಸ್‌ನ ಜಿಯೋವಾನಿ ಎಂಪೆಟ್ಶಿ ಪೆರಿಕಾರ್ಡ್ ಅವರನ್ನು ಸೋಲಿಸಿ ಎರಡನೇ ಸುತ್ತು ತಲುಪಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಶ್ವಾಂಟೆಕ್ 6-1, 6-2ರಿಂದ ನಿರಾಯಾಸದ ಗೆಲುವು ಸಾಧಿಸಿ ಎರಡನೇ ಸುತ್ತು ತಲುಪಿದರು. 2020, 2022, 2023 ಮತ್ತು 2024ರಲ್ಲಿ ಪ್ರಶಸ್ತಿಯನ್ನು ಗೆದ್ದಿರುವ ಪೋಲೆಂಡ್‌ನ ಶ್ವಾಂಟೆಕ್ ಅವರು ಏಳನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಪ್ರಯತ್ನದಲ್ಲಿದ್ದಾರೆ. ಕಳೆದ ಆವೃತ್ತಿಯಲ್ಲಿ ಅವರು ಸೆಮಿಫೈನಲ್‌ನಲ್ಲಿ ಅರಿನಾ ಸಬಲೆಂಕಾ ವಿರುದ್ಧ ಸೋತು ಹೊರಬಿದ್ದಿದ್ದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಜೊಕೊವಿಚ್ ಅವರು ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನ ಪಂದ್ಯದಲ್ಲಿ 5-7, 7-5, 6-1, 6-4ರಿಂದ ಜಿಯೋವಾನಿ ಅವರನ್ನು ಮಣಿಸಿದರು. 22 ವರ್ಷದ ಆಟಗಾರನನ್ನು ಸೋಲಿಸಲು ದಿಗ್ಗಜ ಆಟಗಾರ ಎರಡು ಗಂಟೆ 51 ನಿಮಿಷ ತೆಗೆದುಕೊಂಡರು.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕೊನೆಯ ಬಾರಿ ಕಣಕ್ಕಿಳಿದ ಮಾಜಿ ಚಾಂಪಿಯನ್ ಸ್ಟಾನ್ ವಾವ್ರಿಂಕಾ ಅವರಿಗೆ ಫ್ರೆಂಚ್ ಟೆನಿಸ್ ಫೆಡರೇಶನ್ ಅಧ್ಯಕ್ಷ ಗಿಲ್ಲೆಸ್ ಮೊರೆಟ್ಟನ್ (ಬಲ) ಹಾಗೂ ಟೂರ್ನಿಯ ನಿರ್ದೇಶಕಿ ಆಮೇಲಿ ಮೌರೆಸ್ಮೊ ಅವರು ಸ್ಮರಣಾರ್ಥ ಟ್ರೋಫಿ ನೀಡಿ ಬೀಳ್ಕೊಟ್ಟರು ಎಎಫ್‌ಪಿ ಚಿತ್ರ

ಜೊಕೊವಿಚ್ ಅವರಿಗೆ ಇದು ದಾಖಲೆಯ 82ನೇ ಗ್ರ್ಯಾನ್‌ಸ್ಲಾಮ್ ಟೂರ್ನಿಯಾಗಿದೆ. ಇಲ್ಲಿ 22ನೇ ಬಾರಿ ಸ್ಪರ್ಧಿಸುತ್ತಿರುವ ಅವರು 2016, 2021 ಮತ್ತು 2023ರಲ್ಲಿ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆದ ಈ ಪಂದ್ಯಕ್ಕೆ ಪ್ರೇಕ್ಷಕರು ಕಿಕ್ಕಿರಿದು ಸೇರಿದ್ದರು. 39 ವರ್ಷದ ಜೊಕೊವಿಚ್ ಕಳೆದ 20 ವರ್ಷಗಳಲ್ಲಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸೋತಿಲ್ಲ. ಆದರೆ, ಈ ಪಂದ್ಯದಲ್ಲಿ ಸ್ಥಳೀಯ ಆಟಗಾರ ಜಿಯೋವಾನಿ ಅವರು ಮೂರನೇ ಶ್ರೇಯಾಂಕದ ಆಟಗಾರನನ್ನು ಒತ್ತಡಕ್ಕೆ ಸಿಲುಕಿಸುವ ಪ್ರಯತ್ನ ನಡೆಸಿದರು. ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಸರ್ಬಿಯಾ ಆಟಗಾರ, ನಂತರದ ಮೂರೂ ಸೆಟ್‌ಗಳನ್ನು ಗೆದ್ದುಕೊಂಡರು.

ಆಸ್ಟ್ರೇಲಿಯಾ ಓಪನ್ ಹಾಲಿ ಚಾಂಪಿಯನ್, ಎರಡನೇ ಶ್ರೇಯಾಂಕದ ಎಲಿನಾ ರಿಬಾಕಿನಾ 6-2, 6-2ರಿಂದ ಸ್ಲೊವೇನಿಯಾದ ವೆರೋನಿಕಾ ಎರ್ಜಾವೆಕ್ ಅವರನ್ನು ಮಣಿಸಿದರು. ಎರಡು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಕಜಾಕಸ್ತಾನದ ಆಟಗಾರ್ತಿಗೆ ಇಲ್ಲಿ ಈತನಕ ಕ್ವಾರ್ಟರ್ ಫೈನಲ್ ಹಂತ ದಾಟಲು ಸಾಧ್ಯವಾಗಿಲ್ಲ.

ಟೇಲರ್‌ಗೆ ಆಘಾತ: ಭಾರತ ಮೂಲದ ಅಮೆರಿಕದ ಆಟಗಾರ ನಿಶೇಶ್ ಬಸವರೆಡ್ಡಿ ಅವರು ಮೊದಲ ಸುತ್ತಿನಲ್ಲಿ 7-6(5), 7-6(5), 6-7(9), 6-1ರಿಂದ ಏಳನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ (ಅಮೆರಿಕ) ಅವರಿಗೆ ಆಘಾತ ನೀಡಿದರು. 21 ವರ್ಷದ ನಿತೇಶ್ ಅವರ ಪೋಷಕರು 1999ರಲ್ಲಿ ಆಂಧ್ರಪ್ರದೇಶದ ನೆಲ್ಲೂರಿನಿಂದ ಅಮೆರಿಕಕ್ಕೆ ಸ್ಥಳಾಂತರವಾಗಿದ್ದಾರೆ.

ಪ್ಯಾರಿಸ್ ಒಲಿಂಪಿಕ್ ಚಾಂಪಿಯನ್ ಝೆಂಗ್ ಕಿನ್ವೆನ್ ಅವರೂ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಪೋಲೆಂಡ್‌ನ ಮಜಾ ಚ್ವಾಲಿನ್ಸ್ಕಾ 6-4 6-0ಯಿಂದ ಚೀನಾ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು.

ವಾವ್ರಿಂಕಾಗೆ ಬೀಳ್ಕೊಡುಗೆ: ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಕೊನೆಯ ಬಾರಿ ಕಣಕ್ಕಿಳಿದಿದ್ದ ಮಾಜಿ ಚಾಂಪಿಯನ್ ಸ್ಟಾನ್ ವಾವ್ರಿಂಕಾ ಅವರು ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ನೆದರ್ಲೆಂಡ್ಸ್‌ನ ಜೆಸ್ಪರ್ ಡಿ ಜೊಂಗ್ 6-3, 3-6, 6-3, 6-4 ವಾವ್ರಿಂಕಾ ಅವರನ್ನು ಮಣಿಸಿದರು. ಸ್ವಿಟ್ಜರ್ಲೆಂಡ್‌ನ ವಾವ್ರಿಂಕಾ 2015ರ ಫೈನಲ್‌ನಲ್ಲಿ ಜೊಕೊವಿಚ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದಿದ್ದರು. ಅವರು ಈ ಋತುವಿನ ಕೊನೆಯಲ್ಲಿ ಟೆನಿಸ್ ವೃತ್ತಿಜೀವನಕ್ಕೆ ನಿವೃತ್ತಿ ಘೋಷಿಸಲಿದ್ದಾರೆ.

ಫುಟ್‌ಬಾಲ್: ಬ್ಲ್ಯೂ ಸ್ಟಾರ್ ಜಯಭೇರಿ

ಬೆಂಗಳೂರು: ಶ್ವಾಲಿಕ್ ಅಹಮ್ಮದ್ (7ನೇ ಹಾಗೂ 37ನೇ ನಿ.) ಹಾಗೂ ಶಾದಾಬ್ ಎನ್.ಎಸ್. (25ನೇ ನಿ.) ಅವರ ಆಟದ ಬಲದಿಂದ ಬ್ಲ್ಯೂ ಸ್ಟಾರ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಸೋಮವಾರ 3–0ಯಿಂದ ಪಿಕೆಆರ್ ಎಫ್‌ಸಿ ತಂಡವನ್ನು ಮಣಿಸಿತು.

ಲಾ ಎಸ್ಪೆರಾಂಝಾ ಎಫ್‌ಸಿ– ಸಿಲಿಕಾನ್ ಎಫ್‌ಸಿ ನಡುವಣ ಪಂದ್ಯ 1–1 ಡ್ರಾ ಆಯಿತು.

ಸಿಂಧು, ಲಕ್ಷ್ಯ ಮೇಲೆ ನಿರೀಕ್ಷೆಯ ಭಾರ

ಸಿಂಗಪುರ (ಪಿಟಿಐ): ಬ್ಯಾಡ್ಮಿಂಟನ್ ತಾರೆಯರಾದ ಲಕ್ಷ್ಯ ಸೇನ್ ಮತ್ತು ಪಿ.ವಿ. ಸಿಂಧು ಅವರು ಮಂಗಳವಾರ ಇಲ್ಲಿ ಆರಂಭವಾಗುವ ಸಿಂಗಪುರ ಓಪನ್ ಸೂಪರ್ 750 ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಲಕ್ಷ್ಯ ಸೇನ್

ಸುಮಾರು ₹9.52 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡ ಟೂರ್ನಿ ಇದಾಗಿದೆ. ಹೋದ ವಾರ ಮಲೇಷ್ಯಾ ಓಪನ್‌ನಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದ ಸೇನ್ ಉತ್ತಮ ಆಟ ಪ್ರದರ್ಶಿಸುವ ಗುರಿ ಹೊಂದಿದ್ದಾರೆ. ಅವರು ಚೀನಾದ ಲು ಗುವಾಂಗ್ ಜು ವಿರುದ್ಧ ಪುರುಷರ ಸಿಂಗಲ್ಸ್‌ನಲ್ಲಿ ಅಭಿಯಾನ ಆರಂಭಿಸುವರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಮೊದಲ ಸುತ್ತಿನಲ್ಲಿ ಐದನೇ ಶ್ರೇಯಾಂಕದ ಪುತ್ರಿ ಕುಸುಮಾ ವರ್ದಾನಿ (ಇಂಡೋನೇಷ್ಯಾ) ಅವರ ಕಠಿಣ ಸವಾಲನ್ನು ಎದುರಿಸಲಿದ್ದಾರೆ. ಕಳೆದ ವರ್ಷ ಗಾಯದಿಂದ ಚೇತರಿಸಿಕೊಂಡು ಸ್ಪರ್ಧಾ ಕಣಕ್ಕೆ ಮರಳಿರುವ ಸಿಂಧು ಅವರಿಗೆ ನಿರೀಕ್ಷಿತ ಯಶಸ್ಸು ಸಿಕ್ಕಿಲ್ಲ.

ಏಷ್ಯನ್ ಚಾಂಪಿಯನ್‌ಷಿಪ್‌ನ ರನ್ನರ್ ಅಪ್ ಮತ್ತು ಥಾಮಸ್ ಕಪ್‌ನಲ್ಲಿ ಭಾರತ ತಂಡ ಕಂಚು ಜಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಕನ್ನಡಿಗ ಆಯುಷ್ ಶೆಟ್ಟಿ ಅವರು ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ಕೆನಡಾದ ವಿಕ್ಟರ್ ಲೈ ಅವರನ್ನು ಎದುರಿಸಲಿದ್ದಾರೆ.

ಅನುಭವಿ ಆಟಗಾರರಾದ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್ ಅವರೂ ಸ್ಪರ್ಧಾ ಕಣದಲ್ಲಿದ್ದು, ಸುಧಾರಿತ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಶ್ರೀಕಾಂತ್, ಸ್ಥಳೀಯ ಆಟಗಾರ ಲೋಹ್ ಕೀನ್ ಯೂ ವಿರುದ್ಧ; ಪ್ರಣಯ್, ಐದನೇ ಶ್ರೇಯಾಂಕದ ಜೊನಾಥನ್ ಕ್ರಿಸ್ಟಿ (ಇಂಡೊನೇಷ್ಯಾ) ಅವರ ವಿರುದ್ಧ ಅಭಿಯಾನ ಆರಂಭಿಸುವರು.

ಥಾಯ್ಲೆಂಡ್ ಓಪನ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆದ ಭಾರತದ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಅಮೆರಿಕದ ಚೆನ್ ಝಿ ಯಿ ಮತ್ತು ಪ್ರೀಸ್ಲಿ ಸ್ಮಿತ್ ಅವರನ್ನು ಎದುರಿಸಲಿದ್ದಾರೆ.

ಶೂಟಿಂಗ್ ವಿಶ್ವಕಪ್ ಇಂದಿನಿಂದ

ಮ್ಯೂನಿಕ್ (ಪಿಟಿಐ): ಯುವ ಶೂಟರ್‌ಗಳಾದ ಸಾಮ್ರಾಟ್ ರಾಣಾ ಮತ್ತು ಅರ್ಜುನ್ ಬಾಬುತಾ ಅವರು ಮಂಗಳವಾರ ಆರಂಭವಾಗುವ ಐಎಸ್‌ಎಸ್‌ಎಫ್ ವಿಶ್ವಕಪ್ (ರೈಫಲ್/ಪಿಸ್ತೂಲ್) ಮ್ಯೂನಿಕ್ ಲೆಗ್‌ನಲ್ಲಿ ಕ್ರಮವಾಗಿ ಪುರುಷರ 10 ಮೀ ಏರ್ ಪಿಸ್ತೂಲ್ ಮತ್ತು 10 ಮೀ ಏರ್ ರೈಫಲ್ ಸ್ಪರ್ಧೆಗಳಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಜರ್ಮನಿಯಲ್ಲಿ ನಡೆಯುವ ಕೂಟದಲ್ಲಿ 80 ದೇಶಗಳ 696 ಶೂಟರ್‌ಗಳು ಭಾಗವಹಿಸಲಿದ್ದಾರೆ.

ಭಾರತದ 22 ಶೂಟರ್‌ಗಳು ಸ್ಪರ್ಧೆಯಲ್ಲಿದ್ದಾರೆ. ಸೂರಜ್ ಶರ್ಮಾ, ಸಾಕ್ಷಿ ಪಡೇಕರ್, ಅಜೇಂದ್ರ ಸಿಂಗ್ ಚೌಹಾಣ್, ಉದಯವೀರ್ ಸಿಧು ಅವರಿಗೆ ಇದು ಚೊಚ್ಚಲ ವಿಶ್ವಕಪ್ ಟೂರ್ನಿಯಾಗಿದೆ. ಏರ್ ಪಿಸ್ತೂಲ್‌ನಲ್ಲಿ ವಿಶ್ವ ಚಾಂಪಿಯನ್ ಸಾಮ್ರಾಟ್, ಶರವಣ್ ಕುಮಾರ್ ಮತ್ತು ಅಜೇಂದ್ರ ಸಿಂಗ್ ಚೌಹಾಣ್ ಅವರು ಭಾರತದ ಪದಕದ ಭರವಸೆಯಾಗಿದ್ದಾರೆ.

ಮಹಿಳಾ ಹಾಕಿ: ಭಾರತ ತಂಡಕ್ಕೆ ಆಸ್ಟ್ರೇಲಿಯಾ ಸವಾಲು ಇಂದು

ಸಲೀಮಾ ಟೆಟೆ

ಪರ್ತ್ (ಪಿಟಿಐ): ಭಾರತ ವನಿತೆಯರ ಹಾಕಿ ತಂಡವು ಮಂಗಳವಾರ ಆರಂಭವಾಗುವ ನಾಲ್ಕು ಪಂದ್ಯಗಳ ಸರಣಿಯಲ್ಲಿ ಆತಿಥೇಯ ಆಸ್ಟ್ರೇಲಿಯಾವನ್ನು ಎದುರಿಸಲಿದೆ. ಈ ಸರಣಿಯ ಮೂಲಕ ಎಫ್‌ಐಎಚ್ ನೇಷನ್ಸ್ ಕಪ್ ಟೂರ್ನಿಗೆ ತನ್ನ ಸಿದ್ಧತೆಗಳನ್ನು ಸಕಾರಾತ್ಮಕವಾಗಿ ಆರಂಭಿಸುವ ಗುರಿ ಹೊಂದಿದೆ.

ಜೂನ್ 15ರಿಂದ 21ರವರೆಗೆ ಆಕ್ಲೆಂಡ್‌ನಲ್ಲಿ ನೇಷನ್ಸ್ ಕಪ್ ನಡೆಯಲಿದೆ. ಅದಕ್ಕೂ ಮುಂಚಿತವಾಗಿ ಸಲೀಮಾ ಟೆಟೆ ನೇತೃತ್ವದ ಭಾರತ ತಂಡದಲ್ಲಿ ಸೂಕ್ತ ಸಂಯೋಜನೆ ಮತ್ತು ಸಮತೋಲನ ಸಾಧಿಸುವ ಪ್ರಯತ್ನದಲ್ಲಿದೆ. ಸರಣಿಯ ನಾಲ್ಕು ಪಂದ್ಯಗಳು ಪರ್ತ್‌ನಲ್ಲಿ ಕ್ರಮವಾಗಿ ಇದೇ 26, 27, 29 ಹಾಗೂ 30ರಂದು ನಡೆಯಲಿವೆ.

ಕೋಚ್ ಸ್ಯೋರ್ಡ್ ಮರಿನ್ ಅವರ ಮಾರ್ಗದರ್ಶನದಲ್ಲಿ ಆಟಗಾರ್ತಿಯರು ಬೆಂಗಳೂರಿನ ಸಾಯ್‌ನಲ್ಲಿ ಕೆಲವು ವಾರಗಳಿಂದ ತರಬೇತಿ ಪಡೆದು, ಆಸ್ಟ್ರೇಲಿಯಾಕ್ಕೆ ತೆರಳಿದ್ದಾರೆ. 22 ಆಟಗಾರ್ತಿಯರನ್ನು ಒಳಗೊಂಡ ತಂಡವು ಯುವ ಮುಖಗಳ ಮತ್ತು ಅನುಭವಿಗಳ ಮಿಶ್ರಣವನ್ನು ಹೊಂದಿದೆ.

ಉದಯೋನ್ಮುಖ ಪ್ರತಿಭೆಗಳಾದ ಸೋನಮ್, ಶಿಲ್ಪಿ ಡಬಾಸ್, ಹಿನಾ ಬಾನೊ ಮತ್ತು ಲಾಲ್‌ಥಂಟಲುವಾಂಗಿ ತಮ್ಮ ಚೊಚ್ಚಲ ಅವಕಾಶಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಭಾರತ ತಂಡವು ಎಫ್‌ಐಎಚ್ ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿದ್ದರೆ, ಆಸ್ಟ್ರೇಲಿಯಾ ಎಂಟನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ಸಂಜೆ 5, **ನೇರಪ್ರಸಾರ:** ಡಿಡಿ ಸ್ಪೋರ್ಟ್ಸ್, ಫ್ಯಾನ್ ಕೋಡ್

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_ASHOK_LEYLAND_1915 _CABIN_FBV
YOM – -
Reg No – KA19AE2549
2) CB_ TATA INTRA V30 _COMMERCIAL VEHICLE
YOM – 2023
Reg No – KA33B5927
3) TATA MOTORS LTD. – CB _TATA Ace
YOM – 2025
Reg No – KA09AB7520
4) CB_BACKHOE_LOADER _SD76_BHL_BULL
YOM – -
Reg No – KA51MW7105
5) AL_DOST_GOODS
YOM – 2023
Reg No – KA07B7511
6) CB_Ashok Leyland Dost GOODS
YOM – 2023
Reg No – KA07B5469
7) CB_AMBULANCE
YOM – 2020
Reg No – KA35C6474
8) CB_AL_BADA_DOST
YOM – 2023
Reg No – KA19AE3445
9) CB_ASHOK_LEYLAND_HE _1915_5200_FBV
YOM – -
Reg No – KA18D0198
10) CB_MAHINDRA_BOLERO _MAXXCITY_PICKUP
YOM – 2023
Reg No – KA03AL0526
11) CB_Ashok Leyland Dost GOODS
YOM – 2024
Reg No – KA33B6089

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 26.05.2026 (Please note that closing Auction date would not be a Weekly off / Holiday)

BRANCH ADDRESS: KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಬಪಾ/ಎಫ್‌ಡಿ/ಇ–ಬಿಡ್ಡಿಂಗ್–01/2026–27 ದಿನಾಂಕ: 21–05–2026

ಅಧಿಸೂಚನೆ

ಉಪ ನಿರ್ದೇಶಕರು, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು, ಕರ್ನಾಟಕ ಮೃಗಾಲಯ ಪ್ರಾಧಿಕಾರದ (ZAK) ದ ಅಂಗ ಸಂಸ್ಥೆ, ಇನ್ನು ಮುಂದೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಎಂದು ಉಲ್ಲೇಖಿಸಲಾಗುವುದು, ಇವರು ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದ ಹೆಚ್ಚುವರಿ ಹಣವನ್ನು ಸ್ಥಿರ ಠೇವಣಿಗಳಲ್ಲಿ (Non-Callable) ಇಡಲು ಬೆಂಗಳೂರು ಮಿತಿಗಳಲ್ಲಿ ಮಾತ್ರ ಶಾಖೆ ಹೊಂದಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರಕ್ಕಾಗಿ ಇ–ಬಿಡ್‌ನ್ನು ಆಹ್ವಾನಿಸಿದೆ. ವಿವರವಾದ ಇ–ಬಿಡ್ ದಾಖಲೆಗಳನ್ನು ಜಿಓಕೆ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **28–05–2026 ರಂದು ಮಧ್ಯಾಹ್ನ 3.00 ಗಂಟೆವರೆಗೆ.** ಹರಾಜಿನಲ್ಲಿ ಭಾಗವಹಿಸುವಿಕೆಯ ಆಸಕ್ತಿಯನ್ನು ದೃಢೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **29–05–2026 ರಂದು ಮಧ್ಯಾಹ್ನ 3.00 ಗಂಟೆವರೆಗೆ.** ಮೌಲ್ಯಮಾಪನ: **01–06–2026 ರಂದು ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆವರೆಗೆ.** ಲೈವ್ ಬಿಡ್ಡಿಂಗ್: **03–06–2026 ರಂದು ಬೆಳಗ್ಗೆ 10.30 ಗಂಟೆಗೆ ಪ್ರಾರಂಭವಾಗುತ್ತದೆ ಮತ್ತು ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯವಾಗುತ್ತದೆ.**

ಸಹಿ/–
ವಾಸಾಸಂಇ/ವಾ.ಪ್ರ/803/ಅಡ್ವಟೋರ್/2026–27 ಉಪ ನಿರ್ದೇಶಕರು

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ

ಟೆಂಡರ್ ಪ್ರಕಟಣೆ ಸಂಖ್ಯೆ.ಆಅ/ಟಿ.ಎನ್/4/2026–27,
ದಿನಾಂಕ: 18.05.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ.1ರ ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://www.kppp.karnataka.gov.in. ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.
ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.kppp.karnataka.gov.in** ಇಂದ ಪಡೆಯಬಹುದು. ಪ್ರಿ–ಬಿಡ್ ನಡೆಯುವ **ದಿನಾಂಕ:06–06–2026** ಬೆಳಿಗ್ಗೆ **10.30ಕ್ಕೆ** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕೊಠಡಿಯಲ್ಲಿ ನಡೆಸಲಾಗುವುದು. ಟೆಂಡರ್ ಸಲ್ಲಿಸುವ ಕೊನೆ **ದಿನಾಂಕ:09–06–2026 ರಂದು ಸಾಯಂಕಾಲ 4.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ:11–06–2026 ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು **ದಿನಾಂಕ:13–06–2026 ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ.**080–23332765**ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ-**support@eprochelpdesk.com** ಅಥವಾ **8046010000** ಮತ್ತು **8068948777.**

ಸಹಿ/–
ಡಿಐಪಿಆರ್/ಸಿಪಿ/801/ಸಿಸಿಎಲ್/2026–27 ಆಸ್ತಿ ಅಧಿಕಾರಿಗಳು

₹1,500 Instant Discount[4]
AXIS BANK | HDFC BANK | ICICI Bank | SBI card
Or
₹1,500 Off on UPI Transaction[4]
Or
0% Upto 3 Months No Cost EMI[4]

TM and © 2026 HMD Global. All rights reserved. Android is a trademark of Google LLC. All other trademarks or trade logos used belong to their respective owners. *Recommended best buy price, inclusive of all taxes. Special launch price available for a limited period only and may be modified, extended or withdrawn by HMD at its sole discretion without prior notice, subject to applicable terms and conditions and availability. 5G coverage is limited and might not be supported by your network service provider. Actual speed depends on network and other factors. [1] India's first smartphone with Indus by Sarvam AI claim is based on HMD assessment of publicly available market information as of launch date. AI features may vary and are subject to availability, software updates and applicable terms. [2] Comes with one free screen replacement, should you break it during the first six months from the purchase. [3] Battery has limited recharge cycles and battery capacity reduces over time. Eventually the battery may need to be replaced. [4] Bank/payment offers, including instant discount, UPI offer and no-cost EMI, are provided by the respective participating banks/payment partners and are subject to their applicable eligibility criteria, transaction limits, approval, terms and conditions, and availability. Specs, features and offers may vary and are subject to change without notice. Please refer to the real product for actual functionality. Images shown are for illustrative purposes only.